ಮಂಗಳವಾರ, ಮೇ 2, 2023 | ₹ 7.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೋಹಕ ನಗೆ
ಬಾಲಿವುಡ್ ನಟಿ ನೇಹಾ ಶರ್ಮಾ ಮುಂಬೈನಲ್ಲಿ ಸೋಮವಾರ ಸಿನಿಮಾ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮೋಹಕ ನಗೆ ಬೀರಿದರು

#GetYourSelfPlaced™

First Choice
For the **Brightest of Minds**

GALGOTIAS UNIVERSITY

offers edge to its students with **Top-Notch Placements, World Class Research Environment & Academic Excellence**

₹1.5 CRORE	₹44 LACS	₹36 LACS	₹33 LACS
OpenZeppelin	Microsoft	AUTODESK	COMMVAULT

Record Breaking Package

Suryansh Pratap
B.Tech, CSE Student

Guru Prakash Singh
B.Tech, CSE Student

Tanishk Merothiya
B.Tech, CSE Student

Sakshi Gaur
B.Tech, CSE Student

We are committed to **carry forward the vision** of our Visionary Honourable Prime Minister **Shri Narendra Modi Ji** of **making India a Vishvaguru** and the dream of our Dynamic Honourable Chief Minister of Uttar Pradesh **Shri Yogi AdityaNath Ji** for making the **State of UP a truly Global Knowledge Superpower.**

ADMISSION OPEN 2023-24 for CAREER-FOCUSED UG / PG / Ph.D. DEGREES in

- Computing Science and Engineering
- Electrical Engineering
- Electronics & Communication Engineering
- Mechanical Engineering
- Civil Engineering
- Design
- Education
- Nursing
- Liberal Education
- Media and Communications Studies
- Law
- Agriculture
- Basic & Applied Science
- Finance & Commerce
- Pharmacy
- Medical & Allied Sciences
- Business
- Hospitality & Tourism
- Polytechnic

GALGOTIAS UNIVERSITY
(Under the Uttar Pradesh Private Universities Act No. 12 of 2019)

For the complete list of programmes offered and to apply online visit:
https://admissions.galgotiasuniversity.edu.in
www.galgotiasuniversity.edu.in

Scan to know more

Plot No.2, Sector 17-A,
Yamuna Expressway, Greater Noida,
Gautam Buddh Nagar, Uttar Pradesh, India.

Call @ 0120-4370000,
+91-97173 00418, +91-95828 47072
+91 99710 26125

NAAC A+
Accreditation in First Cycle

This makes Galgotias University the **only private university in Uttar Pradesh** with the **highest NAAC score** and the **second highest amongst state private universities in the entire country** with a NAAC score of 3.37 out of 4 awarded by NAAC in the **First Cycle of NAAC Accreditation.**

Strategic Location
Galgotias University is located in the **midst of a Commercial/Industrial hub** & is located minutes away from upcoming **Noida International Airport.** The strategic location will help students gain access to opportunities as new investments to the tune of **35 Lakh Crore are planned, which shall create over 25 Lakh jobs in the Greater Noida region alone.**

Record Breaking Placements
Galgotias University has **broken all previous records** for placements with **800+ recruiters** giving Galgotias students multiple job offers: some of the recruiters are Infosys, Cognizant, Wipro and more.

Research Excellence & Awards
Galgotias University **Ranked Top 5 in India** as per the Indian Patent office Report for Academic Institutes and Universities, **filled 417 patents**

Galgotias University **Ranked in PLATINUM BAND (GRADE A++)** for **Institution of Academic Excellence** OBE Rankings 2022
Grade PLATINUM BAND A++ OBE RANKINGS 2022
Achieves excellence in quality education, & implementation of the latest teaching-learning methodologies, including the outcome-based education models.

The **Highest Benchmark** of **Academic Excellence**, **Placements & Research** for **Computer Science Engineering, Mechanical Engineering, Electronics & Communications, Engineering, B.Pharm** and **MBA**
NBA NATIONAL BOARD OF ACCREDITATION ACCREDITED Tier 1
Students who graduate in the above mentioned NBA accredited programmes during the validity period of accreditation will be deemed to have graduated with an NBA accredited degree.

Galgotias University **Ranked #59 in India** (Pharmacy Category) by NIRF (National Institutional Ranking Framework) 2022
#93 Management #147 Engineering

TOP RANKED BY INDIA TODAY

Galgotias University **Ranked#1** in India in Academic and Research Excellence as per India Today - **MDRA Best Universities Survey 2022.**

Galgotias University **School of Law Ranked #3** in India in Academic Excellence by **INDIA TODAY- MDRA Survey - July 2022**

Galgotias University has been listed in the Band **"Excellent" for "Innovation & Entrepreneurship Development".** Under University & Deemed to be University (Private / Self Financed) (Technical) in the AIIRA Ranking 2021.
ARIIA ATAL RANKING OF INSTITUTIONS ON INNOVATION ACHIEVEMENTS
Ranking#2 in Uttar Pradesh — Ranking#46 in India

Thank You India! for your **continuous trust** in us, **Yet another milestone in our glorious success story.**
राष्ट्रीय परीक्षा एजेंसी National Testing Agency
Galgotias University is amongst **top 8 most preferred universities** in the country as per **CUET (Common University Entrance Test) applications.** Galgotias University **received record breaking 399,373 applications.**

School of Business Galgotias University **Ranked#2 in North India by TOP B-Schools Under Private Universities (Zonewise)** OPEN

Galgotias University has been awarded **IAR-Placement Audit (5 stars) indicating HIGHEST performance capability in placing its students.** Infomerics Analytics & Research

Galgotias University, School of Hospitality & Tourism, India is ranked among the **TOP 50 Best Hospitality and Hotel Management Schools** in the World for 2023 as per CEOWORLD, USA
CEOWORLD Magazine

Galgotias University awarded as the star performing institute in internships with an **All India 6th Rank in AICTE - EduSkills virtual internship programme 2022.**
EduSkills Nation Building Through Skills

National Employability Award 2023 (AMCAT Test) for School of Computing Science and Engineering, Galgotias University on account of students performance being among the top 10% Nationally.

ಮಂಗಳವಾರ, ಮೇ 2, 2023 | ಬೆಂಗಳೂರು | ₹7.00 | ಸಂಪುಟ 76| ಸಂಚಿಕೆ 121 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ನಾಗರಿಕರಾಗುವ ದಾರಿಯಲ್ಲಿ ಮಕ್ಕಳಿಗೆ ಹಿರಿಯರೇ ದಿಕ್ಸೂಚಿ

ಪ್ರಜಾವಾಣಿ ಚರ್ಚೆ
ಕರ್ನಾಟಕ ರಾಜಕಾರಣದಲ್ಲಿ ಲಿಂಗಾಯತ ಸಮುದಾಯವನ್ನು ನಿರ್ಲಕ್ಷಿಸಲಾಗಿದೆಯೇ?

‘ಧರ್ಮ ಪ್ರಚಾರ ಕಾನೂನುಬಾಹಿರವಲ್ಲ’ 11
ಪ್ರೀತಿ ಪಟೇಲ್‌ಗೆ ಬೆದರಿಕೆ ಪತ್ರ: 5 ತಿಂಗಳ ಜೈಲು 10
ಕುಸ್ತಿಪಟುಗಳ ಹೋರಾಟಕ್ಕೆ ಬೆಂಬಲ 11

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹62,170 (ಬೆಂಗಳೂರು)	₹76,700 (ಬೆಂಗಳೂರು)

ಪ್ರಜಾ ಪ್ರಣಾಳಿಕೆ ಬಿಡುಗಡೆ: ಉಚಿತ ಕೊಡುಗೆಗಳ ಮೊರೆ ಹೋದ ಕೇಸರಿ ಪಡೆ

ಬಿಜೆಪಿ ಏಕರೂಪಾಸ್ತ್ರ ಪ್ರಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಕರೂಪ ನಾಗರಿಕ ಸಂಹಿತೆ ಜಾರಿ, ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಪ್ರಕ್ರಿಯೆ ಚುರುಕುಗೊಳಿಸಿ ಅಕ್ರಮ ವಲಸಿಗರ ಗಡೀಪಾರು ಮಾಡುವ ಜತೆಗೆ, ಧಾರ್ಮಿಕ ಮೂಲಭೂತವಾದ ಮತ್ತು ಭಯೋತ್ಪಾದನೆಗೆ ತಡಗೆ ವಿಶೇಷ ಪಡೆ ರಚಿಸುವುದಾಗಿ ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದೆ.

ಮತದಾನಕ್ಕೆ ಕೆಲವೇ ದಿನಗಳು ಬಾಕಿ ಇರುವಾಗ ‘ಪ್ರಜಾ ಪ್ರಣಾಳಿಕೆ’ಯನ್ನು ಪ್ರಕಟಿಸಿರುವ ಬಿಜೆಪಿ, ‘ಹಿಂದುತ್ವ’ದ ಪ್ರತಿಪಾದನೆಯ ತನ್ನ ಮಾರ್ಗದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂಬುದನ್ನು ದೃಢಪಡಿಸಿದೆ.

ಕಾಂಗ್ರೆಸ್ ಪಕ್ಷದ ‘ಗ್ಯಾರಂಟಿ’ಗಳ ಬಗ್ಗೆ ಟೀಕಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ‘ಉಚಿತ ಕೊಡುಗೆಗಳು ದೇಶ–ರಾಜ್ಯದ ಪ್ರಗತಿಗೆ ಮಾರಕ’ ಎಂದು ಚುನಾವಣಾ ಪ್ರಚಾರದ ವೇಳೆ ಹೇಳಿದ್ದರು. ಚುನಾವಣೆಯಲ್ಲಿ ‘ಹಿಂದುತ್ವ’ ಮಾತ್ರ ಕೈಹಿಡಿದು ನಡೆಸಲಾರದು ಎಂಬ ನಿರ್ಧಾರಕ್ಕೆ ಬಂದಂತಿರುವ ‘ಕೇಸರಿ ಪಡೆ’ ಅಭಿವೃದ್ಧಿ ಜತೆಗೆ ಅನೇಕ ಉಚಿತ ಕೊಡುಗೆಗಳನ್ನು ಒಳಗೊಂಡ 103 ಭರವಸೆಗಳನ್ನು ನೀಡಿದೆ.

6ನೇ ಪುಟ ನೋಡಿ

ಅನ್ನ, ಅಭಯ, ಅಕ್ಷರ, ಆರೋಗ್ಯ, ಅಭಿವೃದ್ಧಿ, ಆದಾಯ; ಈ ಆರು ಅಂಶಗಳನ್ನು ಇರಿಸಿಕೊಂಡು ಪ್ರಣಾಳಿಕೆ ತಯಾರಿ

13	103	170	6	900
ಪ್ರಮುಖ ಭರವಸೆಗಳು	ಇತರ ಭರವಸೆಗಳು	ವಿಧಾನಸಭಾ ಕ್ಷೇತ್ರಗಳಿಂದ ಪ್ರಣಾಳಿಕೆಗೆ ಸಲಹೆ	ಲಕ್ಷಕ್ಕೂ ಹೆಚ್ಚು ಜನರಿಂದ ಸಲಹೆ	ಸಲಹೆಗಳು ಪ್ರಣಾಳಿಕೆ ಸಮಿತಿ ಸದಸ್ಯರಿಂದ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪ್ರಣಾಳಿಕೆ ಬಿಡುಗಡೆ ಮಾಡಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಕೆ.ಸುಧಾಕರ್, ಬಿ.ಎಸ್. ಯಡಿಯೂರಪ್ಪ ಇದ್ದಾರೆ

ಪ್ರಮುಖ ಭರವಸೆಗಳು

- ಬಿಪಿಎಲ್ ಕುಟುಂಬಗಳಿಗೆ ಪ್ರತಿ ವರ್ಷ ಯುಗಾದಿ, ಗಣೇಶ ಚತುರ್ಥಿ ಮತ್ತು ದೀಪಾವಳಿಗೆ ತಲಾ ಒಂದರಂತೆ 3 ಅಡುಗೆ ಅನಿಲ ಸಿಲಿಂಡರ್‌ಗಳು ಉಚಿತ
- ಪ್ರತಿ ಬಿಪಿಎಲ್ ಕುಟುಂಬಕ್ಕೆ ‘ಪೋಷಣೆ’ ಯೋಜನೆ ಅಡಿ ಪ್ರತಿ ದಿನ ಅರ್ಧ ಲೀಟರ್ ನಂದಿನಿ ಹಾಲು ಉಚಿತ
- ಬಿಪಿಎಲ್ ಕುಟುಂಬಗಳಿಗೆ ಪ್ರತಿ ತಿಂಗಳು 5 ಕೆ.ಜಿ. ಅಕ್ಕಿ ಮತ್ತು 5 ಕೆ.ಜಿ ಸಿರಿಧಾನ್ಯಗಳಿರುವ ಪಡಿತರ ಕಿಟ್
- ಕೈಗೆಟಕುವ ದರದಲ್ಲಿ ಗುಣಮಟ್ಟದ ಆರೋಗ್ಯಕರ ಆಹಾರ ಒದಗಿಸಲು ರಾಜ್ಯದ ಪ್ರತಿ ಮಹಾನಗರ ಪಾಲಿಕೆ ವಾರ್ಡ್ ಗಳಲ್ಲಿ ‘ಅಟಲ್ ಆಹಾರ ಕೇಂದ್ರ’ ಸ್ಥಾಪನೆ
- ಒನಕೆ ಓಬವ್ವ ಸಾಮಾಜಿಕ ನ್ಯಾಯ ನಿಧಿ ಯೋಜನೆಯಡಿ ಎಸ್‌ಸಿ–ಎಸ್‌ಟಿ ಸಮುದಾಯದ ಮಹಿಳೆಯರು 5 ವರ್ಷಗಳ ಅವಧಿಗೆ ಮಾಡುವ ಸ್ಥಿರ ಠೇವಣಿಗಳಷ್ಟೇ ಮೊತ್ತವನ್ನು ಸರ್ಕಾರ ನೀಡಲಿದೆ. ಇದಕ್ಕೆ ಗರಿಷ್ಠ ಮಿತಿ ₹10 ಸಾವಿರ ಎಂಬ ಭರವಸೆಯನ್ನೂ ಬಿಜೆಪಿ ಕೊಟ್ಟಿದೆ

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಮಾಡಿರುವ ಉತ್ತಮ ಕೆಲಸಗಳ ಮೂಲಕ ಅಭಿವೃದ್ಧಿ ಸಾಧಿಸಲು ‘ಬಿಜೆಪಿ ಪ್ರಜಾ ಪ್ರಣಾಳಿಕೆ’ಯು ದಿಕ್ಕು ತೋರಿಸಲಿದೆ
ನರೇಂದ್ರ ಮೋದಿ, ಪ್ರಧಾನಿ

ದೇಶ ಒಡೆಯಲು ಏಕರೂಪ ನಾಗರಿಕ ಸಂಹಿತೆ ಜಾರಿ ಭರವಸೆಯನ್ನು ಪ್ರಣಾಳಿಕೆಯಲ್ಲಿ ನೀಡಿದೆ. ಸಮಾಜದ ಉದ್ಧಾರ ಮಾಡುವ ಕೆಲಸ ಬಿಜೆಪಿಗೆ ಗೊತ್ತಿಲ್ಲ
ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

ಬಿಜೆಪಿಯ ‘ಪ್ರಜಾ ಪ್ರಣಾಳಿಕೆ’ಯನ್ನು ಜನತೆಯೇ ಅನುಷ್ಠಾನಕ್ಕೆ ತರಬೇಕೇ ಹೊರತು, ಸರ್ಕಾರ ಅಲ್ಲ ಎನ್ನುವುದೇ ಅರ್ಥ
ಸಿದ್ದರಾಮಯ್ಯ
ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಅಭಿವೃದ್ಧಿ ದೃಷ್ಟಿಯಲ್ಲಿಟ್ಟುಕೊಂಡು ಸಂಪದ್ಭರಿತ ಕರ್ನಾಟಕದ ನಿರ್ಮಾಣಕ್ಕೆ ಪ್ರಣಾಳಿಕೆ ರೂಪಿಸಲಾಗಿದೆ
ಡಾ.ಕೆ.ಸುಧಾಕರ್
ಸಂಚಾಲಕ, ಪ್ರಣಾಳಿಕೆ ಸಮಿತಿ

₹1.87 ಲಕ್ಷ ಕೋಟಿ ಜಿಎಸ್‌ಟಿ

ಏಪ್ರಿಲ್ ತಿಂಗಳಿನಲ್ಲಿ ಗರಿಷ್ಠ ಪ್ರಮಾಣದ ತೆರಿಗೆ ವರಮಾನ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಮೂಲಕ ಏಪ್ರಿಲ್ ತಿಂಗಳಲ್ಲಿ ₹1.87 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದ ನಂತರದಲ್ಲಿ ಆಗಿರುವ ಅತಿಹೆಚ್ಚಿನ ಮಾಸಿಕ ವರಮಾನ ಸಂಗ್ರಹ ಇದು.

ಹಿಂದಿನ ವರ್ಷದ ಏಪ್ರಿಲ್‌ನಲ್ಲಿ ಸಂಗ್ರಹವಾಗಿದ್ದ ₹ 1.68 ಲಕ್ಷ ಕೋಟಿ ವರಮಾನವು ಇದುವರೆಗಿನ ಗರಿಷ್ಠ ಮೊತ್ತವಾಗಿತ್ತು. ದಾಖಲೆಯ ವರಮಾನ ಸಂಗ್ರಹದ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ‘ದೇಶದ ಅರ್ಥ ವ್ಯವಸ್ಥೆಯ ಪಾಲಿಗೆ ಇದು ಬಹುಮುಖ್ಯ ಸುದ್ದಿ’ ಎಂದು ಹೇಳಿದ್ದಾರೆ. ತೆರಿಗೆ ಪ್ರಮಾಣ ಕಡಿಮೆ ಇದ್ದರೂ ತೆರಿಗೆ ಸಂಗ್ರಹ ಹೆಚ್ಚಾಗುತ್ತಿರುವುದು ಜಿಎಸ್‌ಟಿ ವ್ಯವಸ್ಥೆಯ ಯಶಸ್ಸನ್ನು ತೋರಿಸುತ್ತಿದೆ ಎಂದಿದ್ದಾರೆ.

ಹಿಂದಿನ ವರ್ಷದ ಏಪ್ರಿಲ್‌ನಲ್ಲಿ ಸಂಗ್ರಹವಾಗಿದ್ದ ವರಮಾನದ ಮೊತ್ತಕ್ಕೆ ಹೋಲಿಸಿದರೆ ಈ ವರ್ಷದ ಏಪ್ರಿಲ್‌ನಲ್ಲಿನ ವರಮಾನ ಸಂಗ್ರಹವು ಶೇ 12ರಷ್ಟು ಹೆಚ್ಚಾಗಿದೆ.

ಏಪ್ರಿಲ್ ತಿಂಗಳ 20ನೆಯ ತಾರೀಕಿನಂದು ಅತ್ಯಂತ ಹೆಚ್ಚಿನ ವರಮಾನ ಸಂಗ್ರಹ ಆಗಿದೆ. ಆ ದಿನ ಒಟ್ಟು 9.8 ಲಕ್ಷ ವಹಿವಾಟುಗಳ ಮೂಲಕ ₹68,228 ಕೋಟಿ ತೆರಿಗೆ ಸಂಗ್ರಹ ಆಗಿದೆ.

ಹೊಸ ಆರ್ಥಿಕ ವರ್ಷವು ಬಹಳ ಉತ್ತಮವಾಗಿ ಆರಂಭವಾಗಿದೆ ಎಂಬುದನ್ನು ಜಿಎಸ್‌ಟಿ ವರಮಾನ ಸಂಗ್ರಹಕ್ಕೆ ಸಂಬಂಧಿಸಿದ ಅಂಕಿ–ಅಂಶಗಳು ಹೇಳುತ್ತಿವೆ ಎಂದು ಅಸೋಚಾಂ ಅಧ್ಯಕ್ಷ ಅಜಯ್ ಸಿಂಗ್ ಅಭಿಪ್ರಾಯಪಟ್ಟಿದ್ದಾರೆ.

‘ಗ್ರಾಹಕರ ಕಡೆಯಿಂದ ಬರುವ ಬೇಡಿಕೆಗಳು ಚೇತರಿಕೆ ಕಂಡಿರುವ ಕಾರಣ, ದೇಶದ ಅರ್ಥ ವ್ಯವಸ್ಥೆಯಲ್ಲಿ ಆರೋಗ್ಯಪೂರ್ಣ ಬೆಳವಣಿಗೆ ಆಗಿದೆ ಎಂಬುದನ್ನು ಜಿಎಸ್‌ಟಿ ಅಂಕಿ–ಅಂಶಗಳು ಸೂಚಿಸುತ್ತಿವೆ’ ಎಂದು ಸಿಂಗ್ ಹೇಳಿದ್ದಾರೆ.





ವಿಚ್ಛೇದನಕ್ಕೆ ಕಡ್ಡಾಯ ಕಾಯುವಿಕೆ ‘ಸುಪ್ರೀಂ’ಗಿದೆ ರದ್ದತಿ ಅಧಿಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಸರಿಪಡಿಸಲು ಸಾಧ್ಯವೇ ಇಲ್ಲ ಎನ್ನುವ ಮಟ್ಟಕ್ಕೆ ಮುರಿದುಬಿದ್ದ ಮದುವೆ ಪ್ರಕರಣಗಳಲ್ಲಿ ತನ್ನ ವಿಶೇಷಾಧಿಕಾರ ಬಳಸಿಕೊಂಡು, ಆರು ತಿಂಗಳ ಕಡ್ಡಾಯ ಕಾಯುವಿಕೆ ಮತ್ತು ಸಂಬಂಧಿತ ಪ್ರಕ್ರಿಯೆಗಳನ್ನು ರದ್ದುಪಡಿಸಿ ವಿಚ್ಛೇದನ ನೀಡಬಹುದು’ ಎಂದು ಸುಪ್ರೀಂ ಕೋರ್ಟ್ ಸಂವಿಧಾನ ಪೀಠವು ಒಮ್ಮತದ ತೀರ್ಪು ನೀಡಿದೆ.

ಒಮ್ಮತದ ವಿಚ್ಛೇದನ ಬಯಸುತ್ತಿರುವ ದಂಪತಿಯು, ವಿಚ್ಛೇದನ ಪಡೆಯುವ ಮೊದಲು ಆರು ತಿಂಗಳ ಕಡ್ಡಾಯ ಕಾಯುವಿಕೆ (ಕೂಲಿಂಗ್ ಆಫ್ ಪೀರಿಯಡ್) ಪೂರೈಸಬೇಕು ಎಂದು ಹಿಂದೂ ವಿವಾಹ ಕಾಯ್ದೆಯ 13ನೇ ಬಿ ಸೆಕ್ಷನ್ ಹೇಳುತ್ತದೆ. ಸಂವಿಧಾನದ 142 (1)ನೇ ವಿಧಿಯು ನೀಡಿರುವ ವಿಶೇಷಾಧಿಕಾರವನ್ನು ಬಳಸಿಕೊಂಡು ಸುಪ್ರೀಂ ಕೋರ್ಟ್, ಆರು ತಿಂಗಳ ಕಡ್ಡಾಯ ಕಾಯುವಿಕೆಯನ್ನು ರದ್ದುಪಡಿಸಬಹುದೇ ಎಂದು ಕೋರಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಐವರು ನ್ಯಾಯಮೂರ್ತಿಗಳಿದ್ದ ಸಂವಿಧಾನ ಪೀಠವು ಈ ತೀರ್ಪು ನೀಡಿದೆ.

ಮದುವೆಯು ಭಾವನಾತ್ಮಕವಾಗಿ ಸತ್ತುಹೋಗಿದೆ, ಪರಿಹಾರ ಸಾಧ್ಯವೇ ಇಲ್ಲ ಎಂಬುದು ನ್ಯಾಯಾಲಯಕ್ಕೆ ಮನವರಿಕೆಯಾದಾಗ ವಿಚ್ಛೇದನವೇ ಸರಿಯಾದ ಪರಿಹಾರ ಮತ್ತು ಏಕೈಕ ಮಾರ್ಗ
ಸುಪ್ರೀಂ ಕೋರ್ಟ್ ಸಂವಿಧಾನ ಪೀಠ

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಸಂಜೀವ್ ಖನ್ನಾ, ಅಭಯ್ ಎಸ್. ಒಕಾ, ವಿಕ್ರಮನಾಥ್ ಮತ್ತು ಜೆ.ಕೆ.ಮಾಹೇಶ್ವರಿ ಅವರಿದ್ದ ಸಂವಿಧಾನ ಪೀಠವು ಈ ಅರ್ಜಿಯ ವಿಚಾರಣೆ ನಡೆಸಿತ್ತು. ‘ವಿಶೇಷಾಧಿಕಾರವನ್ನು ಬಳಸಿಕೊಂಡು ಆರು ತಿಂಗಳ ಕಡ್ಡಾಯ ಕಾಯುವಿಕೆ ಮತ್ತು ಸಂಬಂಧಿತ ಪ್ರಕ್ರಿಯೆಗಳನ್ನು ರದ್ದುಪಡಿಸಬಹುದು. ಹಾಗೆಂದು ವಿಚ್ಛೇದನ ಬಯಸುವವರು ನೇರವಾಗಿ ಇಲ್ಲಿಗೆ (ಸುಪ್ರೀಂ ಕೋರ್ಟ್) ಬರುವಂತಿಲ್ಲ’ ಎಂದು ಪೀಠವು ತನ್ನ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ.

‘ವಿಶೇಷಾಧಿಕಾರ ಬಳಸಿಕೊಂಡು ಕಡ್ಡಾಯ ಕಾಯುವಿಕೆಯನ್ನು ರದ್ದುಪಡಿಸುವುದು ಅಷ್ಟೇ ಅಲ್ಲ. ಅಂತಹ ಸಂದರ್ಭದಲ್ಲಿ, ದಂಪತಿಯು ಪರಸ್ಪರ ದಾಖಲಿಸಿರುವ ಕ್ರಿಮಿನಲ್ ಪ್ರಕರಣಗಳು ಮತ್ತು ಅವುಗಳಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನೂ ಸುಪ್ರೀಂ ಕೋರ್ಟ್ ತನ್ನ ವಿಶೇಷಾಧಿಕಾರ ಬಳಸಿಕೊಂಡು ರದ್ದುಮಾಡಬಹುದು’ ಎಂದು ಪೀಠವು ಹೇಳಿದೆ.

‘ಸರಿಪಡಿಸಲು ಸಾಧ್ಯವೇ ಇಲ್ಲದಷ್ಟು ಮುರಿದುಹೋದ ಮದುವೆ ಎಂದು ಕಾರಣ ನೀಡಿ ತಕ್ಷಣವೇ ವಿಚ್ಛೇದನ ಪಡೆಯಬಹುದು ಎಂಬುದು ಹಕ್ಕಲ್ಲ. ಎರಡೂ ಕಡೆಯವರಿಗೆ ನ್ಯಾಯ ಸಲ್ಲಬೇಕು ಎಂಬುದನ್ನು ಗಮನದಲ್ಲಿ ಇರಿಸಿಕೊಂಡು, ಈ ವಿವೇಚನಾಧಿಕಾರವನ್ನು ಅತ್ಯಂತ ಎಚ್ಚರಿಕೆಯಿಂದ ಬಳಸಬೇಕಾಗುತ್ತದೆ’ ಎಂದು ಪೀಠವು ವಿವರಿಸಿದೆ.

ಪೀಠ ಹೇಳಿದ್ದು...
- ಬಲವಂತವಾಗಿ ಜೀವನ ಮರುಆರಂಭಿಸು ಎಂಬುದರಲ್ಲಿ ಅರ್ಥವಿಲ್ಲ
- ವಿಚ್ಛೇದನ ಬಯಸುವವರೆಲ್ಲಾ ನೇರವಾಗಿ ಸುಪ್ರೀಂ ಕೋರ್ಟ್‌ಗೆ ಬರುವಂತಿಲ್ಲ

‘ದಂಪತಿಯಲ್ಲಿ ಯಾರನ್ನೇ ಆಗಲಿ, ಬಲವಂತವಾಗಿ ಜೀವನವನ್ನು ಮರುಆರಂಭಿಸು ಎಂದು ದೂಡುವುದರಿಂದ ಮತ್ತು ಮುಗಿದೇ ಹೋಗಿರುವ ಸಂಬಂಧದ ಮದುವೆಗೆ ಇಬ್ಬರನ್ನೂ ಕಟ್ಟಿಹಾಕುವುದರಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ’ ಎಂದು ಪೀಠವು ಹೇಳಿದೆ.

‘ಕಡ್ಡಾಯ ಕಾಯುವಿಕೆಗೆ ಆದೇಶಿಸುವ ಮುನ್ನ ದಂಪತಿಯು ಪ್ರತ್ಯೇಕವಾಗಿ ಒಂದೂವರೆ ವರ್ಷ ಕಳೆದಿರಬೇಕು ಎಂದು ಕಾಯ್ದೆಯು ಹೇಳುತ್ತದೆ. ಭಿನ್ನಾಭಿಪ್ರಾಯಗಳನ್ನು, ಸಮಸ್ಯೆಗಳನ್ನು ಸರಿಪಡಿಸಿಕೊಂಡು ಮದುವೆ ಸಂಬಂಧವನ್ನು ಮುಂದುವರಿಸಲು ದಂಪತಿಗೆ ಆ ಒಂದೂವರೆ ವರ್ಷವು ಸೂಕ್ತ ಸಮಯವೇ ಆಗಿದೆ. ಹೀಗಿದ್ದೂ ವಿಚ್ಛೇದನ ಪಡೆಯಬೇಕು ಎಂದು ಅವರು ನಿರ್ಧರಿಸಿದರೆ, ಅವರು ಆ ಅವಧಿಯಲ್ಲಿ ಪ್ರಜ್ಞಾಪೂರ್ವಕವಾಗಿಯೇ ಆ ನಿರ್ಧಾರಕ್ಕೆ ಬಂದಿದ್ದಾರೆ ಎಂದರ್ಥ’ ಎಂದು ಪೀಠವು ಹೇಳಿದೆ.



ಪ್ರಜಾ ಮತ
ಜನತಂತ್ರದ ಹಬ್ಬ
ಖರ್ಗೆ ವಿರುದ್ಧ ದೂರು 6
‘ಮಹಿಳಾ ಮೀಸಲಾತಿ ಜಾರಿ ಮಾಡಿ’ 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ನೆರೆ ರಾಜ್ಯಗಳ ಅಧಿಕಾರಿಗಳ ಜತೆ ಸಭೆ

ಗಡಿಯಲ್ಲಿ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮಗಳನ್ನು ತಡೆಯುವುದಕ್ಕಾಗಿ ನೆರೆಯ ಆರು ರಾಜ್ಯಗಳ ಹಿರಿಯ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದ ಕೇಂದ್ರ ಚುನಾವಣಾ ಆಯೋಗ, ಅಂತರ ರಾಜ್ಯ ಗಡಿಗಳಲ್ಲಿ ತೀವ್ರ ನಿಗಾ ಇರಿಸುವಂತೆ ಆದೇಶಿಸಿದೆ.

ನೆರೆಯ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಿಂದ ಕರ್ನಾಟಕದ ಗಡಿಯೊಳಕ್ಕೆ ಅಕ್ರಮವಾಗಿ ನಗದು, ಮದ್ಯ, ಮಾದಕ ವಸ್ತು ಮತ್ತು ಉಚಿತ ಕೊಡುಗೆಗಳನ್ನು ಸಾಗಿಸುವುದನ್ನು ತಡೆಯಲು ಬಿಗಿ ಕ್ರಮಕ್ಕೆ ಆಯೋಗ ಸೂಚಿಸಿದೆ. ಅಂತರ ರಾಜ್ಯ ಗಡಿಗಳಲ್ಲಿರುವ 185 ತನಿಖಾ ಠಾಣೆಗಳಲ್ಲೂ ತಪಾಸಣೆ ತೀವ್ರಗೊಳಿಸುವಂತೆ ನಿರ್ದೇಶನ ನೀಡಿದೆ.

ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅಧ್ಯಕ್ಷತೆಯಲ್ಲಿ ವಿಡಿಯೊ ಕಾನ್ಫರೆನ್ಸಿಂಗ್ ಮೂಲಕ ನಡೆದ ಸಭೆಯಲ್ಲಿ ಚುನಾವಣಾ ಆಯುಕ್ತರಾದ ಅನೂಪ್ ಚಂದ್ರ ಪಾಂಡೆ ಮತ್ತು ಅರುಣ್ ಗೋಯಲ್ ಪಾಲ್ಗೊಂಡಿದ್ದರು. ಕರ್ನಾಟಕದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಸೇರಿದಂತೆ ಹಿರಿಯ ಅಧಿಕಾರಿಗಳು, ನೆರೆಯ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ಪೊಲೀಸ್ ಮಹಾನಿರ್ದೇಶಕರು ಮತ್ತು ಇತರ ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯ ನೋಡಲ್ ಅಧಿಕಾರಿಗಳು, ಕೋಸ್ಟ್ ಗಾರ್ಡ್, ರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಬ್ಯೂರೊ, ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳೂ ಸಭೆಯಲ್ಲಿ ಪಾಲ್ಗೊಂಡಿದ್ದರು. ಕೇಂದ್ರ ಗೃಹ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ, ಕೇಂದ್ರೀಯ ಮೀಸಲು ಪೊಲೀಸ್ ಪಡೆಯ ಐಜಿಪಿ, ರೈಲ್ವೆ ಇಲಾಖೆಯ ಕಾರ್ಯನಿರ್ವಾಹಕ ನಿರ್ದೇಶಕರು ಸಭೆಯಲ್ಲಿದ್ದರು.

ಗಡಿ ಭಾಗದಲ್ಲಿ ತಪಾಸಣೆ ನಡೆಸುವಾಗ ಸಾರ್ವಜನಿಕರಿಗೆ ತೊಂದರೆ ಆಗದಂತೆ ಎಚ್ಚರಿಕೆ ವಹಿಸಬೇಕು
ಅರುಣ್ ಗೋಯಲ್
ಚುನಾವಣಾ ಆಯುಕ್ತ

ಅಂತರ ರಾಜ್ಯ ಗಡಿಗಳಲ್ಲಿರುವ ತನಿಖಾ ಠಾಣೆಗಳು

ರಾಜ್ಯ	ತನಿಖಾ ಠಾಣೆಗಳ ಸಂಖ್ಯೆ
ಕೇರಳ	21
ತಮಿಳುನಾಡು	25
ಆಂಧ್ರಪ್ರದೇಶ	57
ತೆಲಂಗಾಣ	24
ಮಹಾರಾಷ್ಟ್ರ	53
ಗೋವಾ	05

ಮಹದೇವಪುರ ಕ್ಷೇತ್ರದ ಗಾರ್ಡನ್ ಲೇಔಟ್ ಮಳೆಯಿಂದ ಜಲಾವೃತಗೊಂಡಿತು(ಎಡಚಿತ್ರ). ಮಳೆಯಿಂದ ಸಿದ್ದಯ್ಯ ವೃತ್ತದ ರಸ್ತೆಯು ಜಲಾವೃತಗೊಂಡಿತ್ತು —ಪ್ರಜಾವಾಣಿ ಚಿತ್ರಗಳು

ಯಲಹಂಕ, ಜಿಕೆವಿಕೆ ವ್ಯಾಪ್ತಿಯಲ್ಲಿ ಭಾರಿ ಮಳೆ, 250ಕ್ಕೂ ಹೆಚ್ಚು ಮನೆಗಳಿಗೆ ನುಗ್ಗಿದ ನೀರು

ಮಳೆ: ಗಾರ್ಡನ್ ಲೇಔಟ್ ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ತಡರಾತ್ರಿ ಹಾಗೂ ಸೋಮವಾರ ಸಂಜೆ ಧಾರಾಕಾರ ಮಳೆಯಾಗಿದೆ. ಇದರಿಂದ ತಗ್ಗು ಪ್ರದೇಶದ ಹಲವು ಬಡಾವಣೆಗಳಿಗೆ ಮಳೆಯ ನೀರು ನುಗ್ಗಿದ್ದು ಒಂದೇ ಮಳೆಗೆ ನಗರದ ಜನರು ರಾತ್ರಿಯಿಡೀ ಜಾಗರಣೆ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ.

ತಡರಾತ್ರಿ ಸುರಿದ ಧಾರಾಕಾರ ಮಳೆಯಿಂದ ತಗ್ಗುಪ್ರದೇಶದ ರಸ್ತೆಗಳು ಹಾಗೂ ಕೆಳಸೇತುವೆಯಲ್ಲಿ ಮಳೆ ನೀರು ಸಂಗ್ರಹಗೊಂಡು ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಮಹದೇವಪುರ ಕ್ಷೇತ್ರದ ಬೈರತಿಯ ಬ್ಲೆಸಿಂಗ್ ಗಾರ್ಡನ್ ಲೇಔಟ್‌ನ 250ಕ್ಕೂ ಹೆಚ್ಚು ಮನೆಗಳಿಗೆ ಮಳೆಯ ನೀರು ನುಗ್ಗಿದೆ.

'ರಾಜಕಾಲುವೆ ಒತ್ತುವರಿಯಾಗಿತ್ತು. ಒತ್ತುವರಿ ತೆರವುಗೊಳಿಸಿದ್ದು ಕಾಮಗಾರಿ ಪ್ರಗತಿಯಲ್ಲಿದೆ. ನೀರು ಕಾಲುವೆಯಲ್ಲಿ ಸರಾಗವಾಗಿ ಹರಿಯದ ಕಾರಣ ಇಡೀ ಬಡಾವಣೆಯೇ ಜಲಾವೃತಗೊಂಡಿದೆ. ಯಾರೂ ಮನೆಯಿಂದ ಹೊರ ಬರಲು ಸಾಧ್ಯವಾಗುತ್ತಿಲ್ಲ. ವಾಹನಗಳೂ ಪ್ರವಾಹದಲ್ಲಿ ಮುಳುಗಿವೆ' ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

ನಗರದ ಲೀ ಮೆರಿಡಿಯನ್ ಕೆಳಸೇತುವೆ ಜಲಾವೃತಗೊಂಡಿತ್ತು

ಯಲಹಂಕದ ಸುತ್ತಮುತ್ತ 24 ಗಂಟೆಯ ಅವಧಿಯಲ್ಲಿ 7 ಸೆಂ.ಮೀ ಹಾಗೂ ಜಿ.ಕೆ.ವಿ.ಕೆ ಭಾಗದಲ್ಲಿ 3 ಸೆಂ. ಮೀ ಮಳೆಯಾಗಿದೆ.

ನಾಗಸಂದ್ರ, ಜಾಲಹಳ್ಳಿ, ಪೀಣ್ಯ, ಪೀಣ್ಯ ಕೈಗಾರಿಕಾ ಪ್ರದೇಶ, ಸುಂಕದಕಟ್ಟೆ, ಬ್ಯಾಡರಹಳ್ಳಿ, ಸುಮನಹಳ್ಳಿ, ಕೊಟ್ಟಿಗೆಪಾಳ್ಯ, ಹೇರೋಹಳ್ಳಿ, ಕೆಂಗೇರಿ, ವಿಜಯನಗರ, ವಿಧಾನಸೌಧ ಸುತ್ತಮುತ್ತ, ಆರ್.ಟಿ. ನಗರ, ಸದಾಶಿವನಗರ, ಯಶವಂತಪುರ, ರಾಜರಾಜೇಶ್ವರಿ ನಗರ, ರಾಜಾಜಿನಗರ, ಮಹಾಲಕ್ಷ್ಮಿಲೇಔಟ್ ಭಾಗದಲ್ಲಿ ಭಾನುವಾರ ಧಾರಾಕಾರ ಮಳೆಯಾಗಿದೆ.

ಬಳ್ಳಾರಿ ರಸ್ತೆಯ ಪ್ಯಾಲೆಸ್ ಗುಟ್ಟಹಳ್ಳಿ ಬಳಿಯ ರಸ್ತೆಯಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು. ಲಿ-ಮೆರಿಡಿಯನ್ ಕೆಳಸೇತುವೆಯಲ್ಲಿ ಅಪಾರ ಪ್ರಮಾಣದ ನೀರು ನುಗ್ಗಿತ್ತು. ಈ ಮಾರ್ಗದಲ್ಲಿ ಸಂಚರಿಸುವ ವಾಹನ ಸವಾರರು ಬಿಬಿಎಂಪಿ ವಿರುದ್ಧ ಆಕ್ರೋಶ ಹೊರಹಾಕಿದರು.

ಸೋಮವಾರ ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ಇತ್ತು. ಸಂಜೆ ವೇಳೆಯಲ್ಲಿ ಚಾಮರಾಜಪೇಟೆ, ಎಂ.ಜಿ.ರಸ್ತೆ, ಟ್ರಿನಿಟಿ, ಅಶೋಕನಗರ, ಹಲಸೂರು, ದೊಡ್ಡಬೊಮ್ಮಸಂದ್ರ ಭಾಗದಲ್ಲಿ ಮಳೆಯಾಗಿದೆ.

ಕೆ.ಆರ್. ಮಾರುಕಟ್ಟೆ, ಚಿಕ್ಕಪೇಟೆ, ಮೆಜೆಸ್ಟಿಕ್, ಗಾಂಧಿನಗರ, ದೀಪಾಂಜಲಿ, ಕಾಮಾಕ್ಷಿಪಾಳ್ಯ, ಮಲ್ಲೇಶ್ವರ, ಗಿರಿನಗರ, ಹನುಮಂತನಗರ, ಜಯನಗರ, ಬನಶಂಕರಿ, ಶಿವಾಜಿನಗರ, ಕೋರಮಂಗಲ, ವಿವೇಕನಗರ, ಇಂದಿರಾನಗರ, ವಸಂತನಗರ, ಸಂಪಂಗಿರಾಮನಗರದ ವ್ಯಾಪ್ತಿಯಲ್ಲೂ ಸಾಧಾರಣ ಮಳೆಯಾಗಿದೆ.

ನಗರದಲ್ಲಿ ಇನ್ನೂ ಮೂರು ದಿನಗಳ ಕಾಲ ಹಗಲು ಮೋಡ ಕವಿದ ವಾತಾವರಣ ಇರಲಿದ್ದು ಸಂಜೆ ಅಥವಾ ರಾತ್ರಿ ವೇಳೆ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ನಗರದಲ್ಲಿ ಸೋಮವಾರ ಗರಿಷ್ಠ ಉಷ್ಣಾಂಶ 31 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಧಾರಾಕಾರ ಮಳೆಯಿಂದ ನಗರದ ಉಷ್ಣಾಂಶವು ಕೊಂಚ ತಗ್ಗಿದೆ. ಬಿಸಿ ಗಾಳಿಯಿಂದ ಪರದಾಡುತ್ತಿದ್ದ ಜನರಿಗೆ ಕೊಂಚ ನೆಮ್ಮದಿ ತಂದಿದೆ.

ಕೋಲಾರ: ಒಂದೂವರೆ ತಾಸಿನಲ್ಲಿ 7 ಸೆ.ಮೀ ಮಳೆ

ಕೋಲಾರ: ಜಿಲ್ಲೆಯ ವಿವಿಧೆಡೆ ಸೋಮವಾರ ರಾತ್ರಿ ಗುಡುಗು ಸಿಡಿಲು ಸಮೇತ ಜೋರು ಮಳೆಯಾಗಿದೆ.

ಕೋಲಾರ ನಗರ ಹಾಗೂ ಗ್ರಾಮಾಂತರ ಭಾಗದಲ್ಲಿ ಅಧಿಕ ಮಳೆ ಸುರಿಯಿತು. ರಾತ್ರಿ 8.30ರ ಸುಮಾರಿಗೆ ಆರಂಭವಾದ ಮಳೆ ತಡರಾತ್ರಿವರೆಗೇ ಬರುತ್ತಲೇ ಇತ್ತು. ಮುಳಬಾಗಿಲು ತಾಲ್ಲೂಕಿನಲ್ಲಿ ತುಂತುರು ಮಳೆಯಾಯಿತು.

ತಾಲ್ಲೂಕಿನ ನರಾಸಪುರದಲ್ಲಿ ರಾತ್ರಿ 10ರ ವೇಳೆಗೆ 7 ಸೆ.ಮೀ ಮಳೆಯಾಗಿದ್ದು, ಜಿಲ್ಲೆಯಲ್ಲಿ ಇದು ಅತ್ಯಧಿಕ ಕೂಡ. ಮಾಲೂರು ತಾಲ್ಲೂಕಿನ ದೊಡ್ಡಶಿವಾರ ಪಂಚಾಯಿತಿ ವ್ಯಾಪ್ತಿಯಲ್ಲಿ 6.1 ಸೆ.ಮೀ ಹಾಗೂ ಶಿವಾರಪಟ್ಟಣ 5 ಸೆ.ಮೀ. ಮಳೆಯಾಗಿರುವುದು ವರದಿಯಾಗಿದೆ. ಕೇವಲ ಒಂದೂವರೆ ತಾಸಿನಲ್ಲಿ ಇಷ್ಟು ಮಳೆ ಸುರಿದಿದೆ.

'ಕೋಲಾರ ತಾಲ್ಲೂಕಿನ ಚನ್ನಸಂದ್ರದಲ್ಲಿ 4 ಸೆ.ಮೀ., ಮಾಲೂರು ತಾಲ್ಲೂಕಿನ ಜಯಮಂಗಲದಲ್ಲಿ 3.2 ಸೆ.ಮೀ., ಬಂಗಾರಪೇಟೆ ತಾಲ್ಲೂಕಿನ ಬೂದಿಕೋಟೆ ಪಂಚಾಯಿತಿ ವ್ಯಾಪ್ತಿಯಲ್ಲಿ 1.8 ಸೆ.ಮೀ., ಹುಲ್ಲಹಳ್ಳಿಯಲ್ಲಿ 1.8 ಸೆ.ಮೀ., ಹುಲಿಬೆಲೆಯಲ್ಲಿ 1.6 ಸೆ.ಮೀ. ಕಾರೇಹಳ್ಳಿಯಲ್ಲಿ 1.4 ಸೆ.ಮೀ., ಮಳೆಯಾಗಿದೆ' ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಈ ಮೂಲಕ ಬಿಸಿಲ ಧಗೆಯಿಂದ ಬಸವಳಿದಿದ್ದವರಿಗೆ ತಂಪೆರಗಿದೆ. ರಸ್ತೆಯಲ್ಲಿನ ದೂಳಿನಿಂದ ಸಮಸ್ಯೆ ಎದುರಿಸುತ್ತಿದ್ದವರಿಗೆ ತುಸು ನೆಮ್ಮದಿ ನೀಡಿದೆ. ಸೋಮವಾರ ಬೆಳಗ್ಗಿನಿಂದಲೇ ವಾತಾವರಣ ತಂಪಾಗಿತ್ತು.

ಸುದ್ದಿ 2 ನಿಮಿಷ

ಚಿನ್ನಾಭರಣ, ವಾಹನ ಕಳವು: ಆರೋಪಿ ಬಂಧನ

ಬೆಂಗಳೂರು: ನಗರದ ವಿವಿಧ ಬಡಾವಣೆಯ ಮನೆಯಲ್ಲಿ ಚಿನ್ನಾಭರಣ ಹಾಗೂ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ತಲಘಟ್ಟಪುರ ಪೊಲೀಸರು ಬಂಧಿಸಿದ್ದಾರೆ.

ವಾಜರಹಳ್ಳಿ ಹೊಸಹಳ್ಳಿಯ ರಘು (23) ಬಂಧಿತ ಆರೋಪಿ.

ಆರೋಪಿಯಿಂದ ಎರಡು ಬೈಕ್, 80 ಗ್ರಾಂ ಚಿನ್ನಾಭರಣ, 600 ಗ್ರಾಂ ಬೆಳ್ಳಿ ಹಾಗೂ ಹಿತ್ತಾಳೆ ಸಾಮಗ್ರಿ ಜಪ್ತಿ ಮಾಡಿಕೊಳ್ಳಲಾಗಿದೆ. ಆರೋಪಿಯು ಮುಬಾರಕ್, ನಾಗರಾಜ್, ಮುರುಗನ್ ಜತೆಗೆ ಸೇರಿಕೊಂಡು ಕಳವು ನಡೆಸುತ್ತಿದ್ದ. ಈ ಮೂವರು ತಲೆಮರೆಸಿಕೊಂಡಿದ್ದಾರೆ. ತಲಘಟ್ಟಪುರ, ಬನ್ನೇರಘಟ್ಟ, ಕೆಂಗೇರಿ, ಹಲಸೂರು ವ್ಯಾಪ್ತಿಯ ಮನೆಗಳಲ್ಲಿ ಚಿನ್ನಾಭರಣ ಕಳವು ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಲಾರಿ ಬ್ರೇಕ್ ವಿಫಲ: ಸರಣಿ ಅಪಘಾತ

ಬೆಂಗಳೂರು: ಮರದ ತುಂಡು ತುಂಬಿಕೊಂಡು ದೊಡ್ಡಬಳ್ಳಾಪುರದಿಂದ ನಗರಕ್ಕೆ ಬರುತ್ತಿದ್ದ ಲಾರಿಯ ಬ್ರೇಕ್ ವಿಫಲವಾಗಿ ರಸ್ತೆಬದಿ ನಿಲುಗಡೆ ಮಾಡಿದ್ದ ಕಾರುಗಳು, ಆಟೋಗೆ ಡಿಕ್ಕಿ ಹೊಡೆದಿದೆ.

ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ಸರಣಿ ಅಪಘಾತ ನಡೆದಿದೆ. 13 ವರ್ಷದ ಬಾಲಕಿಗೆ ಸಣ್ಣ-ಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಬಿಡುಗಡೆಯಾಗಿದ್ದಾಳೆ.

ಲಾರಿ ಬ್ರೇಕ್ ವಿಫಲವಾದ ಮೇಲೆ ರಸ್ತೆ ಬದಿ ನಿಲ್ಲಿಸಿದ್ದ ಐದು ಕಾರುಗಳು ಮತ್ತು ಒಂದು ಆಟೋಗೆ ಡಿಕ್ಕಿ ಹೊಡೆದಿದೆ. ಎರಡು ಕಾರುಗಳಲ್ಲಿ ಕುಳಿತಿದ್ದವರು ಪಾರಾಗಿದ್ದಾರೆ. ಬಸ್ ನಿಲ್ದಾಣದ ಬಳಿ ನಿಂತಿದ್ದ ಬಾಲಕಿಗೆ ಕಾರೊಂದು ಡಿಕ್ಕಿ ಹೊಡೆದಿದೆ. ಲಾರಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಂಚಾರ ಠಾಣೆ ಪೊಲೀಸರು ಹೇಳಿದರು.

ಡ್ರಗ್ ಪೆಡ್ಲರ್ ಸಹಚರನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಖ್ಯಾತ ಮಾದಕ ವಸ್ತುಗಳ ಮಾರಾಟಗಾರ ಜೊಲ್ಲು ಇಮ್ರಾನ್ ಸಹಚರ, ಡಿ.ಜೆ. ಹಳ್ಳಿ ನಿವಾಸಿ ಸೈಯದ್ ತನ್ನು ಎಂಬಾತನನ್ನು ದೇವರಜೀವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹ 1.30 ಕೋಟಿ ಮೌಲ್ಯದ ಗಾಂಜಾ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡಿ.ಜೆ.ಹಳ್ಳಿಯ ಸಕ್ಕರೆ ಮಂಡಿ ಬಳಿ ಸಾರ್ವಜನಿಕರಿಗೆ ಗಾಂಜಾ ಮಾರಾಟ ಬಂದಿದ್ದ ವೇಳೆ ಆರೋಪಿಯನ್ನು ಬಂಧಿಸಲಾಯಿತು. ಸೈಯದ್ ತನ್ನು ವಿರುದ್ಧ ಎನ್‌ಡಿಪಿಎಸ್, ಕೊಲೆ ಯತ್ನ ಪ್ರಕರಣಗಳು ದಾಖಲಾಗಿದ್ದವು. ಒಂದು ಪ್ರಕರಣದಲ್ಲಿ ವಾರಂಟ್ ಕೂಡ ಜಾರಿ ಆಗಿತ್ತು. ಆತನಿಗಾಗಿ ಶೋಧ ಕಾರ್ಯ ನಡೆಯುತ್ತಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ. 'ಈತ ಜೋಲ್ಲು ಇಮ್ರಾನ್ ಸಹಚರ. ಜೋಲ್ಲು ವಿರುದ್ಧ ಒಟ್ಟು 18 ವಾರಂಟ್‌ಗಳು ಜಾರಿ ಆಗಿದ್ದವು. ನಾಲ್ಕು ವರ್ಷಗಳಿಂದ ಆತ ತಲೆಮರೆಸಿಕೊಂಡಿದ್ದ. ಎರಡು ತಿಂಗಳ ಹಿಂದೆ ಗಾಂಜಾ ಸಹಿತ ಆತನನ್ನು ಬಂಧಿಸಲಾಗಿತ್ತು. ಸದ್ಯ ಆತನ ಜೈಲಿನಲ್ಲಿ ಇದ್ದಾನೆ. ಈತ ಆಂಧ್ರಪ್ರದೇಶದ ಡೀಲರ್‌ಗಳ ಮೂಲಕ ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ' ಎಂದು ಮೂಲಗಳು ತಿಳಿಸಿವೆ.

ಸೈಯದ್ ತನ್ನು

CONNECT ಕ್ಲಾಸಿಫೈಡ್ಸ್

ನಾನೂ ಕಾಂಗ್ರೆಸ್ ಬಿಡುವುದಿಲ್ಲ; ನೀವೂ ಬಿಡಬೇಡಿ: ಎಸ್.ಆರ್ ಪಾಟೀಲ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಪಕ್ಷ ಬಿಡುತ್ತೇನೆ ಎಂಬುದು ಊಹಾಪೋಹ. ನಾನೂ ಕಾಂಗ್ರೆಸ್ ಪಕ್ಷ ಬಿಡುವುದಿಲ್ಲ, ಅಭಿಮಾನಿಗಳೇ ನೀವೂ ಬಿಡಬೇಡಿ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮಾಜಿ ನಾಯಕ ಎಸ್.ಆರ್. ಪಾಟೀಲ ಅವರು ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಟಿಕೆಟ್ ನೀಡದ್ದಕ್ಕೆ ನೋವಾಗಿದೆ. ಆದರೆ, ಪಕ್ಷವು ನನಗೆ ಅಷ್ಟೇ ಅವಕಾಶಗಳನ್ನೂ ನೀಡಿದೆ' ಎಂದು ಅವರು ಹೇಳಿದರು

ಅಮಿತ್ ಶಾ ಪ್ರಚಾರ

ಪ್ರಜಾವಾಣಿ ವಾರ್ತೆ

ತುಮಕೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಗುಬ್ಬಿ, ತಿಪಟೂರಿನಲ್ಲಿ ಸೋಮವಾರ ಭರ್ಜರಿ ರೋಡ್ ಶೋ ನಡೆಸಿದರು.

2 ಕ್ಷೇತ್ರಗಳಲ್ಲಿ ಅವರನ್ನು ಅದ್ದೂರಿಯಾಗಿ ಕಾರ್ಯಕರ್ತರು ಬರಮಾಡಿಕೊಂಡರು. ಶಾ, ಮೋದಿ ಮತ್ತು ಬಿಜೆಪಿ ಬಾವುಟಗಳು ರಾರಾಜಿಸಿದವು.

ಹೆದ್ದಾರಿಯಲ್ಲಿ ಭೀಕರ ಅಪಘಾತ ಮೂವರ ಸಾವು

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು-ಮೈಸೂರು ನೂತನ ಹೆದ್ದಾರಿಯ ಜಯಪುರ ಗೇಟ್ ಬಳಿ ಸೋಮವಾರ ಸಂಭವಿಸಿದ ಅಪಘಾತದಲ್ಲಿ ಮೂವರು ಯುವಕರು ಮೃತಪಟ್ಟರು.

ಅಬ್ದುಲ್ ರೆಹಮಾನ್ (18), ರೋಷನ್ (25) ಹಾಗೂ ಮಹಮ್ಮದ್ ಹುಸೇನ್ ಮೃತಪಟ್ಟವರು. ಈ ಮೂವರು ಬೆಂಗಳೂರಿನಿಂದ ಮೈಸೂರಿಗೆ ಒಂದೇ ಬೈಕ್‌ನಲ್ಲಿ ಹೋಗುತ್ತಿದ್ದರು.

ಈ ವೇಳೆ ಹೆದ್ದಾರಿಯಲ್ಲಿ ಕೆಟ್ಟು ನಿಂತಿದ್ದ ಕಾರಿಗೆ ಬೈಕ್ ಸವಾರ ಹಿಂಬದಿಯಿಂದ ಡಿಕ್ಕಿ ಹೊಡೆದು ರಸ್ತೆಗೆ ಅಪ್ಪಳಿಸಿದ್ದಾರೆ. ಇದೇ ವೇಳೆ ಮತ್ತೊಂದು ಕಾರು ಬಂದು ಡಿಕ್ಕಿ ಹೊಡೆದ ಪರಿಣಾಮ ಹೆದ್ದಾರಿಗೆ ಬಿದ್ದು ಇಬ್ಬರು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಮತ್ತೊಬ್ಬ ಆಸ್ಪತ್ರೆಗೆ ಸಾಗಿಸುವ ಮುನ್ನ ಮೃತಪಟ್ಟರು ಎಂದು ಪೊಲೀಸರು ಮಾಹಿತಿ ನೀಡಿದರು.

ಈಚೆಗಷ್ಟೇ ಇದೇ ಹೆದ್ದಾರಿಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ಲಂಬಾಣಿ ತಾಂಡಾ ಬಳಿ ಸಂಭವಿಸಿದ ಕಾರು ಅಪಘಾತದಲ್ಲಿ ಒಂದೇ ಕುಟುಂಬದ ಐವರು ಮೃತಪಟ್ಟಿದ್ದರು. ಈ ಘಟನೆ ಮಾಸುವ ಮುನ್ನವೇ ಮತ್ತೊಂದು ದುರ್ಘಟನೆ ಸಂಭವಿಸಿದೆ.

ಗಣೇಶ ಜನ್ಮ ಯಕ್ಷಗಾನ ಕಲಾ ಕದಂಬ ಆರ್ಟ್ಸ್ ಸೆಂಟರ್ ಆಯೋಜಿಸಿದ್ದ ಮಾಸದ ಮೆಲುಕು ಕಾರ್ಯಕ್ರಮದಲ್ಲಿ ಕಲಾವಿಕಸನ ಶಿಬಿರದಲ್ಲಿ ನಿರ್ದೇಶಕ ಮುರಳೀಧರ್ ನಾವಡ ಅವರಿಂದ ತರಬೇತಿ ಪಡೆದ ಮಕ್ಕಳು 'ಗಣೇಶ ಜನ್ಮ ಯಕ್ಷಗಾನ' ಪ್ರದರ್ಶಿಸಿದರು.

ನಗರದಲ್ಲಿ ಇಂದು

'ಅಭಿವೃದ್ಧಿ, ಭದ್ರತೆ ಮತ್ತು ಕಾರ್ಯಾಚರಣೆಗಳು' ಉಪನ್ಯಾಸ: ಶಿವ ಪ್ರಕಾಶಂ ರಾಜಪ್ಪನ್, ಆಯೋಜನೆ ಮತ್ತು ಸ್ಥಳ: ಬಿ.ಎನ್.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಮಧ್ಯಾಹ್ನ 2

'ವಿಶ್ವ ನೃತ್ಯ' ದಿನಾಚರಣೆಯ ಕಾರ್ಯಕ್ರಮ ಸೃಷ್ಟಿ ರಾಷ್ಟ್ರೀಯ ನೃತ್ಯ ಪರಿಣಿತ ಪ್ರಶಸ್ತಿ ಪ್ರದಾನ: ಅತಿಥಿಗಳು: ಚಂದ್ರಶೇಖರ ಕಂಬಾರ, ವಿಶ್ವನಾಥ್ ಹಿರೇಮಠ, 'ಸೃಷ್ಟಿ ಸ್ಮರಣ ಸಂಚಿಕೆ' ಬಿಡುಗಡೆ: ಮಹೇಶ ಜೋಶಿ, ಕಥಕ್: ಸ್ನಿಗ್ಧಾ ಡಿ.ಎಸ್., ಶುಭಾ ಧನಂಜಯ್, ದರ್ಶಿನಿ ಲಾಲಿ ಚಟರ್ಜಿ, 'ಪಂಚವಟಿ' ಯಕ್ಷಗಾನ ಪ್ರದರ್ಶನ: ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ, ಪ್ರಶಸ್ತಿ ಪುರಸ್ಕೃತರು: ಕೆರೆಮನೆ ಶಿವಾನಂದ ಹೆಗಡೆ, ಸೃಷ್ಟಿ ರಾಮಾಯಣ ನೃತ್ಯ ರೂಪಕ ಪ್ರದರ್ಶನ, ಆಯೋಜನೆ: ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, ರೋಟರಿ 3190 ಜಿಲ್ಲೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30ರಿಂದ

ಭಜನೆ ಮತ್ತು ಧಾರ್ಮಿಕ ಪ್ರವಚನ: ಲಕ್ಷ್ಮಿ ನಾರಾಯಣ ಭಜನಾ ಮಂಡಳಿ, 'ನಾರಾಯಣ ವರ್ಮ' ಕುರಿತು ಪ್ರವಚನ: ಜಗನ್ನಾಥಾಚಾರ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 5.30

ಚಂದ್ರಶೇಖರ ಕಂಬಾರ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಆಶ್ರಮದಿಂದ ಕಾಂಪೌಂಡ್ ನಿರ್ಮಾಣಕ್ಕೆ ಆಕ್ಷೇಪ: ಬೈಕ್‌ಗಳಿಗೆ ಬೆಂಕಿ

ಆರ್ಟ್ ಆಫ್ ಲಿವಿಂಗ್ ಆಶ್ರಮ: ಮಾರಾಮಾರಿ

ಪ್ರಜಾವಾಣಿ ವಾರ್ತೆ

ರಾಮನಗರ: ಕಾಂಪೌಂಡ್ ನಿರ್ಮಿಸುವ ವಿಚಾರದಲ್ಲಿ ರವಿಶಂಕರ್ ಗುರೂಜಿ ಆರ್ಟ್ ಆಫ್ ಲಿವಿಂಗ್ ಆಶ್ರಮದ ಬೆಂಬಲಿಗರು ಹಾಗೂ ಸ್ಥಳೀಯರ ನಡುವೆ ಸೋಮವಾರ ಜಟಾಪಟಿ ನಡೆದಿದ್ದು, ಉದ್ರಿಕ್ತರ ಗುಂಪು ಎಂಟಕ್ಕೂ ಹೆಚ್ಚು ಬೈಕ್‌ಗಳಿಗೆ ಬೆಂಕಿ ಇಟ್ಟಿದೆ.

ಕಗ್ಗಲೀಪುರ ಪೊಲೀಸ್ ಠಾಣೆ ವ್ಯಾಪ್ತಿಯ ವಡೇರಹಳ್ಳಿ ಬಳಿ ಆಶ್ರಮಕ್ಕೆ ಸೇರಿದ ಐದು ಎಕರೆ ಜಾಗದಲ್ಲಿ 'ಮಧುವನ' ಇದೆ. ಇದಕ್ಕೆ ಹೊಂದಿಕೊಂಡಂತೆ ಗ್ರಾಮದ ಸರ್ವೆ ನಂಬರ್ 137ರಲ್ಲಿ ಸುಮಾರು 36 ಎಕರೆ ಜಮೀನು ಇದೆ. ಸ್ಥಳೀಯರು ಇದನ್ನು ಹತ್ತಾರು ವರ್ಷಗಳಿಂದ ಉಳುಮೆ ಮಾಡುತ್ತ ಬಂದಿದ್ದಾರೆ.

ಸೋಮವಾರ ಆಶ್ರಮದ ಸಿಬ್ಬಂದಿ ಈ ಜಾಗಕ್ಕೆ ಕಾಂಪೌಂಡ್ ನಿರ್ಮಿಸಲು ಮುಂದಾಗಿದ್ದಾರೆ ಎನ್ನಲಾಗಿದೆ. ಇದಕ್ಕೆ ಸ್ಥಳೀಯರ ಗುಂಪು ವಿರೋಧ ವ್ಯಕ್ತಪಡಿಸಿದೆ. ಇದೇ ವಿಚಾರವಾಗಿ ಎರಡು ಗುಂಪುಗಳ ನಡುವೆ ಹೊಡೆದಾಟ ನಡೆದಿದೆ. ಈ ಸಂದರ್ಭ ಮಧುವನದ ಆವರಣದಲ್ಲಿದ್ದ ಎಂಟು ಬೈಕ್‌ಗಳಿಗೆ ಬೆಂಕಿ ಹಾಕಲಾಗಿದೆ. ಜೊತೆಗೆ ಐದು ಕಾರುಗಳೂ ಜಖಂಗೊಂಡಿವೆ. ಮಧುವನದ ಕಟ್ಟಡದ ಗಾಜುಗಳೂ ಒಡೆದಿವೆ.

ಘಟನೆಯಲ್ಲಿ ಬೆಂಕಿಗೆ ಆಹುತಿಯಾದ ದ್ವಿಚಕ್ರವಾಹನಗಳು

'ಆಶ್ರಮದ ಸಿಬ್ಬಂದಿ ಏಕಾಏಕಿ ಬಂದು ಕಾಂಪೌಂಡ್ ನಿರ್ಮಿಸಲು ಮುಂದಾಗಿದ್ದು, ಅದಕ್ಕೆ ವಿರೋಧ ವ್ಯಕ್ತಪಡಿಸಿದ ನಮ್ಮ ಮೇಲೆ ಹಲ್ಲೆ ನಡೆಸಿದೆ' ಎಂದು ಸ್ಥಳೀಯರು ಕಗ್ಗಲೀಪುರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ಗ್ರಾಮಸ್ಥರ ಗುಂಪು ನಮ್ಮ ಮೇಲೆ ಹಲ್ಲೆ ನಡೆಸಿ, ಕಾಂಪೌಂಡ್ ಕೆಡವಿ ಬೈಕ್‌ಗಳಿಗೆ ಬೆಂಕಿ ಇಟ್ಟಿದೆ' ಎಂದು ಆಶ್ರಮದ ಬೆಂಬಲಿಗರು ಪ್ರತಿದೂರು ದಾಖಲಿಸಿದ್ದಾರೆ.

' ಬೆಳಿಗ್ಗೆ ಸ್ಥಳೀಯರ ಗುಂಪೊಂದು ಏಕಾಏಕಿ ಕಾಂಪೌಂಡ್ ನಾಶಪಡಿಸಿತು. ಬೈಕ್‌ಗಳಿಗೂ ಬೆಂಕಿ ಹಾಕಿ ಬೆದರಿಕೆ ಒಡ್ಡಿತು. ಇದನ್ನು ಪ್ರಶ್ನಿಸಿದ ನಮ್ಮ ಮೇಲೆ ಹಲ್ಲೆ ನಡೆಸಿದ್ದು, ಘಟನೆಯಲ್ಲಿ 8ಕ್ಕೂ ಹೆಚ್ಚು ಜನರಿಗೆ ಗಾಯ ಆಗಿದೆ' ಎಂದು ಆಶ್ರಮದ ವೇದವಿಜ್ಞಾನ ಮಹಾ ವಿದ್ಯಾಪೀಠದ ಟ್ರಸ್ಟಿ ಪ್ರಸಾದ್ ಕುನ್ನೂರು ಎಂಬುವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

'ಉಚಿತ ಸಿಲಿಂಡರ್: ಉ.ಪ್ರದಲ್ಲಿ ಭರವಸೆ ಈಡೇರಿಸದ ಬಿಜೆಪಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಬಿಜೆಪಿ ತನ್ನ ಪ್ರಣಾಳಿಕೆಯಲ್ಲಿ ಪ್ರತಿ ಕುಟುಂಬಕ್ಕೆ ವರ್ಷಕ್ಕೆ ಮೂರು ಅಡುಗೆ ಅನಿಲ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡುವುದಾಗಿ ಭರವಸೆ ನೀಡಿದೆ. ಉತ್ತರ ಪ್ರದೇಶದಲ್ಲಿ ಅವರು ನೀಡಿದ್ದ ಈ ಭರವಸೆ ಈಡೇರಿಸಿಲ್ಲ' ಎಂದು ಕಾಂಗ್ರೆಸ್ ಮುಖಂಡ, ರಾಜ್ಯಸಭಾ ಸದಸ್ಯ ಜೈರಾಂ ರಮೇಶ್ ಹೇಳಿದರು.

ಇಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆಮ್ ಆದ್ಮಿ ಪಾರ್ಟಿ (ಎಎಪಿ), ಆಲ್‌ಇಂಡಿಯಾ ಮಜಿಲಿಸ್ ಇ ಇತ್ತೇದುಲ್ ಮುಸ್ಲಿಮೀನ್ (ಎಐಎಂಐಎಂ), ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಬಿಜೆಪಿಯ ಬಿ-ಟೀಮ್‌ಗಳು. ಜೆಡಿಎಸ್ ಕೂಡ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡಿದೆ' ಎಂದರು.

'ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜಸ್ಥಾನ, ಹಿಮಾಚಲ ಪ್ರದೇಶ ಹಾಗೂ ಚತ್ತೀಸಘಡದ ಚುನಾವಣೆಯಲ್ಲಿ ಪಕ್ಷವು ನೀಡಿದ ಪ್ರಮುಖ ಭರವಸೆಗಳನ್ನು ಈಡೇರಿಸಿದೆ. ರಾಜಸ್ಥಾನದಲ್ಲಿ ಎಲ್ಲ ನಾಗರಿಕರಿಗೂ ಆರೋಗ್ಯ ವಿಮೆ ಮಾಡಿಸಿದ್ದು, ₹ 25 ಲಕ್ಷದವರೆಗೆ ಚಿಕಿತ್ಸೆ ಉಚಿತವಾಗಿ ಸಿಗುತ್ತಿದೆ. ಹಿಮಾಚಲ ಪ್ರದೇಶ ಮತ್ತು ಚತ್ತೀಸಘಡದಲ್ಲಿ ಹಳೆ ಪಿಂಚಣಿ ಯೋಜನೆ ಜಾರಿಗೊಳಿಸಲಾಗಿದೆ' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

I MANJUSHA Sujith Prasad W/O, Sujith Prasad K R/o #48, 2nd Cross, B Sector, Ramaiah Reddy Colony, Basavanagar, Bangalore - 560037 have changed my name to Manjusha K Anand for all purposes.

DH ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact : 9886213331 : 9901641752
9845114560 : 9731810277
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Why Suffer in Pain
when you have world class treatment for all your aches and pains right here?
Your one-stop solution for all spine, and joints, along with regenerative medicine All in day-care
Insurance Accepted
Carry this Newspaper with you to get 25% off on first consultation
We also do Customized insoles for Sports, Diabetic Foot and Foot Anomalies
Consult and get relief of your pain with simple daycare procedures.
Call for an appointment or walk-in
IPSC
Dr. Swati Bhat
MBBS, MD, FIAPM, DPMCAI (Ireland)
1st Floor, 11 & 12, Bellary Road, Sahakar Nagar, Above Bata Show Room Bengaluru - 560092
Ph : 7028207222 | WhatsApp: 9311223926

ಕಾರ್ಮಿಕರ ದಿನಾಚರಣೆ: ಕೆಲಸದ ಅವಧಿ ಹೆಚ್ಚಳಕ್ಕೆ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ವಿರೋಧ

‘ಕಾರ್ಮಿಕ ವಿರೋಧಿ ನೀತಿ ಹಿಂಪಡೆಯಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸದ ಅವಧಿ 12 ಗಂಟೆಗಳಿಗೆ ಹೆಚ್ಚಳ ಮತ್ತು ಮಹಿಳೆಯರಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅನುಮತಿ ನೀಡಿರುವ ಸರ್ಕಾರದ ನಡೆಯನ್ನು ವಿರೋಧಿಸುವ ಮೂಲಕ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆ.ಸಿ.ಟಿ.ಯು) ಸೋಮವಾರ ಕಾರ್ಮಿಕ ದಿನ ಆಚರಿಸಿತು.

ನಗರದ ಸ್ವಾತಂತ್ರ್ಯ ಉದ್ಯಾನದ ಕೆ. ಸುಬ್ಬರಾವ್ ವೇದಿಕೆಯಲ್ಲಿ ನಡೆದ ಮೇ ದಿನಾಚರಣೆಯ ಸಾರ್ವಜನಿಕ ಸಭೆಯಲ್ಲಿ ಸಾವಿರಾರು ಕಾರ್ಮಿಕರು ಕೆಂಪು ಬಟ್ಟೆ ಧರಿಸಿ ಪಾಲ್ಗೊಂಡಿದ್ದರು.

ಈ ಬಾರಿ ಮೇ ದಿನದ ಘೋಷ ವಾಕ್ಯ ‘ಕೆಲಸದ ಅವಧಿಯನ್ನು 8 ಗಂಟೆಗೆ ಸೀಮಿತಗೊಳಿಸಿ, ಜೀವನಯೋಗ್ಯ ಕನಿಷ್ಠ ವೇತನ ಜಾರಿಗೊಳಿಸಬೇಕು’ ಎನ್ನುವುದಾಗಿತ್ತು. ಸಭೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಮಿಕ ಮತ್ತು ರೈತ ವಿರೋಧಿ ನೀತಿಗಳನ್ನು ಹಿಂಪಡೆಯುವಂತೆ ಆಗ್ರಹಿಸಲಾಯಿತು.

‘ಪ್ರಧಾನಿ ನರೇಂದ್ರ ಮೋದಿ ಅವರ ತೀರ್ಮಾನಗಳು ಕಾರ್ಪೊರೇಟ್ ಕಂಪನಿಗಳ ಪರವಾಗಿವೆ. ಸಾಮಾಜಿಕ ಭದ್ರತೆಗಾಗಿ ಹೋರಾಟಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ. ಕಾರ್ಮಿಕ ಪ್ರತಿನಿಧಿಗಳೊಂದಿಗೆ ಯಾವುದೇ ಮಾತುಕತೆ ನಡೆಸದೇ ತಮಿಳುನಾಡು ಮತ್ತು ಕರ್ನಾಟಕ ರಾಜ್ಯ ಸರ್ಕಾರಗಳು ಫ್ಯಾಕ್ಟರಿ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಕೆಲಸದ ಅವಧಿಯನ್ನು ದಿನಕ್ಕೆ 12 ಗಂಟೆ ಮತ್ತು ವಾರಕ್ಕೆ 60 ಗಂಟೆಗೆ ಹೆಚ್ಚಿಸುವ ಮೂಲಕ ಕಾರ್ಮಿಕ ವರ್ಗದ ಮೇಲೆ ಗದಾ ಪ್ರಹಾರ ಮಾಡಿದೆ. ನಮ್ಮ ಹಕ್ಕು ಕಾಪಾಡಿಕೊಳ್ಳಲು ಸಂಘಟಿತ ಹೋರಾಟ ಮಾಡುವ ಅಗತ್ಯವಿದೆ’ ಎಂದರು.

‘ಬೆಲೆ ಏರಿಕೆಗೆ ಅನುಗುಣವಾಗಿ ಕನಿಷ್ಠ ವೇತನವನ್ನು ₹31,500 ಪರಿಷ್ಕರಿಸಬೇಕಾಗಿತ್ತು. ಆದರೆ, ರಾಜ್ಯ ಸರ್ಕಾರ ₹14,500 ವೇತನವನ್ನು ಹೆಚ್ಚಿಸಿ ಕಾರ್ಮಿಕರಿಗೆ ಮೋಸ ಮಾಡಿದೆ. ನಾಲ್ಕು ಕಾರ್ಮಿಕ ಕೋಡ್‌ಗಳನ್ನು ಜಾರಿಗೊಳಿಸಿ ಮುಷ್ಕರದ ಹಕ್ಕು ಕಸಿದುಕೊಳ್ಳುತ್ತಿದೆ. ನಿಗದಿತ ಅವಧಿಯ ಉದ್ಯೋಗ, ಗುತ್ತಿಗೆ ಪದ್ಧತಿಯಲ್ಲಿ ಕಾರ್ಮಿಕರನ್ನು ನೇಮಕಾತಿ ಮಾಡಿಕೊಂಡು ಬೇಕಾದಾಗ ಬಳಸಿ ಬಿಸಾಡಲು ಈ ಕೋಡ್‌ಗಳು ಅನುಮತಿ ನೀಡುತ್ತವೆ’ ಎಂದು ಕಾರ್ಮಿಕ ಸಂಘಟನೆಗಳ ಮುಖಂಡರು ಆರೋಪಿಸಿದರು.

ಜೆ.ಸಿ.ಟಿ.ಯುನ ರಾಜ್ಯ ಸಂಚಾಲಕ ಕೆ.ವಿ. ಭಟ್, ಕಾರ್ಮಿಕ ಸಂಘಟನೆಗಳ ಮುಖಂಡರಾದ ಮೈಕಲ್ ಫರ್ನಾಂಡಿಸ್, ವಿಜಯ ಭಾಸ್ಕರ್, ಡಿ. ನಾಗಲಕ್ಷ್ಮಿ, ನಾಗನಾಥ್, ಶಾಮಣ್ಣ ರೆಡ್ಡಿ, ರಾಜನ್, ಪಿ.ಕೆ.ಸ್ವಾಮಿ ಇದ್ದರು.

ಕಾರ್ಮಿಕ ಕೋಡ್‌ಗಳನ್ನು ರದ್ದುಗೊಳಿಸಿ: ಕಾರ್ಮಿಕ ವಿರೋಧಿ ನಾಲ್ಕು ಕಾರ್ಮಿಕ ಕೋಡ್‌ಗಳನ್ನು ಕೂಡಲೇ ರದ್ದುಪಡಿಸಬೇಕು. ಸರ್ಕಾರಿ ವಲಯ ಗಳಲ್ಲಿ ಗುತ್ತಿಗೆ ಪದ್ಧತಿಯಲ್ಲಿ ಕಾರ್ಯ ನಿರ್ವಹಿಸುತ್ತಿರವ ಕಾರ್ಮಿಕರನ್ನು ನೇರ ಪಾವತಿಗೊಳಪಡಿಸಬೇಕು ಎಂದು ಕರ್ನಾಟಕ ಶ್ರಮಿಕ ಶಕ್ತಿ ಆಗ್ರಹಿಸಿದೆ.

ಮೇ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಮಿಕ ಹಕ್ಕೊತ್ತಾಯ ಪತ್ರ ಬಿಡುಗಡೆಗೊಳಿಸಲಾಯಿತು.

‘ಎಲ್ಲ ಅಸಂಘಟಿತ ಕಾರ್ಮಿಕರಿಗೆ ಪ್ರತ್ಯೇಕ ಕಲ್ಯಾಣ ಮಂಡಳಿ ರಚಿಸಬೇಕು. ಅಲ್ಲಿಯವರೆಗೂ ಇ.ಎಸ್.ಐ, ಪಿ.ಎಫ್ ಮತ್ತು ಮಾಸಿಕ ಪಿಂಚಣಿ ಖಾತ್ರಿಪಡಿಸಬೇಕು. ಅಸಂಘಟಿತ ಕಾರ್ಮಿಕರ ಮಕ್ಕಳಿಗೆ ಉನ್ನತ ವ್ಯಾಸಂಗದವರೆಗೂ ಉಚಿತ ಶಿಕ್ಷಣ ಮತ್ತು ವಿದ್ಯಾರ್ಥಿವೇತನ ನೀಡಬೇಕು’ ಎಂದು ಕಾರ್ಮಿಕ ಮುಖಂಡರು ಒತ್ತಾಯಿಸಿದರು.

ಕಾರ್ಮಿಕ ಮುಖಂಡರಾದ ಬಾಲನ್, ಎಸ್. ನಾಗರಾಜು, ಚಂದ್ರಶೇಖರ್, ಪ್ರಸಾದ್ ಇದ್ದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮೇ ದಿನ ಅಂಗವಾಗಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಹಮ್ಮಿಕೊಂಡಿದ್ದ ಸಾರ್ವಜನಿಕ ಸಭೆಯಲ್ಲಿ ವಿವಿಧ ಸಂಘಟನೆಯ ಸದಸ್ಯರು ಘೋಷಣೆಗಳನ್ನು ಕೂಗಿದರು –ಪ್ರಜಾವಾಣಿ ಚಿತ್ರ

ನಗರದ ಕೇಂದ್ರೀಯ ವಿಭಾಗದ ಘಟಕ 2 ರಲ್ಲಿ ಹಮ್ಮಿಕೊಂಡಿದ್ದ ಕಾರ್ಮಿಕ ದಿನಾಚರಣೆಯಲ್ಲಿ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್, ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ ಲಿಂಗರಾಜು ಬಾಳಾನಾಯ್ಕ್, ಮುಖ್ಯ ಕಾನೂನು ಅಧಿಕಾರಿ ಆಂತೋನಿ ಜಾರ್ಜ್ ಇದ್ದಾರೆ.

‘ಸಾರಿಗೆ ಆದಾಯ ಹೆಚ್ಚಳಕ್ಕೆ ನೌಕರರ ಪಾತ್ರ ಮುಖ್ಯ’

ಬೆಂಗಳೂರು: ‘ಸಾರಿಗೆ ನೌಕರರು ಹಗಲಿರುಳು ದುಡಿಯುವ ಮೂಲಕ ಸಾರಿಗೆ ನಿಗಮದ ಆದಾಯ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ’ ಎಂದು ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಹೇಳಿದರು.

ಕರ್ನಾಟಕ ರಸ್ತೆ ಸಾರಿಗೆ ನಿಗಮವು ನಗರದ ಕೇಂದ್ರೀಯ ವಿಭಾಗದ ಘಟಕ–2 ರಲ್ಲಿ ಹಮ್ಮಿಕೊಂಡಿದ್ದ ಕಾರ್ಮಿಕ ದಿನಾಚರಣೆಯಲ್ಲಿ ನೌಕರರಿಗೆ ಗುಲಾಬಿ ಹೂ ಮತ್ತು ಸಿಹಿ ನೀಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

‘ಈಗಾಗಲೇ ಎಲ್ಲಾ ವಿಭಾಗಗಳಲ್ಲೂ ವೇತನ ಪರಿಷ್ಕರಣೆ ಪಟ್ಟಿಯನ್ನು ನೌಕರರಿಗೆ ನೀಡಲಾಗಿದೆ. ಕಾರ್ಮಿಕರು ನಿಗಮದ ಅವಿಭಾಜ್ಯ ಅಂಗ. ಅವರ ಪ್ರಾಮಾಣಿಕ ಪರಿಶ್ರಮದ ಸೇವೆಯು ನಿಗಮವನ್ನು ಅಭಿವೃದ್ಧಿಯ ಪಥದಲ್ಲಿ ಸಾಗಲು ಕಾರಣೀಭೂತವಾಗಿದೆ’ ಎಂದರು.

‘ಕಳೆದ ವರ್ಷ ಇದೇ ದಿನ ನೌಕರರ ಮೇಲಿದ್ದ 10,462 ಶಿಸ್ತು ಪ್ರಕರಣಗಳನ್ನು ರದ್ದುಪಡಿಸಲಾಗಿತ್ತು. ಸಂಸ್ಥೆಯು ಸದಾ ನೌಕರರ ಆಶೋತ್ತರಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ’ ಎಂದರು. ಸಿಬ್ಬಂದಿ ಮತ್ತು ಜಾಗೃತ ವಿಭಾಗದ ನಿರ್ದೇಶಕ ಪ್ರಶಾಂತ್ ಕುಮಾರ್ ಮಿಶ್ರಾ ಇದ್ದರು.

ಕಾಂಗ್ರೆಸ್‌ನಿಂದ 24 ಬಂಡಾಯ ಅಭ್ಯರ್ಥಿಗಳ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆ ಅಖಾಡ ರಂಗೇರಿದ್ದು, ಟಿಕೆಟ್ ಕೈತಪ್ಪಿದ ಕಾರಣಕ್ಕೆ ಪಕ್ಷದ ವಿರುದ್ಧ ಬಂಡಾಯವೆದ್ದು ಪಕ್ಷೇತರರಾಗಿ ಕಣಕ್ಕಿಳಿದ ಮಾಜಿ ಶಾಸಕರಾದ ರಾಮಕೃಷ್ಣ ದೊಡ್ಡಮನಿ (ಶಿರಹಟ್ಟಿ), ಬಿ.ಬಿ. ರಾಮಸ್ವಾಮಿಗೌಡ (ಕುಣಿಗಲ್), ಎಚ್‌.ಪಿ. ರಾಜೇಶ್ (ಜಗಲೂರು) ಸೇರಿ 24 ಅಭ್ಯರ್ಥಿಗಳನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳ ಕಾಲ ಕೆಪಿಸಿಸಿ ಶಿಸ್ತು ಪಾಲನಾ ಸಮಿತಿ ಉಚ್ಚಾಟಿಸಿದೆ.

ನೆಲಮಂಗಲದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ರುದ್ರೇಶ್ವರ ತರುಣ ಸಂಘದ ಶತಮಾನೋತ್ಸವ ಸಮಾರಂಭದಲ್ಲಿ ಕಾಶಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರು ‘ಶತ ರುದ್ರನಮನ’ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಶತಮಾನೋತ್ಸವ ಸಮಿತಿಯ ಎನ್‌.ಎಸ್‌. ಗಣೇಶ್, ಉಮಾಶಂಕರ್, ಕೆ.ಎನ್‌.ಯತೀಶ್, ಮೇಲಣಗವಿ ಮಲಯ ಶಾಂತಮುನಿ ಸ್ವಾಮೀಜಿ, ಎನ್‌.ಎಸ್‌. ನಟರಾಜು, ದೀಪಕ್, ಎನ್‌.ಜಿ.ರುದ್ರಮೂರ್ತಿ, ಎನ್‌.ಆರ್‌.ಜಗದೀಶ್, ಕೆ.ಎಸ್‌. ಶಿವಶಂಕರ್, ಬಿ.ದಯಾಂಕರ್ ಇದ್ದಾರೆ.

‘ಬುದ್ಧ, ಬಸವಣ್ಣ ಶ್ರೇಷ್ಠ ದಾರ್ಶನಿಕರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುದ್ಧನ ನಂತರ ಭಾರತ ಕಂಡ ಶ್ರೇಷ್ಠ ದಾರ್ಶನಿಕ ಬಸವಣ್ಣ. ಬಸವಣ್ಣ ಕೇವಲ ದಾರ್ಶನಿಕ ಮಾತ್ರವಾಗಿರಲಿಲ್ಲ, ಸಾಮಾಜಿಕ ಸುಧಾರಕ, ಪ್ರಗತಿಪರ ಹಾಗೂ ಅತ್ಯಂತ ಪ್ರಖರ ವೈಚಾರಿಕ ಚಿಂತಕನೂ ಆಗಿದ್ದ ಎಂದು ಹಾಸ್ಯ ಸಾಹಿತಿ ಚೂಟಿ ಚಿದಾನಂದ ಬಣ್ಣಿಸಿದರು.

ಸಂಜಯ ನಗರದ ಶರಣ ಸೇವಾ ಸಮಿತಿಯು ಜ್ಞಾನಶಾಲೆ ಸೌಹಾರ್ದ ಬ್ಯಾಂಕ್ ಕಟ್ಟಡದ ಆವರಣದಲ್ಲಿ ಹಮ್ಮಿಕೊಂಡಿದ್ದ ಶರಣ ಜ್ಞಾನಜ್ಯೋತಿ ಮಾಸಿಕ ಕಾರ್ಯಕ್ರಮ ಮತ್ತು ಬಸವ ಜಯಂತಿಯಲ್ಲಿ ಅವರು ಮಾತನಾಡಿದರು.

‘800 ವರ್ಷಗಳ ಹಿಂದೆಯೇ ಬಸವಣ್ಣ ಅನುಭವ ಮಂಟಪದ ಮೂಲಕ ಸಮಾನತೆ, ಸ್ತ್ರೀ ಸ್ವಾತಂತ್ರ್ಯ, ಕೆಳವರ್ಗಗಳಿಗೆ ಅವಕಾಶ ನೀಡುವ ಮೂಲಕ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಜಾರಿಗೆ ತಂದ. 12ನೇ ಶತಮಾನದಲ್ಲಿಯೇ ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯ ಚಳವಳಿಗೆ ಬಸವಣ್ಣ ಹೊಸ ತಿರುವು ಕೊಟ್ಟಿದ್ದ ಎಂದರು.

‘ಜನಸಾಮಾನ್ಯರಿಗೂ ಅರ್ಥವಾಗುವಂತೆ ಕನ್ನಡದಲ್ಲಿ ಅತ್ಯಂತ ಸರಳ ಭಾಷೆಯಲ್ಲಿ ವಚನಗಳನ್ನು ರಚಿಸುವ ಮೂಲಕ ಸಂಸ್ಕೃತಕ್ಕೆ ಸಡ್ಡು ಹೊಡೆದರು. ಜಾತಿ, ಧರ್ಮಕ್ಕೆ ಹೊರತಾದ ಒಂದು ಚಳವಳಿ ರೂಪಿಸಿದರು. ಲಿಂಗಾಯತ ಎನ್ನುವುದು ಒಂದು ಜೀವನ ವಿಧಾನವೇ ಹೊರತು ಅದನ್ನು ಜಾತಿಗೆ ಸೀಮಿತಿಗೊಳಿಸಿರುವುದು ವಿಪರ್ಯಾಸ’ ಎಂದು ಚಿದಾನಂದ ಹೇಳಿದರು.

ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಸೌಹಾರ್ದ ಸಹಕಾರ ಸಂಘಗಳ ಅಧ್ಯಕ್ಷ ಶ್ರೀಧರ್ ನೀಲಕಂಠರಾವ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶರಣ ಸೇವಾ ಸಮಿತಿ ಅಧ್ಯಕ್ಷ ಎಸ್‌.ಆರ್‌.ಪ್ರಸಾದ್ ಪ್ರಸ್ತಾವಿಕ ಮಾತನಾಡಿದರು. ಅಕ್ಕನ ಬಳಗದ ಸದಸ್ಯರಿಂದ ವಚನ ಗಾಯನ ನಡೆಯಿತು.

ಸಂಜಯ ನಗರದ ಶರಣ ಸೇವಾ ಸಮಿತಿ ಹಮ್ಮಿಕೊಂಡಿದ್ದ ಶರಣ ಜ್ಞಾನಜ್ಯೋತಿ ಮಾಸಿಕ ಕಾರ್ಯಕ್ರಮ ಮತ್ತು ಬಸವ ಜಯಂತಿಯಲ್ಲಿ ಸಮಿತಿ ಅಧ್ಯಕ್ಷ ಎಸ್‌.ಆರ್‌. ಪ್ರಸಾದ್ ಮಾತನಾಡಿದರು. ಸಾಹಿತಿ ಚೂಟಿ ಚಿದಾನಂದ, ಶ್ರೀಧರ್ ನೀಲಕಂಠರಾವ್ ವೇದಿಕೆಯಲ್ಲಿದ್ದರು

ವಿಶ್ವ ನೃತ್ಯ ದಿನದ ಅಂಗವಾಗಿ ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ, 'ರೋಟರಿ 3190 ಜಿಲ್ಲೆ' ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಕಾವ್ಯ ಚಂದ್ರಶೇಖರ್, ಅಮೃತ, ಶ್ರೇಯ ಅವರು ಸೋಮವಾರ ನೃತ್ಯ ಪ್ರದರ್ಶನ ನೀಡಿದರು –ಪ್ರಜಾವಾಣಿ ಚಿತ್ರ

ಚರ್ಚ್‌ನಲ್ಲಿ ಸಿ.ಟಿ. ರವಿ ಪರ ಪ್ರಚಾರ: ಜೆಡಿಎಸ್ ಟೀಕೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಶಾಸಕ ಸಿ.ಟಿ.ರವಿ ಅವರ ಚುನಾವಣಾ ಉಸ್ತುವಾರಿ ಮತ್ತು ಸಂಬಂಧಿಕರಾಗಿರುವ ಸುದರ್ಶನ್ ಅವರು ಚರ್ಚ್‌ನಲ್ಲಿ ಪ್ರಾರ್ಥನೆಯಲ್ಲಿ ಭಾಗವಹಿಸಿ ಮತಯಾಚಿಸಿದ್ದಾರೆ. ಚುನಾವಣೆ ಸಮಯದಲ್ಲಿ ಚರ್ಚ್ ನೆನಪಾಯಿತೇ’ ಎಂದು ಜೆಡಿಎಸ್ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎಸ್‌.ಎಲ್‌. ಭೋಜೇಗೌಡ ಪ್ರಶ್ನಿಸಿದರು.

‘ಸುದರ್ಶನ್ ಅವರು ಚರ್ಚ್‌ನಲ್ಲಿದ್ದ ವಿಡಿಯೊ ಇದೆ. ಆ ಚರ್ಚ್ ಮತಾಂತರ ಮಾಡುವ ಕೇಂದ್ರ ಎಂದು ರವಿ ಹಿಂದೆ ಹೇಳಿದ್ದರು. ಚುನಾವಣೆ ಸಮಯದಲ್ಲಿ ನಿಮಗೆ ಚರ್ಚ್ ಬೇಕು. ಚುನಾವಣೆ ನಂತರ ಅದನ್ನು ಮತಪರಿವರ್ತನೆ ಕೇಂದ್ರ ಎಂದು ಹೇಳುತ್ತೀರಿ. ನಿಮ್ಮದು ದ್ವಂದ್ವ ನಡೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ಹಿಂದುತ್ವದ ಬಗ್ಗೆ ಮಾತ ನಾಡುತ್ತೀರಿ. ಚುನಾವಣೆ ಸಂದರ್ಭದಲ್ಲಿ ಮದರಸಾಗಳಲ್ಲಿ ಮತಯಾಚನೆ ಮಾಡುತ್ತೀರಿ. ನಂತರ, ಅವುಗಳನ್ನು ಭಯೋತ್ಪಾದನೆ ಕೇಂದ್ರಗಳು ಎಂದು ಹೇಳುತ್ತೀರಿ. ಈ ರೀತಿ ಮಾತನಾಡುವುದನ್ನು ಬಿಡಬೇಕು’ ಎಂದು ಸಲಹೆ ನೀಡಿದರು.

ಮಣಿಪಾಲ್ ಗ್ಲೋಬಲ್ ಫೌಂಡೇಷನ್ ಮುಖ್ಯಸ್ಥ ಟಿ.ವಿ. ಮೋಹನ್ ದಾಸ್ ಪೈ ಅಭಿಮತ

ಜವಾಬ್ದಾರಿ ಅರಿತರೆ ದೇಶದ ಭವಿಷ್ಯ ಉಜ್ವಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಯೊಬ್ಬ ನಾಗರಿಕ ಜವಾಬ್ದಾರಿ ಅರಿತು ನಡೆದಾಗ ದೇಶದ ಭವಿಷ್ಯ ಮತ್ತಷ್ಟು ಉಜ್ವಲಗೊಳ್ಳುತ್ತದೆ ಎಂದು ಮಣಿಪಾಲ್ ಗ್ಲೋಬಲ್ ಫೌಂಡೇಷನ್ ಮುಖ್ಯಸ್ಥ ಟಿ.ವಿ. ಮೋಹನ್ ದಾಸ್ ಪೈ ಹೇಳಿದರು.

ನಗರದ ದೊಮ್ಮಲೂರು ಕ್ಲಬ್‌ನಲ್ಲಿ ಸೋಮವಾರ ‘ಗೇಂಟ್ಸ್ ಗ್ರೂಪ್ ಆಫ್ ಗಾರ್ಡನ್ ಸಿಟಿ ವೆಲ್‌ಫೇರ್ ಆ್ಯಂಡ್ ಚಾರಿಟಬಲ್ ಟ್ರಸ್ಟ್’ 'ಜವಾಬ್ದಾರಿಯುತ ಪೌರತ್ವ’ ಕುರಿತು ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸರ್ಕಾರ, ವ್ಯವಸ್ಥೆಯನ್ನು ದೂರುತ್ತಾ ಕೂರುವ ಬದಲು, ಮೊದಲು ನಮ್ಮ ಜವಾಬ್ದಾರಿ ಅರಿತು ಮುಂದಿನ ಹೆಜ್ಜೆ ಇಡಬೇಕು. ಹಕ್ಕು ಕೇಳುವ ಮೊದಲು ಕರ್ತವ್ಯ ನಿಭಾಯಿಸಬೇಕು. ಪರಸ್ಪರ ಕೈಜೋಡಿಸಿದರೆ ಎಲ್ಲವೂ ಸಾಧ್ಯ ಎನ್ನುವುದನ್ನು ಅರಿಯಬೇಕು. ಇಂತಹ ಪ್ರಯತ್ನಗಳಿಂದಲೇ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು, ನಂತರ ದೇಶ ಕಟ್ಟಿದ್ದು’ ಎಂದರು.

‘ಮತ ಚಲಾಯಿಸುವುದು ಹಕ್ಕು ಎಂದು ಭಾವಿಸಬಾರದು ಅದು ಕರ್ತವ್ಯವೂ ಹೌದು. ಉತ್ತಮ ಅಭ್ಯರ್ಥಿ ಆಯ್ಕೆಯಷ್ಟೇ ನಮ್ಮ ಕೆಲಸವಲ್ಲ. ಗೆದ್ದ ನಂತರ ಅವರ ಮನೆಯ ಬಾಗಿಲು ತಟ್ಟಿ ಪ್ರಶ್ನಿಸುವ ಮನೋಭಾವವನ್ನೂ ಇಟ್ಟುಕೊಳ್ಳಬೇಕು. ಚುನಾವಣೆಯ ನಂತರವೂ ನಮ್ಮ ಕರ್ತವ್ಯ ನಿಭಾಯಿಸಬೇಕು’ ಎಂದು ಅವರು ಸಲಹೆ ನೀಡಿದರು.

‘ಗೇಂಟ್ಸ್ ಗ್ರೂಪ್’ ಮುಖ್ಯಸ್ಥೆ ಎನ್‌. ಸಿ.ಶೈನಾ, ಹಲವು ಸೇವಾ ಸಂಸ್ಥೆಗಳು ವಿದೇಶದಲ್ಲಿ ಜನ್ಮತಾಳಿ ಭಾರತದಲ್ಲಿ ನೆಲೆ ಕಂಡಿವೆ. ಗೇಂಟ್ಸ್ ಸಂಸ್ಥೆ ಸ್ಥಳೀಯವಾಗಿ ಹುಟ್ಟಿ, ದೇಶ, ವಿದೇಶಗಳಲ್ಲಿ ಖ್ಯಾತಿ ಪಡೆದಿದೆ. ಸಂಸ್ಥೆಯ 800ಕ್ಕೂ ಹೆಚ್ಚು ಶಾಖೆಗಳು ಕಾರ್ಯನಿರ್ವಹಿಸುತ್ತಿವೆ ಎಂದರು.

ಜನಾಗ್ರಹ ಸಂಸ್ಥೆಯ ಸಿಇಒ ಶ್ರೀಕಾಂತ್ ವಿಶ್ವನಾಥನ್, ಕೈಗಾರಿಕೋದ್ಯಮಿ ಅನಿಲ್ ಶೆಟ್ಟಿ, ಗೇಂಟ್ಸ್ ಸಂಸ್ಥೆಯ ಕಾರ್ಯದರ್ಶಿ ಗೋಪಾಲ್ ನುಗ್ಗೇಹಳ್ಳಿ ಮತ್ತು ಟ್ರಸ್ಟಿ ಎಚ್‌.ವೆಂಕಟೇಶ್ ಉಪಸ್ಥಿತರಿದ್ದರು.

ನಗರದಲ್ಲಿ ಸೋಮವಾರ ‘ಗೇಂಟ್ಸ್ ಗ್ರೂಪ್’ ಆಯೋಜಿಸಿದ್ದ ‘ಜವಾಬ್ದಾರಿಯುತ ಪೌರತ್ವ’ ಕುರಿತ ಸಂವಾದದಲ್ಲಿ ಎಚ್‌. ವೆಂಕಟೇಶ್, ಎನ್‌.ಸಿ. ಶೈನಾ, ಟಿ.ವಿ. ಮೋಹನ್ ದಾಸ್ ಪೈ, ಉದ್ಯಮಿ ಅನಿಲ್ ಶೆಟ್ಟಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ಅವೈಜ್ಞಾನಿಕ ಬೆಳವಣಿಗೆಯಿಂದ ಕೆರೆ ನಾಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಕೃತಿ ಸಂಪತ್ತಿನ ಅಸ್ತಿತ್ವದಲ್ಲಿ ಕೆರೆಗಳ ಪಾತ್ರ ಪ್ರಮುಖ. ಆದರೆ, ಕೆಲ ದಶಕಗಳಿಂದ ಬೆಂಗಳೂರಿನ ಅವೈಜ್ಞಾನಿಕ ಬೆಳವಣಿಗೆಯಿಂದಾಗಿ ಇಲ್ಲಿನ ಕೆರೆಗಳು ನಾಶವಾಗಿ, ಅಂತರ್ಜಲ ಮಟ್ಟ ಕುಸಿಯುತ್ತಿದೆ’ ಎಂದು ಪರಿಸರವಾದಿ ಸುರೇಶ್ ನೆಲಮಂಗಲ ಕಳವಳ ವ್ಯಕ್ತಪಡಿಸಿದರು.

ದಿ ಮಿಥಿಕ್ ಸೊಸೈಟಿ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದತ್ತಿ ಉಪನ್ಯಾಸದಲ್ಲಿ ‘ಬೆಂಗಳೂರಿನ ಜೀವಜಲ ಸಂಪತ್ತು’ ವಿಷಯದ ಬಗ್ಗೆ ಮಾತನಾಡಿದರು.

‘1960ರ ವೇಳೆಗೆ ಬೆಂಗಳೂರಿನಲ್ಲಿ 920 ಕೆರೆಗಳಿದ್ದು, ಅರ್ಕಾವತಿ, ಕುಮುದ್ವತಿ ಮತ್ತು ವೃಷಭಾವತಿ ನದಿಗಳ ನೀರು ಸಹ ಕುಡಿಯಲು ಯೋಗ್ಯವಾಗಿತ್ತು. ಆದರೆ, 1990ರ ವೇಳೆಗೆ ಇಲ್ಲಿನ ಕೆರೆಗಳ ಸಂಖ್ಯೆ 580ಕ್ಕೆ ಕುಸಿಯಿತು. 2020ರ ವೇಳೆಗೆ ಕೇವಲ 189 ಕೆರೆಗಳ ವಿವರಗಳು ದೊರೆಯುತ್ತವೆ. ಶೇ 80ಕ್ಕೂ ಹೆಚ್ಚು ಕೆರೆಗಳ ನೀರು ಕೊಳಚೆಯಾಗಿದೆ. ಈ ಪರಿಸ್ಥಿತಿ ಬದಲಾಗಬೇಕಾದರೆ ಇಲ್ಲಿನ ಜೀವ ಜಲದ ಸಂರಕ್ಷಣೆ ಮತ್ತು ಪ್ರಕೃತಿ ಸಂಪತ್ತಿನ ಮರುನಿರ್ಮಾಣವು ಸರ್ಕಾರದ ಜತೆಗೆ ಎಲ್ಲಾ ನಾಗರಿಕರ ಆದ್ಯ ಕರ್ತವ್ಯವಾಗಬೇಕು’ ಎಂದರು.

‘ನೀರಿನ ನಿರ್ವಹಣೆ ಸರ್ಕಾರಿ ಮತ್ತು ಸಾರ್ವಜನಿಕ ಸಹಯೋಗದಲ್ಲಿ ನಡೆಯುವ ಕಾರ್ಯವಾಗಬೇಕು. ಇದಕ್ಕೆ ಸಂಬಂಧಿಸಿದಂತೆ ಕೆರೆ ಅಭಿವೃದ್ಧಿ ಪ್ರಾಧಿಕಾರ ಎಂಬ ಸರ್ಕಾರಿ ಸಂಘಟನೆ ಹೆಚ್ಚು ಕಾರ್ಯಶೀಲವಾಗಬೇಕು. ಕೆರೆಗಳ ಸಂರಕ್ಷಣೆ, ನಿರ್ವಹಣೆ ಮತ್ತು ಬಳಕೆಗೆ ಸಂಬಂಧಿಸಿದಂತೆ 1895ರಲ್ಲಿಯೇ ಮೈಸೂರಿನ ದೊರೆಗಳು ಜಯಚಾಮರಾಜೇಂದ್ರ ವಾಟರ್ ವರ್ಕ್ಸ್ ಮೂಲಕ ಒಂದು ಮಾದರಿಯನ್ನು ನಮಗೆ ನೀಡಿದ್ದಾರೆ. ಶೀಘ್ರವೇ ನಾವು ಕೆರೆಗಳ ನಿರ್ವಹಣೆ ಮತ್ತು ಅಂತರ್ಜಲ ಮರುಪೂರ್ಣ ಕುರಿತಂತೆ ವೈಜ್ಞಾನಿಕ ಕ್ರಮ ಕೈಗೊಳ್ಳದಿದ್ದರೆ ಬೆಂಗಳೂರು ನಗರ ಕೂಡ ಮತ್ತೊಂದು ದಕ್ಷಿಣ ಆಫ್ರಿಕಾದ ಕೇಪ್ ಟೌನ್ ಆಗಲಿದೆ’ ಎಂದು ಅವರು ಎಚ್ಚರಿಸಿದರು.

ಅಧ್ಯಕ್ಷತೆ ವಹಿಸಿದ್ದ ಎಸ್‌.ಆರ್‌. ಕೃಷ್ಣಮೂರ್ತಿ, ‘ಕೇವಲ ಕಾನೂನಿನ ಮೂಲಕ ಜಲನಿರ್ವಹಣೆ ಕಷ್ಟಸಾಧ್ಯ. ನಮ್ಮ ಪ್ರಾಕೃತಿಕ ಸಂಪನ್ಮೂಲದ ರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು’ ಎಂದು ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕಿ ಎಚ್‌. ಶಶಿಕಲಾ ಅವರು ‘ಪೂರ್ವದ ಅಪೂರ್ವ ಚಿಂತನೆಗಳು’ ಎಂಬ ವಿಷಯದ ಬಗ್ಗೆ ಮಾತನಾಡಿದರು.

ಸಂಕ್ಷಿಪ್ತ ಸುದ್ದಿ

‘ವಾಣಿಜ್ಯ ಕ್ಷೇತ್ರದತ್ತ ಯುವಜನರ ಚಿತ್ತ’

ಬೆಂಗಳೂರು: ವಾಣಿಜ್ಯ ಕ್ಷೇತ್ರದಲ್ಲಿ ವಿಪುಲ ಉದ್ಯೋಗಾವಕಾಶಗಳಿವೆ. ಹಾಗಾಗಿಯೇ, ಯುವ ಸಮೂಹ ವಾಣಿಜ್ಯ ಸಂಯೋಜನೆಯತ್ತ ಒಲವು ತೋರುತ್ತಿದ್ದಾರೆ ಎಂದು ‘ಡಿಸಿಪ್ಲಸ್ ಇಂಡಿಯಾ ಎಜ್ಯುಕೇಶನಲ್ ರಿಸೋರ್ಸ್’ ಸಂಸ್ಥಾಪಕ ಡಾ.ಎ.ಎಂ. ಸುರೇಶ್ ಹೇಳಿದರು.

ನಗರದ ಮತ್ತಿಕೆರೆಯ ರಾಯಲ್ ಕಾಲೇಜಿನಲ್ಲಿ ವಾಣಿಜ್ಯ ಮತ್ತು ವ್ಯವಸ್ಥಾಪನಾ ಶಾಸ್ತ್ರ ಕ್ಷೇತ್ರದ ಉದ್ಯೋಗ ಸಾಧ್ಯತೆಗಳ ಕುರಿತು ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಅಂಕಗಳನ್ನು ಗಳಿಸಿದರಷ್ಟೇ ಸಾಲದು. ಕೌಶಲ ಮತ್ತು ಮೌಲ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ವಾಣಿಜ್ಯ ಕ್ಷೇತ್ರದ ಅವಕಾಶಗಳನ್ನು ಬಳಸಿಕೊಂಡು ಉನ್ನತ ಸಾಧನೆ ಮಾಡಬೇಕು ಎಂದರು.

ರಾಯಲ್ ಕಾಲೇಜಿನ ಸಂಸ್ಥಾಪಕ ಡಾ.ದೇವರಾಜ್ ಅಧ್ಯಕ್ಷತೆ ವಹಿಸಿ ದ್ದರು. ಕಾಲೇಜಿನ ಪ್ರಾಚಾರ್ಯ ಡಾ.ಲಕ್ಷ್ಮೀಶ್ ಹೆಗಡೆ ಸೋಂದಾ, ಶಿವಪ್ರಸಾದ್, ವ್ಯವಸ್ಥಾಪಕ ನಿರ್ದೇಶಕಿ ಸುಜಾತಾ ದೇವರಾಜ್ ಉಪಸ್ಥಿತರಿದ್ದರು.

20ನೇ ವರ್ಷದ ಉಚಿತ ಸಾಮೂಹಿಕ ವಿವಾಹ

ಯಲಹಂಕ: ದೊಡ್ಡಬಳ್ಳಾಪುರ ಮುಖ್ಯರಸ್ತೆ, ಶ್ರೀರಾಮನಹಳ್ಳಿಯಲ್ಲಿರುವ ಪೀಪಲ್ ಟ್ರಸ್ಟ್ ಸೇವಾಕೇಂದ್ರದ ಗ್ರಾಮಾಭಿವೃದ್ಧಿ ಮಂಡಳಿ ಆಶ್ರಯದಲ್ಲಿ ಮೇ 22ರಂದು 20ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಏರ್ಪಡಿಸಲಾಗಿದೆ.

ಧರ್ಮಸೇವಾ ಸಂಸ್ಥೆಯ ಸಂಸ್ಥಾಪಕ ಎನ್‌.ಸಿ.ನಾಣಯ್ಯನವರ ಸ್ಮರಣಾರ್ಥವಾಗಿ ಈ ಸಾಮೂಹಿಕ ವಿವಾಹ ಆಯೋಜಿಸಲಾಗಿದೆ. ಒಟ್ಟು 25 ಜೋಡಿಗಳಿಗೆ ಅವಕಾಶವಿರುವುದರಿಂದ ಮೊದಲು ನೋಂದಾಯಿಸಿದವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ: ಮೊಬೈಲ್ ನಂ. 94821 38626, 95915 35554.

ಕಂಟೇನರ್ ಇಳಿಸುವ ಪ್ರಯೋಗ ಯಶಸ್ವಿ

ನವದೆಹಲಿ (ಪಿಟಿಐ): ವಿಮಾನದಿಂದ ಸಮುದ್ರಕ್ಕೆ ಇಳಿಸಬಹುದಾದ ಕಂಟೇನರ್‌ನ (ಏರ್ ಡ್ರಾಪೆಬಲ್) ಯಶಸ್ವಿ ಪ್ರಯೋಗವನ್ನು ಗೋವಾ ಕಡಲ ತೀರದಲ್ಲಿ ಕಳೆದ ಏಪ್ರಿಲ್ 27ರಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆ (ಡಿಆರ್‌ಡಿಒ) ಮತ್ತು ಭಾರತೀಯ ನೌಕಾಪಡೆಗಳು ನಡೆಸಿವೆ.

150 ಕೆ.ಜಿ. ಸರಕು ಒಳಗೊಂಡ ಈ ಕಂಟೇನರ್ ಅನ್ನು ಐಎಲ್ 38 ಎಸ್‌ಡಿ ವಿಮಾನದಿಂದ ಸಮುದ್ರಕ್ಕೆ ಇಳಿಸಲಾಯಿತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

‘ಕಡಲ ತೀರದಿಂದ 2 ಸಾವಿರ ಕಿ.ಮೀ.ಗಿಂತಲೂ ದೂರದಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿರುವ ಯುದ್ಧ ನೌಕೆಗಳಿಗೆ ಬಿಡಿಭಾಗಗಳು, ಆಹಾರ ಸಾಮಗ್ರಿ ಸಹಿತ ಇತರ ಅಗತ್ಯದ ವಸ್ತುಗಳನ್ನು ತ್ವರಿತವಾಗಿ ಸಾಗಿಸುವ ಸಲುವಾಗಿ ಈ ಕಂಟೇನರ್ ಅನ್ನು ಅಭಿವೃದ್ಧಿಪಡಿಸಲಾಗಿದೆ’ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಬಿಜೆಪಿ ಪರ ಅಧಿಕಾರಿ ಪ್ರಚಾರ:ದೂರು

ಧಾರವಾಡ: ‘ಸರ್ಕಾರಿ ಅಧಿಕಾರಿ ವಂದನಾ ಪೂಜಾರಿ ಎಂಬುವರು ಧಾರವಾಡ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಮೃತ ದೇಸಾಯಿ ಪರ ಪ್ರಚಾರ ನಡೆಸಿದ್ದಾರೆ’ ಎಂದು ಕಾಂಗ್ರೆಸ್ ಕಾರ್ಯಕರ್ತ ಪರಮೇಶ್ವರ ಕಾಳೆ ಚುನಾವಣಾಧಿಕಾರಿಗೆ ಸೋಮವಾರ ದೂರು ಸಲ್ಲಿಸಿದ್ದಾರೆ.

ಕಾಣೆಯಾಗಿದ್ದಾರೆ

ನನ್ನ ಮಗನಾದ **ಶೇಖ್ ಸಯಿದ್** ದಿ: 02-11-2022 ರಂದು ಬೆಂಗಳೂರಿನ ಮನೆಯಿಂದ ಕೆಲಸಕ್ಕೆ ಹೋದವರು ವಾಪಸಾಗಿಲ್ಲ. ದಯವಿಟ್ಟು ಯಾರಿಗಾದರೂ ಈ ಫೋಟೋದಲ್ಲಿರುವ ವ್ಯಕ್ತಿ ಕಂಡು ಬಂದಲ್ಲಿ ಹೆಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಗೆ ತಿಳಿಸಿ ಅಥವಾ ಈ ನಂಬರ್‌ಗೆ ಫೋನ್ ಕರೆ ಮಾಡಿ.

ನಜೀರ್ ಪಾಶಾ
9901450677

ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಜಿಲ್ಲೆ
ಮತ್ತು
ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ
ಎನ್.ಆರ್.ಚೌಕ, ಬೆಂಗಳೂರು-560 002.

ಸಾರ್ವತ್ರಿಕ ವಿಧಾನಸಭಾ ಚುನಾವಣೆ-2023

ವಿಷಯ: ಚುನಾವಣಾ ಕೆಲಸ ಕಾರ್ಯಕ್ಕೆ ನಿಯೋಜಿಸಲಾದ ಅಧಿಕಾರಿ/ಸಿಬ್ಬಂದಿ (PRO, APRO & PO)ಯು ಗೈರು ಹಾಜರಾದಲ್ಲಿ ಅವರ ವಿರುದ್ಧ ಕಠಿಣಕ್ರಮ ಜರುಗಿಸಲಾಗುವುದೆಂದು ಎಚ್ಚರಿಕೆ.

ಚುನಾವಣೆಗೆ ಮತಗಟ್ಟೆ ಅಧಿಕಾರಿಗಳ ನಿಯೋಜನೆ

ಎರಡನೇ ಹಂತದ ಚುನಾವಣೆ ತರಬೇತಿ	ದಿನಾಂಕ: **04.05.2023** ಬೆಳಗ್ಗೆ **9.30** ಗಂಟೆಗೆ.
ಮಸ್ಟರಿಂಗ್ ದಿನಾಂಕ	**09.05.2023** ಬೆಳಗ್ಗೆ **9.00** ಗಂಟೆಗೆ.
ಮತದಾನ ದಿನಾಂಕ	**10.05.2023** ಬೆಳಗ್ಗೆ **7.00** ಗಂಟೆಯಿಂದ ಸಂಜೆ **6.00** ಗಂಟೆವರೆಗೆ

ಎಚ್ಚರಿಕೆ

ಚುನಾವಣಾ ಕೆಲಸಕ್ಕೆ ನಿಯೋಜಿಸಲಾದ ಸಿಬ್ಬಂದಿಗಳು ನಿಗದಿಪಡಿಸಿದ ದಿನಾಂಕ, ಸಮಯ ಮತ್ತು ಕೇಂದ್ರಗಳಲ್ಲಿ ತರಬೇತಿ, ಮಸ್ಟರಿಂಗ್ ಮತ್ತು ಮತದಾನ ಕಾರ್ಯಕ್ಕೆ ಕಡ್ಡಾಯವಾಗಿ ಹಾಜರಾಗುವುದು.

ಮುಂದುವರೆದು ಸಿಬ್ಬಂದಿಯು ಯಾರಾದರೂ ಗೈರುಹಾಜರಾದಲ್ಲಿ, ಅಂತಹವರ ವಿರುದ್ಧ ಪ್ರಜಾ ಪ್ರತಿನಿಧಿ ಕಾಯ್ದೆ **1951**ರ ಕಲಂ **134**ರಂತೆ ಕೂಡಲೇ ಎಫ್.ಐ.ಆರ್ (FIR) ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಮತ್ತು ಸೇವಾ ನಿಯಾಮಾವಳಿಗಳಂತೆ ಮತ್ತು ಅಪರಾಧ ಕಾಯ್ದೆಯಂತೆ ಶಿಸ್ತುಕ್ರಮ ಕೈಗೊಳ್ಳಲಾಗುವುದು.

ಚುನಾವಣೆಗೆ ಸಿಬ್ಬಂದಿಯನ್ನು ನಿಯೋಜಿಸಲು ಪ್ರತಿ ಕಛೇರಿಯಿಂದ ನೋಡಲ್ ಅಧಿಕಾರಿಗಳನ್ನು ನೇಮಿಸಿ ಆದೇಶಿಸಲಾಗಿದೆ. ಸದರಿ ನೋಡಲ್ ಅಧಿಕಾರಿಯು ತಮ್ಮ ಕಛೇರಿಯ ಸಿಬ್ಬಂದಿಗೆ ಚುನಾವಣೆ ಕರ್ತವ್ಯದ ಆದೇಶಗಳನ್ನು ಜಾರಿ ಮಾಡಿ, ಚುನಾವಣಾ ತರಬೇತಿಗೆ ಹಾಗೂ ಚುನಾವಣಾ ಕರ್ತವ್ಯಕ್ಕೆ ಹಾಜರುಪಡಿಸುವ ಜವಾಬ್ದಾರಿ ವಹಿಸುವುದು. ಈ ಮೇಲಿನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷ್ಯತನ ತೋರಿದ್ದಲ್ಲಿ, ನೋಡಲ್ ಅಧಿಕಾರಿ ವಿರುದ್ಧ **ಪ್ರತಿನಿಧಿ ಕಾಯ್ದೆ 1951ರ ಕಲಂ 134ರಂತೆ ಕಠಿಣ ಕ್ರಮ ಕೈಗೊಳ್ಳಲಾಗುವುದು.**

ಚುನಾವಣಾ ಕರ್ತವ್ಯದ ಆದೇಶಗಳನ್ನು ಬಿ.ಬಿ.ಎಂ.ಪಿ ವೆಬ್‌ಸೈಟ್ **www.bbmp.gov.in** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಮತಗಟ್ಟೆ ಸಿಬ್ಬಂದಿಯು ಪ್ರಿಸೈಡಿಂಗ್ ಆಫೀಸರ್ ಕೈಪಿಡಿಯನ್ನು **https://eci.gov.in** ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಜಿಲ್ಲೆ ಹಾಗೂ
ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು

ಗೋವಿಂದರಾಜನಗರ, ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳು ಏನಂತಾರೆ?

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ವಿ.ಎಸ್. ಸುಬ್ರಹ್ಮಣ್ಯ , ರಾಜೇಶ್ ರೈ ಚಟ್ಲ** ಅವರು ನಡೆಸಿದ ಕಿರು ಸಂದರ್ಶನ ಇಲ್ಲಿದೆ.

ಪ್ರಿಯಕೃಷ್ಣ (ಕಾಂಗ್ರೆಸ್)

‘ಜನರು ಬದಲಾವಣೆಯ ತವಕದಲ್ಲಿದ್ದಾರೆ’

● ನೀವು ಏನು ಕೆಲಸ ಮಾಡುತ್ತೀರಿ ಎಂಬ ಕಾರಣಕ್ಕೆ ಜನರು ನಿಮಗೆ ಮತ ನೀಡಬೇಕು?

ಹಿಂದೆ ಶಾಸಕನಾಗಿ ನಾನು ಆರಂಭಿಸಿದ್ದ ಹಲವು ಕೆಲಸಗಳನ್ನು ಪೂರ್ಣಗೊಳಿಸುವುದು ಬಾಕಿ ಇದೆ. ಕಳೆದ ಅವಧಿಯಲ್ಲಿ ಹಾಲಿ ಶಾಸಕರು ಒಂದೆರಡು ಕಟ್ಟಡ ಕಟ್ಟಿದ್ದು ಬಿಟ್ಟರೆ ಏನೂ ಮಾಡಿಲ್ಲ. ಒಳ ರಸ್ತೆಗಳ ಡಾಂಬರೀಕರಣ, ಕಾಂಕ್ರೀಟೀಕರಣ ಬಾಕಿ ಇದೆ. ಕುಡಿಯುವ ನೀರಿನ ಪೂರೈಕೆಗೆ ಅಳವಡಿಸಿದ್ದ ಕೊಳವೆ ಮಾರ್ಗಗಳ ನಿರ್ವಹಣೆಯನ್ನೇ ಮಾಡಿಲ್ಲ. ಸಾವಿರಾರು ಕೋಟಿ ರೂಪಾಯಿ ಅನುದಾನ ತಂದ ಲೆಕ್ಕವನ್ನಷ್ಟೇ ಹೇಳುತ್ತಾರೆ. ಮೂಲಸೌಕರ್ಯ ಅಭಿವೃದ್ಧಿಯೇ ಆಗಿಲ್ಲ. ಗೋವಿಂದರಾಜನಗರ ಕ್ಷೇತ್ರವನ್ನು ಮಾದರಿ ಎಂಬಂತೆ ಸಮಗ್ರವಾಗಿ ಅಭಿವೃದ್ಧಿಪಡಿಸಲು ಜನರು ನನಗೆ ಮತ ನೀಡಬೇಕು.

● ಕ್ಷೇತ್ರದಲ್ಲಿ ಗೆಲುವಿನ ವಿಶ್ವಾಸ ಮೂಡಿಸುವ ಜನಬೆಂಬಲ ನಿಮಗೆ ಇದೆಯೆ?

ಕಳೆದ ಚುನಾವಣೆಯಲ್ಲಿ ಸೋತಿದ್ದರೂ ನಾನು ಜನರ ನಡುವೆಯೇ ಇದ್ದೆ. ಕೋವಿಡ್ ಸೃಷ್ಟಿಸಿದ ಸಂಕಷ್ಟದಲ್ಲಿ ಜನರಿಗೆ ಅಗತ್ಯವಿರುವ ನೆರವು ನೀಡುವುದಕ್ಕೆ ಸಮಯ ಮೀಸಲಿಟ್ಟಿದ್ದೆ. ಹಗಲು, ರಾತ್ರಿ ಎನ್ನದೆ ಜನರಿಗೆ ಸ್ಪಂದಿಸಿರುವೆ. ಕ್ಷೇತ್ರದಲ್ಲಿರುವ ಬಡವರು, ಮಧ್ಯಮ ವರ್ಗದವರು ಸೇರಿದಂತೆ ಎಲ್ಲರೂ ನನ್ನ ಬೆಂಬಲಕ್ಕೆ ನಿಂತಿದ್ದಾರೆ. ಸರ್ಕಾರಿ ಅಧಿಕಾರಿಗಳು ಸ್ವಯಂ-ಪ್ರೇರಿತವಾಗಿ ನನಗೆ ಮತ ನೀಡಲು ಕಾತರಿಸು-ತ್ತಿದ್ದಾರೆ. ಕ್ಷೇತ್ರದ ಜನರು ಬದಲಾವಣೆಗಾಗಿ ಕಾಯುತ್ತಿದ್ದಾರೆ. ನಾನು ಗೆಲುವು ಸಾಧಿಸುವಷ್ಟು ಬೆಂಬಲವಿದೆ ಎನ್ನಲು ಇಷ್ಟು ಸಾಕು.

● ನಿಮ್ಮ ನಿಜವಾದ ಎದುರಾಳಿ ಯಾರು?

ವೈಯಕ್ತಿಕವಾಗಿ ಚುನಾವಣೆಯಲ್ಲಿ ನನ್ನ ಎದುರಾಳಿ ಯಾರು ಎಂಬುದರ ಕುರಿತು ಯಾವತ್ತೂ ನಾನು ಯೋಚಿಸಿಲ್ಲ. ಕ್ಷೇತ್ರದಲ್ಲಿ ಹಿಂದಿನಿಂದಲೂ ಬಿಜೆಪಿಯೇ ಕಾಂಗ್ರೆಸ್‌ಗೆ ಎದುರಾಳಿ. ಈ ಬಾರಿಯೂ ಬಿಜೆಪಿಯೇ ನನ್ನ ಎದುರಾಳಿ.

ಆರ್. ಪ್ರಕಾಶ್ (ಜೆಡಿಎಸ್)

‘ಜನರ ಮಧ್ಯದಲ್ಲೇ ಇರುವವ ನಾನು’

● ನೀವು ಏನೆಲ್ಲಾ ಕೆಲಸಗಳನ್ನು ಮಾಡುತ್ತೀರಿ ಎನ್ನುವುದಕ್ಕಾಗಿ ಜನರು ನಿಮಗೆ ಮತ ಹಾಕಬೇಕು?

ಬಿಬಿಎಂಪಿ ಸದಸ್ಯನಾಗಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿರುವೆ. ಒಂದು ಕ್ಷೇತ್ರವನ್ನು ಹೇಗೆ ಅಭಿವೃದ್ಧಿಪ-ಡಿಸಬೇಕು ಎಂಬುದು ತಿಳಿದಿದೆ. ಸದಾಕಾಲ ಜನರ ಮಧ್ಯದಲ್ಲೇ ಇರುವ ಹೋರಾಟಗಾರ ನಾನು. ಶಿಕ್ಷಣ, ಆರೋಗ್ಯ, ಕುಡಿಯುವ ನೀರಿನ ಪೂರೈಕೆ ಸೇರಿದಂತೆ ಹಲವು ಸಮಸ್ಯೆಗಳಿಗೆ ಹೇಗೆ ಪರಿಹಾರ ನೀಡಬೇಕು ಎಂಬುದು ತಿಳಿದಿದೆ. ದಿನದ 24 ಗಂಟೆಯೂ ಜನರ ಮಧ್ಯದಲ್ಲೇ ಇದ್ದು ಕೆಲಸ ಮಾಡಬಲ್ಲೆ ಎಂಬ ಕಾರಣಕ್ಕಾಗಿ ನನಗೆ ಮತ ನೀಡಬೇಕು.

● ಚುನಾವಣೆಯಲ್ಲಿ ಗೆಲುವು ಸಾಧಿಸಲು ಬೇಕಾಗುವಷ್ಟು ಜನಬೆಂಬಲ ನಿಮಗಿದೆ ಎಂಬುದಕ್ಕೆ ಏನು ಪುರಾವೆ?

ನಾನು ಸ್ಥಳೀಯ. ಹಿಂದೆಯೂ ಚುನಾವಣೆಗೆ ಸ್ಪರ್ಧಿಸಿದ್ದೆ. ನನ್ನ ತಂದೆ ಕೂಡ ಎರಡು ಬಾರಿ ಸ್ಪರ್ಧಿಸಿದ್ದರು. ಹೋರಾಟದ ಮೂಲಕ ರಾಜಕೀಯ ಪ್ರವೇಶಿಸಿ, ಒಂದೇ ಪಕ್ಷದಲ್ಲಿ ಇದ್ದೇನೆ. ಸಾವಿರಾರು ಜನರಿಗೆ ಬಿಪಿಎಲ್ ಪಡಿತರ ಚೀಟಿ, ಮಾಸಾಶನ, ಸರ್ಕಾರದ ನೆರವು ಕೊಡಿಸಿದ್ದೇನೆ. ಅವರೆಲ್ಲರೂ ನನ್ನ ಜತೆ ಇದ್ದಾರೆ.

● ಈ ಚುನಾವಣೆಯಲ್ಲಿ ನಿಮ್ಮ ನೇರ ಎದುರಾಳಿ ಯಾರು?

ನಾನು ಪ್ರಾದೇಶಿಕ ಪಕ್ಷದ ಅಭ್ಯರ್ಥಿ. ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ನನಗೆ ನೇರ ಎದುರಾಳಿಗಳು.

ಕೆ. ಉಮೇಶ್ ಶೆಟ್ಟಿ (ಬಿಜೆಪಿ)

‘ಸೋಮಣ್ಣ ಕೆಲಸಗಳೇ ಶ್ರೀರಕ್ಷೆ’

● ನೀವು ಯಾವ ಕೆಲಸ ಮಾಡುತ್ತೀರಿ ಎಂಬ ಕಾರಣಕ್ಕಾಗಿ ಜನರು ನಿಮಗೆ ಮತ ನೀಡಬೇಕು?

ಎರಡು ಅವಧಿಗೆ ಬಿಬಿಎಂಪಿ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ನಾನು ಪ್ರತಿನಿಧಿಸಿದ ಗೋವಿಂದರಾಜನಗರ ಮತ್ತು ನಾಗರಬಾವಿ ವಾರ್ಡ್‌ಗಳನ್ನು ಮಾದರಿ ಎಂಬಂತೆ ಅಭಿವೃದ್ಧಿಪಡಿಸಿದ್ದೇನೆ. ದೇಶದಲ್ಲೇ ಉಚಿತ ವೈಫೈ ಸೌಲಭ್ಯ ಕಲ್ಪಿಸಿದ್ದು ದಾಖಲೆ. ಈಗಾಗಲೇ ಕ್ಷೇತ್ರ ಸಾಕಷ್ಟು ಅಭಿವೃದ್ಧಿಯಾಗಿದೆ. ಇನ್ನಷ್ಟು ಅಭಿವೃದ್ಧಿಗಾಗಿ ಜನರು ನನಗೆ ಮತ ಕೊಡಬೇಕು.

● ಈ ಚುನಾವಣೆಯಲ್ಲಿ ಗೆಲುವು ಖಚಿತ ಎನ್ನುವಷ್ಟು ಜನಬೆಂಬಲ ನಿಮಗಿದೆಯೆ?

ಸಚಿವ ವಿ. ಸೋಮಣ್ಣ ಅವರು ಕ್ಷೇತ್ರದಲ್ಲಿ ಮಾಡಿರುವ ಕೆಲಸಗಳೇ ನನಗೆ ಶ್ರೀರಕ್ಷೆ. ಆಸ್ಪತ್ರೆಗಳು, ಗ್ರಂಥಾಲಯ, ಉದ್ಯಾನ ಸೇರಿದಂತೆ ಹಲವು ಸೌಕರ್ಯಗಳನ್ನು ಕಲ್ಪಿಸಿದ್ದಾರೆ. ರಾಜ್ಯದಲ್ಲೇ ಅತ್ಯಧಿಕ ಕೆಲಸಗಳಾ-ಗಿರುವ ಕ್ಷೇತ್ರವಿದು. ಸೋಮಣ್ಣ ಅವರು ಮಾಡಿರುವ ಕೆಲಸಗಳ ಕಾರಣದಿಂದಾಗಿಯೇ ಜನರು ನನ್ನ ಬೆನ್ನಿಗೆ ನಿಂತಿದ್ದಾರೆ.

● ಚುನಾವಣೆಯಲ್ಲಿ ನಿಮ್ಮ ನೇರವಾದ ಎದುರಾಳಿ ಯಾರು?

ಈ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯದಲ್ಲೇ ಸ್ಪರ್ಧೆ ಇದೆ.

● ಸೋಮಣ್ಣ ಅವರು ಬೇರೆ ಕ್ಷೇತ್ರಕ್ಕೆ ಹೋಗಿರುವುದರಿಂದ ಹಿನ್ನಡೆ ಆಗುವುದಿಲ್ಲವೆ?

ಸೋಮಣ್ಣ ಅವರನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಬೇರೆ ಕ್ಷೇತ್ರಕ್ಕೆ ಕಳುಹಿಸಿದ್ದಾರೆ. ಅದರಿಂದ ಪಕ್ಷಕ್ಕೆ ಇಲ್ಲಿ ಹಿನ್ನಡೆ ಆಗುವುದಿಲ್ಲ.

ಬಿ.ಎಸ್. ಸುರೇಶ್ (ಭೈರತಿ)– ಕಾಂಗ್ರೆಸ್

‘ನುಡಿದಂತೆ ನಡೆದಿದ್ದೇನೆ. ಮತ್ತೆ ಜನಾಶೀರ್ವಾದ ಖಚಿತ’

● ಶಾಸಕರಾಗಿ ನಿಮ್ಮ ಸಾಧನೆಗಳನ್ನು ಪಟ್ಟಿ ಮಾಡಬಹುದೇ?

ಶಾಸಕ ನಿಧಿಯ ಅನುದಾನಕ್ಕಿಂತಲೂ ನನ್ನ ಸ್ವಂತ ಹಣದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ಕೊಳಗೇರಿ ಪ್ರದೇಶದ ಜನರಿಗಾಗಿ ₹ 60 ಲಕ್ಷ ಧನಸಹಾಯ, ₹ 1 ಕೋಟಿ ವೆಚ್ಚದಲ್ಲಿ ಕೋವಿಡ್ ಆಸ್ಪತ್ರೆ ನಿರ್ಮಾಣ, ಅಂಬೇಡ್ಕರ್ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ₹ 3 ಲಕ್ಷ ವೆಚ್ಚದಲ್ಲಿ ಉಚಿತ ಡಯಾಲಿಸಿಸ್, ಉಚಿತ ಶಸ್ತ್ರಚಿಕಿತ್ಸೆ, ₹ 2 ಲಕ್ಷ ರೇಷನ್ ಕಿಟ್, ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ₹ 20 ಸಾವಿರ ಧನ ಸಹಾಯ, ಅಂಗನವಾಡಿ ಕೇಂದ್ರಗಳಿಗೆ ಪೀಠೋಪಕರಣ, ಉಚಿತ ಅಂಬುಲೆನ್ಸ್ ಸೇವೆ, ಅಂಗವಿಕಲರಿಗೆ ತಳ್ಳುವ ಗಾಡಿ, ಎರಡು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಎಂಜಿನಿಯರಿಂಗ್, ವೈದ್ಯಕೀಯ ಓದುವ ವಿದ್ಯಾರ್ಥಿಗಳ ಶುಲ್ಕ, ಇಸ್ಕಾನ್ ಜೊತೆ ಸೇರಿ ಉಚಿತ ಊಟದ ವ್ಯವಸ್ಥೆ ಈ ಎಲ್ಲ ಕೆಲಸಗಳಿಗೆ ಸ್ವಂತ ಹಣ ಬಳಸಿದ್ದೇನೆ. 30 ವರ್ಷಗಳ ಹಿಂದಿನ ಪೈಪ್‌ಲೈನ್ ಬದಲಾವಣೆ, ಏಳು ಸಮುದಾಯ ಭವನಗಳ ನಿರ್ಮಾಣ, 35 ಬಸ್ ನಿಲ್ದಾಣಗಳ ನವೀಕರಣ, ದೇವಸ್ಥಾನ, ಮಸೀದಿ, ಚರ್ಚ್‌ಗಳ ಜೀರ್ಣೋದ್ಧಾರ ಹೀಗೆ ಹಲವು ಕೆಲಸಗಳು ನಿಮಗೇ ಕಣ್ಣಿಗೆ ಕಾಣುತ್ತದೆ.

● ಮತ್ತೊಮ್ಮೆ ಜನ ನಿಮ್ಮನ್ನು ಯಾಕೆ ಆಯ್ಕೆ ಮಾಡಬೇಕು?

ಹೆಬ್ಬಾಳವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುವುದು ನನ್ನ ಧ್ಯೇಯ. ಅದಕ್ಕೆಂದೇ ನನ್ನದೇ ಆದ ‘2023–28 ಪ್ರಣಾಳಿಕೆ’ ಮುಂದಿಟ್ಟಿದ್ದೇನೆ. ಅದರಲ್ಲಿ 200 ಹಾಸಿಗೆಗಳ ಸುಸಜ್ಜಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕಾವೇರಿ ನೀರು ಪೂರೈಕೆಗೆ ನೀರ ಸಂಗ್ರಹಣಾ ಟ್ಯಾಂಕ್, 1ರಿಂದ 10ನೇ ತರಗತಿವರೆಗಿನ 1,000 ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಪ್ರತಿ ಮನೆಗೆ ಪೈಪ್‌ಲೈನ್ ಮೂಲಕ ನೀರು, ಸ್ಲಂನಲ್ಲಿ 15 ವರ್ಷಗಳಿಂದ ಇರುವವರಿಗೆ ಹಕ್ಕುಪತ್ರ, 1,000 ಮಹಿಳೆಯರಿಗೆ ಟೈಲರಿಂಗ್ ತರಬೇತಿ, ಜೊತೆಗೆ ಮೆಷಿನ್ ವಿತರಣೆ, ಸ್ತ್ರೀ ಶಕ್ತಿ ಗುಂಪುಗಳಿಗೆ ಸಹಾಯಧನ, ಕ್ಷೇತ್ರಕ್ಕೊಂದು ಎಂಜಿನಿಯರಿಂಗ್ ಕಾಲೇಜು, ಬಡಜನರಿಗೆ ಉಚಿತ ವಿವಾಹ, ಶಸ್ತ್ರಚಿಕಿತ್ಸೆಗೆ ₹ 50 ಸಾವಿರ ಸಹಾಯಧನ ಹೀಗೆ ಹಲವು ಭರವಸೆಗಳನ್ನು ನೀಡಿದ್ದೇನೆ.

● ಕ್ಷೇತ್ರಕ್ಕೆ ಅತೀ ಹೆಚ್ಚು ಅನುದಾನ ತಂದಿದ್ದೀರಿ ಎಂಬ ಮಾತಿದೆಯಲ್ಲ?

ನನ್ನ ಕ್ಷೇತ್ರಕ್ಕೆ ಇಡೀ 5 ವರ್ಷದಲ್ಲಿ ಬಂದಿರುವುದು ಕೇವಲ ₹ 300 ಕೋಟಿ. ಆದರೆ, ಈ ಬಗ್ಗೆ ಗೊತ್ತಿಲ್ಲದವರು ಏನೇನೊ ಆರೋಪ ಮಾಡುತ್ತಾರೆ. ಸರ್ಕಾರ ಕೊಟ್ಟಿದ್ದಕ್ಕಿಂತ ಹೆಚ್ಚು ಸ್ವಂತ ಹಣದಲ್ಲಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ರಾಜಕೀಯದಿಂದ ಹಣ ಮಾಡುವ ಉದ್ದೇಶ ನನಗಿಲ್ಲ. ನನ್ನದೇ ವ್ಯವಹಾರ, ದಾರಿಗಳಿವೆ. ಜನರ ಸೇವೆ ಮಾಡಬೇಕು ಅಷ್ಟೆ.

● ನಿಮ್ಮ ಪ್ರತಿಸ್ಪರ್ಧಿ ಬಗ್ಗೆ ಏನು ಹೇಳುತ್ತೀರಿ?

ಬಿಜೆಪಿ ಅಭ್ಯರ್ಥಿ ವಿರುದ್ಧ ನಾನು ಹೇಳುವಂತದ್ದೇನೂ ಇಲ್ಲ. ತಮ್ಮ ಮೇಲಿನ ಕ್ರಿಮಿನಲ್ ಪ್ರಕರಣಗಳ ಬಗ್ಗೆ ಅವರೇ ತಮ್ಮ ಅಫಿದಾವಿ-ತ್‌ನಲ್ಲಿಯೇ ಘೋಷಿಸಿಕೊಂಡಿದ್ದಾರೆ. ಅಂಥವರು ರಾಜಕಾರಣ-ದಲ್ಲಿ ಇರಲು ಯಾವುದೇ ನೈತಿಕತೆ ಇಲ್ಲ. ಆದರೆ, ಅವರ ವಿರುದ್ಧ ಸ್ಪರ್ಧಿಸುವುದು ಅನಿವಾರ್ಯವಾಗಿದೆ. ನಾನು 80 ಸಾವಿರಕ್ಕೂ ಹೆಚ್ಚು ಮತಗಳಿಂದ ಗೆಲ್ಲುತ್ತೇನೆ. ಕ್ಷೇತ್ರದಲ್ಲಿ ನಾನು ಮಾಡಿದ ಕೆಲಸಗಳು ನನ್ನ ಕೈ ಹಿಡಿಯುವುದು ಖಚಿತ.

ಸಯ್ಯದ್ ಮೊಹಿದ್ ಅಲ್ತಾಫ್ (ಜೆಡಿಎಸ್)

‘ಜನ ಬದಲಾವಣೆ ಬಯಸಿದ್ದಾರೆ. ಗೆಲುವಿನ ವಿಶ್ವಾಸವಿದೆ’

● ನಿಮ್ಮ ಚುನಾವಣಾ ಪ್ರಚಾರ ಹೇಗೆ ನಡೆಯುತ್ತಿದೆ?

ನಾವು (ಜೆಡಿಎಸ್) ಬಹಿರಂಗ ಸಭೆ, ಸಮಾವೇಶಗಳ ಮೂಲಕ ಮತದಾರರನ್ನು ಸಂಪರ್ಕಿಸುವ ಬದಲು, ಪ್ರತಿ ಮನೆಗೆ ಭೇಟಿ ನೀಡುತ್ತಿದ್ದೇವೆ. ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್, ಬಿಜೆಪಿ ಸರ್ಕಾರ ಜನರ ನಿರೀಕ್ಷೆಯಂತೆ ಆಡಳಿತ ನೀಡಿಲ್ಲ. ಈಗ ಭರವಸೆಗಳನ್ನು ನೀಡಿ ಮತ್ತೆ ಅಧಿಕಾರ ನೀಡುವಂತೆ ಮನವಿ ಮಾಡುತ್ತಿವೆ. ಅವರ ಅಧಿಕಾರದ ಕಾರ್ಯವೈಖರಿಯನ್ನು ಜನ ನೋಡಿದ್ದಾ-ರಲ್ಲವೇ. ನಮಗೂ ಪೂರ್ಣಾವಧಿ ಅಧಿಕಾರ ನಡೆಸಲು ಒಮ್ಮೆ ಅವಕಾಶ ಕೊಟ್ಟು ನೋಡಿ ಎಂದು ಮತಭಿಕ್ಷೆ ಕೇಳುತ್ತಿದ್ದೇವೆ.

● ನಿಮ್ಮ ಆದ್ಯತೆಗಳೇನು?

ಜನರಿಗೆ ಮುಖ್ಯವಾಗಿ ಬೇಕಿರುವುದು ಶಿಕ್ಷಣ ಮತ್ತು ಆರೋಗ್ಯ. ಹೀಗಾಗಿ, ಈ ಎರಡು ಕ್ಷೇತ್ರಗಳ ಕಡೆಗೆ ಹೆಚ್ಚು ಒತ್ತು ನೀಡುತ್ತೇನೆ. ಪಕ್ಷದ ‘ಪಂಚ ರತ್ನ’ ಯೋಜನೆಗಳ ಘೋಷಣೆಗಳಲ್ಲಿಯೇ ಎಚ್. ಡಿ. ಕುಮಾರಸ್ವಾಮಿ ಈ ವಿಷಯವನ್ನು ಹೇಳಿದ್ದಾರೆ. ನಾವು ಅಧಿಕಾರಕ್ಕೆ ಬಂದ ಐದು ವರ್ಷಗಳ ಅವಧಿಯಲ್ಲಿ ಪಂಚರತ್ನ ಯೋಜನೆಗಳನ್ನು ಪೂರ್ಣಗೊಳಿಸುವ ವಿಶ್ವಾಸವಿದೆ.

● ಪ್ರತಿಸ್ಪರ್ಧಿ ಅಭ್ಯರ್ಥಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಎರಡನೇ ಬಾರಿ ಆಯ್ಕೆಗಾಗಿ ಕಾಂಗ್ರೆಸ್ ಅಭ್ಯರ್ಥಿ ಕಣದಲ್ಲಿದ್ದಾರೆ. ಅವರ ಪಕ್ಷ ಘೋಷಿಸಿರುವ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕಾರ್ಯಸಾಧುವಲ್ಲ. ಬಿಜೆಪಿ ಅಭ್ಯರ್ಥಿಯ ವಿರುದ್ಧ ಹಲವು ಪ್ರಕರಣಗಳಿವೆ. ಮತದಾರರನ್ನು ಓಲೈಸಲು ಕಾಂಗ್ರೆಸ್-ಬಿಜೆಪಿ ನಾನಾ ದಾರಿಗಳನ್ನು ಕಂಡುಕೊಂಡಿದೆ. ಆದರೆ, ನನ್ನ ಪಕ್ಷ ಮತ್ತು ನನ್ನ ದಾರಿ ನೇರ.

● ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳ ಅಬ್ಬರದ ಮಧ್ಯೆ ಗೆಲುವಿನ ಕನಸು ಕಾಣುತ್ತಿದ್ದೀರಲ್ವಾ?

ನಿಜ. ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳು ಅಬ್ಬರ ಪ್ರಚಾರ ನಡೆಸುತ್ತಿದ್ದಾರೆ. ಆದರೆ, ನಾನು ವಿದ್ಯಾವಂತ. ಸುಪ್ರೀಂ ಕೋರ್ಟ್ ವಕೀಲನಾಗಿರುವ ನಾನು ಜನಸೇವೆ ಮಾಡಲೆಂದೇ ರಾಜಕೀಯಕ್ಕೆ ಬಂದಿದ್ದೇನೆ. ಬದಲಾವಣೆ ಬಯಸುತ್ತಿರುವ ಜನರು ನನಗೆ ಮತ ಹಾಕುತ್ತಾರೆ ಎಂಬ ವಿಶ್ವಾಸ ನನಗಿದೆ.

ಜಗದೀಶ ಕಟ್ಟಾ ಕೆ.ಎಸ್ (ಬಿಜೆಪಿ)

‘ತಂದೆಯ ಹೆಸರು, ಮೋದಿ ಅಲೆ ನನಗೆ ಶಕ್ತಿ’

● ಮೊದಲ ಬಾರಿ ಕಣದಲ್ಲಿದ್ದೀರಿ. ಚುನಾವಣಾ ಪ್ರಚಾರ ಹೇಗೆ ನಡೆಯುತ್ತಿದೆ?

ಕ್ಷೇತ್ರದಲ್ಲಿ 60 ಸಾವಿರದಿಂದ 70 ಸಾವಿರ ಮನೆಗಳಿವೆ. ಈಗಾಗಲೇ ಶೇ 70ರಷ್ಟು ಮನೆಗಳನ್ನು ನಾನು ನೇರವಾಗಿ ತಲುಪಿದ್ದೇನೆ. ಪಕ್ಷದ ಮುಖಂಡರು, ಕಾರ್ಯಕರ್ತರು ಸಕ್ರಿಯವಾಗಿ ತೊಡಗಿಸಿಕೊಂಡಿದ್ದು, 2–3 ಬಾರಿ ಮನೆಗಳನ್ನು ಸಂಪರ್ಕಿಸಿದ್ದಾರೆ. ಹೀಗಾಗಿ, ಪ್ರಚಾರದಲ್ಲಿ ಹಿಂದೆಬಿದ್ದಿಲ್ಲ. ಮುಂದಿರುವ ಕೆಲವು ದಿನಗಳಲ್ಲಿ ಇನ್ನಷ್ಟು ಬಿರುಸಿನಿಂದ ಕೆಲಸ ಮಾಡಬೇಕಿದೆ.

● ನಿಮ್ಮ ತಂದೆ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಈ ಹಿಂದೆ ಕ್ಷೇತ್ರದ ಶಾಸಕರಾಗಿದ್ದರು. ಅವರು ಮಾಡಿದ್ದ ಕೆಲಸಗಳು ನೆರವಿಗೆ ಬರುವ ವಿಶ್ವಾಸ ಇದೆಯೇ?

ನೂರಕ್ಕೆ ನೂರಷ್ಟು ಆ ನಂಬಿಕೆ ನನಗಿದೆ. ತಂದೆಯವರು ಕ್ಷೇತ್ರದಲ್ಲಿ ಮನೆ ಮಗನಾಗಿ ಜನಪ್ರಿಯತೆ ಪಡೆದಿದ್ದರು. ನನ್ನನ್ನು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರ ಮಗ ಎಂದೇ ಗುರುತಿಸುತ್ತಾರೆ. ಅವರಿಂದಾಗಿಯೇ ನನ್ನ ಅಸ್ತಿತ್ವ. ಅದು ನನಗೆ ಶಕ್ತಿ. ಜೊತೆಗೆ, ನಮ್ಮ ಪ್ರಧಾನಿ ನರೇಂದ್ರ ಮೋದಿ ಅವರ ಅಲೆಯೂ ಕ್ಷೇತ್ರದಲ್ಲಿದೆ. ಹೀಗಾಗಿ ಗೆಲ್ಲುವ ವಿಶ್ವಾಸವಿದೆ.

● ನಿಮ್ಮ ಮೇಲೆ ಹಲವು ಕ್ರಿಮಿನಲ್ ಪ್ರಕರಣಗಳಿವೆಯಲ್ಲ?

ಹಲವು ಪ್ರಕರಣಗಳಿವೆ ಎನ್ನುವುದೆಲ್ಲ ಸುಳ್ಳು. ನನ್ನ ಮೇಲಿರುವ ಐದು ಪ್ರಕರಣಗಳ ಬಗ್ಗೆ ನಾಮಪತ್ರದ ಜೊತೆ ಸಲ್ಲಿಸಿದ ಅಫಿದಾವಿತ್‌ನಲ್ಲಿಯೇ ಹೇಳಿದ್ದೇನೆ. ಆದರೆ, ಕೆಲವರು ಅಪಪ್ರಚಾರ ಮಾಡುತ್ತಾರೆ.

● ನಿಮ್ಮ ಪ್ರತಿಸ್ಪರ್ಧಿಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಪ್ರತಿಸ್ಪರ್ಧಿಗಳು ಯಾರು ಎನ್ನುವುದು ನನಗೆ ಮುಖ್ಯವಲ್ಲ. ಈ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದೂ ಇಲ್ಲ. ನನ್ನ ಬೆನ್ನ ಹಿಂದೆ ಪಕ್ಷ, ದೊಡ್ಡ ಸಂಖ್ಯೆಯಲ್ಲಿ ಕಾರ್ಯಕರ್ತರು, ನಾಯಕರು ಇದ್ದಾರೆ. ಜೊತೆಗೆ ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸಿರುವ ನನ್ನ ಪಕ್ಷದ ಅಭಿವೃದ್ಧಿ, ಸಾಧನೆಗಳೂ ಜನರ ಮುಂದಿವೆ. ಅವು ನನ್ನನ್ನು ಗೆಲುವಿನ ದಡ ದಾಟಿಸಬಹುದೆಂಬ ನಂಬಿಕೆ ಇದೆ.

ಹಲೋ....ಇವರಿಗೆ ಮತ ಕೊಡಿ!

ಮತದಾರರ ಮೊಬೈಲ್‌ಗೆ ಕರೆ; ಕ್ಷೇತ್ರ– ಮೊಬೈಲ್ ಸಂಖ್ಯೆ ದೊರೆತಿದ್ದು ಹೇಗೆ?

• ಆರ್. ಮಂಜುನಾಥ್

ಬೆಂಗಳೂರು: ಹಲೋ... ನಾವು ....ಕ್ಷೇತ್ರದ ಅಭ್ಯರ್ಥಿ ಕಚೇರಿಯಿಂದ ಮಾತನಾಡುತ್ತಿದ್ದೇವೆ. ....ಇವರಿಗೆ ಮತ ನೀಡಿ. ದಯವಿಟ್ಟು ಅವರಿಗೆ ಜಯ ತಂದು ಕೊಡಿ...

ಬೆಂಗಳೂರಿನ ಬಹುತೇಕ ಎಲ್ಲ ವಿಧಾನಸಭೆ ಕ್ಷೇತ್ರಗಳಲ್ಲಿನ ಮತದಾರರ ಮೊಬೈಲ್‌ಗಳಿಗೆ ಇಂತಹ ಕರೆಗಳು ಬರುತ್ತಿವೆ. ಮನೆಯಲ್ಲಿರುವ ಎಲ್ಲರ ಮೊಬೈಲ್ ಸಂಖ್ಯೆಗೂ ಅದೇ ಕ್ಷೇತ್ರದ ಅಭ್ಯರ್ಥಿಗಳ ಕಡೆಯವರು ಕರೆ ಮಾಡುತ್ತಿದ್ದಾರೆ. ಮತದಾರರ ಪಟ್ಟಿಯಿಂದ ಮತದಾರರ ಕ್ಷೇತ್ರ ಗೊತ್ತಾಗುತ್ತದೆ ನಿಜ. ಆದರೆ, ಅವರ ಮೊಬೈಲ್ ಸಂಖ್ಯೆ ಸಿಕ್ಕಿರುವುದಾದರೂ ಹೇಗೆ? ಈ ಪ್ರಶ್ನೆಗೆ, ಮತದಾರರ ಮಾಹಿತಿ ಸಂಗ್ರಹಿಸಿಟ್ಟುಕೊಂಡಿರುವ ಚುನಾವಣೆ ಆಯೋಗದಲ್ಲೂ ಉತ್ತರವಿಲ್ಲ.

ಮತದಾರರ ಗುರುತಿನ ಚೀಟಿಯಲ್ಲಿ (ಎಪಿಕ್) ಹೆಸರು, ಜನ್ಮ ದಿನಾಂಕ, ವಿಳಾಸ ಇರುತ್ತದೆ. ಮೊಬೈಲ್ ಸಂಖ್ಯೆ ಇರುವುದಿಲ್ಲ. ಇಷ್ಟಾದರೂ ಅಭ್ಯರ್ಥಿಗಳ ಕಡೆಯವರಿಗೆ ಮೊಬೈಲ್ ಸಂಖ್ಯೆ ದೊರೆ-ತಿರುವುದಾದರೂ ಹೇಗೆ? ಆಧಾರ್ ಲಿಂಕ್ ಮಾಡಲಾಗಿರುವುದರಿಂದ ಮೊಬೈಲ್ ಸಂಖ್ಯೆ ಸಂಗ್ರಹವಾಗುತ್ತಿದೆ. ಆದರೆ ಚುನಾವಣೆ ಆಯೋಗದಲ್ಲಿ ಗೋಪ್ಯವಾಗಿ ಇರಬೇಕಾದ ಈ ಮಾಹಿತಿ ಅಭ್ಯರ್ಥಿಗಳ ಕೈಗೆ ಸಿಕ್ಕಿದ್ದು ಹೇಗೆ ಎಂಬುದರ ತನಿಖೆಯೂ ಆರಂಭವಾಗಿದೆ ಎಂದು ಚುನಾವಣೆ ಆಯೋಗದ ಮೂಲಗಳು ತಿಳಿಸಿವೆ. ಆದರೆ, ಚುನಾವಣೆ ಮುಗಿಯುವವರೆಗೆ ತನಿಖೆ ಮುಗಿಯುವ ಲಕ್ಷಣವಿಲ್ಲ. ನಂತರ ಮುಂದುವರಿಯುವ ಭರವಸೆ ಇಲ್ಲ ಎನ್ನಲಾಗುತ್ತಿದೆ.

‘ಕರೆ ಮಾಡಿದ ವ್ಯಕ್ತಿ ನಾನು ---ಪಕ್ಷದ ಅಭ್ಯರ್ಥಿ ಕಡೆಯವನು. ನೀವು ---ಕ್ಷೇತ್ರದ ಈ ಅಭ್ಯರ್ಥಿಗೆ ಮತ ಹಾಕಬೇಕು ಎಂದು ಮನವಿ ಮಾಡಿಕೊಂಡನು. ನನ್ನ ಮಾಹಿತಿ ನಿಮಗೆಲ್ಲಿ ಸಿಕ್ಕಿತ್ತು ಎಂದರೆ ನಮ್ಮಲ್ಲಿ ಡೇಟಾ ಸಂಗ್ರಹ ಇದೆ ಸರ್, ಅದನ್ನು ಪಡೆದುಕೊಂಡಿದ್ದೇವೆ ಎನ್ನುತ್ತಾರೆ’ ಎಂದು ರಾಜರಾಜೇಶ್ವರಿನಗರದ ನಿವಾಸಿ ಶ್ರೀನಿವಾಸ್ ಹೇಳಿದರು.

‘ನನ್ನ ಮೊಬೈಲ್ ಸಂಖ್ಯೆ ನಿಮಗೆ ಹೇಗೆ ಸಿಕ್ಕಿತು? ಮಾಹಿತಿ ಕಳವು ಮಾಡಿದ್ದೀರಲ್ಲ ಎಂದು ದಬಾಯಿಸಿದರೆ, ಸರ್ಕಾರವೇ ಮಾಹಿತಿ ಕೊಟ್ಟಿದೆ ಎಂದರು. ಅದ್ಹೇಗೆ, ಯಾರು ಕೊಟ್ಟರು ಹೇಳಿ ಎಂದಾಗ, ತಬ್ಬಿಬ್ಬಾದ ಆ ಕರೆ ಮಾಡಿದ ಯುವತಿ, ನಾನು ಅಭ್ಯರ್ಥಿ ಕಚೇರಿಯಿಂದ ಕರೆ ಮಾಡುತ್ತಿದ್ದೇವೆ ಎಂದು ಕರೆ ಕಟ್ ಮಾಡಿದರು’ ಎಂದು ಕೆ.ಆರ್. ಪುರದ ಮಹೇಶ್ವರಿ ತಿಳಿಸಿದರು.

‘ನಮಸ್ಕಾರ, ನಿಮ್ಮ ---ಕ್ಷೇತ್ರದ ಅಭ್ಯರ್ಥಿ ಮಾತನಾಡುತ್ತಾರೆ ಇರಿ. ನಮಸ್ಕಾರ ---ನನಗೆ ಮತ ನೀಡಿ’ ಎಂದೂ ಕರೆಗಳು ಬರುತ್ತಿವೆ. ಇವೆಲ್ಲ ಕಾಲ್ ಸೆಂಟರ್‌ಗಳ ಸೃಷ್ಟಿ. ಅಭ್ಯರ್ಥಿಗಳು ನೇರವಾಗಿ ಮಾತಾಡುವುದಿಲ್ಲ. ರೆಕಾರ್ಡ್ ಮಾಡಿರುವ ಧ್ವನಿಯನ್ನು ಕೇಳಿಸಲಾಗುತ್ತಿದೆ.

ಹೀಗೆ ಇಂತಹ ಕರೆಗಳು ಒಂದೆರಡು ಕ್ಷೇತ್ರಗಳಿಗೆ, ಒಂದೇ ಪಕ್ಷದ ಅಭ್ಯರ್ಥಿ-ಗಳಿಗೆ ಸೀಮಿತವಾಗಿಲ್ಲ. ಎಲ್ಲ ಪ್ರಮುಖ ಪಕ್ಷಗಳ ಅಭ್ಯರ್ಥಿಗಳಿಂದಲೂ ಆಯಾ ಕ್ಷೇತ್ರ ಮತದಾರರ ಮೊಬೈಲ್‌ಗೆ ಕರೆಗಳು ಹೋಗುತ್ತಿವೆ. ಚುನಾವಣೆ ಆಯೋಗದಲ್ಲಿ ಗೋಪ್ಯವಾಗಿರಬೇಕಾದ ಮಾಹಿತಿಗಳೂ ಬಹಿರಂಗವಾಗಿವೆ. ಇದು ಮಾಹಿತಿ ಕಳವು ಅಲ್ಲದೆ ಮತ್ತೇನು ಅಲ್ಲ ಎಂದು ದೂರಲಾಗುತ್ತಿದೆ.

‘ಅಭ್ಯರ್ಥಿಗಳ ಕಡೆಯವರು ಅಥವಾ ಕೆಲವು ಖಾಸಗಿ ಸಂಸ್ಥೆಯವರು ಅಭ್ಯರ್ಥಿ-ಗಳಿಗಾಗಿ ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಿದ್ದಾರೆ. ಅವರ ಮೊಬೈಲ್ ಸಂಖ್ಯೆ ಆಗ ದೊರೆತಿರಬಹುದು’ ಎಂದು ಕೆಲವರು ಹೇಳುತ್ತಾರೆ.

ಮನೆ ಮನೆಗೆ ತೆರಳಿ ಮಾಹಿತಿ ಸಂಗ್ರಹಿಸಿದಾಗ ಒಬ್ಬರ ಮೊಬೈಲ್ ಸಂಖ್ಯೆ ತೆಗೆದುಕೊಳ್ಳುತ್ತಾರೆ. ಆದರೆ, ಇದೀಗ ಮನೆಯಲ್ಲಿರುವ ನಾಲ್ಕಾರು ಜನಕ್ಕೂ ಪ್ರತ್ಯೇಕವಾಗಿ ಅವರ ಮೊಬೈಲ್ ಸಂಖ್ಯೆಗೇ ಕರೆ ಬರುತ್ತಿರುವುದು ಹೇಗೆ ಎಂಬುದರ ಬಗ್ಗೆ ವಿವರಣೆ ಸಿಗುತ್ತಿಲ್ಲ.

ಪ್ರಜಾಕೀಯ: ಕೆಲಸ ಮಾಡಲಾಗದಿದ್ದರೆ ಶಾಸಕ ಸ್ಥಾನ ತ್ಯಜಿಸುವ ಷರತ್ತು

ಬಾಂಡ್ ಬರೆದುಕೊಟ್ಟ ಅಭ್ಯರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉತ್ತಮ ಪ್ರಜಾಕೀಯ ಪಕ್ಷದಿಂದ 110 ಅಭ್ಯರ್ಥಿಗಳು ಸ್ಪರ್ಧಿಸಿದ್ದು, ಚುನಾಯಿತರಾದ ಬಳಿಕ ಜನರ ಕೆಲಸ ಮಾಡಲು ಸಾಧ್ಯವಾಗ-ದಿದ್ದರೆ ಸ್ಥಾನ ತ್ಯಜಿಸುವುದಾಗಿ ಬಾಂಡ್ ಪೇಪರ್‌ನಲ್ಲಿ ಬರೆದುಕೊಟ್ಟಿದ್ದಾರೆ’ ಎಂದು ಪಕ್ಷದ ಸಂಸ್ಥಾಪಕ ಹಾಗೂ ನಟ ಉಪೇಂದ್ರ ತಿಳಿಸಿದರು.

ಪಕ್ಷದ ಎಲ್ಲ ಅಭ್ಯರ್ಥಿಗಳೊಂದಿ-ಗೆ ಸುದ್ದಿಗೋಷ್ಠಿ ನಡೆಸಿದ ಅವರು, ‘ಅಭ್ಯರ್ಥಿಗಳನ್ನು ಹುಡುಕಿ ಟಿಕೆಟ್ ನೀಡುವ ಪದ್ಧತಿ ಪ್ರಜಾಕೀಯದಲ್ಲಿ ಇಲ್ಲ. 110 ಕ್ಷೇತ್ರಗಳಲ್ಲಿ ಪ್ರಜಾ ಕಾರ್ಮಿಕನಾಗಿ ಕೆಲಸ ಮಾಡಲು ಆಸಕ್ತಿ ಇದ್ದವರು ಮುಂದೆ ಬಂದಿದ್ದಾರೆ. ಇವರು ಸೂಕ್ತವೇ ಎಂಬುದನ್ನು ತೀರ್ಮಾನಿಸಲು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದೆವು. ಜನ ಯಾರ ಪರ ಹೆಚ್ಚು ಒಲವು ವ್ಯಕ್ತಪಡಿ-ದರೋ ಅವರಿಗೆ ಟಿಕೆಟ್ ನೀಡಲಾಗಿದೆ’ ಎಂದರು.

‘ಚುನಾಯಿತರಾದವರು ಪ್ರಜಾ ಕಾರ್ಮಿಕರಾಗಿ ಕೆಲಸ ಮಾಡಬೇಕು. ಆ ಕ್ಷೇತ್ರದ ಜನರ ಆಶೋತ್ತರಗಳಿಗೆ ತಕ್ಕಂತೆ ಕೆಲಸ ಮಾಡಲು ಸಾಧ್ಯವಾಗ-ದಿದ್ದರೆ ರಾಜೀನಾಮೆ ನೀಡಿ ವಾಪಸ್ ಹೋಗಬೇಕು. ಆರು ತಿಂಗಳಿಗೊಮ್ಮೆ ಜನರಿಂದ ಅಭಿಪ್ರಾಯ ಸಂಗ್ರಹಿಸಲಾಗು-ತ್ತದೆ. ಅಲ್ಲಿ ಬರುವ ಅಭಿಪ್ರಾಯ ಆಧರಿಸಿ ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಈ ಎಲ್ಲಾ ಷರತ್ತುಗಳನ್ನು ಒಳಗೊಂಡ ಬಾಂಡ್ ಪೇಪರ್ ಸಿದ್ಧಪಡಿಸಿಕೊಂಡು ತಂದಿದ್ದಾರೆ. ಇದನ್ನು ಇಟ್ಟುಕೊಂಡೇ ಜನರಿಗೆ ಮನವರಿಕೆ ಮಾಡಿಸುತ್ತಿದ್ದಾರೆ’ ಎಂದು ಹೇಳಿದರು.

ಉತ್ತಮ ಪ್ರಜಾಕೀಯ ಪಕ್ಷದ ಅಭ್ಯರ್ಥಿಗಳೊಂದಿಗೆ ಪಕ್ಷದ ಸಂಸ್ಥಾಪಕ ಹಾಗೂ ನಟ ಉಪೇಂದ್ರ –ಪ್ರಜಾವಾಣಿ ಚಿತ್ರ

‘ಕೆಲಸ ಮಾಡಲು ಸಾಧ್ಯವಾಗ-ದಿದ್ದರೆ ಆರು ತಿಂಗಳಲ್ಲಿ ಶಾಸಕ ಸ್ಥಾನ ತ್ಯಜಿಸಬೇಕೆಂಬ ಅಂಶ ಸಂವಿಧಾನದಲ್ಲಿ ಸೇರ್ಪಡೆ ಮಾಡುವ ಅಗತ್ಯವಿದೆ’ ಎಂದು ಅವರು ಪ್ರತಿಪಾದಿಸಿದರು.

‘ಯಾವ ಅಭ್ಯರ್ಥಿ ಪರವೂ ನಾನು ಪ್ರಚಾರಕ್ಕೆ ಹೋಗುವುದಿಲ್ಲ. ಯಾವುದೇ ಚಿತ್ರನಟರನ್ನೂ ಪ್ರಚಾರಕ್ಕೆ ಕರೆಯುವುದಿಲ್ಲ. ಏಕೆಂದರೆ ಜನರೇ ನಿಜವಾದ ಸ್ಟಾರ್‌ಗಳು. ಅವರ ಪರ ಕೆಲಸ ಮಾಡುವ ವ್ಯಕ್ತಿಯನ್ನು ಅವರೇ ಆಯ್ಕೆ ಮಾಡಿಕೊಳ್ಳಬೇಕು. ಪ್ರಜಾಕೀಯದ ಅಭ್ಯರ್ಥಿ ಸೂಕ್ತ ಎನಿಸಿದರೆ ಅವರೇ ಮತ ಹಾಕುತ್ತಾರೆ’ ಎಂದರು.

‘ನೋಟಾಗೆ ಮತ ಹಾಕುವುದರಿಂದ ಯಾವ ಪ್ರಯೋಜನವೂ ಇಲ್ಲ. ಆದ್ದರಿಂದ ನೋಟಾಗೆ ಮತ ಹಾಕಬಾರದು’ ಎಂದು ಮನವಿ ಮಾಡಿದರು.

ಮುನಿರಾಜು ಪರ ನಟ ಸುರೇಶ್ ಗೋಪಿ ಪ್ರಚಾರ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮುನಿರಾಜು ಪರವಾಗಿ ಕೇರಳದ ನಟ ಸುರೇಶ್ ಗೋಪಿ ಅವರು ಮಲ್ಲಸಂದ್ರದ ಸರ್ಕಾರಿ ಶಾಲೆ ಸಮೀಪದಿಂದ ರೋಡ್ ಶೋ ಮೂಲಕ ಮತಯಾಚಿಸಿದರು.

‘ದೇಶದಲ್ಲಿ ಮೋದಿಯವರ ಆಡಳಿತ ವೈಖರಿ ಹಾಗೂ ಅವರ ಅನೇಕ ಯೋಜನೆಗಳು ವಿಶ್ವಕ್ಕೆ ಮಾದರಿಯಾಗಿದೆ. ಈ ಕ್ಷೇತ್ರದಲ್ಲಿ ಮುನಿರಾಜು ಅವರನ್ನು ಗೆಲ್ಲಿಸುವ ಮೂಲಕ ನೀವೆಲ್ಲರೂ ಬಿಜೆಪಿ ಗೆಲ್ಲಿಸಬೇಕು’ ಎಂದು ಸುರೇಶ್ ಗೋಪಿ ಕೇರಳದ ನಾಗರಿಕರಿಗೆ ಮನವಿ ಮಾಡಿದರು.

ಮುನಿರಾಜು ಮಾತನಾಡಿ, ‘ಈ ಭಾಗದಲ್ಲಿ ಕೇರಳ ಸಮಾಜದವರು ಸಾವಿರಾರು ಸಂಖ್ಯೆಯಲ್ಲಿ ಇದ್ದಾರೆ. ನಮ್ಮ ಅವಧಿಯಲ್ಲಿ ಆದ ಅಭಿವೃದ್ಧಿ ಕಾರ್ಯಗಳ ಮೆಚ್ಚಿ ಸಾವಿರಾರು ಸಂಖ್ಯೆಯಲ್ಲಿ ಬಿಜೆಪಿ ಪರ ಒಲವು ತೋರಿಸಿದ್ದಾರೆ’ ಎಂದರು.

ಮಲ್ಲಸಂದ್ರದ ಸರ್ಕಾರಿ ಶಾಲೆ ಸಮೀಪದಿಂದ ಬಿಜೆಪಿ ಅಭ್ಯರ್ಥಿ ಎಸ್. ಮುನಿರಾಜು ಪರವಾಗಿ ಕೇರಳದ ನಟ ಹಾಗೂ ಮಾಜಿ ಸಂಸದ ಸುರೇಶ್ ಗೋಪಿ ಅವರು ಭರ್ಜರಿ ರೋಡ್ ಶೋ ಮೂಲಕ ಮತಯಾಚಿಸಿದರು.

ಮನೆಯಲ್ಲೇ ಮತ ಹಾಕಿದ 19,335 ಜನ

ಬೆಂಗಳೂರು: 19,335 ಮಂದಿ ಹಿರಿಯ ನಾಗರಿಕರು ಮತ್ತು ಅಂಗವಿಕಲರು ಸೋಮವಾರ ತಮ್ಮ ಮನೆಗಳಿಂದಲೇ ಮತ ಚಲಾಯಿಸಿದ್ದಾರೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

80 ವರ್ಷ ಮತ್ತು ಅದಕ್ಕೂ ಮೇಲ್ಪಟ್ಟವರು ಹಾಗೂ ಅಂಗವಿಕಲರು ಸೇರಿ 99,529 ಮತದಾರರು ಮನೆಯಿಂದಲೇ ಮತದಾನ ಮಾಡಲು ನೋಂದಾಯಿಸಿಕೊಂಡಿದ್ದರು.

ಶನಿವಾರ ಈ ಪ್ರಕ್ರಿಯೆ ಆರಂಭವಾಗಿದ್ದು, ಮೇ 6ರವರೆಗೂ ನಡೆಯಲಿದೆ.

ಮೊದಲ ಎರಡು ದಿನ ಒಟ್ಟು 49,797 ಮಂದಿ ಮತ ಚಲಾಯಿಸಿದ್ದರು. ಮೂರನೇ ದಿನದ ಅಂತ್ಯಕ್ಕೆ ಒಟ್ಟು 69,132 ಮತದಾರರು ಹಕ್ಕು ಚಲಾಯಿಸಿದ್ದಾರೆ ಎಂದು ಮೀನಾ ಮಾಹಿತಿ ನೀಡಿದ್ದಾರೆ.

‘ಸೋಮವಾರ 763 ತಂಡಗಳು ಅಷ್ಟೇ ಸಂಖ್ಯೆಯ ಮಾರ್ಗಗಳಲ್ಲಿ ಸಂಚರಿಸಿ ಮನೆ ಮತದಾನಕ್ಕೆ ಅವಕಾಶ ಕಲ್ಪಿಸಿದ್ದವು’ ಎಂದು ಹೇಳಿದ್ದಾರೆ.

1054 ಮಂದಿ ಮತದಾನ: ಬೆಂಗಳೂರು ನಗರದಲ್ಲಿ ಭಾನುವಾರ 1,054 ಮಂದಿ ಮನೆಯಿಂದ ಮತ ಚಲಾಯಿಸಿದ್ದಾರೆ.

80 ವರ್ಷಕ್ಕಿಂತ ಮೇಲ್ಪಟ್ಟ 9,152 ಮತದಾರರಲ್ಲಿ 1045 ಹಾಗೂ 119 ಅಂಗವಿಕಲರಲ್ಲಿ 9 ಮಂದಿ ಮೇ 1ರಂದು ಮತದಾನ ಮಾಡಿದ್ದಾರೆ. ಮನೆಯಿಂದ ಮತದಾನ ಮಾಡಲು ನೋಂದಾಯಿಸಿಕೊಂಡವರಲ್ಲಿ ನಾಲ್ವರು ಮರಣ ಹೊಂದಿದ್ದಾರೆ ಎಂದು ಬಿಬಿಎಂಪಿ ತಿಳಿಸಿದೆ.

ಡಿ.ಜೆ ಹಳ್ಳಿ, ಕೆ.ಜೆ ಹಳ್ಳಿಗೆ ಪೊಲೀಸ್ ಕಮಿಷನರ್ ಭೇಟಿ

ಸೂಕ್ಷ್ಮ ಸ್ಥಳಗಳಲ್ಲಿ ಭದ್ರತೆ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪೊಲೀಸ್ ಆಯುಕ್ತ ಪ್ರತಾಪ ರೆಡ್ಡಿ ಅವರು ಸೋಮವಾರ ನಗರದ ವಿವಿಧ ಸೂಕ್ಷ್ಮ ಪ್ರದೇಶಗಳಿಗೆ ಭೇಟಿ ನೀಡಿ ಬಂದೋಬಸ್ತ್ ಪರಿಶೀಲನೆ ನಡೆಸಿದರು.

2021ರಲ್ಲಿ ಡಿ.ಜೆ. ಹಳ್ಳಿ ಹಾಗೂ ಕೆ.ಜಿ. ಹಳ್ಳಿ ವ್ಯಾಪ್ತಿಯಲ್ಲಿ ನಡೆದಿದ್ದ ಗಲಾಟೆಯಿಂದ ಈ ಪ್ರದೇಶವು ಕೋಮು ಸೂಕ್ಷ್ಮವಾಗಿದ್ದು, ಅಲ್ಲಿಗೆ ಭೇಟಿ ನೀಡಿ ಬಂದೋಬಸ್ತ್ ಪರಿಶೀಲನೆ ನಡೆಸಿದರು.

ಚುನಾವಣೆ ಹಿನ್ನೆಲೆಯಲ್ಲಿ ಈ ಪ್ರದೇಶದಲ್ಲಿ ಹೆಚ್ಚಿನ ಭದ್ರತೆ ಕೈಗೊಳ್ಳಲಾಗಿದೆ.

ಕಾವಲ್ ಭೈರಸಂದ್ರ, ಮೋದಿ ರಸ್ತೆ, ಶ್ಯಾಂಪುರ ಮುಖ್ಯರಸ್ತೆ, ಟ್ಯಾನರಿ ರಸ್ತೆ ಸೇರಿದಂತೆ ಹಲವು ಪ್ರದೇಶಗಳಿಗೆ ಭೇಟಿ ನೀಡಿ, ಚುನಾವಣಾ ಕರ್ತವ್ಯ ನಿರತ ಪೊಲೀಸ್ ಸಿಬ್ಬಂದಿಯಿಂದ ಮಾಹಿತಿ ಪಡೆದುಕೊಂಡರು.

ಆ ಭಾಗದ ಡಿಸಿಪಿಯಿಂದಲೂ ಚೆಕ್‌ಪೋಸ್ಟ್‌ನಲ್ಲಿ ವಾಹನ ತಪಾಸಣೆ, ದಾಖಲೆಗಳಿಲ್ಲದ ವಸ್ತುಗಳ ವಶಕ್ಕೆ ಸಂಬಂಧಿಸಿದ ಮಾಹಿತಿ ಪಡೆದುಕೊಂಡರು. ವಿಧಾನಸಭೆ ಚುನಾವಣೆಯ ಮತದಾನ ದಿನವು ಸಮೀಪಿಸುತ್ತಿದ್ದು, ಎಚ್ಚರ ವಹಿಸುವಂತೆ ಸ್ಥಳದಲ್ಲಿದ್ದ ಸಿಬ್ಬಂದಿಗೆ ಸೂಚಿಸಿದರು.

ಪೂರ್ವವಲಯದ ಹೆಚ್ಚುವರಿ ಆಯುಕ್ತ ಚಂದ್ರಶೇಖರ್, ಡಿಸಿಪಿ ಭೀಮಾಶಂಕರ್ ಗುಳೇದ್ ಇತರೆ ಅಧಿಕಾರಿಗಳು ಹಾಜರಿದ್ದರು.

‘ವಾಹನಗಳನ್ನು ಕಡ್ಡಾಯವಾಗಿ ತಪಾಸಣೆ ನಡೆಸುವಂತೆ ಸೂಚಿಸಿದ್ದೇನೆ. ದಾಖಲೆಗಳಿಲ್ಲದ ಹಣ ಹಾಗೂ ಇತರೆ ವಸ್ತುಗಳ ಸಾಗಾಟ ಕಂಡುಬಂದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಚೆಕ್‌ಪೋಸ್ಟ್ ಸಿಬ್ಬಂದಿಗೆ ಸೂಚಿಸಲಾಗಿದೆ. ನಗರದ ಎಲ್ಲ ಸೂಕ್ಷ್ಮ ಪ್ರದೇಶಗಳಲ್ಲಿ ತೀವ್ರ ನಿಗಾ ವಹಿಸಲಾಗಿದೆ’ ಎಂದು ಪ್ರತಾಪ ರೆಡ್ಡಿ ಅವರು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಮುನಿರತ್ನ, ಯಾರಬ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಯಾರಬ್ ಎಂಬಾತ ಕಾಂಗ್ರೆಸ್ ನಾಯಕರು ಹಾಗೂ ಪಕ್ಷದ ಚಿಹ್ನೆಯೊಂದಿಗೆ ಪಾಕಿಸ್ತಾನ ಧ್ವಜವಿರುವ ಕರಪತ್ರವನ್ನು ಮುದ್ರಿಸಿ ಹಂಚಿಕೆ ಮಾಡಿ ಅಶಾಂತಿ ಸೃಷ್ಟಿಸುವ ಷಡ್ಯಂತ್ರ ನಡೆಸಿದ್ದಾರೆ’ ಎಂದು ಆರೋಪಿಸಿ ರಾಜ ರಾಜೇಶ್ವರಿ ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಚ್.ಕುಸುಮಾ ಯಶವಂತಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘ಎನ್‌ಸಿಆರ್ ದಾಖಲಿಸಿಕೊಳ್ಳ-ಲಾಗಿದೆ. ಕಾನೂನು ಸಲಹೆಯ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಶಾಸಕ ಮುನಿರತ್ನ ಅವರ ಆಪ್ತ ಬಳಗದಲ್ಲಿ ಯಾರಬ್ ಗುರುತಿಸಿಕೊಂಡು ಅವರ ಬೆಂಬಲಿಗರಾಗಿ ಕ್ಷೇತ್ರದಲ್ಲಿ ಪರಿಚಿತರು. ಏಪ್ರಿಲ್ 30ರಂದು ಚುನಾವಣೆ ಪ್ರಚಾರದ ವೇಳೆ ಕರಪತ್ರವು ನನಗೆ ದೊರಕಿದೆ. ಚುನಾವಣೆ ವೇಳೆ ಅಶಾಂತಿ ಸೃಷ್ಟಿಸುವ ಹುನ್ನಾರ ನಡೆದಿದೆ. ಕಾಂಗ್ರೆಸ್ ನಾಯಕರ ಜತೆಗೆ ದುರುದ್ದೇಶ ಪೂರ್ವಕವಾಗಿ ಪಾಕಿಸ್ತಾನದ ಧ್ವಜವನ್ನು ಮುದ್ರಿಸಲಾಗಿದೆ. ಸ್ವಯಂ ಘೋಷಿತವಾಗಿ ಯಾರಬ್ ಕಾಂಗ್ರೆಸ್ ಬೆಂಬಲಿತನೆಂದು ಘೋಷಿಸಿಕೊಂಡು, ನನಗೆ ಬೆಂಬಲ ನೀಡುವುದಾಗಿ ಕರಪ-ತ್ರದಲ್ಲಿ ಹೇಳಿಕೊಂಡಿದ್ದಾರೆ. ಕರಪತ್ರ ಮುದ್ರಿಸಿ ಹಂಚಿರುವ ಯಾರಬ್, ಇದಕ್ಕೆ ಪ್ರೇರಣೆ ನೀಡಿರುವ ಬಿಜೆಪಿ ಅಭ್ಯರ್ಥಿ ಮುನಿರತ್ನ, ವೇಲುನಾಯ್ಕರ್ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಕುಸುಮಾ ಉಲ್ಲೇಖಿಸಿದ್ದಾರೆ.

ಕಾಂಗ್ರೆಸ್–ಬಿಜೆಪಿ ಕಾರ್ಯಕರ್ತರ ನಡುವೆ ಗಲಾಟೆ: ನಾಲ್ವರಿಗೆ ಗಾಯ

ಬೆಂಗಳೂರು: ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸತೀಶ್ ರೆಡ್ಡಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಡಿ.ಉಮಾಪತಿ ಅವರ ಬೆಂಬಲಿಗರ ನಡುವೆ ಗಲಾಟೆ ನಡೆದು ನಾಲ್ವರಿಗೆ ಗಾಯಗಳಾಗಿವೆ.

ಮತದಾರರಿಗೆ ಸೀರೆ ಹಂಚಲು ಬೊಮ್ಮನಹಳ್ಳಿಯ ಕಚೇರಿಯಲ್ಲಿ ಸೀರೆಗಳನ್ನು ಸಂಗ್ರಹಿಸಲಾಗಿದೆ ಎಂದು ಕಾಂಗ್ರೆಸ್ ಮುಖಂಡರು ಚುನಾವಣಾ-ಧಿಕಾರಿಗಳಿಗೆ ದೂರು ನೀಡಿದ್ದರು. ಚುನಾವಣಾ ಅಧಿಕಾರಿಗಳು ಆ ಕಚೇರಿಯ ಮೇಲೆ ದಾಳಿ ನಡೆಸಿ, ಸೀರೆ ಜಪ್ತಿ ಮಾಡಿಕೊಂಡಿದ್ದರು. ಇದೇ ವಿಚಾರಕ್ಕೆ ಎರಡೂ ಕಡೆಯವರ ನಡುವೆ ಗಲಾಟೆ ನಡೆದು ಕಾಂಗ್ರೆಸ್‌ನ ನಾಲ್ವರು ಕಾರ್ಯಕರ್ತರು ಗಾಯಗೊಂಡಿದ್ದಾರೆ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮನೆಗೆ ತೆರಳಿದ್ದಾರೆ.

ಬೊಮ್ಮನಹಳ್ಳಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳು ಏನಂತಾರೆ?

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಸಚ್ಚಿದಾನಂದ ಕುರಗುಂದ** ಅವರು ನಡೆಸಿದ ಕಿರು ಸಂದರ್ಶನ ಇಲ್ಲಿದೆ.



ಆರ್. ಮಂಜುನಾಥ್ (ಜೆಡಿಎಸ್)

‘ಸವಾಲುಗಳ ಮಧ್ಯೆ ಅಭಿವೃದ್ಧಿ ಕಾರ್ಯ’

● ನೀವು ಏನು ಕೆಲಸ ಮಾಡುತ್ತೀರಿ ಎನ್ನುವ ಕಾರಣಕ್ಕೆ ಜನರು ನಿಮಗೆ ಮತ ನೀಡಬೇಕು?

ನಾನು ಶಾಸಕನಾಗುವ ಮುನ್ನ ಕ್ಷೇತ್ರದಲ್ಲಿ ದೌರ್ಜನ್ಯ, ದಬ್ಬಾಳಿಕೆ, ರೌಡಿಸಂ ಅವ್ಯಾಹತವಾಗಿ ನಡೆದಿತ್ತು. ಭಯದ ವಾತಾವರಣ ಕ್ಷೇತ್ರದಲ್ಲಿ ಸೃಷ್ಟಿಯಾಗಿತ್ತು. ಶಾಸಕನಾಗಿ ಆಯ್ಕೆಯಾದ ನಂತರ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಮೊದಲ ಆದ್ಯತೆ ನೀಡಿದೆ. ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳಲ್ಲಿ ಐದು ನನ್ನ ಕ್ಷೇತ್ರದಲ್ಲಿವೆ. ಇಲ್ಲಿ ಯಾವುದೇ ಕಾಮಗಾರಿಗಳು ನಡೆದಿರಲಿಲ್ಲ. ಬೀದಿ ದೀಪಗಳು ಸಹ ಇರಲಿಲ್ಲ. ಒಳಚರಂಡಿ ಸೇರಿದಂತೆ ಹಲವು ಮೂಲಸೌಕರ್ಯಗಳನ್ನು ಕಲ್ಪಿಸಿದ್ದೇನೆ. ಎಚ್‌.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ಕ್ಷೇತ್ರಕ್ಕೆ ಅನುದಾನ ನೀಡಿದ್ದರು. ನಂತರದ ಬಿಜೆಪಿ ಸರ್ಕಾರ ಅನುದಾನ ವಾಪಸ್ ಪಡೆದಿತ್ತು. ಅನುದಾನಕ್ಕಾಗಿ ಹೋರಾಟ ಮಾಡಬೇಕಾಯಿತು. ನ್ಯಾಯಾಲಯದ ಮೊರೆ ಹೋಗಬೇಕಾಯಿತು. ವಿಧಾನಸಭೆ ಅಧಿವೇಶನದಲ್ಲೂ ಈ ವಿಷಯ ಪ್ರಸ್ತಾಪಿಸಿದ್ದೆ. ಕೋವಿಡ್ ಸಂದರ್ಭದಲ್ಲಿ ಜನರ ಕಷ್ಟಗಳಿಗೆ ಸ್ಪಂದಿಸಿದ್ದೇನೆ. ನನ್ನ ಅವಧಿಯಲ್ಲಿ ಹಲವು ಸವಾಲುಗಳ ಮಧ್ಯೆಯೇ ಜನರ ಸಮಸ್ಯೆಗಳನ್ನು ಬಗೆಹರಿಸಿ, ಸೌಲಭ್ಯಗಳನ್ನು ಕಲ್ಪಿಸಿದ್ದೇನೆ.

● ಕ್ಷೇತ್ರದಲ್ಲಿ ಗೆಲುವಿನ ವಿಶ್ವಾಸ ಮೂಡಿಸುವ ಜನಬೆಂಬಲ ನಿಮಗೆ ಇದೆಯೇ?

ಚುನಾವಣೆಗಾಗಿಯೇ ನಾನು ಈಗ ಪ್ರಚಾರ ಕಾರ್ಯ ಕೈಗೊಂಡಿಲ್ಲ. ಶಾಸಕನಾಗಿ ಆಯ್ಕೆಯಾದ ದಿನದಿಂದ ಜನರ ನಡುವೆ ಇದ್ದೇನೆ. ಪ್ರತಿಯೊಂದು ಸಮಸ್ಯೆಗೆ ಸ್ಪಂದಿಸಿ ಜನರ ಪ್ರೀತಿ, ವಿಶ್ವಾಸ ಗಳಿಸಿದ್ದೇನೆ. ಮತ್ತೊಮ್ಮೆ ಆಯ್ಕೆಯಾಗಬೇಕು ಎಂದು ಜನರು ಬಯಸಿದ್ದಾರೆ. ಜನ ಬೆಂಬಲ ಉತ್ತಮವಾಗಿದೆ.

● ನಿಮಗೆ ಎದುರಾಳಿ ಯಾರು?

ನಾನು ಎದುರಾಳಿಗಳನ್ನು ನೋಡಿಯೇ ಇಲ್ಲ. ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳೇ ನನಗೆ ಶ್ರೀರಕ್ಷೆ.

ಜಿ. ಧನಂಜಯ (ಕಾಂಗ್ರೆಸ್)

‘ಜನ ಹೊಸತನ ಬಯಸುತ್ತಿದ್ದಾರೆ’

● ನೀವು ಏನು ಕೆಲಸ ಮಾಡುತ್ತೀರಿ ಎನ್ನುವ ಕಾರಣಕ್ಕೆ ಜನರು ನಿಮಗೆ ಮತ ನೀಡಬೇಕು?

ಈ ಹಿಂದಿನ ಮಾಜಿ ಮತ್ತು ಹಾಲಿ ಶಾಸಕರ ವೈಫಲ್ಯಗಳನ್ನು ಜನರ ಮುಂದೆ ಇರಿಸಿದ್ದೇನೆ. ಕಳೆದ 15 ವರ್ಷಗಳಲ್ಲಿ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗಿದೆ. ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಅಭಿವೃದ್ಧಿಯನ್ನು ಕಡೆಗಣಿಸಿದ್ದಾರೆ. ಜನ ಇವರಿಂದ ಬೇಸತ್ತಿದ್ದಾರೆ. ದಾಸರಹಳ್ಳಿ ಕಸದ ಹಳ್ಳಿಯಾಗಿದೆ. ಹಾಲಿ ಶಾಸಕರು ಕ್ಷೇತ್ರಕ್ಕೆ ಅನುದಾನ ತರಲು ವಿಫಲರಾಗಿದ್ದಾರೆ. ನ್ಯಾಯಾಲಯಕ್ಕೆ ಹೋಗಿ ಅನುದಾನ ತರುವುದಾದರೆ ಶಾಸಕರು ಏಕೆ ಬೇಕು? ಹೀಗಾಗಿ, ಮತದಾರರಿಗೆ ಹೊಸ ಮುಖ ಬೇಕಾಗಿದ್ದು, ಹೊಸತನಕ್ಕೆ ಕಾದಿದ್ದಾರೆ. ಅಭಿವೃದ್ಧಿ ಬಗ್ಗೆ ಮುನ್ನೋಟ ಹೊಂದಿರುವವರನ್ನು ಜನ ಆಯ್ಕೆ ಮಾಡುವ ವಿಶ್ವಾಸವಿದೆ. ದಾಸರಹಳ್ಳಿ ಕ್ಷೇತ್ರವನ್ನು ಗುಂಡಿ ಮುಕ್ತ, ಕಸ ಮುಕ್ತವನ್ನಾಗಿ ಮಾಡುವ ಉದ್ದೇಶ ಹೊಂದಿದ್ದೇನೆ. ಜನರಿಗೆ ಅಗತ್ಯವಿರುವ ಉತ್ತಮ ರಸ್ತೆ ಸೇರಿದಂತೆ ಗುಣಮಟ್ಟದ ಮೂಲಸೌಕರ್ಯಗಳನ್ನು ಕಲ್ಪಿಸಲು ಆದ್ಯತೆ ನೀಡಲಾಗುವುದು.

● ಕ್ಷೇತ್ರದಲ್ಲಿ ಗೆಲುವಿನ ವಿಶ್ವಾಸ ಮೂಡಿಸುವ ಜನಬೆಂಬಲ ನಿಮಗೆ ಇದೆಯೇ?

ಈ ಬಾರಿ ಮತದಾರರು ಬದಲಾವಣೆ ಬಯಸಿದ್ದಾರೆ. ರಾಜ್ಯದಾದ್ಯಂತ ಮತ್ತು ದಾಸರಹಳ್ಳಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಲೆ ಇದೆ.

● ನಿಮ್ಮ ಎದುರಾಳಿ ಯಾರು?

ಬಿಜೆಪಿಯೇ ನಮ್ಮ ಎದುರಾಳಿ. ಕಳೆದ ಬಾರಿ ಸ್ವಂತ ಬಲದಿಂದ ಜೆಡಿಎಸ್ ಗೆದ್ದಿರಲಿಲ್ಲ. ಕಾಂಗ್ರೆಸ್ ಮತಗಳನ್ನು ಪಡೆದಿದ್ದರಿಂದ ಜೆಡಿಎಸ್ ಗೆದ್ದಿತ್ತು. ಕಾಂಗ್ರೆಸ್ ಅಭ್ಯರ್ಥಿ ಎದುರಾಳಿಗಳನ್ನು ಸಮರ್ಥವಾಗಿ ಎದುರಿಸಿರಲಿಲ್ಲ. ಈ ಬಾರಿ ಪರಿಸ್ಥಿತಿ ಬದಲಾಗಿದೆ. ದಾಸರಹಳ್ಳಿಯಲ್ಲೂ ಕಾಂಗ್ರೆಸ್ ಪರ ಸುನಾಮಿ ಅಲೆಯೇ ಇದೆ.



ಎಸ್. ಮುನಿರಾಜು (ಬಿಜೆಪಿ)

‘ಜೆಡಿಎಸ್ ಶಾಸಕರ ಲೂಟಿಗೆ ಅಡ್ಡಿಯಾಗಿದ್ದೇವೆ’

● ನೀವು ಏನು ಕೆಲಸ ಮಾಡುತ್ತೀರಿ ಎನ್ನುವ ಕಾರಣಕ್ಕೆ ಜನರು ನಿಮಗೆ ಮತ ನೀಡಬೇಕು?

ಈ ಹಿಂದೆ ಶಾಸಕನಾಗಿದ್ದ ಹತ್ತು ವರ್ಷಗಳ ಅವಧಿಯಲ್ಲಿ ಕೈಗೊಂಡಿದ್ದ ಶಾಶ್ವತ ಅಭಿವೃದ್ಧಿ ಕಾರ್ಯಗಳು ನನಗೆ ಶ್ರೀರಕ್ಷೆಯಾಗಿವೆ. ಮೊದಲ ಬಾರಿ ಶಾಸಕನಾಗಿದ್ದ ಸಂದರ್ಭದಲ್ಲಿ ಈ ಕ್ಷೇತ್ರದಲ್ಲಿ ಸಮರ್ಪಕ ರಸ್ತೆ, ಒಳಚರಂಡಿ, ಬೀದಿ ದೀಪದ ವ್ಯವಸ್ಥೆಯೇ ಇರಲಿಲ್ಲ. ಶಾಸಕನಾಗಿ ಆಯ್ಕೆಯಾದ ನಂತರ, 40 ಉದ್ಯಾನಗಳನ್ನು ಅಭಿವೃದ್ಧಿಪಡಿಸಿದ್ದೇನೆ. ಮೂರು ಕೆರೆಗಳನ್ನು ಅಭಿವೃದ್ಧಿಪಡಿಸಿದ್ದೆ. 70 ಹೈಮಾಸ್ಟ್ ಬೀದಿ ದೀಪಗಳನ್ನು ಅಳವಡಿಸಲಾಯಿತು. ಮಡಿವಾಳ ಜನಾಂಗಕ್ಕೆ ದೋಭಿಘಾಟ್ ಅಭಿವೃದ್ಧಿಪಡಿಸಲಾಗಿತ್ತು. ಸರ್ಕಾರಿ ಜಮೀನು ರಕ್ಷಿಸಿ 28 ಎಕರೆಯಲ್ಲಿ ಉದ್ಯಾನ ಅಭಿವೃದ್ಧಿಪಡಿಸಲಾಗಿತ್ತು. ಈ ರೀತಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದೆ. ಆದರೆ, ಕಳೆದ ಐದು ವರ್ಷಗಳಲ್ಲಿ ಜೆಡಿಎಸ್ ಶಾಸಕರು ಅಭಿವೃದ್ಧಿಯನ್ನು ನಿರ್ಲಕ್ಷಿಸಿ, ರಾಜ್ಯ ಸರ್ಕಾರ ಅನುದಾನ ನೀಡಲಿಲ್ಲ ಎಂದು ಗೋಗರೆಯುತ್ತಿದ್ದಾರೆ. ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಪಡೆದ ಮಾಹಿತಿ ಅನ್ವಯ ಕ್ಷೇತ್ರಕ್ಕೆ ₹1,123 ಕೋಟಿ ಅನುದಾನ ನೀಡಲಾಗಿದೆ. ಈ ಅನುದಾನ ಎಲ್ಲಿ ಹೋಗಿದೆ ಎಂದು ಹಾಲಿ ಶಾಸಕರು ಹೇಳುತ್ತಿಲ್ಲ. ಇವರ ಅಭಿವೃದ್ಧಿ ಕಾರ್ಯಗಳಿಗೆ ನಾವು ಅಡ್ಡಿಯಾಗಿಲ್ಲ, ಇವರ ಲೂಟಿ ಕಾರ್ಯಕ್ಕೆ ಮಾತ್ರ ಅಡ್ಡಿಪಡಿಸಿದ್ದೇವೆ. ಎಸ್‌ಎಫ್‌ಸಿ ಅನುದಾನವನ್ನು ಕಾಮಗಾರಿಗೆ ಬಳಸದೆ ಹಣ ಪಡೆಯಲಾಗಿದೆ. ಈ ಬಗ್ಗೆ ತನಿಖೆ ನಡೆಸಿದ್ದ ತಾಂತ್ರಿಕ ಮತ್ತು ಜಾಗೃತ ಕೋಶವು(ಟಿವಿಸಿಸಿ), ₹2.82 ಕೋಟಿ ಮೊತ್ತದಷ್ಟು ಕೆಲಸ ಮಾಡದೆ ಹಣ ಪಡೆಯಲಾಗಿದೆ ಎಂದು ವರದಿ ನೀಡಿದೆ.

● ಕ್ಷೇತ್ರದಲ್ಲಿ ಗೆಲುವಿನ ವಿಶ್ವಾಸ ಮೂಡಿಸುವ ಜನಬೆಂಬಲ ನಿಮಗೆ ಇದೆಯೇ?

ಅಭೂತಪೂರ್ವ ಬೆಂಬಲ ದೊರೆಯುತ್ತಿದೆ. ಅಭಿವೃದ್ಧಿಗಾಗಿ ಜನ ಬೆಂಬಲಿಸುತ್ತಿದ್ದಾರೆ.

● ನಿಮ್ಮ ಎದುರಾಳಿ ಯಾರು?

ಕಾಂಗ್ರೆಸ್ ಪ್ರಮುಖ ಎದುರಾಳಿ. ಮೊದಲಿನಿಂದಲೂ ಕಾಂಗ್ರೆಸ್ ಪಕ್ಷವೇ ನಮಗೆ ಎದುರಾಳಿಯಾಗಿತ್ತು. 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಒಳಒಪ್ಪಂದ ಮಾಡಿಕೊಂಡಿದ್ದವು. ಇದರಿಂದಾಗಿ ಜೆಡಿಎಸ್ ಗೆಲುವು ಸಾಧಿಸಿತ್ತು. ಈ ಬಾರಿ ಜೆಡಿಎಸ್ ಮೂರನೇ ಸ್ಥಾನ ಪಡೆಯಲಿದೆ.



ದಾಸರಹಳ್ಳಿಯ ಕ್ಷೇತ್ರದ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಕೀರ್ತನ್ ಕುಮಾರ್ ಪರವಾಗಿ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ರೋಡ್ ಶೋ ನಡೆಸಿದರು (ಎಡಚಿತ್ರ) ಶಾಂತಿನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎನ್‌.ಎ. ಹ್ಯಾರಿಸ್ ಅವರು ಗೌತಮ ನಗರದಲ್ಲಿ ನೂರಾರು ಬೆಂಬಲಿಗರೊಂದಿಗೆ ಮತಯಾಚನೆ ಮಾಡಿದರು

–ಪ್ರಜಾವಾಣಿ ಚಿತ್ರಗಳು

ಬಿಸಿಲು–ಮಳೆ ನಡುವೆ ಪ್ರಚಾರ ಬಿರುಸು

ರಾಜರಾಜೇಶ್ವರಿನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮುನಿರತ್ನ ಅವರ ಪರವಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಸೋಮವಾರ ಸುಂಕದಕಟ್ಟೆಯ ಶ್ರೀನಿವಾಸನಗರ ಮುಖ್ಯ ರಸ್ತೆಯಲ್ಲಿ ರೋಡ್ ಶೋ ನಡೆಸಿದರು. ಮುನಿರತ್ನ ಇದ್ದರು – ಪ್ರಜಾವಾಣಿ ಚಿತ್ರ/ ರಂಜು ಪಿ

ವಿಜಯನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಚ್‌. ರವೀಂದ್ರ ಪರ ಸಚಿವ ಡಾ. ಸಿ.ಎನ್‌. ಅಶ್ವತ್ಥನಾರಾಯಣ ಅವರು ಸೋಮವಾರ ಪ್ರಚಾರ ನಡೆಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಸಿಲು ಮತ್ತು ಮಳೆ ನಡುವೆಯೂ ಸೋಮವಾರ ಚುನಾವಣಾ ಪ್ರಚಾರ ಬಿರುಸಿನಿಂದ ನಡೆಯಿತು. ಮಧ್ಯಾಹ್ನದ ನಂತರ ನಗರದ ಬಹುತೇಕ ಭಾಗದಲ್ಲಿ ಜೋರು ಮಳೆ ಸುರಿಯಿತು. ಇದರ ನಡುವೆಯೇ ಪ್ರಚಾರವನ್ನು ಅಭ್ಯರ್ಥಿಗಳು ಮಾಡಿದರು.

ಕಾರ್ಮಿಕರ ದಿನವಾಗಿದ್ದರಿಂದ ಸರ್ಕಾರಿ ರಜೆ ಇತ್ತು. ಸರ್ಕಾರಿ ನೌಕರರು ಮತ್ತು ಕಾರ್ಮಿಕ ಸಮುದಾಯ ಮನೆಯಲ್ಲೇ ಇರುವುದರಿಂದ ಅವರನ್ನು ಸಂಪರ್ಕಿಸುವುದು ಸುಲಭ ಎಂಬ ಕಾರಣಕ್ಕೆ ಎಲ್ಲಾ ಪಕ್ಷದ ಅಭ್ಯರ್ಥಿಗಳು ಮತದಾರ ಮನೆ ಬಾಗಿಲಿಗೆ ತೆರಳಿದ್ದರು.

ಬಿಜೆಪಿ ಅಭ್ಯರ್ಥಿ ಮುನಿರತ್ನ ಪರವಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ರೋಡ್ ಶೋ ನಡೆಸಿದರು. ಮತದಾನಕ್ಕೆ ಒಂಬತ್ತು ದಿನಗಳು ಮಾತ್ರ ಬಾಕಿ ಇದ್ದು, ಮತದಾರರನ್ನು ಸೆಳೆಯುವ ಅಂತಿಮ ಹಂತದ ಕಸರತ್ತುಗಳನ್ನು ಎಲ್ಲಾ ಪಕ್ಷಗಳ ಮುಖಂಡರು ಮತ್ತು ಅಭ್ಯರ್ಥಿಗಳು ನಡೆಸುತ್ತಿದ್ದಾರೆ.

ಕೆಂಗೇರಿಯಲ್ಲಿ ಬಿಜೆಪಿ ಅಭ್ಯರ್ಥಿ ಎಸ್‌.ಟಿ.ಸೋಮಶೇಖರ್ ಪರ ಪ್ರಚಾರ ನಡೆಸಿದ ಜೆ.ಪಿ. ನಡ್ಡಾ ಅವರು, ‘ರಾಜಕೀಯ ಲಾಭಕ್ಕಾಗಿ ಸಿದ್ಧಾಂತವನ್ನು ಅಡವಿಡುವ ಜೆಡಿಎಸ್ ನಾಯಕರಿಂದ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ಮೋದಿ ನೇತೃತ್ವದ ಸಶಕ್ತ ಹಾಗೂ ಡಬಲ್ ಇಂಜಿನ್ ಸರ್ಕಾರಕ್ಕೆ ಬೆಂಬಲ ನೀಡುವ ಮೂಲಕ ರಾಜ್ಯದ ಅಭಿವೃದ್ಧಿಗೆ ಬಿಜೆಪಿ ಬೆಂಬಲಿಸಬೇಕು. ಎಂದು ಹೇಳಿದರು.

‘2014ರ ನಂತರ ದೇಶವು ಹಲವು ಕ್ಷೇತ್ರದಲ್ಲಿ ಪಾರಮ್ಯ ಸಾಧಿಸಿದೆ. ಆಟೋಮೊಬೈಲ್, ಸಾಫ್ಟ್‌ವೇರ್ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸ್ವಾವಲಂಬನೆ ಸಾಧಿಸಿದೆ. ಮತ್ತೆ ವಿರೋಧ ಪಕ್ಷಗಳಿಗೆ ಅಧಿಕಾರ ವರ್ಗಾವಣೆ ಆದರೆ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಹಿನ್ನಡೆಯಾಗುವುದು ನಿಶ್ಚಿತ’ ಎಂದರು.

ಸಿದ್ದರಾಮಯ್ಯ ಅಭಿವೃದ್ಧಿ ವಿರೋಧಿ; ನಡ್ಡಾ ಆರೋಪ

ಬೆಂಗಳೂರು: ‘ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕರ್ನಾಟಕದ ಅಭಿವೃದ್ಧಿಗೆ ತಡೆಗೋಡೆಯಾಗಿತ್ತು. ಕೇಂದ್ರದ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ಮಾಡಲು ಬಿಡಲಿಲ್ಲ. ಅದು ರಿವರ್ಸ್‌ಗೇರ್‌ನಲ್ಲಿದ್ದ ಮತ್ತು ಅಭಿವೃದ್ಧಿ ವಿರೋಧಿ ಸರ್ಕಾರ’ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ವಾಗ್ದಾಳಿ ನಡೆಸಿದರು.

ನಗರದ ಶಾಂಗ್ರಿಲಾ ಹೊಟೇಲ್‌ನಲ್ಲಿ ‘ಬಿಜೆಪಿ ಪ್ರಜಾ ಪ್ರಣಾಳಿಕೆ 2023’ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ರಾಜ್ಯದ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡಿತು. ಅಭಿವೃದ್ಧಿ ಕಾರ್ಯಗಳು ನಿಂತು ಹೋಗಿ ಕರ್ನಾಟಕದ ಪ್ರಗತಿ ಪಥದಿಂದ ಹಿಮ್ಮುಖವಾಗಿ ಚಲಿಸಲಾರಂಭಿಸಿತು ಎಂದರು. ‘ಮತ ಬ್ಯಾಂಕ್ ರಾಜಕಾರಣ ಮತ್ತು ತುಷ್ಟೀಕರಣವೇ ಸಿದ್ದರಾಮಯ್ಯ ಅವರ ಆದ್ಯತೆಯಾಗಿತ್ತು. 2014 ರಿಂದ 2018 ರವರೆಗೆ ಕೇಂದ್ರ ಸರ್ಕಾರದ ಯಾವುದೇ ಯೋಜನೆಗಳನ್ನೂ ಸರಿಯಾಗಿ ಅನುಷ್ಠಾನ ಮಾಡಲಿಲ್ಲ. ಇದರಿಂದಾಗಿ ರಾಜ್ಯದ ಬಡ ಜನತೆಗೆ ಕೇಂದ್ರದಿಂದ ಸಿಗಬೇಕಾದ ಕಾರ್ಯಕ್ರಮಗಳು ಸಿಗಲಿಲ್ಲ. ಯಶಸ್ವಿನಿ ಯೋಜನೆಯನ್ನು ರದ್ದು ಮಾಡಿದ್ದಲ್ಲದೇ, ಭಾಗಲಕ್ಷ್ಮಿ ಯೋಜನೆ ಹಿನ್ನಡೆಗೆ ಕಾಂಗ್ರೆಸ್ ಸರ್ಕಾರವೇ ಕಾರಣ’ ಎಂದು ದೂರಿದರು.

ರೋಡ್ ಶೋ: ಸಂಚಾರ ಬದಲಾವಣೆ

ಬೆಂಗಳೂರು: ಆಡುಗೋಡಿ ಸಿಗ್ನಲ್‌ನಿಂದ ಹೊಸೂರು ರಸ್ತೆಯ ಟೋಟಲ್ ಮಾಲ್‌ವರೆಗೆ ಮೇ 2ರಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ರೋಡ್ ಶೋ ನಡೆಸುತ್ತಿದ್ದು, ಮಧ್ಯಾಹ್ನ 3ರಿಂದ ಸಂಜೆ 7ರ ತನಕ ಹಲವು ರಸ್ತೆಗಳಲ್ಲಿ ಸಂಚಾರ ವ್ಯತ್ಯಯ ಉಂಟಾಗಲಿದೆ. ವಾಹನ ಸವಾರರು ಪರ್ಯಾಯ ಮಾರ್ಗ ಬಳಸಲು ಪೊಲೀಸರು ಮನವಿ ಮಾಡಿದ್ದಾರೆ.

ಹಳೆ ವಿಮಾನ ನಿಲ್ದಾಣ ರಸ್ತೆ, ಕೇಂಬ್ರಿಡ್ಜ್ ಲೇಔಟ್ ರಸ್ತೆ, ಡಿಕೆನ್‌ಸನ್ ರಸ್ತೆ, ಕಬ್ಬನ್ ರಸ್ತೆ, ಎಸಿಎಸ್ ಸೆಂಟರ್, ಡಿಸೋಜಾ ವೃತ್ತ, ವೆಲ್ಲಾರ ಜಂಕ್ಷನ್, ಹೊಸೂರು ಲಷ್ಕರ್ ರಸ್ತೆ, ಆನೇಪಾಳ್ಯ, ಆಡುಗೋಡಿ ಮುಖ್ಯರಸ್ತೆಯಿಂದ ಸಿಲ್ಕ್ ಬೋರ್ಡ್ ಜಂಕ್ಷನ್, ಡಾ.ಮರೀಗೌಡ ರಸ್ತೆ, ಹೊಸೂರು ಲಷ್ಕರ್ ರಸ್ತೆ, ಮಡಿವಾಳ ಮುಖ್ಯರಸ್ತೆ, ಸರ್ಜಾಪುರ ಜಂಕ್ಷನ್, ಸಿಲ್ಕ್ ಬೋರ್ಡ್ ಜಂಕ್ಷನ್, ಹೊರವರ್ತುಲ ರಸ್ತೆ, ತಾವರೆಕೆರೆ ಜಂಕ್ಷನ್ ಸಂಚಾರ ವ್ಯತ್ಯಯವಾಗಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸುಳ್ಳು ಹೇಳುವ ಪ್ರಧಾನಿ: ರಾಮಲಿಂಗಾರೆಡ್ಡಿ ಟೀಕೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ’ದೇಶದಲ್ಲಿಯೇ ರಾಜ್ಯದ ಬಿಜೆಪಿ ಸರ್ಕಾರ ಅತಿ ಭ್ರಷ್ಟ ಮತ್ತು ಲೂಟಿಕೋರ ಸರ್ಕಾರ. ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತೇನೆ ಎಂದು ಸುಳ್ಳು ಹೇಳಿ ಜನರನ್ನು ಮರಳು ಮಾಡುತ್ತಿದ್ದಾರೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ಉತ್ತರಹಳ್ಳಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆರ್‌.ಕೆ. ರಮೇಶ್ ಪರ ಮತಯಾಚಿಸಿದ ಅವರು, ‘ಲೂಟಿ ಮಾಡಿದ ಹಣವನ್ನು ಎಣಿಸಲು ಯಂತ್ರವನ್ನು ಇರಿಸಿಕೊಂಡಿದ್ದ ಕೆ.ಎಸ್‌.ಈಶ್ವರಪ್ಪ ಅವರನ್ನು ಪಕ್ಕದಲ್ಲಿ ನಿಲ್ಲಿಸಿಕೊಂಡು, ಪ್ರಚಾರ ಮಾಡುವ ನರೇಂದ್ರಮೋದಿ ಇನ್ನೂ ಎಷ್ಟು ಸುಳ್ಳನ್ನು ಹೇಳಿ ಜನರನ್ನು ವಂಚಿಸುತ್ತಾರೆ. ಕಪ್ಪುಹಣವನ್ನು ತಂದು ಬಡವರಿಗೆ ನೀಡಿದ್ದರೆ ಮನೆ ನಿರ್ಮಿಸಿಕೊಂಡು ನೆಮ್ಮದಿಯ ಜೀವನ ನಡೆಸುತ್ತಿದ್ದರು’ ಎಂದರು.

ಸಂಸದ ಡಿ.ಕೆ. ಸುರೇಶ್ ಮಾತನಾಡಿ, ‘ಅಭಿವೃದ್ಧಿಗಾಗಿ ಮತ್ತು ಕ್ಷೇತ್ರದ ಜನರ ನೆಮ್ಮದಿಗಾಗಿ ಕಾಂಗ್ರೆಸ್ ಅಭ್ಯರ್ಥಿ ಆರ್‌.ಕೆ.ರಮೇಶ್ ಅವರನ್ನು ಗೆಲ್ಲಿಸಿ’ ಎಂದರು. ಉತ್ತರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಕುಮಾರ್, ‘ಬಿಜೆಪಿ ಶಾಸಕರು ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ. ತಮಗೆ ಬೇಕಾಗಿರುವ ಬಿಲ್ಡರ್‌ಗಳ ಬಡಾವಣೆಗಳಿಗೆ ಮೂಲ ಸೌಕರ್ಯ ನೀಡಿದ್ದಾರೆ’ ಎಂದರು.

ಅಭ್ಯರ್ಥಿ ಆರ್‌.ಕೆ.ರಮೇಶ್ ಮತನಾಡಿ, ಕ್ಷೇತ್ರದ ಅಭಿವೃದ್ಧಿ, ಮೂಲಸೌಲಭ್ಯ, ಖಾಸಗಿ ಮಾದರಿಯಲ್ಲಿ ಸರ್ಕಾರಿ ಶಾಲಾ-ಕಾಲೇಜು ನಿರ್ಮಾಣ, ಶಿಕ್ಷಣ, ಆಸ್ಪತ್ರೆ, ವಸತಿ ಇಲ್ಲದವರಿಗೆ ನಿವೇಶನ, ಕಾವೇರಿ ನೀರನ್ನು ದೊರಕಿಸಿಕೊಡಲು ಬೆಂಬಲಿಸಿ ಎಂದರು.

ಉತ್ತರಹಳ್ಳಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆರ್‌.ಕೆ.ರಮೇಶ್ ಪರವಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಮತಯಾಚನೆ ಮಾಡಿ ಮಾತನಾಡಿದರು. ಉತ್ತರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುಮಾರ್, ಸಂಸದ ಡಿ.ಕೆ.ಸುರೇಶ್, ಕಾಂಗ್ರೆಸ್ ಅಭ್ಯರ್ಥಿ ಆರ್‌.ಕೆ.ರಮೇಶ್ ಇದ್ದಾರೆ.

ಪರಮೇಶ್ವರ ಮತ್ತೆ ಪ್ರಚಾರ ಆರಂಭ

ಕೊರಟಗೆರೆ: ಪ್ರಚಾರದ ವೇಳೆ ತಲೆಗೆ ಕಲ್ಲೇಟು ಬಿದ್ದು ಗಾಯಗೊಂಡಿದ್ದ ಶಾಸಕ ಡಾ.ಜಿ.ಪರಮೇಶ್ವರ ಚಿಕಿತ್ಸೆ ಬಳಿಕ ಭಾನುವಾರದಿಂದ ಘಟನೆ ನಡೆದ ಬೈರೇನಹಳ್ಳಿಯಿಂದಲೇ ಮತ್ತೆ ಪ್ರಚಾರ ಆರಂಭಿಸಿದರು.

‘ನನಗೆ ಡ್ರಾಮಾ ಮಾಡಿ ಅಭ್ಯಾಸ ಇಲ್ಲ. ಅದರ ಅವಶ್ಯ ನನಗೆ ಇಲ್ಲ. 35 ವರ್ಷದ ರಾಜಕೀಯ ಜೀವನದಲ್ಲಿ ಕಪ್ಪುಚುಕ್ಕೆಯಿಲ್ಲದೆ ಕೆಲಸ ಮಾಡಿದ್ದೇನೆ. ನಾನು ತೆರೆದ ಪುಸ್ತಕ. ಬೇಕಾದರೆ ಓದಿಕೊಳ್ಳಿ’ ಎಂದು ವಿರೋಧಿಗಳ ಹೇಳಿಕೆಗೆ ಪರಮೇಶ್ವರ್ ತಿರುಗೇಟು ನೀಡಿದರು. ‘ಕಲ್ಲೆಸತ ಘಟನೆ ಬಗ್ಗೆ ಬೇಸರ ಇದೆ. ಜನರ ಆಶೀರ್ವಾದ ಇರುವ ತನಕ ಯಾವುದಕ್ಕೂ ಅಂಜುವುದಿಲ್ಲ. ಕ್ಷೇತ್ರದ ಜನರಲ್ಲಿ ನಂಬಿಕೆ ಇದೆ. ಯಾರೂ ಸಹ ಆತಂಕಕ್ಕೆ ಒಳಗಾಗಬಾರದು. ಇದು ಚುನಾವಣಾ ಸಮಯ. ಶಾಂತಿಯಿಂದ ವರ್ತಿಸಿ. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡಬೇಡಿ’ ಎಂದರು.

ನನ್ನ ಸೋಲಿಸಲು ಇದು ಗುಜರಾತ್ ಅಲ್ಲ: ಶೆಟ್ಟರ್

ಕೊಪ್ಪಳ: ‘ನನ್ನನ್ನು ಸೋಲಿಸುವುದಾಗಿ ಅಮಿತ್ ಶಾ ಸೇರಿ ಅನೇಕ ನಾಯಕರು ಹೇಳಿದ್ದಾರೆ. ಆದರೆ, ಇದು ಗುಜರಾತ್ ಅಲ್ಲ. ಇಲ್ಲಿಯ ರಾಜಕಾರಣ ಮತ್ತು ಜನರ ಪ್ರೀತಿ ಎಂಥದ್ದು ಎಂಬುದು ನನಗೆ ಗೊತ್ತು. ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲುವೆ’ ಎಂದು ಕಾಂಗ್ರೆಸ್ ನಾಯಕ ಜಗದೀಶ ಶೆಟ್ಟರ್ ತಿಳಿಸಿದರು.

ಕೊಪ್ಪಳ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಘವೇಂದ್ರ ಹಿಟ್ನಾಳ ಪರ ಪ್ರಚಾರಕ್ಕೆ ಬಂದಿದ್ದ ಅವರು ಸುದ್ದಿಗಾರರ ಜೊತೆ ಮಾತನಾಡಿ ‘ಮತದಾರರ ಹೃದಯದಲ್ಲಿ ಭದ್ರವಾಗಿದ್ದೇನೆ. ಹಿಂದಿನ ಯಾವ ಚುನಾವಣೆಗಳಲ್ಲೂ ಸೋತಿಲ್ಲ’ ಎಂದರು.

ಬಿಜೆಪಿ ಪ್ರಣಾಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಕಾಂಗ್ರೆಸ್ ಈಗಾಗಲೇ ಘೋಷಿಸಿರುವ ಗ್ಯಾರಂಟಿಗಳ ಎದುರು ಬಿಜೆಪಿಯದ್ದು ಏನೂ ವಿಶೇಷವಿಲ್ಲ. ಜನರಿಗೆ ಅನುಕೂಲವಾಗುವ ಹೆಚ್ಚು ಸೌಲಭ್ಯಗಳನ್ನು ಕಾಂಗ್ರೆಸ್ ಈಗಾಗಲೇ ಘೋಷಿಸಿದೆ’ ಎಂದರು.

ಕಾದು ನೋಡಿ (ಹುಬ್ಬಳ್ಳಿ ವರದಿ): ‘ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಯಾವತ್ತೂ ಕ್ಷೇತ್ರದಲ್ಲಿ ಇಷ್ಟರ ಮಟ್ಟಿಗೆ ಪ್ರಚಾರ ಮಾಡಿರಲಿಲ್ಲ. ಅವರ ಮೇಲೆ ಕೇಂದ್ರದ ಒತ್ತಡವಿದೆ. 2024 ಲೋಕಸಭಾ ಚುನಾವಣೆ ಬರಲಿದೆ, ಆಗ ಏನಾಗಲಿದೆ ಎಂದು ಕಾದು ನೋಡಿ’ ಎಂದು ಹೇಳಿದರು.

ಅಂಚೆ ಮತ: ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಚೆ ಮತದಾನಕ್ಕೆ ಅವಕಾಶ ಕೋರಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ನೌಕರರು ಹಾಗೂ ಮಾಧ್ಯಮ ಪ್ರತಿನಿಧಿಗಳು ಸಲ್ಲಿಸಿದ್ದ ಹಲವು ಅರ್ಜಿಗಳು ತಿರಸ್ಕೃತಗೊಂಡಿವೆ.

ಗೈರು ಹಾಜರಿ ಮತದಾನ ವ್ಯವಸ್ಥೆ ಅಡಿಯಲ್ಲಿ ಅಂಚೆ ಮತದಾನಕ್ಕೆ ಅವಕಾಶ ಕೋರಿ ಅರ್ಜಿ ಸಲ್ಲಿಸಲು ಏಪ್ರಿಲ್ 17 ಕೊನೆಯ ದಿನವಾಗಿತ್ತು. ಹಲವು ಮಂದಿ ಸಲ್ಲಿಸಿದ್ದ ಅರ್ಜಿಗಳನ್ನು ‘ಎಲೆಕ್ಟಾನ್’ ಆ್ಯಪ್‌ನಲ್ಲಿ ಸಕಾಲಕ್ಕೆ ನೋಂದಾಯಿಸಲು ಸಾಧ್ಯವಾಗದ ಕಾರಣ ನೀಡಿ ತಿರಸ್ಕರಿಸಲಾಗಿದೆ.

ಅಗತ್ಯ ಸೇವೆಗಳ ವ್ಯಾಪ್ತಿಯಲ್ಲಿರುವ ವಿವಿಧ ಇಲಾಖೆಗಳ ನೌಕರರು, ಚುನಾವಣಾ ಕರ್ತವ್ಯಕ್ಕೆ ನಿಯೋಜಿತರಾದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಚುನಾವಣಾ ಭದ್ರತೆಗೆ ನಿಯೋಜಿತರಾದ ಅಧಿಕಾರಿಗಳು ಮತ್ತು ಸಿಬ್ಬಂದಿ, ಚುನಾವಣಾ ಪ್ರಕ್ರಿಯೆಯ ವರದಿ ಮಾಡಲಿರುವ ಮಾನ್ಯತೆ ಪಡೆದ ಪತ್ರಕರ್ತರಿಗೆ ಈ ಬಾರಿ ಅಂಚೆ ಮತದಾನಕ್ಕೆ ಅವಕಾಶ ನೀಡಲಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ, ‘ಅಂಚೆ ಮತದಾನಕ್ಕೆ ಅವಕಾಶ ಕೋರಿ ಏ.14ರವರೆಗೆ ಸಲ್ಲಿಕೆಯಾದ ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಲೋಪ ಆಗಿರುವ ಪ್ರಕರಣಗಳಿದ್ದರೆ ಅರ್ಜಿದಾರರು ಆಯಾ ಕ್ಷೇತ್ರಗಳ ಚುನಾವಣಾಧಿಕಾರಿಗಳನ್ನು ಸಂಪರ್ಕಿಸಬೇಕು. ನಿರ್ದಿಷ್ಟ ಪ್ರಕರಣಗಳು ಗಮನಕ್ಕೆ ಬಂದರೆ ಪರಿಶೀಲಿಸಲಾಗುವುದು’ ಎಂದರು.

‘ನಾಗೇಶ್ ನೀಚ ಶಿಕ್ಷಣ ಸಚಿವ’

ಪ್ರಜಾವಾಣಿ ವಾರ್ತೆ

ತಿಪಟೂರು: ರಾಜ್ಯದ ಸಾರ್ವಜನಿಕ ಶಿಕ್ಷಣ ಪಠ್ಯಪುಸ್ತಕದಲ್ಲಿ ಬಸವಣ್ಣ, ಕುವೆಂಪು, ಕೆಂಪೇಗೌಡ, ನಾರಾಯಣಗುರು, ಡಾ.ಬಿ.ಆರ್.ಅಂಬೇಡ್ಕರ್ ಅವರಂತಹ ಮಹನೀಯರ ಚರಿತ್ರೆ, ಇತಿಹಾಸ ತಿರುಚಿದ ನೀಚ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ತಿಪಟೂರಿನಲ್ಲಿ ಭಾನುವಾರ ರಾತ್ರಿ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮಾತನಾಡಿದರು. ‘ಎನ್‌ಎಸ್‌ಯುಐ ವಿದ್ಯಾರ್ಥಿಗಳು ಮನೆ ಬಳಿಗೆ ಬಂದು ಪ್ರತಿಭಟನೆ ಮಾಡಿದ್ದಕ್ಕೆ ಸುಳ್ಳು ದೂರು ದಾಖಲಿಸಿ ಜೈಲಿಗೆ ಕಳುಹಿಸಿದ್ದಾರೆ. ಎನ್‌ಎಸ್‌ಯುಐ ವಿದ್ಯಾರ್ಥಿಗಳು ಆರ್‌ಎಸ್‌ಎಸ್ ಚಡ್ಡಿ ಸುಟ್ಟಿದ್ದಾರೆ. ಆದರೆ, ಇವರ ಚಡ್ಡಿ ಏನಾದರೂ ಸುಟ್ಟರೇ ನನಗೆ ಗೊತ್ತಿಲ್ಲ’ ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿಯಿಂದ ಪ್ರದೇಶವಾರು ಪ್ರಣಾಳಿಕೆ • ಹಲವು ಭರವಸೆ

ಲಂಡನ್ ಮಾದರಿಯ ಸಾರಿಗೆ ಜಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮಹಾನಗರ, ಮಧ್ಯ ಕರ್ನಾಟಕ, ಕರಾವಳಿ ಕರ್ನಾಟಕ, ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ, ಮಲೆನಾಡು ಕರ್ನಾಟಕ ಮತ್ತು ಹಳೆ ಮೈಸೂರು ಪ್ರದೇಶಗಳಿಗೆ ಬಿಜೆಪಿ ಪ್ರತ್ಯೇಕ ಭರವಸೆಗಳನ್ನು ನೀಡಿದೆ.

ಮುಂದಿನ ಪೀಳಿಗೆಗಾಗಿ ಬೆಂಗಳೂರನ್ನು ಅಭಿವೃದ್ಧಿಪಡಿಸಿ, ಅದನ್ನು ‘ರಾಜ್ಯ ರಾಜಧಾನಿ ಪ್ರದೇಶ’ ಎಂದು ಗುರುತಿಸಲಾಗುತ್ತದೆ ಎಂದು ಬಿಜೆಪಿ ಪ್ರಣಾಳಿಕೆ ಭರವಸೆ ನೀಡಿದೆ.

- ವಿಶ್ವದರ್ಜೆಯ ಮಲ್ಟಿ–ಮೋಡಲ್ ಟ್ರಾನ್ಸ್‌ಪೋರ್ಟ್ ಹಬ್ ಕಾನ್‌ಕಾರ್ಡ್ ಬೆಂಗಳೂರು ಸ್ಥಾಪನೆ. ಇದು ಸಾರ್ವಜನಿಕ ಸಾರಿಗೆ ಸೇವೆಗಳಿಗೆ ಏಕೀಕೃತ ವ್ಯವಸ್ಥೆಯಾಗಲಿದೆ
- ಟ್ರಾನ್ಸ್‌ಪೋರ್ಟ್ ಫಾರ್ ಲಂಡನ್‌ನಿಂದ ಪ್ರೇರಿತವಾದ ಬೆಂಗಳೂರು ಏಕೀಕೃತ ಟ್ರಾನ್ಸಿಟ್ ನೆಟ್‌ವರ್ಕ್ ರಚಿಸಲಾಗುತ್ತದೆ. ಬೆಂಗಳೂರು ಏಕೀಕೃತ ಸಾರಿಗೆ ಜಾಲವು ‘ಮೈ ಬೆಂಗಳೂರು ಮೈ ರೂಟ್’ ಎಂಬ ಏಕೀಕೃತ ಟಿಕೆಟ್–ಬುಕ್ಕಿಂಗ್ ಅಪ್ಲಿಕೇಶನ್ ಆರಂಭಿಸಲಾಗುವುದು. ಇದು ವಿವಿಧ ಸಾರಿಗೆ ವ್ಯವಸ್ಥೆಯ ಏಕೀಕೃತ ಬುಕ್ಕಿಂಗ್ ಅಪ್ಲಿಕೇಶನ್‌ನಂತೆ ಕಾರ್ಯ ನಿರ್ವಹಿಸಲಿದೆ.
- ‘ಒನ್ ಸಿಟಿ ಒನ್ ಕಾರ್ಡ್’ ಎಂಬ ಏಕಬಳಕೆಯ ಸಂಚಾರ ಕಾರ್ಡ್ ಆರಂಭಿಸಲಾಗುವುದು. ಇದರಿಂದ ಬೆಂಗಳೂರಿನ ಎಲ್ಲ ರೀತಿಯ ಸಾರ್ವಜನಿಕರಿಗೆ ಸಾರಿಗೆ ಪ್ರಯಾಣ ಸುಗಮವಾಗಲಿದೆ.
- ಸಿಲ್ಕ್ ಬೋರ್ಡ್ ಜಂಕ್ಷನ್, ಹೆಬ್ಬಾಳ, ಗೊರಗುಂಟೆ ಪಾಳ್ಯ, ಮೇಖ್ರಿ ಸರ್ಕಲ್, ಸರ್ಜಾಪುರ ಇತರ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ನಿಭಾಯಿಸಲು ಕೃತಕ ಬುದ್ಧಿಮತ್ತೆ ಚಾಲಿತ ಪರಿಹಾರ ಸಂಯೋಜಿಸಿರುವ ಸಮಗ್ರ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗುವುದು
- ರಾಜಕಾಲುವೆಗಳ ಪುನಶ್ಚೇತನಕ್ಕಾಗಿ ‘ಮಿಷನ್ ರಾಜಕಾಲುವೆ’ ಆರಂಭಿಸಲಾಗುವುದು. ಕಟ್ಟಡಗಳ ಒಳಚರಂಡಿ, ಹಳೆಯ ಒಳಚರಂಡಿ ನೀರು ಸಂಪರ್ಕ, ಈಗ ಇರುವ ಒಳಚರಂಡಿಗಳಲ್ಲಿ ಹೂಳೆತ್ತುವುದು ಸೇರಿ ಸಮಗ್ರ ರಾಜಕಾಲುವೆ ವ್ಯವಸ್ಥೆಯ ಪುನರ್‌ರಚನೆ. ಮಳೆ ನೀರು ಹಾದು ಹೋಗುವ ಕಾಲುವೆಗಳನ್ನು ಜಲಮೂಲಗಳೊಂದಿಗೆ ಸಂಪರ್ಕಿಸುವ ವ್ಯವಸ್ಥೆ

ಮಧ್ಯ ಕರ್ನಾಟಕ

- ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ಏಮ್ಸ್ ಮಾದರಿಯಲ್ಲಿ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ(ಕಿಮ್ಸ್)ಸ್ಥಾಪನೆ
- ಕೆರೆಗಳಿಗೆ ಕಾಯಕಲ್ಪ ಮತ್ತು ಕೃತಕ ಕೆರೆಗಳನ್ನು ನಿರ್ಮಿಸಲು ಪೈಪ್‌ಲೈನ್ ಸೇರಿ ನೀರಿನ ಸೌಲಭ್ಯ ಕಲ್ಪಿಸಲು ₹500 ಕೋಟಿ

ಮಲೆನಾಡು ಕರ್ನಾಟಕ

- ರಾಜ್ಯ ಅಡಿಕೆ ಮಂಡಳಿ ಸ್ಥಾಪನೆ, ಕೊಡಗು ಮತ್ತು ಚಿಕ್ಕಮಗಳೂರಿನಲ್ಲಿ ವಿಮಾನ ನಿಲ್ದಾಣ, ಶೃಂಗೇರಿಯಲ್ಲಿ 200 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆ
- ಶಿವಮೊಗ್ಗ–ಶೃಂಗೇರಿ ಚತುಷ್ಪಥ ರಸ್ತೆ ನಿರ್ಮಾಣ

ಕಿತ್ತೂರು ಕರ್ನಾಟಕ

- ಕಿತ್ತೂರು ಕರ್ನಾಟಕವನ್ನು ಲಾಜಿಸ್ಟಿಕ್ ಮತ್ತು ವೇರ್‌ಹೌಸಿಂಗ್ ಹಬ್ ಆಗಿ ಪರಿವರ್ತನೆ, ಬ್ಯಾಡಗಿಯಲ್ಲಿ ಸ್ಪೈಸ್ ಪಾರ್ಕ್
- ಬಾಗಲಕೋಟೆಯಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ

ಕರಾವಳಿ ಕರ್ನಾಟಕ

- ಕರಾವಳಿ ನವೋತ್ಥಾನ ಯೋಜನೆಯಡಿ ₹12,000 ಕೋಟಿ ವೆಚ್ಚದಲ್ಲಿ ಮೂಲ ಸೌಕರ್ಯ ಅಭಿವೃದ್ಧಿ
- 2026 ರ ವೇಳೆಗೆ ಡೀಸೆಲ್ ಚಾಲಿತ ಮೀನುಗಾರಿಕೆ ದೋಣಿಗಳನ್ನು ಎಲ್‌ಪಿಜಿ ಚಾಲಿತ ದೋಣಿಗಳಾಗಿ ಪರಿವರ್ತಿಸಲು ಪರಿಸರ ಸ್ನೇಹಿ ದೋಣಿ ಯೋಜನೆ

ಹಳೆ ಮೈಸೂರು ಪ್ರದೇಶ

- ಮೈಸೂರಿನಲ್ಲಿ ಆಹಾರ ಸಂಸ್ಕರಣಾ ಪಾರ್ಕ್ ಸ್ಥಾಪನೆ, ತುಮಕೂರಿನಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ ಸ್ಥಾಪನೆ
- ಚಿಕ್ಕಬಳ್ಳಾಪುರ, ಕೋಲಾರ, ರಾಮ ನಗರದಲ್ಲಿ ಶೀತಲೀಕರಣ ಘಟಕ ಸ್ಥಾಪನೆ. ಡಿಜಿಟಲ್ ಪರಿ ಸರ ವ್ಯವಸ್ಥೆ ರೂಪಿಸಲು ಫಾರ್ಮ್ ಟು ರಿಟೇಲ್ ಯೋಜನೆ ಜಾರಿ

ಕಲ್ಯಾಣ ಕರ್ನಾಟಕ

- ಕೊಪ್ಪಳ, ಯಾದಗಿರಿಯಲ್ಲಿ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, 10 ಗಿಗಾ ವ್ಯಾಟ್ ಸಾಮರ್ಥ್ಯದ ಮೆಗಾ ಸೋಲಾರ್ ಪಾರ್ಕ್ ಅಭಿವೃದ್ಧಿ
- ಪ್ರತ್ಯೇಕ ಶುದ್ಧ ಜಲ ಯೋಜನೆ ಜಾರಿಗೆ ₹1000 ಕೋಟಿ ಅನುದಾನ, 2500 ಶುದ್ಧ ಜಲ ಸ್ಥಾವರಗಳನ್ನು ಸ್ಥಾಪನೆ, ಕೊಪ್ಪಳದಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣ ಸ್ಥಾಪನೆ

ಕ್ಷೇಮ ಕುಶಲ

ಹಿರಿತನದ ಹಾದಿಯಲ್ಲಿ

ರಘು ವಿ.

ಭಾರತ ಮುಂದಿನ ದಶಕಗಳಲ್ಲಿ ಅತಿ ಹೆಚ್ಚು ಯುವಸಂಪನ್ಮೂಲವನ್ನು ಹೊಂದಲಿರುವ ರಾಷ್ಟ್ರವೆಂದು ಬಿಂಬಿತವಾಗಿದೆ. ಈ ಯುವಜನರು ದೇಶಕ್ಕೆ ಶೋಭೆಯನ್ನು ತರಬಲ್ಲರೋ ಇಲ್ಲವೋ ಎಂಬುದು ಮನನೀಯ ವಿಚಾರ. ತಮ್ಮ ನಡೆ-ನುಡಿ, ಆಚಾರ-ವ್ಯವಹಾರಗಳಿಂದ ಕೀರ್ತಿ ತರುವರೋ ಅಥವಾ ಅಪಕೀರ್ತಿ ತರುವರೋ ಎಂಬುದು ಇಂದು ಮಕ್ಕಳಾಗಿರುವ ಅವರನ್ನು ನಾವು ಹೇಗೆ ತಿದ್ದಬಲ್ಲೆವೆಂಬುದರ ಮೇಲೆ ಅವಲಂಬಿತವಾಗಿದೆ. ನೆನಪಿರಲಿ, ಇಂದು ಜಾಗತಿಕ ಮಟ್ಟದಲ್ಲಿ ವಿವಿಧ ಕಾರ್ಯಕ್ಷೇತ್ರದಲ್ಲಿ ಜವಾಬ್ದಾರಿಯುತ ಹುದ್ದೆಗಳಿಗೆ ಆಯ್ಕೆ ನಡೆಯುವಾಗ ಅಂಕಗಣಿಕೆಯ ಜೊತೆಗೆ ಗುಣಗಣಿಕೆಯೂ ನಡೆಯುತ್ತದೆ. ಒಬ್ಬ ಅಭ್ಯರ್ಥಿ ಸಂದರ್ಶನಕ್ಕೆ ಹಾಜರಾದಾಗ, ಅವನು ಕಚೇರಿಗೆ ಕಾಲಿಟ್ಟ ಕ್ಷಣದಿಂದ ಅವನ ವರ್ತನೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತದೆ.

> ಮಕ್ಕಳು ನಾಲ್ಕು ಆಯಾಮಗಳಲ್ಲಿ ತಮ್ಮ ನಡೆಯನ್ನು ಕಲಿಯಬೇಕು. ಏಕೆಂದರೆ ಅವರು ಮುಂದೆ ಸಮಾಜದಲ್ಲಿ ನಾಲ್ಕು ವಲಯಗಳಲ್ಲಿ ವರ್ತಿಸಬೇಕಾಗುತ್ತದೆ.

ಚತುಷ್ಪಥ

ಮಕ್ಕಳು ಮುಖ್ಯವಾಗಿ ನಾಲ್ಕು ಆಯಾಮಗಳಲ್ಲಿ ತಮ್ಮ ನಡೆಯನ್ನು ಕಲಿಯಬೇಕು. ಏಕೆಂದರೆ ಮುಂದೆ ಅವರು ನಾಲ್ಕು ವಲಯಗಳಲ್ಲಿ ವರ್ತಿಸಬೇಕಾಗುತ್ತದೆ. ಮಾತು, ವರ್ತನೆ, ಜವಾಬ್ದಾರಿ, ಸ್ನೇಹಭಾವ - ಇವೇ ಆ ನಾಲ್ಕು ಆಯಾಮಗಳು. ಅವರು ಕಲಿತ ವರ್ತನೆಗಳು ಕುಟುಂಬವಲಯ, ಬಂಧುವಲಯ, ಸಾರ್ವಜನಿಕ ವಲಯ ಮತ್ತು ಉದ್ಯೋಗವಲಯಗಳಲ್ಲಿ ಪ್ರತಿಫಲಿತವಾಗುವುದರಿಂದ ಅವು ಸರಿಯಾಗಿ ರೂಪುಗೊಳ್ಳಬೇಕು. ವರ್ತನೆಗಳು ಪುನರಭ್ಯಾಸದಿಂದ ರೂಪಿತವಾಗುವವು. ಮುಖ್ಯವಾಗಿ ಮನೆಯಲ್ಲಿ ಅವರು ಹಿರಿಯರನ್ನು ಗಮನಿಸುತ್ತ ಕಲಿಯುತ್ತಾರೆ. ಪುಟ್ಟಮಕ್ಕಳು ಮನೆಯಾಟ, ಸ್ಕೂಲಾಟ ಆಡುವುದನ್ನು ಗಮನಿಸಿದರೆ ಅವರ ಕೌಟುಂಬಿಕ ವಾತಾವರಣದ ಚಿತ್ರಣ ದೊರೆತುಬಿಡುತ್ತದೆ. ಮನೆಯ ಸಾಕುಪ್ರಾಣಿಗಳೂ ಮನೆಯವರ ಸ್ವಭಾವವನ್ನು ರೂಢಿಸಿಕೊಳ್ಳುತ್ತವೆಂದರೆ, ಇನ್ನು ಮಕ್ಕಳು ಕುಟುಂಬದ ಸದಸ್ಯರ ಸ್ವಭಾವವನ್ನು ರೂಢಿಸಿಕೊಳ್ಳುವುದರಲ್ಲೇನು ಅಚ್ಚರಿ? ಭಾಷೆಯ ಕಲಿಕೆಯಿಂದ ಮೊದಲ್ಗೊಂಡು ಎಲ್ಲವೂ ಅನುಕರಣೆಯ ಪ್ರತಿಫಲನ.

ಕೃತಿ

ಮನೆಯ ವಸ್ತುಗಳನ್ನು ಬಳಸುವಾಗ ಅಲ್ಲೊಂದು ಶಿಸ್ತು ಓರಣವಿರಬೇಕು. ಹಾಸಿಗೆಯಿಂದ ಎದ್ದ ಕೂಡಲೆ ಹೊದಿಕೆಯನ್ನು ಮಡಿಸಿಟ್ಟು, ತಲೆದಿಂಬನ್ನು ಸರಿಪಡಿಸುವ ಅಭ್ಯಾಸ ನಮ್ಮದಾಗಿದ್ದರೆ ನಮ್ಮ ಮಕ್ಕಳು ಕೂಡ ವಸ್ತುಗಳನ್ನು ಒಪ್ಪವಾಗಿಡುವುದನ್ನು ಕಲಿಯುತ್ತಾರೆ. ಮನೆಯಲ್ಲಿ ಪ್ರತಿ ವಸ್ತುವಿಗೂ ಒಂದು ಸ್ಥಾನ ನಿಗದಿಯಾಗಬೇಕು. ಪ್ರತಿನಿತ್ಯವೂ ಮನೆಯ ಸದಸ್ಯರೆಲ್ಲ ಸೇರಿ ಟಿ.ವಿ.ಯ ರಿಮೋಟ್ ಹುಡುಕುತ್ತಾರೆಂದರೆ ಅಲ್ಲಿ ಯಾವ ವ್ಯವಸ್ಥೆಯಿದ್ದೀತು? ಬಳಸಿದ ಪೊರಕೆ ಎಲ್ಲಿಡಬೇಕು, ನಲ್ಲಿಯಲ್ಲಿ ಯಾವ ಭರದಲ್ಲಿ ನೀರು ಬಿಡಬೇಕು, ಸ್ನಾನದ ಬಳಿಕ ಟವಲನ್ನು ಎಲ್ಲಿ ಹರವಬೇಕು – ಇವೆಲ್ಲವನ್ನು ಮಕ್ಕಳು ನೋಡಿ ಕಲಿಯುತ್ತಾರೆ. ಮುಂದೆ ಸಾರ್ವಜನಿಕ ಸ್ಥಳಗಳಲ್ಲೂ ಇದನ್ನೇ ಪಾಲಿಸುತ್ತಾರೆ. ಕೆಲವರಿಗೆ ಪದೇ ಪದೇ ಉಗುಳುವ ಅಭ್ಯಾಸ. ಅವರ ಮಕ್ಕಳೂ ಇದನ್ನೇ ಕಲಿಯುತ್ತಾರೆ, ಸಾರ್ವಜನಿಕರಿಂದ ಛೀಮಾರಿ ಹಾಕಿಸಿಕೊಳ್ಳುತ್ತಾರೆ. ಪುಸ್ತಕ ಲೇಖನಿಗಳನ್ನು ಬಳಸುವುದನ್ನು ಕೂಡ ಅವರು ಮನೆಯಲ್ಲಿಯೇ ಕಲಿಯುತ್ತಾರೆ.

ಜವಾಬ್ದಾರಿ

ಮನೆಯ ಆಗುಹೋಗುಗಳಿಗೆ ಮನೆಯ ಹಿರಿಯರು ಹೇಗೆ ಸ್ಪಂದಿಸುತ್ತಾರೆಂದು ಮಕ್ಕಳು ಗಮನಿಸುತ್ತಿರುತ್ತಾರೆ. ಪರಸ್ಪರ ಸಂಬೋಧನೆ ಹೇಗಿದೆ, ಪ್ರೀತಿವಿಶ್ವಾಸದ ಅಭಿವ್ಯಕ್ತಿ ಹೇಗಿದೆ, ಹೊಂದಾಣಿಕೆ ಹೇಗಿದೆ ಎಂದು ಅವರ ಸೂಕ್ಷ್ಮ ಮನಸ್ಸು ಗ್ರಹಿಸುತ್ತಿರುತ್ತದೆ. ತಂದೆ-ತಾಯಿಗಳು ಅಜ್ಜ-ಅಜ್ಜಿಯರಿಗೆ ಗೌರವ ನೀಡದಿದ್ದರೆ ಮಗುವು ಹಿರಿಯರಿಗೆ ಗೌರವ ಸಲ್ಲಿಸಬೇಕೆಂಬ ಪಾಠವನ್ನು ಕಲಿಯುವುದಿಲ್ಲ. ಯಾರಾದರೂ ಕಾಯಿಲೆ ಮಲಗಿದಾಗ ಮನೆಯ ಇತರರು ಅವರನ್ನು ಹೇಗೆ ನೋಡಿಕೊಳ್ಳುತ್ತಾರೆ ಎಂಬುದನ್ನೂ ಅದು ಗಮನಿಸುತ್ತದೆ. ನೆರವಾಗುವ ಉದಾರತೆ ಬೆಳೆಯುವುದೊ ಅಳಿಯುವುದೋ? ರಸ್ತೆಯಲ್ಲಿ ಯಾರಾದರೂ ಅನಾರೋಗ್ಯದಿಂದ ಕುಸಿದರೆ ಸುತ್ತಲಿನವರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದನ್ನು ಗಮನಿಸುವಾಗ ಅವರ ಕುಟುಂಬದ ಮೌಲ್ಯಗಳ ಚಿತ್ರಣ ದೊರೆಯುತ್ತದೆ.

ಸ್ನೇಹಭಾವ

ಸಮಾಜವೆಂಬುದು ವ್ಯಕ್ತಿಯೆಂಬ ವಿವಿಧ ಮೂಲಘಟಕಗಳ ಮೊತ್ತ. ಕುಟುಂಬದ ಸದಸ್ಯರ ನಡುವೆ ಸ್ನೇಹಭಾವವಿದ್ದರೆ ಆ ಮನೆಯಲ್ಲಿ ಬೆಳೆದ ಮಗು ವಿಶ್ವಪ್ರೇಮಿಯಾಗುತ್ತದೆ. ಹೊಂದಿಕೊಳ್ಳುವ ಗುಣವನ್ನು ಮಕ್ಕಳಿಗೆ ಚಿಕ್ಕಂದಿನಿಂದಲೇ ಕಲಿಸಬೇಕು. ಸಮವಯಸ್ಕರೊಂದಿಗೆ ಹಂಚಿಕೊಳ್ಳುವುದನ್ನು ಪ್ರೋತ್ಸಾಹಿಸಬೇಕು. ಪ್ರತ್ಯೇಕತೆಯ ಭಾವ ಇರದಂತೆ ಆದರೆ ಆತ್ಮವಿಶ್ವಾಸ ಉಳಿವಂತೆ ಬೆಳೆಸುವುದು ಒಂದು ಸವಾಲು. ಇಂದು 'ಟೀಂ ಬಿಲ್ಡಿಂಗ್', 'ಟೀಂ ಸ್ಪಿರಿಟ್' ಬೋಧನೆಯ ವಿಷಯವಾಗುತ್ತಿವೆ. ಆದರೆ ಅನೇಕ ಒಟ್ಟುಕುಟುಂಬಗಳಲ್ಲಿ ಬೆಳೆದವರು, ಊರಹಬ್ಬ ಉತ್ಸವ ಮುಂತಾದವುಗಳಲ್ಲಿ ಪಾಲ್ಗೊಳ್ಳುವ ಮನೆಗಳಲ್ಲಿ ಬೆಳೆದವರು ಈ 'ಟೀಂ'ಸೂತ್ರವನ್ನು ತಮಗೆ ತಿಳಿಯದೆಯೇ ಅಳವಡಿಸಿಕೊಂಡುಬಿಟ್ಟಿರುತ್ತಾರೆ. ಹಿರಿಯರು ಸಾರ್ವಜನಿಕ ಸ್ಥಳಗಳಲ್ಲಿ, ಎಂದರೆ ರಸ್ತೆಗಳು, ಬಸ್ ನಿಲ್ದಾಣ, ಮೆಟ್ರೊ, ಪಾರ್ಕ್, ಪೂಜಾಸ್ಥಳಗಳು, ಹೋಟೆಲ್– ಇಂಥ ಸ್ಥಳಗಳಲ್ಲಿ ಹೇಗೆ ನಡೆದುಕೊಳ್ಳುತ್ತಾರೆ ಎಂಬುದನ್ನು ಮಕ್ಕಳು ಗಮನಿಸುತ್ತಿರುತ್ತವೆ. ಮಕ್ಕಳು ನಾಗರಿಕರಾಗಿ ರೂಪುಗೊಳ್ಳಲು ಇಂಥ ಸ್ಥಳಗಳೇ ನಿಜವಾದ ಪಾಠಶಾಲೆಗಳು ಎಂಬುದನ್ನು ಪಾಲಕರು, ಪೋಷಕರು ಮರೆಯಬಾರದು.

ಒಟ್ಟಿನಲ್ಲಿ, 'ಬೆಳೆಯುವ ಮಕ್ಕಳಿಗೆ ನಾವೊಂದು ಮಾದರಿ' – ಎಂದು ಮನೆಯವರೂ ಇತರ ಹಿರಿಯರೂ ಅರಿಯಬೇಕು. ❖

ಮಾತು

'ನನ್ನ ಮಗ ತುಂಬ ಒರಟಾಗಿ ಮಾತನಾಡುತ್ತಾನೆ... ಅವನಿಗೆ ಬುದ್ಧಿ ಹೇಳಿ' ಎಂದು ಬೆಳೆದ ಮಗನನ್ನು ಎದುರಿಗೆ ಕೂರಿಸಿದ ಸಂದರ್ಭಗಳಿವೆ. ನಾನು ಮುಗಳ್ನಕ್ಕು 'ನೀವು ನಿಮ್ಮ ಪತ್ನಿಯೊಂದಿಗೆ ಮಾತನಾಡುವುದನ್ನು ಧ್ವನಿಮುದ್ರಿಸಿ ಕೇಳಿ' ಎಂದು ಹೇಳಿದ್ದೇನೆ. ಮನೆಯಲ್ಲಿ ಹಿರಿಯರು ಮಾತನಾಡುವಾಗ ಎಚ್ಚರದಿಂದ ಮಾತನಾಡಬೇಕು. ವಿನಾ ಕಾರಣ ಧ್ವನಿ ಏರಿಸಬಾರದು, ಕೋಪಗೊಂಡರೂ ಅದನ್ನು ವ್ಯಕ್ತಪಡಿಸುವ ಮಾರ್ಗ ಹಿಂಸಾಮಾರ್ಗವಾಗಿರಬಾರದು. ಕೋಪ ಮುಕ್ತಚರ್ಚೆಗೆ ನಾಂದಿಯಾಗಬೇಕು, ಭಿನ್ನಾಭಿಪ್ರಾಯಗಳ ಪರಿಹಾರಕ್ಕೆ ಸೂತ್ರ ಕಂಡುಕೊಳ್ಳಬೇಕು. ಮಕ್ಕಳು ಇವುಗಳನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಯಾವುದೇ ಕಾರಣಕ್ಕೂ ಕೆಟ್ಟ ಪದಗಳನ್ನು, ಅಶ್ಲೀಲ ಮಾತುಗಳನ್ನು, ಬೈಗುಳಗಳನ್ನು ಬಳಸಬಾರದು. ಇವು ಮನೋವಿಕಾರದ ಅಭಿವ್ಯಕ್ತಿ. ಮಕ್ಕಳು ಇವುಗಳನ್ನು ಬೇಗ ಹೆಕ್ಕಿ ತಮ್ಮದಾಗಿಸಿಕೊಳ್ಳುತ್ತಾರೆ.

ನಕ್ಕು ಹಗುರಾಗೋಣ...

ಡಾ. ವಿನಯ ಶ್ರೀನಿವಾಸ್

ನಗುವಿನ ನಿಜವಾದ ಶಕ್ತಿ ಮತ್ತು ಅದರ ವೈಜ್ಞಾನಿಕ ಹಿನ್ನೆಲೆಯನ್ನು ಇತ್ತೀಚಿನ ದಿನಗಳಲ್ಲಿ ತಜ್ಞರು ಅನಾವರಣಗೊಳಿಸಿದ್ದಾರೆ. ನಗುವಿನ ಮಹತ್ವವನ್ನು ಎಲ್ಲೆಡೆ ತಿಳಿಸಲು ನಗುವಿಗೂ ಒಂದು ದಿನವನ್ನು ಮುಡಿಪಾಗಿಸಿಟ್ಟಿದ್ದಾರೆ.

ಪ್ರತಿ ವರ್ಷದ ಮೇ ತಿಂಗಳ ಮೊದಲ ಭಾನುವಾರದಂದು ವಿಶ್ವ ನಗುವಿನ ದಿನ ಎಂದು ಆಚರಿಸಲಾಗುತ್ತದೆ. ಈ ಆಚರಣೆಯ ಪರಿಕಲ್ಪನೆ ಭಾರತದ ಕುಟುಂಬ ವೈದ್ಯ ಡಾ. ಮದನ್ ಕಟಾರಿಯವರದ್ದು. 1998ರ ಮೇ 10ರಂದು ಮುಂಬೈನಲ್ಲಿ ಮೊದಲ ಬಾರಿಗೆ ಈ ಆಚರಣೆ ಹುಟ್ಟಿಕೊಂಡಿತು. ವ್ಯಕ್ತಿ ನಗುವುದರಿಂದ ಆತನ ಆರೋಗ್ಯದ ಮೇಲೆ ಆಗುವ ಪ್ರಯೋಜನಗಳನ್ನು ಗುರುತಿಸಿದ ಡಾ. ಕಟಾರಿ ವಿಶ್ವಮಟ್ಟದಲ್ಲಿ ನಗುವಿನ ಚಳವಳಿಯನ್ನೇ ಆರಂಭಿಸಿದರು.

ನಗು ಕೇವಲ ಸಣ್ಣ ಕ್ರಿಯೆಯಲ್ಲ. ಇದು ವ್ಯಕ್ತಿಯ ದೇಹ ಮತ್ತು ಮನಸ್ಸುಗಳ ಮೇಲೆ ಧನಾತ್ಮಕ ಪರಿಣಾಮಗಳನ್ನು ಬೀರುತ್ತದೆ ಎಂಬುದನ್ನು ಕಂಡುಕೊಂಡ ಡಾ. ಕಟಾರಿಯವರು ಅದರ ಆಧಾರದ ಮೇಲೆ ನಗುವಿನ ಚಿಕಿತ್ಸೆ, ನಗುವಿನ ಯೋಗ ಮತ್ತು ನಗೆಕೂಟ ಮೊದಲಾದುವುಗಳ ಆರಂಭಕ್ಕೆ ಕಾರಣರಾದರು. ವಿಶ್ವದಾದ್ಯಂತ ಈಗ ಎಪ್ಪತ್ತಕ್ಕೂ ಹೆಚ್ಚು ದೇಶಗಳು ಈ ಪರಿಕಲ್ಪನೆಯನ್ನು ಅನುಮೋದಿಸುತ್ತಿವೆ; ಆಚರಣೆಗೂ ತಂದಿವೆ.

ಎರಡು ವ್ಯಕ್ತಿಗಳು ಪರಸ್ಪರ ಕಂಡು ನಕ್ಕಾಗ ಅಲ್ಲಿ ಸ್ನೇಹಭಾವ ಮೂಡುತ್ತದೆ. ಈ ಸರಪಳಿ ಮುಂದುವರೆದಂತೆ ಇಡೀ ವಿಶ್ವದಲ್ಲಿಯೇ ಸ್ನೇಹಮಯ ವಾತಾವರಣ ಮೂಡಿ ಇದು ವಿಶ್ವಶಾಂತಿಯನ್ನು ಕಾಪಾಡಿದರೆ ಅಚ್ಚರಿ ಪಡಬೇಕಾಗಿಲ್ಲ ಎಂಬುದು ಕಟಾರಿಯವರ ನಿಲುವು.

ಹಾಸ್ಯಯೋಗ

ಹತ್ತರಿಂದ ಹನ್ನೆರಡು ಜನ ಒಂದೆಡೆ ಸೇರಿ ಉದ್ದೇಶ ಪೂರ್ವಕವಾಗಿ, ಒಟ್ಟಾಗಿ ನಗುವ ಸರಳ ವ್ಯಾಯಾಮವೇ ಹಾಸ್ಯಯೋಗ. ಸ್ವಾಭಾವಿಕ ನಗುವಿನಂತೆಯೇ ಈ ಬಗೆಯ ಉದ್ದೇಶಿತ ನಗು ಕೂಡ ಮನಸ್ಸಿನಲ್ಲಿ ಧನಾತ್ಮಕ ಅಲೆಗಳನ್ನು ಮೂಡಿಸುತ್ತದೆ.

ನಗು ಚಿಕಿತ್ಸೆಯೂ ಆಗಬಹುದು

ವ್ಯಕ್ತಿ ನಕ್ಕಾಗ ಆತನ ದೇಹದಲ್ಲಿ 'ಎಂಡಾರ್ಫಿನ್' ಎಂಬ ರಸದೂತ ಉತ್ಪತ್ತಿಯಾಗುತ್ತದೆ. ಇದು ಶಾರೀರಿಕ ನೋವುಗಳನ್ನು ಶಮನ ಮಾಡುವುದಲ್ಲದೆ ಮನಸ್ಸಿನ ವಿಕಾರಗಳನ್ನೂ ಹೋಗಲಾಡಿಸುತ್ತದೆ. ಹಾಗಾಗಿ ನಗುವನ್ನು ಒಂದು ಬಗೆಯ ಚಿಕಿತ್ಸೆಯಾಗಿಯೂ ಬಳಸ-ಲಾಗುತ್ತಿದೆ. ಕಡೆಯ ಹಂತದ ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ನಗುವಿನ ಚಿಕಿತ್ಸೆ ದೈಹಿಕ ನೋವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವುದರ ಜೊತೆಗೆ ಮನಸ್ಸನ್ನೂ ಪ್ರಫುಲ್ಲವಾಗಿರಿಸುತ್ತದೆ. ಚಿಕಿತ್ಸೆಯಲ್ಲಿ ರೋಗಿಗಳಿಗೆ ಕೆಲವು ಹಾಸ್ಯಪ್ರಸಂಗಗಳ ಬಗ್ಗೆ ಮತ್ತು ಹಾಸ್ಯಭರಿತ ಕತೆಗಳನ್ನು ಹೇಳುವುದರ ಜೊತೆಯಲ್ಲಿ ಹಾಸ್ಯಪ್ರಧಾನ ಚಿತ್ರಗಳನ್ನು, ವಿಡಿಯೊಗಳನ್ನು ಪ್ರದರ್ಶಿಸಲಾಗುತ್ತದೆ. ಹಾಸ್ಯಬರಹ-ಗಳ ಓದು, ಮನಸ್ಸಿಗೆ ಖುಷಿ ಕೊಡುವ ಆಟಗಳು, ಒಗಟುಗಳನ್ನು ಬಿಡಿಸುವುದು ಮೊದಲಾದ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಲಾಗುತ್ತದೆ. ಇದು ಅವರನ್ನು ಕೆಲಕಾಲವಾದರೂ ತಮ್ಮ ವೇದನೆಯನ್ನು ಮರೆಯುವಂತೆ ಮಾಡುತ್ತದೆ. ಮನಸ್ಸು ಹಗುರಾಗುತ್ತದೆ. ಒಂದೊಂದು ದಿನವೂ ಅಸಹನೀಯ ಎನ್ನಿಸುವ ಇಂತಹ ರೋಗಿಗಳಿಗೆ ಈ ಚಿಕಿತ್ಸೆಯು ಪ್ರಯೋಜನಕಾರಿ ಎಂಬ ಅಂಶವನ್ನು ಅಲ್ಲಗಳೆಯುವಂತಿಲ್ಲ.

ನಗೆಕೂಟ/ ನಗೆಕ್ಲಬ್

ಏಕತಾನತೆ ಮತ್ತು ಒಂಟಿತನದಿಂದ ಬಳಲುವ ಹಿರಿಯ ನಾಗರಿಕರಿಗೆ ಈ ನಗೆಕ್ಲಬ್‌ಗಳು ವರದಾನವಿದ್ದಂತೆ. ಒಂದು ಬಡಾವಣೆಯ ಸಮಾನಮನಸ್ಕ ಹಿರಿಯರು ಒಟ್ಟಾಗಿ ಸೇರಿಕೊಳ್ಳುವುದೇ ನಗೆಕ್ಲಬ್. ವಸತಿ ಪ್ರದೇಶಗಳಲ್ಲಿ, ಬಡಾವಣೆಗೊಂದು ಉದ್ಯಾನ ಇರಲೇಬೇಕೆಂಬ ನಿಯಮವನ್ನು ಸರ್ಕಾರ ಮಾಡಿದೆ. ಒಂದಿಷ್ಟು ಗಿಡಮರಗಳು, ಕುಳಿತುಕೊಳ್ಳಲು ಆಸನಗಳು, ನಡೆಯಲು ಸೂಕ್ತ ಕಾಲುದಾರಿ, ಮಕ್ಕಳ ಆಟಕ್ಕೂ ವ್ಯವಸ್ಥೆ ಇರುವ ಈ ಉದ್ಯಾನ ನಗೆಕ್ಲಬ್‌ನ ಚಟುವಟಿಕೆಗಳಿಗೆ ಹೇಳಿ ಮಾಡಿಸಿದಂತಿದೆ. ಪ್ರತಿದಿನ ಬೆಳಿಗ್ಗೆ ಅಥವಾ ಸಂಜೆಯ ಸಮಯ ನಗೆ ಕ್ಲಬ್‌ನ ಸದಸ್ಯರೆಲ್ಲ ಸೇರಿಕೊಂಡು ಕೆಲವು ಸರಳ ವ್ಯಾಯಾಮ, ನಡಿಗೆಯ ನಂತರ ಮನಸ್ಸು ಹಗುರಾಗುವ ಹಾಸ್ಯಚಟಾಕಿಗಳನ್ನು ಒಬ್ಬರಿಗೊಬ್ಬರು ಹಂಚಿಕೊಳ್ಳುವುದು ಮತ್ತು ನಗೆಗಡಲಲ್ಲಿ ಮುಳುಗುವುದು ಈ ಕ್ಲಬ್‌ನ ಮುಖ್ಯ ಚಟುವಟಿಕೆ. ❖

ಪ್ರಯೋಜನಗಳು

- ನಕ್ಕಾಗ ಮುಖದ ಸ್ನಾಯುಗಳು ಹಿಗ್ಗುವ ಮತ್ತು ಸಂಕುಚಿಸುವ ಪ್ರಕ್ರಿಯೆಗೆ ಒಳಗಾಗುವುದರಿಂದ ಇದು ಮುಖಕ್ಕೆ ಒಳ್ಳೆಯ ವ್ಯಾಯಾಮವೂ ಹೌದು. ಸ್ನಾಯುಗಳಿಗೆ ಉತ್ತಮ ರಕ್ತ ಪರಿಚಲನೆಯಾಗುವುರಿಂದ ಮುಖದ ಕಾಂತಿಯೂ ಹೆಚ್ಚುತ್ತದೆ.
- ಸದಾ ನಗುನಗುತ್ತಾ ಇರುವವರ ಶರೀರದಲ್ಲಿ ಕಾರ್ಟಿಸಾಲ್ ರಸದೂತದ ಸ್ರವಿಕೆಯೂ ಕಡಿಮೆ ಎನ್ನುತ್ತವೆ ಅಧ್ಯಯನಗಳು. ಇದು ವ್ಯಕ್ತಿಯ ಒತ್ತಡವನ್ನು ಕಡಿಮೆ ಮಾಡುತ್ತದೆ; ರಕ್ತದೊತ್ತಡ ಮತ್ತು ಮಧುಮೇಹವನ್ನು ನಿಯಂತ್ರಿಸುವಲ್ಲಿಯೂ ಸಹಕಾರಿ.
- ಈ ಕ್ರಿಯೆಯಲ್ಲಿ ಶಕ್ತಿಯ ವ್ಯಯವೂ ಆಗುವುದರಿಂದ ತೂಕ ಇಳಿಕೆಗೂ ಇದು ಪರೋಕ್ಷವಾಗಿ ನೆರವಾಗುತ್ತದೆ ಎನ್ನುತ್ತವೆ, ಅಧ್ಯಯನಗಳು.
- ಮೊಗದಲ್ಲಿ ಸದಾ ನಗುವಿದ್ದರೆ ವ್ಯಕ್ತಿಯ ಏಕಾಗ್ರತೆ ಕೂಡ ಹೆಚ್ಚುತ್ತದೆ. ವ್ಯಕ್ತಿ ಚಟುವಟಿಕೆಯಿಂದ ಕೂಡಿರುತ್ತಾನೆ. ಆತನ ಕ್ರಿಯಾಶೀಲತೆಯೂ ಹೆಚ್ಚುತ್ತದೆ.
- ನಗುವಿನಿಂದ ಮನಸ್ಸಿಗೆ ಸಮಾಧಾನ ಮತ್ತು ಸಾವಧಾನ ಲಭಿಸುತ್ತದೆ.
- ನಕಾರಾತ್ಮಕ ವಾತಾವರಣದಿಂದ ಕಿಂಚಿತ್ತಾದರೂ ಹೊರಬರಲು ನಮಗೆ ನಗು ಖಂಡಿತ ಸಹಕರಿಸಬಲ್ಲದು. ಕೇವಲ ನಗುವಿನ ದಿನ ಮಾತ್ರ ಏಕೆ? ಪ್ರತಿ ದಿನವೂ ನಗುಮೊಗವನ್ನು ಹೊಂದೋಣ, ವಿಶ್ವಶಾಂತಿಯ ದೂತರಾಗೋಣ.

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

MATHEMATICS

MULTIPLE CHOICE QUESTIONS

74) If $A = \begin{bmatrix} \cos\theta & -\sin\theta \\ \sin\theta & \cos\theta \end{bmatrix}$ and $A^T + A = I_2$, then

(A) $\theta = n\pi, n \in Z$ (B) $\theta = (2n+1)\frac{\pi}{2}, n \in Z$

(C) $\theta = 2n\pi \pm \frac{\pi}{3}, n \in Z$ (D) None of these

Ans: (C) $\theta = 2n\pi \pm \frac{\pi}{3}, n \in Z$

Expln: $-A = \begin{bmatrix} \cos\theta & -\sin\theta \\ \sin\theta & \cos\theta \end{bmatrix}$, $A^T = \begin{bmatrix} \cos\theta & \sin\theta \\ -\sin\theta & \cos\theta \end{bmatrix}$

$A^T + A = \begin{bmatrix} 2\cos\theta & 0 \\ 0 & 2\cos\theta \end{bmatrix} = \begin{bmatrix} 1 & 0 \\ 0 & 1 \end{bmatrix}$ (given)

$\therefore 2\cos\theta = 1 \Rightarrow \cos\theta = \frac{1}{2}$ i.e., $\cos\theta = \cos\frac{\pi}{3}$

$\therefore \theta = 2n\pi \pm \frac{\pi}{3}$.

75) If A and B are two matrices such that AB=A and BA = B, then B^2 is equal to..............

(A) B (B) A
(C) Zero matrix (D) 1

Ans: (A) B

Expln:- Consider BA = B.
$BAB = B^2 \therefore BA = B^2 \Rightarrow B = B^2$

76) Given 5 line segments of lengths 2, 3, 4, 5, 6 units. Then the number of triangles that can be formed by joining these segments is...................

(A) $^5C_3 - 3$ (B) $^5C_3$
(C) $^5C_3 - 1$ (D) $^5C_3 - 2$

Ans: (A) $^5C_3 - 3$

Expln:-
The line segments 2 and 4 added gives 6 units.
That of 2 and 3 added gives 5 units.
Thus, that of 4 units is not considered,
i.e., there are 3 lines.
The no. of triangles formed is $5C_3 - 3$.

77) How many numbers greater than 10,00,000 be formed from 2, 3, 0, 3, 4, 2, 3?

(A) 420 (B) 360
(C) 400 (D) 300

Ans: (B) 360

Expln:- Any number greater than 10,00,000 will contain all seven digits.

We have to arrange 7 digits out of which 2 occurs twice and 3 occurs thrice. The rest are distinct.

$\therefore$ Number of such arrangements $= \frac{7!}{2! \times 3!} = 420$.

These arrangements will also include those which contain 0 in the first place.

Keeping '0' in first place, remaining 6 digits out of which 2 occurs twice, 3 occurs thrice and rest can be arranged in $\frac{6!}{2! \times 3!} = 60$ ways.

$\therefore$ Required number of arrangements $= 420 - 60 = 360$.

78) An urn contains 9 balls, 2 of which are white, 3 blue and 4 black. 3 balls are drawn at random from the urn. The chance that 2 balls will be of the same colour and the third of a different colour is..............................

(A) $\frac{45}{84}$ (B) $\frac{55}{84}$

(C) $\frac{35}{84}$ (D) $\frac{25}{84}$

Ans : (B) $\frac{55}{84}$

We can have 2 white and 1 blue or 1 black, 2 blue and 1 white or 1 black and 2 black, 1 white or 1 blue.

The required probability $= \frac{2C_2(3C_1 + 4C_1)}{9C_3} + \frac{3C_2(2C_1 + 4C_1)}{9C_3} + \frac{4C_2(2C_1 + 3C_1)}{9C_3}$

$= \frac{7+18+30}{84} = \frac{55}{84}$.

79) 6 boys and 6 girls sit in a row at random. The probability that all the girls sit together is

(A) $\frac{1}{432}$ (B) $\frac{12}{431}$

(C) $\frac{1}{132}$ (D) None of these

Ans : (C) $\frac{1}{132}$

Expln:-
Suppose 6 boys are seated as in the figure.

↑ □ ↑ □ ↑ □ ↑ □ ↑ □ ↑ □ ↑
B_1 B_2 B_3 B_4 B_5 B_6

There are 7 places for girls which can be considered as 1 unit.

Total 12 persons are there who can be arranged in 12! Ways.

$\therefore$ Required probability $= \frac{6! \times 7!}{12!} = \frac{6\times5\times4\times3\times2\times1\times7!}{12\times11\times10\times9\times8\times7!} = \frac{1}{132}$.

80) Three dice are rolled once. The chance of getting a score of 5 is..........................

(A) $\frac{5}{216}$ (B) $\frac{1}{6}$

(C) $\frac{1}{36}$ (D) $\frac{1}{7^2}$

Ans : (C) $\frac{1}{36}$

Expln:- Since three dice are thrown, the total number of points in the sample space S is $6\times6\times6 = 216$.
E = Event of getting a total of 5.
E= {(1, 1, 3), (1, 3, 1), (3, 1, 1), (1, 2, 2), (2, 1, 2), (2, 2, 1)}
n(E) = 6. $\therefore$ Required probability $= \frac{6}{216} = \frac{1}{36}$.

PHYSICS

76) The speed of light in medium M_1 and M_2 are 1.5×10^8 ms^{-1} and 2×10^8 ms^{-1} respectively. A ray travels from medium M_1 to the medium M_2 with an angle of incidence θ. The ray suffers total internal reflection. Then the value of the angle of incidence θ is.

(a) $> \sin^{-1}\left(\frac{3}{4}\right)$ (b) $< \sin^{-1}\left(\frac{3}{4}\right)$

(c) $= \sin^{-1}\left(\frac{3}{4}\right)$ (d) $\leq \sin^{-1}\left(\frac{3}{4}\right)$

Ans:- a

Expln- For total internal reflection, the angle of incidence of light in denser medium must be greater than the critical angle for the pair of media in contact, i.e., $i > C$

We have, $\frac{1}{\sin C} = \frac{v_2}{v_1}$

Given $v_1 = M_1 = 1.5\times10^8$ ms^{-1}; $v_2 = M_2 = 2\times10^8$ ms^{-1}

Here, $C = \sin^{-1}\left(\frac{M_1}{M_2}\right)$

$\therefore i > \sin^{-1}\left(\frac{M_1}{M_2}\right) \Rightarrow i > \sin^{-1}\left(\frac{1.5\times10^8}{2\times10^8}\right)$

$\Rightarrow i > \sin^{-1}\left(\frac{3}{4}\right)$

77) A uniform electric field in the plane of the paper as shown. Here A, B, C and D are the points on the circle. V_1, V_2, V_3 and V_4 are the potentials at those points respectively. Then......



(a) $V_A = V_C, V_B = V_D$ **(b) $V_A = V_C, V_B > V_D$**
(c) $V_A > V_C, V_B > V_D$
(d) none of the above correct.

Ans:- d

Expln- The field is uniform in the plane of the paper. We know that in uniform electric field, the value of potentials is same for those points which are at equal distances. Therefore, $V_A = V_B$ (Both points A and B lies on opposite sides on the circumference) and $V_C > V_D$ (As point C lies earlier than point D on the circumference).

$$V_A = V_B, \quad V_C > V_D$$

So none of the option is correct.

78) Two long straight parallel wires are a distance 2d apart. They carry steady equal currents flowing out of the plane of the paper. The variation of magnetic field B along the line xx' is given by



Answer: c

The magnetic field due to a long straight current carrying wire is given by,

$B = (\mu_0 I)/2\pi r$

or, $B \propto 1/r$

At the point exactly mid-way between the conductors, the net magnetic field is zero. Using right hand thumb rule, we find that the magnetic field due to left wire will be in $\hat{j}$ direction while due to the right wire is in $(-\hat{j})$ direction.

Magnetic field at a distance x from the left wire, lying between the wires.

$$B = \frac{\mu_0 I}{2\pi x}\hat{j} + \frac{\mu_0 I}{2\pi(2d - x)}(-\hat{j})$$

$$\text{or, } B = \frac{\mu_0 I}{2\pi}\left(\frac{1}{x} - \frac{1}{2d-x}\right)$$

$$\text{At } x = d, B = 0$$

For x<d, B is along $\hat{j}$
For x>d, B is along $(-\hat{j})$

On the left side of the left conductor, magnetic fields due to the currents will add up and the net magnetic field will be along $(-\hat{j})$ direction.

To the right side of second conductor, the total magnetic field will be along $\hat{j}$ direction.

79) When a potential difference of 10^3V is applied between A and B, a charge of 0.75 mC is value of C is (in μ F)



(a) $\frac{1}{2}$ (b) 2 (c) 2.5 (d) 3

Ans:- (b)

ಸೇನಾ ಸಂಘರ್ಷ ಪೀಡಿತ ದೇಶದಿಂದ ತಾಯ್ನಾಡಿಗೆ ಹಿಂದಿರುಗಿದ ಇನ್ನೂ 186 ಭಾರತೀಯ ನಾಗರಿಕರು

ಸುಡಾನ್‌ನಿಂದ ಮರಳಿದ ರಾಜ್ಯದ 26 ಮಂದಿ



ಸಂಘರ್ಷ ಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದ ಭಾರತೀಯರು ಸೋಮವಾರ ಸೌದಿ ಅರೇಬಿಯಾದ ಜಿದ್ದಾದಿಂದ ವಾಯುಪಡೆಯ ವಿಮಾನದಲ್ಲಿ ತವರಿಗೆ ಹಿಂದಿರುಗಿದರು –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಡಾನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ಕೈಗೊಂಡಿರುವ 'ಆಪರೇಷನ್ ಕಾವೇರಿ' ಕಾರ್ಯಾಚರಣೆಯ ಅಡಿಯಲ್ಲಿ ಐದನೇ ವಿಮಾನ ಕೇರಳದ ಕೊಚ್ಚಿ ವಿಮಾನ ನಿಲ್ದಾಣಕ್ಕೆ ಸೋಮವಾರ ಬಂದಿಳಿದಿದ್ದು, ರಾಜ್ಯದ 26 ಮಂದಿ ವಾಪಸಾಗಿದ್ದಾರೆ.

'ಭಾರತೀಯರನ್ನು ರಕ್ಷಣೆ ಮಾಡಿ, ಜಿದ್ದಾದಿಂದ ಅವರನ್ನು ಕರೆತಂದ ವಾಯುಪಡೆಯ ವಿಮಾನವು ಕೊಚ್ಚಿ ವಿಮಾನ ನಿಲ್ದಾಣವನ್ನು ಬೆಳಿಗ್ಗೆ ತಲುಪಿದೆ. ಅದರಲ್ಲಿ ಬೆಂಗಳೂರಿನ ಇಬ್ಬರು, ಮೈಸೂರಿನ 19 ಹಾಗೂ ದಕ್ಷಿಣ ಕನ್ನಡದ ಐದು ಮಂದಿ ಬಂದಿದ್ದಾರೆ' ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಮನೋಜ್ ರಾಜನ್ ತಿಳಿಸಿದ್ದಾರೆ.

ಭಾರತೀಯರನ್ನು ರಕ್ಷಿಸಿ ಏಪ್ರಿಲ್ 27ರಿಂದ ಈವರೆಗೆ ಐದು ವಿಮಾನಗಳಲ್ಲಿ ದೇಶಕ್ಕೆ ಕರೆತರಲಾಗಿದೆ. ಈವರೆಗೆ ಕರ್ನಾಟಕದ ಒಟ್ಟು 281 ಜನರು ಸುಡಾನ್‌ನಿಂದ ವಾಪಸ್ ಬಂದಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಮುಂದುವರಿದ ಕೇಂದ್ರದ 'ಆಪರೇಷನ್ ಕಾವೇರಿ'

ನವದೆಹಲಿ (ಪಿಟಿಐ): ಸಂಘರ್ಷ ಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದ ಇನ್ನೂ 186 ಭಾರತೀಯರನ್ನು 'ಆಪರೇಷನ್ ಕಾವೇರಿ' ಯಡಿ ದೇಶಕ್ಕೆ ಸೋಮವಾರ ವಾಪಸ್ ಕರೆತರಲಾಯಿತು.

ಆಪರೇಷನ್ ಕಾವೇರಿ ಕಾರ್ಯಾಚರಣೆ ಮುಂದುವರಿದಿದೆ. 186 ಪ್ರಯಾಣಿಕರಿದ್ದ ವಿಮಾನ ಕೊಚ್ಚಿಗೆ ತಲುಪಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಟ್ವೀಟ್ ಮಾಡಿದ್ದಾರೆ.

229 ಭಾರತೀಯರಿದ್ದ ವಿಮಾನ ಬೆಂಗಳೂರಿಗೆ ಭಾನುವಾರ ತಲುಪಿದ್ದರೆ, 365 ಪ್ರಯಾಣಿಕರಿದ್ದ ವಿಮಾನವು ದೆಹಲಿಗೆ ಶನಿವಾರ ಬಂದಿಳಿದಿತ್ತು. ಇದರೊಂದಿಗೆ ಒಟ್ಟು 2,140 ಜನರನ್ನು ವಾಪಸ್ ಕರೆತಂದಂತಾಗಿದೆ.

ಸೌದಿ ಅರೇಬಿಯಾದ ಜಿದ್ದಾ ನಗರದಲ್ಲಿ ಸ್ಥಾಪಿಸಿರುವ ತಾತ್ಕಾಲಿಕ ಶಿಬಿರದಿಂದ ಭಾರತೀಯರನ್ನು ಕರೆ ತರಲಾಗಿದೆ.

ಮೊದಲ ತಂಡದಲ್ಲಿ 360 ಜನರು ವಾಯುಪಡೆ ವಿಮಾನದಲ್ಲಿ ಕಳೆದ ಬುಧವಾರ ಬಂದಿದ್ದರು. ಸೇನೆ ಮತ್ತು ಅರೆಸೇನಾ ಪಡೆಗಳ ನಡುವಣ ಸಂಘರ್ಷದಿಂದಾಗಿ ಸುಡಾನ್‌ನಲ್ಲಿ ಅನಿಶ್ಚಿತ ಪರಿಸ್ಥಿತಿ ನಿರ್ಮಾಣವಾಗಿದೆ.

ಸಂಘರ್ಷದಿಂದಾಗಿ ಈವರೆಗೆ ಸುಮಾರು 400 ಜನರು ಮೃತಪಟ್ಟಿದ್ದಾರೆ. ಸುಡಾನ್ ರಾಜಧಾನಿ ಖಾರ್ಟೂಮ್ ಮತ್ತು ಇತರೆಡೆ ಸಿಲುಕಿದ್ದ ಭಾರತೀಯರನ್ನು ಕರೆತರಲು ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಆಪರೇಷನ್ ಕಾವೇರಿ ಯೋಜನೆಯನ್ನು ಕಳೆದ ಸೋಮವಾರ ಪ್ರಕಟಿಸಿದ್ದರು.

ಮಾತುಕತೆಗೆ ಸೇನಾ ಮುಖ್ಯಸ್ಥರ ಒಪ್ಪಿಗೆ

ಕೈರೊ (ಎಪಿ): ಸೇನೆ ಮತ್ತು ಅರೆಸೇನಾ ಪಡೆಯ ಮುಖ್ಯಸ್ಥರು ಪರಸ್ಪರ ಮಾತುಕತೆಗೆ ಒಪ್ಪಿಗೆ ಸೂಚಿಸಿದ್ದಾರೆ. ಹಾಗಾಗಿ, ಮೂರನೇ ವಾರಕ್ಕೆ ಕಾಲಿಟ್ಟಿರುವ ಇಬ್ಬರ ನಡುವಣ ಸಂಘರ್ಷ ಮುಕ್ತಾಯವಾಗುವುದೇ ಎಂಬ ಆಸೆ ಸುಡಾನ್ ನಾಗರಿಕರಲ್ಲಿ ಚಿಗುರೊಡೆದಿದೆ.

ವಿಶ್ವಸಂಸ್ಥೆ ಮತ್ತು ಸೌದಿ ಅರೇಬಿಯಾ, ಸುಡಾನ್‌ನಲ್ಲಿ ಶಾಂತಿ ನೆಲೆಸಲು ಪ್ರಯತ್ನಿಸುತ್ತಿವೆ. ಈ ನಡುವೆಯೇ ಸೇನೆಯ ಮುಖ್ಯಸ್ಥ ಜನರಲ್ ಅಬ್ದುಲ್ ಫತ್ತಾಹ್ ಅಲ್ ಬುಹ್ರಾನ್ ಹಾಗೂ ಅರೆಸೇನಾ ಪಡೆಯ ಮುಖ್ಯಸ್ಥ ಮೊಹಮ್ಮದ್ ಹಮದಾನ್ ದಾಗಲೊ ಸೌದಿ ಅರೇಬಿಯಾದಲ್ಲಿ ಮಾತುಕತೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಲು ಸಮ್ಮತಿಸಿದ್ದಾರೆ. ಜೊತೆಗೆ, ಮತ್ತೆ ಮೂರು ದಿನಗಳ ಕಾಲ ಕದನ ವಿರಾಮ ವಿಸ್ತರಣೆಗೂ ಅಂಕಿತ ಹಾಕಿದ್ದಾರೆ ಎಂದು ಸುಡಾನ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರತಿನಿಧಿ ವೋಲ್ಕರ್ ಪರ್ಥೆಸ್ ತಿಳಿಸಿದ್ದಾರೆ.

ಮಾತುಕತೆ ಮೂಲಕ ಇಬ್ಬರ ನಡುವೆ ಸ್ಥಿರತೆ ಮತ್ತು ವಿಶ್ವಾಸಾರ್ಹತೆ ವೃದ್ಧಿಸುವತ್ತ ಮೊದಲ ಆದ್ಯತೆ ನೀಡಲಾಗುವುದು. ಸೇನಾ ಮುಖ್ಯಸ್ಥ ಅಬ್ದುಲ್ ಮಾತುಕತೆಗೆ ಒಪ್ಪಿ ಅಧಿಕೃತವಾಗಿ ಪ್ರಕಟಿಸಿದ್ದಾರೆ. ಆದರೆ, ಅರೆಸೇನಾ ಪಡೆ ಇನ್ನೂ ಬಹಿರಂಗವಾಗಿ ಈ ಬಗ್ಗೆ ಏನನ್ನೂ ಹೇಳಿಲ್ಲ ಎಂದು ತಿಳಿಸಿದ್ದಾರೆ.

'ಎರಡು ಕಡೆಯವರಿಗೂ ಮಾತುಕತೆ ನಡೆಸಲು ಸುರಕ್ಷಿತ ಸ್ಥಳದ ಅಗತ್ಯವಿದೆ. ಇದಕ್ಕೆ ಸೌದಿ ಅರೇಬಿಯಾವೇ ಸೂಕ್ತ. ಆದರೆ, ಇಬ್ಬರ ನಡುವೆ ವಿಶ್ವಾಸವಿಲ್ಲ. ಹಾಗಾಗಿ, ಪರಿಸ್ಥಿತಿ ನಿಭಾಯಿಸುವುದು ಕಷ್ಟಕರ' ಎಂದು ಹೇಳಿದ್ದಾರೆ.

ಕದನ ವಿರಾಮದ ನಡುವೆಯೂ ಕೆಲವು ಪ್ರದೇಶಗಳಿಗೆ ಸಂಘರ್ಷ ಸೀಮಿತಗೊಂಡಿದೆ. ಸೋಮವಾರ ಖಾರ್ಟೂಮ್, ಒಂಡರ್ಮನ್‌ನಲ್ಲಿ ದಾಳಿ ಮುಂದುವರಿಯಿತು. ಇದರಿಂದ ಜನರು ತೊಂದರೆಗೆ ಸಿಲುಕಿದ್ದಾರೆ.

ಸಂಘರ್ಷಕ್ಕೆ ಇಲ್ಲಿಯವರೆಗೆ 530 ಮಂದಿ ಮೃತಪಟ್ಟಿದ್ದು, 4,500 ಮಂದಿ ಗಾಯಗೊಂಡಿದ್ದಾರೆ ಎಂದು ಸುಡಾನ್‌ನ ಆರೋಗ್ಯ ಸಚಿವರು ತಿಳಿಸಿದ್ದಾರೆ.

ಯಲಹಂಕದಲ್ಲಿ 7 ಸೆಂ.ಮೀ ಮಳೆ
ಚಾಮರಾಜನಗರ, ಕೊಡಗು ಜಿಲ್ಲೆಗೆ 'ಯೆಲ್ಲೊ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ, ದಕ್ಷಿಣ ಒಳನಾಡು, ಉತ್ತರ ಒಳನಾಡು ವ್ಯಾಪ್ತಿಯ ಕೆಲವು ಜಿಲ್ಲೆಗಳಲ್ಲಿ ಮುಂದಿನ 48 ಗಂಟೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಕೊಡಗು, ಚಾಮರಾಜನಗರ ಜಿಲ್ಲೆಯಲ್ಲಿ ಮಂಗಳವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಬುಧವಾರ ಸಹ ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಯ ಅಲ್ಲಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದ್ದು 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಕರಾವಳಿ ಭಾಗದ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿಯಲ್ಲೂ ಮಳೆಯಾಗಲಿದೆ. ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ, ಕೊಪ್ಪಳ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗಲಿದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ.

ರಾಜ್ಯದಲ್ಲೇ ಗರಿಷ್ಠ ಉಷ್ಣಾಂಶ 37.2 ಡಿಗ್ರಿ ಸೆಲ್ಸಿಯಸ್ ಕಾರವಾರದಲ್ಲಿ ಸೋಮವಾರ ದಾಖಲಾಗಿತ್ತು.

ಸೋಮವಾರ ಬೆಳಿಗ್ಗೆ ಕೊನೆಗೊಂಡಂತೆ ಬೆಂಗಳೂರಿನ ಯಲಹಂಕದಲ್ಲಿ 7 ಸೆಂ.ಮೀ, ಕಲಬುರಗಿಯ ಯಡ್ರಾಮಿ, ಬೀದರ್‌ನ ಭಾಲ್ಕಿಯಲ್ಲಿ ತಲಾ 5 ಸೆಂ.ಮೀ, ಬೀದರ್ ಜಿಲ್ಲೆಯ ಹುಮನಾಬಾದ್, ಕೊಡಗಿನ ಪೊನ್ನಂಪೇಟೆ, ಚಿಕ್ಕಬಳ್ಳಾಪುರದ ತೊಂಡೇಬಾವಿ, ಗೌರಿಬಿದನೂರಿನಲ್ಲಿ ತಲಾ 4, ರಾಯಚೂರು ಹಾಗೂ ಕೊಪ್ಪಳದ ಗಂಗಾವತಿ ಹಾಗೂ ಬಳ್ಳಾರಿಯ ಸಿರಗುಪ್ಪದಲ್ಲಿ ತಲಾ 3 ಸೆಂ.ಮೀ ಮಳೆಯಾಗಿದೆ.

ಮೀಸಲಾತಿ ಗೊಂದಲ: ಪ್ರವೇಶ ವಿಳಂಬ
ಪದವಿ ಪ್ರವೇಶದ ವೇಳಾಪಟ್ಟಿ, ಶುಲ್ಕ ನಿಗದಿ ಆದೇಶ ಹೊರಡಿಸದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಫಲಿತಾಂಶ ಪ್ರಕಟವಾಗಿ ಎರಡು ವಾರಗಳಾಗುತ್ತಾ ಬಂದರೂ ಪದವಿ ಕಾಲೇಜುಗಳ ಪ್ರವೇಶಕ್ಕೆ ವೇಳಾಪಟ್ಟಿಯನ್ನೇ ಬಿಡುಗಡೆ ಮಾಡಿಲ್ಲ.

ರಾಜ್ಯ ಸರ್ಕಾರ ಈಚೆಗೆ ಮೀಸಲಾತಿಯಲ್ಲಿ ಮಾಡಿದ ಬದಲಾವಣೆಗಳು ಹಾಗೂ ಅದರಿಂದ ಉದ್ಭವಿಸಿದ ಗೊಂದಲಗಳು ಶುಲ್ಕ ನಿಗದಿ, ವೇಳಾಪಟ್ಟಿ ಬಿಡುಗಡೆ ಮಾಡಲು ಕಾರಣ ಎನ್ನುತ್ತಾರೆ ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳು. ಕಾಲೇಜು ಪ್ರವೇಶ ಪ್ರಕ್ರಿಯೆಯಲ್ಲಿ ಪ್ರತಿ ಕಾಲೇಜುಗಳೂ ಮೀಸಲಾತಿ ರೋಸ್ಟರ್ ಪಾಲಿಸಬೇಕಿದೆ. ಮೀಸಲಾತಿ ಪಟ್ಟಿಯ ಸ್ಪಷ್ಟತೆ ಇಲ್ಲದೆ ಪ್ರವೇಶ ಪ್ರಕ್ರಿಯೆ ಮೇಲೆ ಪರಿಣಾಮ ಬೀರುತ್ತಿದೆ ಎನ್ನುತ್ತಾರೆ.

2022-23ನೇ ಸಾಲಿನಲ್ಲಿ 5,24,209 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ದ್ವಿತೀಯ ಪಿಯುಸಿ ಇತಿಹಾಸದಲ್ಲಿ ಇದೇ ಮೊದಲ ಬಾರಿ ದಾಖಲೆಯ ಫಲಿತಾಂಶ ದೊರೆತಿರುವುದರಿಂದ ಸಹಜವಾಗಿ ಪದವಿ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಿದೆ. ವಿಜ್ಞಾನ ವಿಷಯದ ಬಹುತೇಕ ವಿದ್ಯಾರ್ಥಿಗಳು ಇದೇ ತಿಂಗಳು ನಡೆಯುವ ಸಿಇಟಿಯತ್ತ ಚಿತ್ತ ನೆಟ್ಟಿದ್ದರೆ, ಕಲಾ, ವಾಣಿಜ್ಯ ವಿಷಯದ ಹೆಚ್ಚಿನ ವಿದ್ಯಾರ್ಥಿಗಳು ಪದವಿ ಪ್ರವೇಶಕ್ಕಾಗಿ ಕಾಯುತ್ತಿದ್ದಾರೆ.

ಕೋವಿಡ್ ನಂತರ ಪದವಿ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಸಾಕಷ್ಟು ವ್ಯತ್ಯಯಗಳಾಗಿವೆ. ಕಳೆದ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದವರಿಗೆ ಈಗಷ್ಟೇ ಎರಡನೇ ಸೆಮಿಸ್ಟರ್ ತರಗತಿಗಳನ್ನು ಆರಂಭಿಸಲಾಗಿದೆ. ನಿಗದಿತ ಅವಧಿಯಲ್ಲಿ ಕಾಲೇಜುಗಳು ನಡೆದಿದ್ದರೆ ಈಗ ಅವರು ಮೂರನೇ ಸೆಮಿಸ್ಟರ್‌ಗೆ ಪ್ರವೇಶ ಪಡೆಯಬೇಕಿತ್ತು. ಇನ್ನೊಂದೆಡೆ ಪಿಯು ಫಲಿತಾಂಶ ಪ್ರಕಟವಾಗಿದ್ದರೂ ಪ್ರವೇಶದ ವೇಳಾಪಟ್ಟಿ, ಶುಲ್ಕ ನಿಗದಿ ಆದೇಶವನ್ನೇ ಹೊರಡಿಸಿಲ್ಲ.

ಮೀಸಲಾತಿ ಗೊಂದಲವೇ ವಿಳಂಬಕ್ಕೆ ಕಾರಣ: 'ಮುಸ್ಲಿಂ ಮೀಸಲಾತಿ ರದ್ದು, ಅದಕ್ಕೆ ಸುಪ್ರೀಂಕೋರ್ಟ್ ತಡೆಯಾಜ್ಞೆ ನೀಡಿರುವುದು, ಲಿಂಗಾಯತ, ಒಕ್ಕಲಿಗ ಸೇರಿದಂತೆ ಕೆಲ ಸಮುದಾಯಗಳ ಮೀಸಲಾತಿ ಹೆಚ್ಚಳ, ಒಳ ಮೀಸಲಾತಿ ನಿಗದಿ ಕುರಿತು ಸ್ಪಷ್ಟತೆ ಇಲ್ಲದಿರುವುದು ಹಾಗೂ ಚುನಾವಣಾ ನೀತಿ ಸಂಹಿತೆಗಳಿಂದಾಗಿ ಶುಲ್ಕ ಹಾಗೂ ಮೀಸಲು ನಿಗದಿ ವಿಳಂಬವಾಗುತ್ತಿದೆ. ಆದರೆ, ಎಲ್ಲ ಕಾಲೇಜುಗಳಲ್ಲೂ ಅರ್ಜಿಗಳ ವಿತರಣಾ ಕಾರ್ಯ ನಡೆಯುತ್ತಿದೆ. ಶೀಘ್ರ ವೇಳಾಪಟ್ಟಿ ಪ್ರಕಟಿಸಲಾಗುವುದು. ಜೂನ್ ನಂತರ ಶೈಕ್ಷಣಿಕ ವರ್ಷ ಆರಂಭವಾಗುವುದರಿಂದ ವಿದ್ಯಾರ್ಥಿಗಳು, ಪೋಷಕರು ಆತಂಕಪಡುವ ಅಗತ್ಯವಿಲ್ಲ' ಎನ್ನುತ್ತಾರೆ ಹೆಸರು ಹೇಳಲು ಇಚ್ಛಿಸದ ಕಾಲೇಜು ಶೈಕ್ಷಣಿಕ ಇಲಾಖೆಯ ಅಧಿಕಾರಿ.

ಉನ್ನತ ಶಿಕ್ಷಣ ಇಲಾಖೆ ವಿಭಿನ್ನ ಹೇಳಿಕೆ: 'ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳೂ ಏಕ ರೂಪದ ಪಠ್ಯ, ಶುಲ್ಕ ಹಾಗೂ ಶೈಕ್ಷಣಿಕ ವೇಳಾಪಟ್ಟಿ ಅನುಸರಿಸಬೇಕು ಎಂದು ಉನ್ನತ ಶಿಕ್ಷಣ ಇಲಾಖೆ ಕಳೆದ ವರ್ಷವೇ ಆದೇಶ ಹೊರಡಿಸಿತ್ತು. ವೇಳಾಪಟ್ಟಿಯನ್ನೂ ಬಿಡುಗಡೆ ಮಾಡಿತ್ತು. ಈ ಕುರಿತು ಪ್ರಶ್ನಿಸಿದರೆ, ಶೈಕ್ಷಣಿಕ ವೇಳಾಪಟ್ಟಿ ರೂಪಿಸುವುದು ವಿಶ್ವವಿದ್ಯಾಲಯಗಳಿಗೆ ಬಿಟ್ಟ ನಿರ್ಧಾರವೆಂದು ಜಾರಿಕೊಳ್ಳುತ್ತಿದ್ದಾರೆ' ಎಂದು ಆರೋಪಿಸುತ್ತಾರೆ ಪೋಷಕ ಆರ್.ನಾಗರಾಜಪ್ಪ.

ಕಾಡಾನೆ ದಾಳಿಗೆ ಕಾಫಿ ಬೆಳೆಗಾರ ಸಾವು

ಗೋಣಿಕೊಪ್ಪಲು (ಕೊಡಗು): ಇಲ್ಲಿನ ತಿತಿಮತಿ ಸಮೀಪದ ಯಾಡಪಾರೆ ಗ್ರಾಮದಲ್ಲಿ ಕಾಫಿ ಬೆಳೆಗಾರ ಮಲ್ಲಂಗಡ ಸನ್ನಿ ಚಂಗಪ್ಪ (65) ಸೋಮವಾರ ಬೆಳಿಗ್ಗೆ ಕಾಡಾನೆ ದಾಳಿಗೆ ಸಿಲುಕಿ ಸ್ಥಳದಲ್ಲೆ ಮೃತಪಟ್ಟರು.

ಗದ್ದೆ ಬಳಿ ಹೋಗಿದ್ದವರು ಬಹಳ ಹೊತ್ತಾದರೂ ಮನೆಗೆ ಬಾರದಿದ್ದಾಗ ಕುಟುಂಬಸ್ಥರು ಹುಡುಕಿಕೊಂಡು ಹೋದಾಗ ಶವ ಸಿಕ್ಕಿದೆ. ವಲಯ ಅರಣ್ಯಾಧಿಕಾರಿ ಅಶೋಕ್ ಹುನುಗುಂದ, ಉಪ ವಲಯ ಅರಣ್ಯಾಧಿಕಾರಿ ಉಮಾಶಂಕರ್ ಭೇಟಿ ನೀಡಿದ್ದರು.

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು
ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ
ಹೌದು 100%
ರಾಜಕೀಯ ಪಕ್ಷಗಳ ನೇತಾರರು ಚುನಾವಣಾ ಪ್ರಚಾರ ಸಭೆಗಳಲ್ಲಿ ಹದಮೀರಿ ಮಾತುಗಳನ್ನು ಆಡುತ್ತಿರುವುದು ಸರಿಯೇ?
ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವರುಣದಲ್ಲಿ ಗುಂಪು ಗಲಾಟೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ತಿ.ನರಸೀಪುರ (ಮೈಸೂರು ಜಿಲ್ಲೆ): ಪಟ್ಟಣದಲ್ಲಿ ವರುಣ ಕ್ಷೇತ್ರದ ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಸೋಮವಾರ ಬೆಳಿಗ್ಗೆ ನಡೆದ ಗಲಾಟೆಯಲ್ಲಿ ಗಾಯಗೊಂಡ ಎರಡೂ ಗುಂಪಿನವರು ಪೊಲೀಸರಿಗೆ ದೂರು ನೀಡಿದ್ದಾರೆ.

ಬೈರಾಪುರದ ದಿಲೀಪ್ ಕುಮಾರ್, ಕಿರಣ್ ಹಾಗೂ ಮತ್ತೊಂದು ಗುಂಪಿನ ಹೊಸ ತಿರಮಕೂಡಲಿನ ಮಹೇಶ್, ಕುಮಾರ್, ಆನಂದ್ ಗಾಯಗೊಂಡಿದ್ದು, ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

> **ವರುಣದಲ್ಲಿ ಸೋಲುವ ಹತಾಶೆಯಿಂದ ಗಲಾಟೆ ಮಾಡಿಸುತ್ತಿರುವ ಕಾಂಗ್ರೆಸ್, ಅದರಿಂದಲೇ ಚುನಾವಣೆ ಗೆಲ್ಲಬಹುದೆಂಬ ಭ್ರಮೆಯಲ್ಲಿದೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

'ತಿರುಮಕೂಡಲಿನ 'ಮಲ್ಲಣ್ಣ ಹೋಟೆಲ್'ಗೆ ತಿಂಡಿ ತಿನ್ನಲು ಹೋಗುತ್ತಿದ್ದಾಗ ಹುಡುಗನೊಬ್ಬ ಅಡ್ಡಲಾಗಿ ಬೈಕ್ ನುಗ್ಗಿಸಿದ. ಆಕ್ಷೇಪಿಸಿದ್ದಕ್ಕೆ ದಿಲೀಪ್ ಮತ್ತು ಹಲವರನ್ನು ಕರೆಯಿಸಿ ಹಲ್ಲೆ ನಡೆಸಿದ್ದಾನೆ' ಎಂದು ಮಹೇಶ್ ದೂರಿದ್ದಾರೆ.

'ಹುಡುಗ ತಿಂಡಿ ತಿನ್ನಲು ಹೋದಾಗ ಗಲಾಟೆ ಮಾಡಿದ್ದರು. ಕರೆ ಬಂದಾಗ ಸ್ಥಳಕ್ಕೆ ಹೋದೆ. ಆಗ ಬಿಜೆಪಿ ಕಡೆಯವ್ರ ನೀವು ಎಂದು ಕುಮಾರ್ ದೊಣ್ಣೆಯಲ್ಲಿ ಹೊಡೆದರು. ಕಾಂಗ್ರೆಸ್‌ಗೆ ಮತ ಹಾಕದಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದೆಚ್ಚರಿಸಿದರು' ಎಂದು ದಿಲೀಪ್ ಕುಮಾರ್ ವಿಡಿಯೊದಲ್ಲಿ ಆರೋಪಿಸಿದ್ದಾರೆ.

ಆದರೆ, ವಿಡಿಯೊದ ಯಾವುದೇ ಅಂಶಗಳು ಅವರ ದೂರಿನಲ್ಲಿ ಇಲ್ಲ. 'ಚುನಾವಣಾ ವಿಚಾರ ತೆಗೆದು' ಹಲ್ಲೆ ನಡೆಸಲಾಗಿದೆ ಎಂದಷ್ಟೆ ಇದೆ.

ಮೈಸೂರು, ಮಂಡ್ಯದಲ್ಲಿ ಧಾರಾಕಾರ ಮಳೆ
ಹೆದ್ದಾರಿಯಲ್ಲಿ ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ



ಸಂಗನಬಸವನದೊಡ್ಡಿ ಅಂಡರ್‌ಪಾಸ್ ಬಳಿ ಸೋಮವಾರ ಹೆದ್ದಾರಿಯಲ್ಲಿ ಸಾಲುಗಟ್ಟಿ ನಿಂತ ವಾಹನಗಳು

ಮೈಸೂರು/ರಾಮನಗರ: ಮೈಸೂರು ಮತ್ತು ಮಂಡ್ಯದಲ್ಲಿ ಸೋಮವಾರ ಸಂಜೆ ಧಾರಾಕಾರ ಮಳೆ ಸುರಿಯಿತು. ರಾಮನಗರದಲ್ಲಿ ಸಾಧಾರಣ ಮಳೆಯಾಯಿತು.

ಮೈಸೂರಿನ ಬನ್ನಿಮಂಟಪದ ಹೈವೇ ರಸ್ತೆ ಹಾಗೂ ರಾಜೇಂದ್ರ ನಗರದಲ್ಲಿ ಮರಗಳು ಉರುಳಿದವು. ಮೈಸೂರು ತಾಲ್ಲೂಕಿನ ಜಯಪುರ, ಹುಣಸೂರು ತಾಲ್ಲೂಕಿನ ಧರ್ಮಾಪುರ, ಎಚ್.ಡಿ.ಕೋಟೆಯಲ್ಲಿ ಗುಡುಗು– ಸಿಡಿಲು ಸಹಿತ ಜೋರು ಮಳೆಯಾಯಿತು. ಕೆಲವೆಡೆ ಚರಂಡಿಗಳಲ್ಲಿ ಮಳೆ ನೀರು ತುಂಬಿ ರಸ್ತೆಗಳಲ್ಲಿ ಹರಿಯಿತು. ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ನಂಜನಗೂಡು, ಚಾಮರಾಜನಗರ ಜಿಲ್ಲೆಯ ಚಾಮರಾಜನಗರ, ಯಳಂದೂರು, ಗುಂಡ್ಲುಪೇಟೆ ಹಾಗೂ ಕೊಡಗು ಜಿಲ್ಲೆಯ ಪೊನ್ನಂಪೇಟೆ, ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಸಾಧಾರಣ ಮಳೆಯಾಯಿತು.

ಹಾಸನ ಜಿಲ್ಲೆಯ ಹೆತ್ತೂರು ಹೋಬಳಿಯ ಪಶ್ಚಿಮಘಟ್ಟ ಅಂಚಿನ ಗ್ರಾಮಗಳಲ್ಲಿ ಭಾನುವಾರ ರಾತ್ರಿ ಒಂದು ಗಂಟೆಗೂ ಹೆಚ್ಚು ಕಾಲ ಧಾರಾಕಾರ ಮಳೆಯಾಯಿತು.

ರಾಮನಗರ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದ್ದು, ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಸಂಗನಬಸವನ ದೊಡ್ಡಿ ಅಂಡರ್‌ಪಾಸ್ ಬಳಿ ಸಂಚಾರ ದಟ್ಟಣೆ ಉಂಟಾಯಿತು.

ಅಂಡರ್‌ಪಾಸ್ ಬಳಿ ಸರ್ವಿಸ್ ರಸ್ತೆಯಲ್ಲಿ ಮತ್ತೆ ಅಲ್ಪ ಪ್ರಮಾಣದಲ್ಲಿ ನೀರು ನಿಂತಿದ್ದು, ನೀರು ಹೊರ ಹಾಕುವ ಕಾರ್ಯ ನಡೆದಿತ್ತು. ಇದರಿಂದಾಗಿ ಬೈಕ್‌ಗಳು ಎಕ್ಸ್‌ಪ್ರೆಸ್ ವೇನಲ್ಲಿಯೇ ಸಂಚರಿಸಿದವು.

ಮಳೆ ಬಂದ ವೇಳೆ ಮೇಲ್ಸೇತುವೆ ಕೆಳಗೆ 50ಕ್ಕೂ ಹೆಚ್ಚು ಬೈಕ್ ಸವಾರರು ಆಶ್ರಯ ಪಡೆದರು. ಇದರಿಂದಾಗಿ ಹೆದ್ದಾರಿಯಲ್ಲಿ ಕಿ.ಮೀ. ಉದ್ದಕ್ಕೆ ವಾಹನಗಳು ಸಾಲು ಗಟ್ಟಿ ನಿಂತಿದ್ದವು.

ರಾಮನಗರ ಸಂಚಾರ ಪೊಲೀಸರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಮಳೆ ನಿಂತ ಬಳಿಕ ವಾಹನ ಸಂಚಾರ ಸಹಜ ಸ್ಥಿತಿಗೆ ಮರಳಿತು.

ಧರ್ಮಸ್ಥಳದಲ್ಲಿ 51ನೇ ವರ್ಷದ ಸಾಮೂಹಿಕ ವಿವಾಹ ನಾಳೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳ ಮಂಜುನಾಥಸ್ವಾಮಿ ಕ್ಷೇತ್ರದಲ್ಲಿ ಮೇ.3ರಂದು (ಬುಧವಾರ) 51ನೇ ವರ್ಷದ ಸಾಮೂಹಿಕ ವಿವಾಹ ಸಮಾರಂಭ ನಡೆಯಲಿದೆ. ಸಂಜೆ 6.40ಕ್ಕೆ ಗೋಧೂಳಿ ಲಗ್ನ ಮುಹೂರ್ತದಲ್ಲಿ 201 ಜೋಡಿ ವಧು–ವರರು ದಾಂಪತ್ಯ ಜೀವನಕ್ಕೆ ಪಾದರ್ಪಣೆ ಮಾಡಲು ಈಗಾಗಲೇ ಹೆಸರು ನೋಂದಾಯಿಸಿದ್ದಾರೆ.

ಮೇ.2ರಂದು ದಾಖಲೆ ಪರಿಶೀಲಿಸಿ ವಧುವಿಗೆ ಸೀರೆ, ರವಿಕೆ ಕಣ ಹಾಗೂ ವರನಿಗೆ ಧೋತಿ-ಶಾಲು ನೀಡಲಾಗುವುದು.

ಬುಧವಾರ ಸಂಜೆ 5ರಿಂದ ಮೆರವಣಿಗೆಯಲ್ಲಿ ವಧು-ವರರು ದೇವಸ್ಥಾನಕ್ಕೆ ಪ್ರದಕ್ಷಿಣೆ ಬಂದು, ಅಮೃತವರ್ಷಿಣಿ ಸಭಾಭವನಕ್ಕೆ ಹೋಗುವರು. ಅಲ್ಲಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ, ಹೇಮಾವತಿ ವಿ. ಹೆಗ್ಗಡೆ, ಚಿತ್ರನಟ ತೂಗುದೀಪ ದರ್ಶನ್ ಅವರು ಮಂಗಳಸೂತ್ರ ವಿತರಿಸುವರು.

ವರದಕ್ಷಿಣೆ ಹಾಗೂ ಮದುವೆಗಾಗಿ ಆಗುವ ದುಂದುವೆಚ್ಚ ತಡೆಯುವ ಉದ್ದೇಶದಿಂದ ಧರ್ಮಸ್ಥಳದಲ್ಲಿ 1972ರಲ್ಲಿ ಉಚಿತ ಸಾಮೂಹಿಕ ವಿವಾಹ ಸಮಾರಂಭ ಪ್ರಾರಂಭಿಸಲಾಗಿತ್ತು. 50 ವರ್ಷಗಳಲ್ಲಿ 12,576 ಜೋಡಿಗಳು ವಿವಾಹವಾಗಿದ್ದಾರೆ.

ಕೊಚ್ಚಿ ಹೋಗಿದ್ದವರು ಶವವಾಗಿ ಪತ್ತೆ

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ಭಾರಿ ಮಳೆಯಿಂದ ಹಳ್ಳದಲ್ಲಿ ಕೊಚ್ಚಿಹೋಗಿದ್ದ ಹೆಡಗಾಪುರ ಗ್ರಾಮದ ತಾಯಿ ಸುನಂದಾ ಸಂಗಪ್ಪ (41), ಮಗ ಸುಮಿತ್ ಸಂಗಪ್ಪ (14) ಮತ್ತು ಮಗಳು ಐಶ್ವರ್ಯಾ ಸಂಗಪ್ಪ (16) ಅವರ ಶವ ಸೋಮವಾರ ಬೆಳಿಗ್ಗೆ ಪತ್ತೆಯಾಗಿವೆ. ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಭಾನುವಾರ ಸಂಜೆ ಹೊಲದಿಂದ ಮನೆಗೆ ಬರುವಾಗ ಭಾರಿ ಮಳೆಗೆ ಹಳ್ಳದ ಮೇಲೆ ನೀರು ಹರಿಯುತ್ತಿತ್ತು. ನೀರು ಕಡಿಮೆ ಇದ್ದ ಕಾರಣ ಸೇತುವೆ ದಾಟುವಾಗ, ಒಮ್ಮೆಲೇ ಹಳ್ಳಕ್ಕೆ ಪ್ರವಾಹ ಬಂದು ಒಂದೇ ಕುಟುಂಬದ ನಾಲ್ವರು ನೀರಿನಲ್ಲಿ ಕೊಚ್ಚಿ ಹೋಗಿದ್ದರು. ಸುನಂದಾ ಪತಿ ಸಂಗಪ್ಪ ಈಜಿ ದಡ ಸೇರಿದ್ದರು.

ಸುಧಾ, ಮಯೂರ ಓದಿ

ಬಿಜೆಪಿ ಕರ್ನಾಟಕ
ಡಬಲ್ ಎಂಜಿನ್ ಸರ್ಕಾರ
ಕರ್ನಾಟಕದ ಅಭಿವೃದ್ಧಿಯ ಸಾಕಾರ
#ಬಿಜೆಪಿಯೇಭರವಸೆ
ಚುನಾವಣಾ ಪ್ರಚಾರ ಸಭೆಗಳು
2 ಮೇ 2023 | ಮಂಗಳವಾರ

ಶ್ರೀ ಅಮಿತ್ ಶಾ
ಮಾನ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವರು
ಬೆ. 10:30 ವರುಣ
ಮ. 12:00 ಹನೂರು
ಮ. 1:30 ಸಂತೇಮಾರನಹಳ್ಳಿ (ಕೊಳ್ಳೇಗಾಲ)
ಮ. 3:30 ಬಿಟಿಎಂ ಲೇಔಟ್-ರೋಡ್ ಶೋ

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಸಂಸದೀಯ ಮಂಡಳಿಯ ಸದಸ್ಯರು, ಬಿಜೆಪಿ ಹಾಗೂ ಮಾಜಿ ಮುಖ್ಯಮಂತ್ರಿಗಳು
ಮ. 3:30 ಗುಂಡ್ಲುಪೇಟೆ
ಸಂ. 5:00 ಚಾಮರಾಜನಗರ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ
ಬೆ. 10:30 ಕುಂದಗೋಳ-ರೋಡ್ ಶೋ
ಮ. 12:00 ನವಲಗುಂದ-ರೋಡ್ ಶೋ
ಮ. 2:30 ಶಿರಹಟ್ಟಿ-ರೋಡ್ ಶೋ
ಸಂ. 4:30 ಹಾನಗಲ್-ರೋಡ್ ಶೋ

ಶ್ರೀ ನಳಿನ್ ಕುಮಾರ್ ಕಟೀಲ್
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ
ಬೆ. 8:00 ತುಮಕೂರು ನಗರ
ಬೆ. 11:30 ತುರುವೇಕೆರೆ

ಡಾ. ಹಿಮಂತ ಬಿಸ್ವಾಸ್ ಶರ್ಮಾ
ಮಾನ್ಯ ಮುಖ್ಯಮಂತ್ರಿಗಳು, ಅಸ್ಸಾಂ
ಬೆ. 10:30 ಜಯನಗರ (ಯುವ ಸಂವಾದ)
ಸಂ. 4:00 ವಿವಿ ಪುರ (ಪ್ರಬುದ್ಧರ ಸಂವಾದ)
ಸಂ. 6:30 ಬ್ಯಾಟರಾಯನಪುರ

ಶ್ರೀ ಡಿ.ವಿ. ಸದಾನಂದ ಗೌಡ
ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರು
ಬೆ. 11:00 ಪುತ್ತೂರು-ರೋಡ್ ಶೋ

ಶ್ರೀ ಗೋವಿಂದ ಕಾರಜೋಳ
ಮಾನ್ಯ ಜಲಸಂಪನ್ಮೂಲ ಖಾತೆ ಸಚಿವರು
ಬೆ. 9:30 ಬಳ್ಳಾರಿನಗರ-ರೋಡ್ ಶೋ
ಬೆ. 11:00 ಕಂಪ್ಲಿ-ರೋಡ್ ಶೋ
ಮ. 2:30 ಸಂಡೂರು-ರೋಡ್ ಶೋ

ಶ್ರೀ ಜ್ಯೋತಿರಾದಿತ್ಯ ಸಿಂದಿಯಾ
ಮಾನ್ಯ ಕೇಂದ್ರ ನಾಗರಿಕ ವಿಮಾನಯಾನ ಖಾತೆ ಸಚಿವರು
ಮ. 12:30 ಮುಳಬಾಗಿಲು
ಮ. 3:00 ಬಂಗಾರಪೇಟೆ-ರೋಡ್ ಶೋ
ಸಂ. 5:00 ಶ್ರೀನಿವಾಸಪುರ-ರೋಡ್ ಶೋ

ಶ್ರೀ ಎಲ್. ಮುರುಗನ್
ಮಾನ್ಯ ಕೇಂದ್ರ ಸಹಾಯಕ ಮೀನುಗಾರಿಕೆ, ಹೈನುಗಾರಿಕೆ ಮತ್ತು ಡೈರಿ ಖಾತೆ ಸಚಿವರು
ಬೆ. 9:00 ತುಮಕೂರು
ಸಂ. 4:00 ಬಳ್ಳಾರಿ

ಶ್ರೀ ಸಿ.ಟಿ. ರವಿ
ಮಾನ್ಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು, ಬಿಜೆಪಿ
ಬೆ. 10:30 ಬೇಲೂರು-ರೋಡ್ ಶೋ
ಮ. 2:30 ಸಕಲೇಶಪುರ-ರೋಡ್ ಶೋ
ಸಂ. 4:30 ಮೂಡಿಗೆರೆ-ರೋಡ್ ಶೋ

ಶ್ರೀಮತಿ ವಿಜಯ ರಾಹತ್ಕರ್
ಮಾನ್ಯ ರಾಷ್ಟ್ರೀಯ ಕಾರ್ಯದರ್ಶಿಗಳು, ಬಿಜೆಪಿ
ಬೆ. 11:00 ಬೆಳಗಾವಿ ಉತ್ತರ
ಮ. 1:00 ಬೆಳಗಾವಿ ಗ್ರಾಮೀಣ
ಮ. 3:30 ಖಾನಾಪುರ

ಶ್ರೀ ಬಸನಗೌಡ ಪಾಟೀಲ್ ಯತ್ನಾಳ್
ಮಾನ್ಯ ಶಾಸಕರು
ಬೆ. 9:30 ಹುಬ್ಬಳ್ಳಿ-ಧಾರವಾಡ ಸೆಂಟ್ರಲ್-ರೋಡ್ ಶೋ
ಮ. 12:00 ನವಲಗುಂದ-ರೋಡ್ ಶೋ
ಮ. 2:30 ನರಗುಂದ-ರೋಡ್ ಶೋ
ಸಂ. 5:00 ರೋಣ-ರೋಡ್ ಶೋ

ಶ್ರೀ ಕೆ. ಅಣ್ಣಾಮಲೈ
ರಾಜ್ಯಾಧ್ಯಕ್ಷರು, ಬಿಜೆಪಿ, ತಮಿಳುನಾಡು ಹಾಗೂ ಕರ್ನಾಟಕ ಸಹ ಉಸ್ತುವಾರಿ
ಬೆ. 9:00 ಸರ್ವಜ್ಞನಗರ-ರೋಡ್ ಶೋ
ಬೆ. 11:00 ಶಿವಾಜಿನಗರ-ರೋಡ್ ಶೋ
ಮ. 1:30 ಶಾಂತಿನಗರ-ರೋಡ್ ಶೋ

ಶ್ರೀ ಸುದೀಪ್
ಖ್ಯಾತ ಚಲನಚಿತ್ರ ನಟರು
ಶ್ರೀ ಛಲವಾದಿ ನಾರಾಯಣ ಸ್ವಾಮಿ
ಮಾನ್ಯ ವಿಧಾನಪರಿಷತ್ ಸದಸ್ಯರು
ಬೆ. 11:00 ಜಮಖಂಡಿ-ರೋಡ್ ಶೋ
ಮ. 2:00 ಬೀಳಗಿ-ರೋಡ್ ಶೋ
ಮ. 3:30 ಬಾಗಲಕೋಟೆ-ರೋಡ್ ಶೋ
ಸಂ. 5:00 ಗುಳೇದಗುಡ್ಡ-ರೋಡ್ ಶೋ

ಬನ್ನಿ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳೋಣ
ಕಮಲದ ಬಟನ್ ಒತ್ತಿ ಬಿಜೆಪಿ ಗೆಲ್ಲಿಸಿ
ಪ್ರಕಟಣೆ : ಬಿಜೆಪಿ ಕರ್ನಾಟಕ

ದುಬಾರಿಯಾದ ಬಿಜೆಪಿ ಅಭ್ಯರ್ಥಿ ಮಾತು • ಸ್ವರೂಪ್ ಗೆಲುವಿಗೆ ಪಣ ತೊಟ್ಟ ಭವಾನಿ

ಪ್ರೀತಂ ಸವಾಲು ಸ್ವೀಕರಿಸಿದ ರೇವಣ್ಣ ಕುಟುಂಬ

• ಚಿದಂಬರಪ್ರಸಾದ

ಹಾಸನ: ಜೆಡಿಎಸ್ ಟಿಕೆಟ್ ಗೊಂದಲದಿಂದ ಚುನಾವಣೆ ಘೋಷಣೆಗೂ ಮುನ್ನವೇ ರಾಜ್ಯದ ಗಮನ ಸೆಳೆದಿದ್ದ ಹಾಸನ ಕ್ಷೇತ್ರವು ಬಿಜೆಪಿ ಹಾಗೂ ಜೆಡಿಎಸ್‌ಗೆ 'ಪ್ರತಿಷ್ಠೆ'ಯ ಪ್ರಶ್ನೆಯಾಗಿದೆ.

ಶಾಸಕ, ಬಿಜೆಪಿಯ ಅಭ್ಯರ್ಥಿ ಪ್ರೀತಂಗೌಡ, 'ರೇವಣ್ಣ ಕುಟುಂಬದ ಯಾರೇ ಸ್ಪರ್ಧಿಸಿದರೂ 50 ಸಾವಿರ ಮತಗಳಿಂದ ಸೋಲಿಸುತ್ತೇನೆ. ಒಂದು ಮತ ಕಡಿಮೆಯಾದರೂ, ರಾಜೀನಾಮೆ ನೀಡಿ, ಮತ್ತೆ ಚುನಾವಣೆಗೆ ಹೋಗುತ್ತೇನೆ' ಎಂದು ಹಾಕಿದ್ದ ಸವಾಲು, ಕ್ಷೇತ್ರದಲ್ಲಿ ಕಿಡಿ ಹೊತ್ತಿಸಿತ್ತು.

ಸವಾಲನ್ನು ಗಂಭೀರವಾಗಿ ಪರಿಗಣಿಸಿದ ರೇವಣ್ಣ ಕುಟುಂಬ, 'ಹಾಸನದಲ್ಲಿ ಸ್ಪರ್ಧಿಸಲೇಬೇಕು' ಎಂದು ಪಣ ತೊಟ್ಟ ವೇಳೆ, ರೇವಣ್ಣ ಪತ್ನಿ ಭವಾನಿ, 'ಹಾಸನದಲ್ಲಿ ನಾನೇ ಅಭ್ಯರ್ಥಿ' ಎಂದು ಹೇಳಿದ್ದು, ಟಿಕೆಟ್ ಗೊಂದಲವನ್ನೂ ಸೃಷ್ಟಿಸಿತ್ತು.

ಭವಾನಿಗೆ ಟಿಕೆಟ್ ನೀಡಬೇಕು ಎನ್ನುವ ರೇವಣ್ಣ ಕುಟುಂಬದ ಬೇಡಿಕೆಗೆ ಸೊಪ್ಪು ಹಾಕದ ಎಚ್‌.ಡಿ. ಕುಮಾರಸ್ವಾಮಿ, 'ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ಮೀಸಲು' ಎಂದು ಪಟ್ಟು ಹಿಡಿದಿದ್ದರು. ದೇವೇಗೌಡರ ಮಧ್ಯಪ್ರವೇಶದಿಂದ ಮಾಜಿ ಶಾಸಕ ದಿವಂಗತ ಎಚ್‌.ಎಸ್. ಪ್ರಕಾಶ್ ಅವರ ಪುತ್ರ ಸ್ವರೂಪ್ ಅವರಿಗೇ ಟಿಕೆಟ್ ನೀಡಲಾಗಿದೆ.

ತಮ್ಮ ಕುಟುಂಬದವರು ಕಣದಲ್ಲಿ ಇಲ್ಲದಿದ್ದರೂ, ಪ್ರೀತಂಗೌಡರ ಸವಾಲನ್ನು ರೇವಣ್ಣ ಕುಟುಂಬ ವೈಯಕ್ತಿಕವಾಗಿ ಪರಿಗಣಿಸಿರುವುದು ವಿಶೇಷ. ಹೀಗಾಗಿ ಸ್ವರೂಪ್ ಇಲ್ಲಿ ನೆಪಮಾತ್ರ.

ಕ್ಷೇತ್ರದಲ್ಲಿ ಒಕ್ಕಲಿಗರು, ಅದರಲ್ಲೂ ಒಳಪಂಗಡವಾದ ದಾಸ ಒಕ್ಕಲಿಗರೇ ಹೆಚ್ಚು. ಮೂರೂ ಪಕ್ಷಗಳು ಈ ಸಮುದಾಯದವರಿಗೇ ಟಿಕೆಟ್ ನೀಡಿದ್ದು, ಮತಗಳು ಹಂಚಿ ಹೋಗುವುದು ನಿಶ್ಚಿತ. ಹೀಗಾಗಿ ಬೇರೆ ಸಮುದಾಯಗಳ ಮತಗಳನ್ನು ಸೆಳೆಯುವಲ್ಲಿ ಪಕ್ಷಗಳು ಗಮನ ಹರಿಸಿವೆ.

'ಲಿಂಗಾಯತರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ, ಪಂಗಡದ ಮತಗಳ ಬುಟ್ಟಿಗೆ ಕೈ ಹಾಕಿದರೆ ಗೆಲ್ಲಬಹುದು' ಎಂಬುದು ಎಲ್ಲ ಪಕ್ಷಗಳ ಲೆಕ್ಕಾಚಾರ.

ತಿರುಗುಬಾಣವಾದ ಪಂಥಾಹ್ವಾನ

ಸ್ವರೂಪ್

'ಸವಾಲು ಸ್ವೀಕರಿಸಿ ರೇವಣ್ಣ ಕುಟುಂಬದವರೇ ಕಣಕ್ಕಿಳಿದರೆ, ಕುಟುಂಬ ರಾಜಕಾರಣದ ದಾಳವನ್ನು ಉರುಳಿಸಬಹುದು. ಸ್ವರೂಪ್‌ಗೆ ಟಿಕೆಟ್ ನೀಡಿದರೆ, ಸುಲಭದಲ್ಲಿ ಗೆಲ್ಲಬಹುದು' ಎಂಬ ಲೆಕ್ಕಾಚಾರದಲ್ಲಿದ್ದ ಪ್ರೀತಂಗೌಡರಿಗೆ ತಮ್ಮ ಸವಾಲೇ ತಿರುಗುಬಾಣವಾಗಿದೆ.

ರೇವಣ್ಣ ಕುಟುಂಬ ಸ್ವರೂಪ್ ಬೆಂಬಲಿಸುತ್ತಿರುವುದು ಬಿಜೆಪಿಯಲ್ಲೂ ಆತಂಕವನ್ನು ತಂದೊಡ್ಡಿದೆ.

'ಜಿಲ್ಲೆಯ ಜೆಡಿಎಸ್‌ನಲ್ಲಿ ರೇವಣ್ಣ ಒಂದು ಶಕ್ತಿ. ಅವರಿಂದಲೇ ಪಕ್ಷದ ಅಭ್ಯರ್ಥಿ ಗೆಲ್ಲುತ್ತಿದ್ದರು. ಅವರ ಬೆಂಬಲವಿಲ್ಲದಿದ್ದರೆ ಅಭ್ಯರ್ಥಿ ಠೇವಣಿ ಕಳೆದುಕೊಳ್ಳುತ್ತಾರೆ' ಎಂದು ಸ್ವತಃ ಪ್ರೀತಂಗೌಡರೇ ಒಪ್ಪಿಕೊಳ್ಳುತ್ತಾರೆ!

ಪ್ರೀತಂ ಗೌಡ

ಹಾಸನ ಗಮನ ಸೆಳೆದ ಕಣ

ಸಾಕ್ಷಾತ್ ಸಮೀಕ್ಷೆ

ಅಲ್ಪಸಂಖ್ಯಾತರ ಮತಗಳನ್ನು ವಿಭಜಿಸಿ ಲಾಭ ಪಡೆಯಬೇಕೆಂಬುದು ಪ್ರೀತಂಗೌಡರ ತಂತ್ರ. ಪ್ರಚಾರ ಸಭೆಯಲ್ಲಿ ಅವರು, 'ಜೆಡಿಎಸ್‌ಗೆ ಮತ ಹಾಕಿದರೆ, ಬಿಜೆಪಿಗೇ ಹಾಕಿದಂತೆ. ದೇವೇಗೌಡರು, ಮೋದಿ ಸಾಹೇಬರು ಮಾತನಾಡಿಕೊಂಡಿದ್ದಾರೆ. ಮೈಸೂರಿನ ಮೇಲೆ ಬೆಂಗಳೂರಿಗೆ ಹೋಗೋದು ಬೇಡ. ಹಾಸನದಿಂದ ಬೆಳ್ಳೂರು ಕ್ರಾಸ್ ಮೇಲೆ ಹೋಗಿ ಎಂದು ಹೇಳುತ್ತೇನೆ. ಅದರ ಮೇಲೆ ನಿಮ್ಮಿಷ್ಟ' ಎಂದಿದ್ದರು. 'ಆ ಮೂಲಕ ಜೆಡಿಎಸ್‌ಗೆ ಮತ ನೀಡಬೇಡಿ ಎಂದು ಅವರು ಅಲ್ಪಸಂಖ್ಯಾತರಿಗೆ ಹೇಳಿದ್ದಾರೆ' ಎಂದು ವಿಶ್ಲೇಷಿಸಲಾಗುತ್ತಿದೆ.

'ಕಳೆದ ಬಾರಿ ಕಾಂಗ್ರೆಸ್‌ನವರು ರಾಹುಲ್ ಗಾಂಧಿ ಮೂಲಕ ಜೆಡಿಎಸ್, ಬಿಜೆಪಿಯ ಬಿ ಟೀಂ ಎಂದು ಹೇಳಿಸಿದ್ದರು. ಅದರಿಂದಲೇ ನಾವು ಸೋಲಬೇಕಾಯಿತು' ಎಂದು ಎಚ್‌.ಡಿ.ರೇವಣ್ಣ ಆರೋಪಿಸುತ್ತಲೇ ಬಂದಿದ್ದಾರೆ.

2004 ರಿಂದ 2013ರವರೆಗೆ ಮೂರು ಚುನಾವಣೆಯಲ್ಲಿ ಜೆಡಿಎಸ್‌ನ ಎಚ್‌.ಎಸ್. ಪ್ರಕಾಶ್ ಆಯ್ಕೆಯಾಗಿದ್ದರು. ಕ್ಷೇತ್ರದ ಹಿಡಿತ ರೇವಣ್ಣ ಕೈಯಲ್ಲಿಯೇ ಇತ್ತು. 2018 ರಲ್ಲಿ ಬಿಜೆಪಿಯ ಪ್ರೀತಂಗೌಡ ಗೆದ್ದ ಬಳಿಕ ಹಿಡಿತ ಸಂಪೂರ್ಣ ಕೈತಪ್ಪಿದೆ.

'ಪ್ರೀತಂಗೌಡರನ್ನು ಸೋಲಿಸಿ, ಕ್ಷೇತ್ರದಲ್ಲಿ ಹಿಡಿತ ಸಾಧಿಸಲೇಬೇಕು' ಎಂಬ ಏಕೈಕ ಉದ್ದೇಶದಿಂದ ಪ್ರಕಾಶ್ ಪುತ್ರ, ಪಕ್ಷದ ಅಭ್ಯರ್ಥಿ ಸ್ವರೂಪ್ ಜೊತೆಗಿನ ಮುನಿಸನ್ನು ರೇವಣ್ಣ ಮರೆತಿದ್ದಾರೆ. ಆಕಾಂಕ್ಷಿಯಾಗಿದ್ದ ಭವಾನಿ ಕೂಡ 'ಸ್ವರೂಪ್ ನನ್ನ ಮಗನಂತೆ' ಎಂದು, ಅವರಿಗೆ ಜೊತೆಯಾಗಿದ್ದಾರೆ. 'ಪ್ರೀತಂಗೌಡರನ್ನು ಸೋಲಿಸಿಯೇ ಸಿದ್ಧ' ಎನ್ನುತ್ತಿದ್ದಾರೆ.

ರೇವಣ್ಣ ದಂಪತಿಯಿಂದಾಗಿ ಸ್ವರೂಪ್ ಬಲ ಹೆಚ್ಚಿದೆ. ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರಾಗಿದ್ದ ಅವರಿಗೆ ಕ್ಷೇತ್ರದ ಗ್ರಾಮಗಳ ನಿಕಟ ಪರಿಚಯವೂ ಇದೆ. 'ತಂದೆ ದಿ.ಎಚ್.ಎಸ್. ಪ್ರಕಾಶ್ ಬಗ್ಗೆ ಕ್ಷೇತ್ರದಲ್ಲಿರುವ ಅನುಕಂಪವೂ ಕೈಹಿಡಿಯುತ್ತದೆ' ಎಂಬ ನಿರೀಕ್ಷೆಯೂ ಇದೆ.

'ಐದು ವರ್ಷದಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳು, ಜನರೊಂದಿಗಿನ ಒಡನಾಟಗಳು ಕೈಹಿಡಿಯುತ್ತವೆ' ಎಂಬ ನಿರೀಕ್ಷೆ ಪ್ರೀತಂಗೌಡರದ್ದು. ಪ್ರಧಾನಿ ಮೋದಿ, ಕೇಂದ್ರ ಸಚಿವ ಅಮಿತ್ ಶಾ ಬಂದು ಮತಯಾಚನೆ ಮಾಡಿರುವುದೂ, ಗೆಲುವಿಗೆ ಸಹಕಾರಿಯಾಗಬಹುದೆಂಬ ವಿಶ್ವಾಸದಲ್ಲಿದ್ದಾರೆ. ಪ್ರತಿ ಮನೆಗೂ ಖುದ್ದಾಗಿ ಹೋಗಿ ಮತಯಾಚಿಸುತ್ತಿದ್ದಾರೆ.

ಫಲಿತಾಂಶದ ಹಿನ್ನೋಟ		
ಕ್ಷೇತ್ರ	2013	2018
ಹಾಸನ	ಜೆಡಿಎಸ್	ಬಿಜೆಪಿ

2,23,021 ಹಾಸನ ಕ್ಷೇತ್ರದಲ್ಲಿರುವ ಒಟ್ಟು ಮತದಾರರು

1,10,153 ಪುರುಷರು

11 ಲೈಂಗಿಕ ಅಲ್ಪಸಂಖ್ಯಾತರು

1,12,857 ಮಹಿಳೆಯರು

9 ಕಣದಲ್ಲಿ ಇರುವ ಅಭ್ಯರ್ಥಿಗಳು



ಹಿಂದಿನ ಚುನಾವಣೆಯಲ್ಲಿ 3ನೇ ಸ್ಥಾನದಲ್ಲಿದ್ದ ಕಾಂಗ್ರೆಸ್‌ನಿಂದ ಬನವಾಸೆ ರಂಗಸ್ವಾಮಿ ಕಣದಲ್ಲಿದ್ದಾರೆ. ಆಕಾಂಕ್ಷಿಗಳಲ್ಲಿದ್ದ ಭಿನ್ನಮತವನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪರಿಹರಿಸಿರುವುದು ಸಮಾಧಾನ ತಂದರೂ ಗೆಲುವನ್ನು ತಂದುಕೊಡುವಂಥ ಪರಿಸ್ಥಿತಿ ಇಲ್ಲ.

ಜೆಡಿಎಸ್‌ನಿಂದ ಹೊರಬಂದಿರುವ ಅಗಿಲೆ ಯೋಗೀಶ್ ಆಪ್ ಅಭ್ಯರ್ಥಿಯಾಗಿದ್ದು, ಪಕ್ಷದ ಮತಗಳನ್ನು ಸೆಳೆಯುವ ಸಾಧ್ಯತೆ ಇದೆ.

ಚನ್ನಪಟ್ಟಣದಲ್ಲಿ ಭಾನುವಾರ ನಡೆದ ಬಿಜೆಪಿ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಕಾಣಿಸಿಕೊಂಡ ರೌಡಿಶೀಟರ್ ಮುದ್ದುಕೃಷ್ಣ (ಬಲತುದಿಯಲ್ಲಿ)

ಚನ್ನಪಟ್ಟಣ: ಮೋದಿ ಜೊತೆ ಕಾಣಿಸಿಕೊಂಡ ರೌಡಿಶೀಟರ್

ಪ್ರಜಾವಾಣಿ ವಾರ್ತೆ

ರಾಮನಗರ: ಚನ್ನಪಟ್ಟಣದಲ್ಲಿ ಭಾನುವಾರ ನಡೆದ ಬಿಜೆಪಿ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಜೊತೆ ವೇದಿಕೆಯಲ್ಲಿ ರೌಡಿಶೀಟರ್ ಮುದ್ದುಕೃಷ್ಣ ಕಾಣಿಸಿಕೊಂಡಿರುವುದು ಚರ್ಚೆಗೆ ಗ್ರಾಸವಾಗಿದೆ.

ವೇದಿಕೆಯಲ್ಲಿ ಮೋದಿ ಅವರಿಗೆ ಅಂಬೆಗಾಲು ಕೃಷ್ಣನ ಪ್ರತಿಮೆಯನ್ನು ಉಡುಗೊರೆಯಾಗಿ ನೀಡುವ ವೇಳೆ ಮುದ್ದುಕೃಷ್ಣ, ಮೋದಿ ಅವರ ಜೊತೆ ಕಾಣಿಸಿಕೊಂಡಿರುವ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಮಾರ್ಚ್‌ನಲ್ಲಿ ಮಂಡ್ಯಕ್ಕೆ ಭೇಟಿ ನೀಡಿದ್ದ ವೇಳೆ ರೌಡಿಶೀಟರ್ ಫೈಟರ್ ರವಿಗೆ ಪ್ರಧಾನಿ ಮೋದಿ ಕೈ ಮುಗಿದಿದ್ದಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿತ್ತು.

ಮೋದಿ ಜೊತೆಗೆ ಮುದ್ದುಕೃಷ್ಣ ಇರುವ ಫೋಟೊವನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಹಂಚಿಕೊಂಡಿದೆ.

'ಕೊಲೆ ಆರೋಪಿಗಳು ವೇದಿಕೆ ಏರುವ ಅವಕಾಶ ಇರುವುದು ಬಿಜೆಪಿಯಲ್ಲಿ ಮಾತ್ರ. ಒಬ್ಬ ಡಬಲ್ ಮರ್ಡರ್ ಆರೋಪಿಯು ಪ್ರಧಾನಿಗೆ ಸನ್ಮಾನ ಮಾಡಿದ್ದು, ಮೋದಿ ಕಿರೀಟಕ್ಕೆ ಬಿಜೆಪಿಯ ಮತ್ತೊಬ್ಬ ರೌಡಿಶೀಟರ್ ಗರಿ ಸೇರ್ಪಡೆ ಆಗಿದೆ' ಎಂದು ವ್ಯಂಗ್ಯವಾಡಿದೆ.

ಯಾರು ಈ ಮುದ್ದುಕೃಷ್ಣ: ಚನ್ನಪಟ್ಟಣದ ಎಲೆಕೇರಿ ನಿವಾಸಿ ಆಗಿರುವ ಮುದ್ದುಕೃಷ್ಣ 2009ರಲ್ಲಿ ಬೆಂಗಳೂರಿನ ಸುಬ್ರಮಣ್ಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಜೋಡಿ ಕೊಲೆ ಸೇರಿದಂತೆ ಹಲವು ಅಪರಾಧ ಪ್ರಕರಣಗಳ ಆರೋಪಿ. ಚನ್ನಪಟ್ಟಣ ವ್ಯಾಪ್ತಿಯ ರೌಡಿಶೀಟರ್. ಈ ಹಿಂದೆ ಚನ್ನಪಟ್ಟಣ ಕಾಂಗ್ರೆಸ್‌ನ ನಗರ ಘಟಕದ ಅಧ್ಯಕ್ಷ, ಚನ್ನಪಟ್ಟಣ ನಗರಸಭೆಯ ಉಪಾಧ್ಯಕ್ಷ ಹಾಗೂ ಪ್ರಭಾರ ಅಧ್ಯಕ್ಷರಾಗಿ ಕೆಲಸ ಮಾಡಿರುವ ಮುದ್ದುಕೃಷ್ಣ, ಈಚೆಗಷ್ಟೇ ಸಿ.ಪಿ. ಯೋಗೇಶ್ವರ್ ನೇತೃತ್ವದಲ್ಲಿ ಬಿಜೆಪಿ ಸೇರಿದ್ದರು.

ಸರ್ವೋದಯ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ

ಭ್ರಷ್ಟಾಚಾರ ನಿರ್ಮೂಲನೆಗೆ ಮತದಾರರಿಂದಲೇ ನಾಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯಿತಿ ಸೇರಿದಂತೆ ಸ್ಥಳೀಯ ಮಟ್ಟದಲ್ಲಿನ ಭ್ರಷ್ಟಾಚಾರ ತಡೆಯುವುದೇ ದೊಡ್ಡ ಸವಾಲು ಎಂದು ಮೇಲುಕೋಟೆ ಕ್ಷೇತ್ರದ ಸರ್ವೋದಯ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ಬೆಂಗಳೂರು ಪ್ರೆಸ್‌ಕ್ಲಬ್ ಸೋಮವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭ್ರಷ್ಟಾಚಾರ ಸಾಮಾಜಿಕ ಪಿಡುಗಾಗಿ ಬೆಳೆದಿದೆ. ಮೊದಲು ಸ್ಥಳೀಯವಾಗಿ ನಿರ್ಮೂಲನೆ ಮಾಡಬೇಕು. ಜನರಲ್ಲಿ ಅರಿವು ಮೂಡಿಸಬೇಕು. ಪ್ರಾಮಾಣಿಕರನ್ನು ಆಯ್ಕೆ ಮಾಡುವ ಮೂಲಕ ಭ್ರಷ್ಟಾಚಾರ ಮುಕ್ತ ಆಂದೋಲನಕ್ಕೆ ಮತದಾರರೇ ನಾಂದಿ ಹಾಡಬೇಕು ಎಂದರು.

ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿ ನೀಡುವುದು ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ. ಅದಕ್ಕಾಗಿ ಸರ್ಕಾರ ಬೆಳೆ ವೆಚ್ಚ ಆಧಾರಿತ ಬೆಲೆ ನಿಗದಿ ಮಾಡಬೇಕು. ಯಾವುದೇ ರೈತ ಮಾಡುವ ಒಟ್ಟು ಖರ್ಚಿನ ಜತೆಗೆ, ಲಾಭ ಸೇರಿಸಿ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಬೇಕು. ಪ್ರತಿ ಟನ್ ಕಬ್ಬು ಬೆಳೆಯ ಮೇಲೆ ರೈತರು ₹ 400 ಸಾಲ ಮಾಡುತ್ತಿದ್ದಾರೆ. ಹೀಗೆ ಸಾಲ ಮಾಡುತ್ತಾ ಹೋದರೆ ರೈತರ ಬದುಕು ಹೇಗೆ ಹಸನಾಗುತ್ತದೆ ಎಂದು ಪ್ರಶ್ನಿಸಿದರು.

ಕೃಷಿ ಉತ್ಪನ್ನಗಳಿಗೆ ಪೂರಕವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ತೆರೆಯಬೇಕು. ಆಯಾ ಬೆಳೆ ಪ್ರದೇಶಗಳಿಗೆ ಅನುಗುಣವಾಗಿ ಕೃಷಿಪೂರಕ ಕೈಗಾರಿಕೆಗಳನ್ನು ಆರಂಭಿಸಬೇಕು. ಅಲ್ಲಿ ಸ್ಥಳೀಯ ರೈತರ ಕುಟುಂಬಗಳಿಗೆ ಉದ್ಯೋಗ ನೀಡಬೇಕು. ಜನರಿಗೆ ಅಗತ್ಯವಾದ ಆರೋಗ್ಯ, ಶಿಕ್ಷಣ, ಸಾರಿಗೆ ವ್ಯವಸ್ಥೆ ಮತ್ತಿತರ ಮೂಲಸೌಕರ್ಯ ಒದಗಿಸಬೇಕು ಎಂದರು.

ಹಲವು ಬಣಗಳಾಗಿ ಚದುರಿಹೋಗಿರುವ ರೈತ ಸಂಘಟನೆಗಳನ್ನು ಒಗ್ಗೂಡಿಸುವ ಕೆಲಸ ತುರ್ತಾಗಿ ಆಗಬೇಕಿದೆ. ರೈತರ ಕುರಿತು ಕಾಳಜಿ ಇರುವ, ರೈತ ಪರ ಹೋರಾಟಗಾರರನ್ನು ಒಂದು ಸೂರಿನಡಿ ತರಬೇಕಿದೆ. ಬದಲಾದ ಹೊಸ ಸಮಸ್ಯೆಗಳ ನಿವಾರಣೆಗೆ ಇದು ಅನಿವಾರ್ಯ ಎಂದರು.

ನಂದಿನಿ ರಾಜ್ಯದ ರೈತರ ಶಕ್ತಿ: ರಾಜ್ಯದ ರೈತರ ಆರ್ಥಿಕ ಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಲು ನಂದಿನಿ ಕಾರಣವಾಗಿದೆ. ರಾಜ್ಯದ ರೈತರ ಶಕ್ತಿ ನಂದಿನಿ. ಹಾಲು ಉತ್ಪಾದಕರ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳಬೇಕಿದೆ. ರೈತರ, ಹಾಲು ಉತ್ಪಾದಕರ ಸಹಕಾರ ಸಂಘಗಳನ್ನೂ ಬಲಪಡಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಜನಸೇವೆಗಾಗಿ ಕಂಪನಿ ಮಾರಾಟ

'ರಾಜಕೀಯ ಕ್ಷೇತ್ರ ಪ್ರವೇಶ ಅನಿರೀಕ್ಷಿತವಾದರೂ, ಕಳೆದ ಚುನಾವಣೆಯ ನಂತರ ರೈತ ಹೋರಾಟಗಳ ಜತೆಗೆ ರಾಜಕೀಯದಲ್ಲೂ ಸಕ್ರಿಯನಾಗಿರುವೆ. ಕ್ಷೇತ್ರದ ಸಮಸ್ಯೆಗಳ ವಿರುದ್ಧ ನಿರಂತರ ಧ್ವನಿ ಎತ್ತಿರುವೆ' ಎಂದು ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

'ಅಮೆರಿಕದಲ್ಲಿ ಸ್ವಂತ ಕಂಪನಿ ಕಟ್ಟಿದ್ದ ನಾನು ರೈತ ಚಳವಳಿ, ಜನ ಸೇವೆಗಾಗಿ ಕಂಪನಿಯನ್ನೇ ಮಾರಾಟ ಮಾಡಿ ಬಂದಿದ್ದೇನೆ. ಜನರ ಒತ್ತಾಯಕ್ಕಾಗಿ ಚುನಾವಣಾ ಕಣದಲ್ಲಿ ಇದ್ದೇನೆ. ಕಾಂಗ್ರೆಸ್ ಪಕ್ಷ ಬೆಂಬಲ ನೀಡಿದೆ. ಮಂಡ್ಯ ಸಂಸದೆ ಸುಮಲತಾ ಅವರೂ ಹಿಂದೆಯೇ ಬೆಂಬಲ ಘೋಷಿಸಿದ್ದಾರೆ. ಎಲ್ಲೆಡೆ ಉತ್ತಮ ಸ್ಪಂದನೆ ಸಿಗುತ್ತಿದೆ' ಎಂದರು.

ಮಕ್ಕಳಿಂದ ಪ್ರಚಾರ

ಬೆಂಗಳೂರಿನ ರಾಜರಾಜೇಶ್ವರಿನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮುನಿರತ್ನ ಅವರ ರೋಡ್ ಶೋದಲ್ಲಿ ಸೋಮವಾರ ಪಾಲ್ಗೊಂಡಿದ್ದ ಮಕ್ಕಳು (ಎಡಚಿತ್ರ). ಶಾಂತಿನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎನ್.ಎ. ಹ್ಯಾರಿಸ್ ಅವರು ಗೌತಮ್ ನಗರದಲ್ಲಿ ಬೆಂಬಲಿಗರೊಂದಿಗೆ ಮತಯಾಚನೆ ಮಾಡಿದ ಸಂದರ್ಭದಲ್ಲಿ ಮಕ್ಕಳು ಪಕ್ಷದ ಬಾವುಟ ಹಿಡಿದುಕೊಂಡಿದ್ದರು –ಪ್ರಜಾವಾಣಿ ಚಿತ್ರಗಳು

ಸ್ಮಾರ್ಟ್ ಸಿಟಿ ಉಲ್ಲೇಖ ಸಿ.ಎಂಗೆ ಮುಜುಗರ

ಮೈಸೂರು: 'ಸ್ಮಾರ್ಟ್ ಸಿಟಿ ಯೋಜನೆಗೆ ಮೈಸೂರು ಆಯ್ಕೆಯಾಗಿದ್ದು ₹ 1 ಸಾವಿರ ಕೋಟಿ ಅನುದಾನ ನೀಡಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಕ್ಕೆ ಸಾರ್ವಜನಿಕರಿಂದ ತೀವ್ರ ಆಕ್ಷೇಪ ವ್ಯಕ್ತವಾದ ಪ್ರಸಂಗ ಸೋಮವಾರ ನಡೆಯಿತು. ಇದರಿಂದ ಬೊಮ್ಮಾಯಿ ಮುಜುಗರ ಅನುಭವಿಸಿದರು. ಚಾಮರಾಜ ಕ್ಷೇತ್ರದ ಮಂಚೇಗೌಡನ ಕೊಪ್ಪಲಿನಲ್ಲಿ ನಡೆದ ರೋಡ್ ಶೋ ವೇಳೆ ಅವರು, ಈ ಕುರಿತು ಪ್ರಸ್ತಾಪಿಸಿದರು. 'ತಾಂತ್ರಿಕ ಕಾರಣದಿಂದ ನಗರವನ್ನು ಯೋಜನೆಗೆ ಆಯ್ಕೆ ಮಾಡಿಲ್ಲ. ಆದರೂ ಹಣ ಹೇಗೆ ಬಿಡುಗಡೆ ಯಾಯಿತು' ಎಂದು ಜನರು ಪ್ರಶ್ನಿಸಿದರು.

'2013ರಲ್ಲಿ ಬಿಎಸ್‌ವೈ, ಶೋಭಾ ಯಾರನ್ನು ಭೇಟಿ ಮಾಡಿದ್ದರೆಂದು ಬಹಿರಂಗಪಡಿಸುವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೆಹಲಿಯ ಲೀಲಾ ಪ್ಯಾಲೆಸ್‌ನಲ್ಲಿ 2013ರಲ್ಲಿ ಬಿ.ಎಸ್. ಯಡಿಯೂರಪ್ಪ ಮತ್ತು ಶೋಭಾ ಕರಂದ್ಲಾಜೆ ಯಾರನ್ನು ಭೇಟಿ ಮಾಡಿದ್ದರು ಎನ್ನುವುದನ್ನು 3-4 ದಿನಗಳಲ್ಲಿ ಬಹಿರಂಗಪಡಿಸುತ್ತೇನೆ' ಎನ್ನುವ ಮೂಲಕ ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಅವರಿಬ್ಬರೂ ಎರಡು ಬಾರಿ ಯಾರನ್ನು ಭೇಟಿ ಆಗಿದ್ದರು, ಏನು ಮಾತುಕತೆ ನಡೆದಿತ್ತು, ಮಾತುಕತೆ ಯಾಕೆ ವಿಫಲವಾಯಿತು ಎಂಬುದನ್ನೂ ಬಿಚ್ಚಿಡುತ್ತೇನೆ' ಎಂದೂ ಹೇಳಿದರು.

ಈ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, 'ನಾನು ಇದನ್ನು ವಿಸ್ತಾರವಾಗಿ ಬಹಿರಂಗಪಡಿಸುತ್ತೇನೆ. ಗಾಳಿಯಲ್ಲಿ ಗುಂಡು ಹೊಡೆಯುವ ಪ್ರಯತ್ನ ನಾನು ಮಾಡುವುದಿಲ್ಲ. ನನ್ನದು ನಿಜ ಗುಂಡು. ನಾನು ಈ ವಿಷಯವನ್ನು ಇದೇ 7ರ ಒಳಗೆ ಬಹಿರಂಗಪಡಿಸುತ್ತೇನೆ. ಅಲ್ಲಿಯವರೆಗೆ ಕಾಯಿರಿ' ಎಂದು ತಿಳಿಸಿದರು.

'ಹಿಂದೂ ಧರ್ಮದ ಬಗ್ಗೆ ಮಾತನಾಡಿದರೆ ಢಂ... ಢಂ...'

ಪ್ರಜಾವಾಣಿ ವಾರ್ತೆ

ಕುಂದಗೋಳ (ಧಾರವಾಡ ಜಿಲ್ಲೆ): 'ಕರ್ನಾಟಕದಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಆಡಳಿತವನ್ನು ಬಿಜೆಪಿ ತರಲಿದೆ. ನಮ್ಮ ಹಿಂದೂ ಧರ್ಮ ಹಾಗೂ ಭಾರತದ ಬಗ್ಗೆ ಏನಾದರೂ ಮಾತನಾಡಿದರೆ ಅಲ್ಲೇ ಢಂ... ಢಂ...' ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಕುಂದಗೋಳ ಬಿಜೆಪಿ ಅಭ್ಯರ್ಥಿ ಎಂ.ಆರ್.ಪಾಟೀಲ ಪರ ಸೋಮವಾರ ಪ್ರಚಾರ ಸಭೆ ನಡೆಸಿದ ಅವರು, 'ಉತ್ತರ ಪ್ರದೇಶದ ಜೈಲುಗಳಿಗೆ ಈಗ ಬಾಗಿಲುಗಳನ್ನು ಹಾಕುವುದನ್ನೇ ಬಿಟ್ಟಿದ್ದಾರೆ. ಏಕೆಂದರೆ ಕೈದಿಗಳೇ ಹೊರಗೆ ಹೋಗಲು ಇಚ್ಛಿಸುತ್ತಿಲ್ಲ. ಇಂಥ ಆಡಳಿತ ಕರ್ನಾಟಕದಲ್ಲೂ ತರುತ್ತೇವೆ. ಏನಾದರೂ ಅಂದರೆ ಶೂಟ್ ಮಾಡಲಾಗುವುದು' ಎಂದು ಹೇಳಿದರು.

ಇವರ ಈ ಮಾತುಗಳನ್ನು ಕೇಳಿಸಿಕೊಂಡ ಜನರು 'ಹೋ...' ಎಂದು ಕೂಗಿದರು...

ಈ ಕಾಂಗ್ರೆಸಿಗರು ನಾಲಾಯಕ್‌ಗಳು: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು 'ವಿಷದ ಹಾವು' ಎಂದರು. ಇದೇ ರೀತಿ ಕಾಂಗ್ರೆಸ್‌ನವರು ಹಲವು ರೀತಿಯಲ್ಲಿ ಪ್ರಧಾನಿಯನ್ನು ನಿಂದಿಸಿದ್ದಾರೆ. ಈ ಕಾಂಗ್ರೆಸಿಗರು ನಾಲಾಯಕ್‌ಗಳು. ಅದಕ್ಕಾಗಿ ಮಾತನಾಡುತ್ತಿದ್ದಾರೆ' ಎಂದು ಯತ್ನಾಳ ಹರಿಹಾಯ್ದರು. 'ಕಾಂಗ್ರೆಸ್‌ನ ಗಾಂಧಿ ಕುಟುಂಬ ಡೋಂಗಿ ಕುಟುಂಬವಾಗಿದೆ. ಇವು ಗಾಂಧಿಗಳೇ ಅಲ್ಲ. ಇಂದಿರಾ ಗಾಂಧೀನೇ ಅಲ್ಲ. ಇವರು ಖಾನ್‌ಗಳು. ಮಿಕ್ಸ್ ವೆಜ್ ಕುಟುಂಬವಾಗಿದೆ' ಎಂದು ಯತ್ನಾಳ ಕುಟುಕಿದರು.

ಬಿಜೆಪಿ ಏಕರೂಪಾಸ್ತ್ರ ಪ್ರಯೋಗ

ಒಂದನೇ ಪುಟದಿಂದ...

ಚುನಾವಣೆ ವೇಳೆ, ಬಡವರನ್ನು ಸೆಳೆಯಲು ಮುಂದಾಗಿರುವ ಬಿಜೆಪಿ, ಬಿಪಿಎಲ್ ಕುಟುಂಬಗಳನ್ನೇ ಆದ್ಯತೆಯಾಗಿ ಪರಿಗಣಿಸಿ, ಉಚಿತ ಕೊಡುಗೆಗಳ ಆಶ್ವಾಸನೆ ಕೊಟ್ಟಿದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ನಗರದ ಶಾಂಗ್ರಿಲಾ ಹೋಟೆಲ್‌ನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿದರು.

ಕೆಲವು ಉಚಿತ ಕೊಡುಗೆಗಳ ಜತೆಗೆ, ಹಿರಿಯ ನಾಗರಿಕರಿಗೆ ಪ್ರತಿ ವರ್ಷ ಉಚಿತವಾಗಿ ಆರೋಗ್ಯ ತಪಾಸಣೆ ಜತೆಗೆ ಕೈಗೆಟಕುವ ದರದಲ್ಲಿ ರೋಗ ನಿರ್ಣಯ ಸೌಲಭ್ಯ, ಕೃಷಿ ಮಾರುಕಟ್ಟೆಗಳಿಗೆ ಉತ್ಪನ್ನಗಳನ್ನು ಸಾಗಿಸುವ ರೈತರಿಗೆ ಉಚಿತ ಬಸ್ ಟಿಕೆಟ್ ಸೌಲಭ್ಯ. ಐಎಎಸ್, ಕೆಎಎಸ್, ಬ್ಯಾಂಕಿಂಗ್, ಸರ್ಕಾರಿ ಉದ್ಯೋಗಾಂಕಾಂಕ್ಷಿಗಳಿಗೆ ತರಬೇತಿ ಪಡೆಯಲು ಧನ ಸಹಾಯ, ವಿಧವೆಯರ ತಿಂಗಳ ಪಿಂಚಣಿಯನ್ನು ₹800 ರಿಂದ ₹2,000 ಕ್ಕೆ ಹೆಚ್ಚಿಸುವುದು, ತಿರುಪತಿ, ಅಯೋಧ್ಯೆ, ಕಾಶಿ, ರಾಮೇಶ್ವರ, ಕೊಲ್ಹಾಪುರ ಮತ್ತು ಕೇದಾರನಾಥ ಪುಣ್ಯ ಕ್ಷೇತ್ರಗಳಿಗೆ ಯಾತ್ರೆ ಕೈಗೊಳ್ಳುವ ಬಡ ಕುಟುಂಬಗಳಿಗೆ ಒಂದು ಬಾರಿಗೆ ₹25 ಸಾವಿರ ಧನಸಹಾಯದ ಭರವಸೆ ನೀಡಲಾಗಿದೆ.

ನಮ್ಮ ಉಚಿತ ಕೊಡುಗೆ ಭಿನ್ನ: 'ನಮ್ಮ ಭರವಸೆಗಳಿಗೂ ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಉಚಿತ ಕೊಡುಗೆಗಳ ಭರವಸೆಗಳಿಗೂ ವ್ಯತ್ಯಾಸವಿದೆ. ಅವರು ಉಚಿತ ವಿದ್ಯುತ್, ಉಚಿತ ನೀರು... ಹೀಗೆ ಹಲವು ಉಚಿತಗಳನ್ನು ಕೊಡುವುದಾಗಿ ಹೇಳುತ್ತಾರೆ. ನಾವು ಬಡವರ ಜೀವನಕ್ಕೆ ಅವಶ್ಯಕತೆ ಇರುವ ಪಡಿತರ, ಪೌಷ್ಟಿಕಾಂಶಯುಕ್ತ ಆಹಾರವನ್ನು ಉಚಿತವಾಗಿ ವಿತರಿಸುವ ಭರವಸೆ ನೀಡಿದ್ದೇವೆ. ಉಚಿತ ವಿದ್ಯುತ್‌ಗಿಂತ ಉಚಿತ ಪೌಷ್ಟಿಕ ಆಹಾರ ಅತಿ ಮುಖ್ಯವಲ್ಲವೇ' ಎಂದು ಸುದ್ದಿಗಾರರ ಪ್ರಶ್ನೆಗೆ ಜೆ.ಪಿ.ನಡ್ಡಾ ಪ್ರತಿಕ್ರಿಯಿಸಿದರು.

'ದೇಶದ ಬಡ ಜನರನ್ನು ಸಬಲೀಕರಿಸುವ ಅಗತ್ಯಗಳು ಯಾವುದಿದೆಯೋ ಅವುಗಳನ್ನು ಉಚಿತವಾಗಿ ನೀಡುವ ಘೋಷಣೆಗಳನ್ನು ಮಾಡಿದ್ದೇವೆ. ಉದಾಹರಣೆಗೆ ಬಡವರು, ಆಟೋ ಚಾಲಕರು, ಚಿಂದಿ ಆಯುವವರು, ಕಾರ್ಮಿಕರಿಗೆ ಆಯುಷ್ಮಾನ್ ಯೋಜನೆ ಅಡಿ ಉಚಿತ ಚಿಕಿತ್ಸೆ ನೀಡಲಾಗುತ್ತದೆ. ಲಕ್ಷಗಟ್ಟಲೆ ಚಿಕಿತ್ಸಾ ವೆಚ್ಚ ಭರಿಸಲಾಗದ ವರ್ಗಕ್ಕೆ ಇದು ಅತ್ಯುತ್ತಮ ಕೊಡುಗೆ ಅಲ್ಲವೇ? ಹೀಗಾಗಿ ಚಿಕಿತ್ಸಾ ವೆಚ್ಚವನ್ನು ₹5 ಲಕ್ಷದಿಂದ ₹10 ಲಕ್ಷಗಳಿಗೆ ಏರಿಸಲು ನಿರ್ಧರಿಸಿದ್ದೇವೆ' ಎಂದು ಅವರು ಸಮರ್ಥಿಸಿಕೊಂಡರು.

'ಬಡವರು ಮತ್ತು ಕೂಲಿಕಾರರಿಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ, ಆರೋಗ್ಯಕರ ಆಹಾರ ನೀಡುವ ಅಟಲ್ ಆಹಾರ ಕೇಂದ್ರವನ್ನು ಸ್ಥಾಪಿಸುತ್ತೇವೆ. ರಾಜ್ಯದ ಎಲ್ಲ ಮಹಾನಗರ ಪಾಲಿಕೆಯ ವಾರ್ಡ್‌ಗಳಲ್ಲೂ ಜಾರಿ ಮಾಡುತ್ತೇವೆ. ಆದರೆ, ಇಂದಿರಾ ಕ್ಯಾಂಟೀನ್ ಬಗ್ಗೆ ನನಗೆ ಗೊತ್ತಿಲ್ಲ' ಎಂದರು. 'ಅಟಲ್ ಆಹಾರ ಕೇಂದ್ರ ಎಂದರೆ, ಇಂದಿರಾ ಕ್ಯಾಂಟೀನ್‌ನ ಹೆಸರಷ್ಟೇ ಬದಲಾವಣೆಯಲ್ಲವೇ' ಎಂಬ ಪ್ರಶ್ನೆಗೆ ಉತ್ತರಿಸಿದರು.

ಪ್ರಣಾಳಿಕೆಯಲ್ಲಿರುವ ಪ್ರಮುಖ ಭರವಸೆಗಳು

- ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ ಯೋಜನೆ ಅಡಿ ಪ್ರತಿ ಬಿಪಿಎಲ್ ಕುಟುಂಬಕ್ಕೆ ಚಿಕಿತ್ಸಾ ವಿಮಾ ಮೊತ್ತ ₹5 ಲಕ್ಷದಿಂದ ₹10 ಲಕ್ಷಕ್ಕೆ ಹೆಚ್ಚಳ
- ಮೈಸೂರು, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿಯಲ್ಲಿ ಮೆಟ್ರೊ ರೈಲು
- ರಾಜ್ಯದಾದ್ಯಂತ ನಿವೇಶನರಹಿತ/ವಸತಿರಹಿತರಿಗೆ ಕಂದಾಯ ಇಲಾಖೆ ಮೂಲಕ 10 ಲಕ್ಷ ವಸತಿ ನಿವೇಶನಗಳ ಹಂಚಿಕೆ
- ಬೆಂಗಳೂರಿನ ಅಪಾರ್ಟ್‌ಮೆಂಟ್‌ಗಳಲ್ಲಿ ಸುಲಲಿತ ಜೀವನಕ್ಕೆ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯಿದೆಗೆ ತಿದ್ದುಪಡಿ ತಂದು ಕುಂದುಕೊರತೆಗಳ ಪರಿಹಾರಕ್ಕೆ ಆನ್ ಲೈನ್ ವ್ಯವಸ್ಥೆ ಜಾರಿ
- ಎಲ್ಲ ತಾಲ್ಲೂಕುಗಳಲ್ಲೂ ಕಿಮೋಥೆರಪಿ, ಡಯಾಲಿಸಿಸ್ ಸೇವೆ ಪ್ರಯೋಗಾಲಯ ಮತ್ತು ರೋಗ ನಿರ್ಣಯ ಕೇಂದ್ರಗಳ ಸೌಲಭ್ಯ
- ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಕಿರು ಶೀತಲೀಕರಣ ಸೌಲಭ್ಯಗಳು ಮತ್ತು ಕೃಷಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ₹30 ಸಾವಿರ ಕೋಟಿ ಮೊತ್ತದ ಕೆ-ಅಗ್ರಿಫಂಡ್ ಸ್ಥಾಪನೆ
- ಕನ್ನಡ ಚಿತ್ರೋದ್ಯಮಕ್ಕೆ ಉದ್ಯಮ ಸ್ಥಾನಮಾನ, ಅಂತರರಾಷ್ಟ್ರೀಯ ಮಟ್ಟದ 'ಪುನೀತ್ ರಾಜ್‌ಕುಮಾರ್ ಫಿಲ್ಮ್ ಸಿಟಿ' ಸ್ಥಾಪನೆ
- ವಿಶ್ವೇಶ್ವರಯ್ಯ ವಿದ್ಯಾ ಯೋಜನೆಯಡಿ ಸರ್ಕಾರಿ ಶಾಲೆಗಳನ್ನು ಅತ್ಯುನ್ನತ ಶ್ರೇಣಿಗೆ ಮೇಲ್ದರ್ಜೆಗೇರಿಸಲಾಗುವುದು
- ಕರ್ನಾಟಕವನ್ನು ಎಲೆಕ್ಟ್ರಿಕ್ ವಾಹನಗಳ ಪ್ರಮುಖ ಕೇಂದ್ರವನ್ನಾಗಿ ರೂಪಿಸಲಾಗುವುದು. 1,000 ಸ್ಟಾರ್ಟ್‌ಅಪ್‌ಗಳಿಗೆ ಪ್ರೋತ್ಸಾಹ ನೀಡಲಾಗುವುದು. ಬೆಂಗಳೂರಿನ ಹೊರ ವಲಯದಲ್ಲಿ 'ಇವಿ ಸಿಟಿ' ಅಭಿವೃದ್ಧಿಪಡಿಸಲಾಗುವುದು
- ಕಲ್ಯಾಣ ಸರ್ಕ್ಯೂಟ್, ಬನವಾಸಿ ಸರ್ಕ್ಯೂಟ್, ಪರಶುರಾಮ ಸರ್ಕ್ಯೂಟ್ ಮತ್ತು ಕಾವೇರಿ ಸರ್ಕ್ಯೂಟ್ ಹಾಗೂ ಗಾಣಗಾಪುರ ಕಾರಿಡಾರ್ ಅಭಿವೃದ್ಧಿಪಡಿಸಲು ₹1,500 ಕೋಟಿ ವಿನಿಯೋಗ
- ಮುಂದಿನ 5 ವರ್ಷಗಳಲ್ಲಿ 200 ಮೀನು ಕೃಷಿ ಉತ್ಪಾದನಾ ಕೇಂದ್ರಗಳು ಸೇರಿ 1,000 ಕೃಷಿ ಉತ್ಪಾದನಾ ಕೇಂದ್ರಗಳ ಸ್ಥಾಪನೆ
- ಇಸ್ರೇಲ್ ಮಾದರಿಯ ಹನಿ ನೀರಾವರಿಯನ್ನು ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಅನುಷ್ಠಾನಗೊಳಿಸಿ ಜಮೀನುಗಳಿಗೆ ನೀರು ಪೂರೈಕೆ
- ಹೈನುಗಾರಿಕೆಗೆ ನೀಡುವ ಪ್ರೋತ್ಸಾಹ ಧನ ಪ್ರತಿ ಲೀಟರ್ ಹಾಲಿಗೆ ₹5 ರಿಂದ ₹7 ಕ್ಕೆ ಹೆಚ್ಚಳ
- ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ ನೀಡುವ ಸಹಾಯ ಧನ ₹10,000ದಿಂದ ₹15,000ಕ್ಕೆ ಹೆಚ್ಚಳ
- ಮಿಷನ್ ಸ್ವಾಸ್ಥ್ಯ ಕರ್ನಾಟಕದ ಅಡಿ ಪ್ರತಿ ಜಿಲ್ಲೆಯಲ್ಲಿ ಒಂದು ನರ್ಸಿಂಗ್ ಕಾಲೇಜು, ವೈದ್ಯಕೀಯ ಕಾಲೇಜು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆ
- 2025ರ ವೇಳೆಗೆ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲೂ ಭಾರತ್‌ನೆಟ್ ಕಾರ್ಯಕ್ರಮದ ಅಡಿಯಲ್ಲಿ ಶೇ 100ರಷ್ಟು 5 ಜಿ ಮೊಬೈಲ್ ಸಂಪರ್ಕ. 500 ವೈ-ಫೈ ಹಾಟ್‌ಸ್ಪಾಟ್
- ಗರ್ಭಿಣಿಯರಿಗೆ ಸುರಕ್ಷಾ ಜನನಿ ಭರವಸೆ ಕಿಟ್ ವಿತರಿಸಲಾಗುವುದು. 6 ಪೌಷ್ಟಿಕಾಂಶಗಳ ಕಿಟ್ ₹21,000 ಮೌಲ್ಯದಾಗಿದ್ದು, ಆರ್ಥಿಕ ನೆರವನ್ನೂ ನೀಡಲಾಗುವುದು
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸ್ವಸಹಾಯ ಸಂಘದ ಒಬ್ಬ ಸದಸ್ಯನಿಗೆ ಸ್ಟಾರ್ಟ್ ಅಪ್ ಆರಂಭಿಸಲು ₹10 ಲಕ್ಷ ಬಂಡವಾಳ ನಿಧಿ

ಜನರಿಂದ ಜನರಿಗಾಗಿ ಪ್ರಣಾಳಿಕೆ: ಸಿ.ಎಂ

'ಜನರಿಂದ ಜನರಿಗೋಸ್ಕರ ಸಿದ್ಧಪಡಿಸಿದ 'ಪ್ರಜಾ ಪ್ರಣಾಳಿಕೆ' ನಮ್ಮದು. ಕರ್ನಾಟಕವನ್ನು ಶಕ್ತಿಶಾಲಿ ಮತ್ತು ಸ್ಪಂದನಶೀಲ ರಾಜ್ಯವಾಗಿಸುವ ಗುರಿಯನ್ನು ಹೊಂದಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬಿಎಸ್‌ವೈ ಗರಂ ಆಗಿದ್ದೇಕೆ?

ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಕೊಂಚ ಗರಂ ಆಗಿಯೇ ಇದ್ದರು. ಪದೇ ಪದೇ ಪ್ರಣಾಳಿಕೆ ಕೈಪಿಡಿಯನ್ನು ತಿರುವಿ ಹಾಕುತ್ತಿದ್ದರು. ಪ್ರಣಾಳಿಕೆ ಕುರಿತು ಮಾತನಾಡುವಂತೆ ಕರೆದಾಗ ತಕ್ಷಣಕ್ಕೆ ಹೋಗದ ಅವರು ಪಕ್ಕದಲ್ಲಿದ್ದ ಸಚಿವ ಆರ್.ಅಶೋಕ ಅವರ ಜತೆ ಪ್ರಣಾಳಿಕೆ ಬಗ್ಗೆ ಏನೋ ವಿಚಾರಿಸಿದರು. ಡಾ.ಕೆ.ಸುಧಾಕರ್ ಬಂದು ಅವರ ಕಿವಿಯಲ್ಲಿ ಸಮಜಾಯಿಷಿ ನೀಡಿದರು.

ಸಮಾಧಾನವಾದಂತೆ ಕಂಡುಬರದ ಯಡಿಯೂರಪ್ಪ ಎರಡು ನಿಮಿಷಗಳಲ್ಲಿ ತಮ್ಮ ಚುಟುಕು ಭಾಷಣ ಮುಗಿಸಿದರು. ವಾಪಸ್ ಬರುವಾಗ ಶೋಭಾ ಕರಂದ್ಲಾಜೆ ಅವರಿಗೆ ತಮ್ಮ ಬಳಿ ಇದ್ದ ಪ್ರಣಾಳಿಕೆ ಪ್ರತಿಯನ್ನು ಕೊಟ್ಟು, ಕೆಲವು ಅಂಶಗಳನ್ನು ಸೂಚಿಸಿದರು.

ಬಳಿಕ ಅಶೋಕ ಅವರನ್ನು ಈ ಕುರಿತು ಪ್ರಶ್ನಿಸಿದಾಗ, ಉಚಿತ ಪಡಿತರ 5 ಕೆ.ಜಿ. ಮಾತ್ರ ಉಲ್ಲೇಖ ಇದೆ. 10 ಕೆ.ಜಿ ಏಕೆ ಇಲ್ಲ ಎಂದು ಕೇಳಿದರು. 5 ಕೆ.ಜಿ ಅಕ್ಕಿ ಜತೆ 5 ಕೆ.ಜಿ ಸಿರಿಧಾನ್ಯವನ್ನು ಸೇರಿಸಿರುವ ವಿಚಾರ ಹೇಳಿದೆವು. ಅವರಿಗೆ ಗೊಂದಲ ಆಗಿತ್ತು ಎಂದರು.

'ಕೆಲಸ ಮಾಡದವರು ನಾಲಾಯಕ್'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಬಂಜಾರ ಸಮುದಾಯದ ನಿಮ್ಮ ಮಗ ದಿಲ್ಲಿಯಲ್ಲಿ ಕೂತಿದ್ದಾನೆ ಎಂದು ಪ್ರಧಾನಿ ನರೇಂದ್ರ ಮೋದಿ ಇಲ್ಲಿಗೆ ಬಂದಾಗ ಹೇಳಿದ್ದರು. ಬಂಜಾರ ಸಮುದಾಯದ ಹಿತರಕ್ಷಿಸದ ಮಗ ನಾಲಾಯಕ್ ಅಲ್ಲವೇ' ಎಂದು ಚಿತ್ತಾಪುರ ಕಾಂಗ್ರೆಸ್ ಅಭ್ಯರ್ಥಿ, ಕೆಪಿಸಿಸಿ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಕೆಲ ಹೊತ್ತಿನಲ್ಲೇ ತಮ್ಮ ಮಾತನ್ನು ಸರಿಪಡಿಸಿಕೊಂಡ ಅವರು, 'ಈ ಮಾತು ನಿರ್ದಿಷ್ಟ ವ್ಯಕ್ತಿ ಕುರಿತು ಆಡಿದ್ದಲ್ಲ. ನಾನೂ ಆ ಸಮುದಾಯದ ಕೆಲಸ ಮಾಡದಿದ್ದರೆ ನಾಲಾಯಕ್ ಆಗುತ್ತೇನೆ' ಎಂದರು.

'ರೋಡ್ ಶೋಗೆ ಬರಲಿರುವ ಪ್ರಧಾನಿಯವರು ಆರು ಪ್ರಶ್ನೆಗಳಿಗೆ ಉತ್ತರಿಸಬೇಕು. ಕೋಲಿ, ಕುರುಬ ಸಮುದಾಯವನ್ನು ಯಾವಾಗ ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸುತ್ತೀರಿ? ಶೇ 40ರಷ್ಟು ಕಮಿಷನ್ ಸೇರಿ ರಾಜ್ಯದಲ್ಲಿನ ಭ್ರಷ್ಟಾಚಾರದ ಬಗ್ಗೆ ಈ ಸಲವಾದರೂ ಮಾತನಾಡುವಿರಾ? ಇತ್ತೀಚೆಗೆ ಜಿಲ್ಲೆಗೆ ಬಂದಾಗ ಬಂಜಾರ ಸಮುದಾಯದ ನಿಮ್ಮ ಮಗ ದಿಲ್ಲಿಯಲ್ಲಿ ಇರುವುದಾಗಿ ಹೇಳಿದ್ದೀರಿ. ಮೀಸಲಾತಿ ವಿಚಾರದಲ್ಲಿ ಬಂಜಾರ ಸಮುದಾಯಕ್ಕೆ ಗೊಂದಲವಾಗಿದೆ. ಇದರ ಬಗ್ಗೆ ನಿಮ್ಮ ನಿಲುವೇನು' ಎಂದು ಅವರು ಪ್ರಶ್ನಿಸಿದರು.

ಖರ್ಗೆ ವಿರುದ್ಧ ಬಿಜೆಪಿ ದೂರು

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಪುತ್ರ ಪ್ರಿಯಾಂಕ್ ಖರ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಬಿಜೆಪಿ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ದೂರು ನೀಡಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ಅವರು, ಪ್ರಧಾನಿಯವರನ್ನು ಇಡೀ ವಿಶ್ವವೇ ಕೊಂಡಾಡುತ್ತಿದೆ. ಮೋದಿಯವರು ಒಂದು ಪಕ್ಷದ ಪ್ರತಿನಿಧಿಯಲ್ಲ. ಅವರು ದೇಶದ ಪ್ರಧಾನಿ. ಅವರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಖರ್ಗೆ ವಿರುದ್ಧ ಕ್ರಮ ಜರುಗಿಸಬೇಕು ಎಂದು ಮನವಿ ಮಾಡಿದ್ದಾಗಿ ತಿಳಿಸಿದರು.

> **ಪ್ರಿಯಾಂಕ್ ಖರ್ಗೆ ಸೋಲಿನ ಹತಾಶೆಯಲ್ಲಿ ಪ್ರಧಾನಿ ಅವರನ್ನು ನಾಲಾಯಕ್ ಎಂದಿದ್ದಾರೆ. ಮಾನಸಿಕ ಸ್ಥಿಮಿತ ಕಳೆದುಕೊಂಡ ಅವರ ತಂದೆಯೂ ಹಾಗೇ ಮಾತನಾಡಿ, ಹೇಳಿಕೆ ವಾಪಸ್ ಪಡೆದಿದ್ದರು**
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಕಮಿಷನ್ ಶೇ 60ಕ್ಕೆ ಹೆಚ್ಚಿಸುವಿರಾ?: ರಾಹುಲ್

ಪ್ರಜಾವಾಣಿ ವಾರ್ತೆ

ಹಾಸನ/ಚಾಮರಾಜನಗರ: 'ರಾಜ್ಯದ ಜನರಿಗೆ ನಮ್ಮ ಐದು ಗ್ಯಾರಂಟಿಗಳು, ಯೋಜನೆಗಳನ್ನು ನಾವು ಹೇಳಿದ್ದೇವೆ. ನೀವು ಅಧಿಕಾರಕ್ಕೆ ಬಂದರೆ ಏನು ಮಾಡುತ್ತೀರಿ? ಕಮಿಷನ್ ಅನ್ನು ಶೇ 40 ರಿಂದ ಶೇ 60ಕ್ಕೆ ಏರಿಸುತ್ತೀರಾ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬಿಜೆಪಿ ನಾಯಕರನ್ನು ಪ್ರಶ್ನಿಸಿದರು.

ಅರಸೀಕೆರೆ ಹಾಗೂ ಚಾಮರಾಜನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ ಅವರು, 'ಮೊದಲ ಹಂತದಲ್ಲಿ 5 ಗ್ಯಾರಂಟಿ ಜಾರಿಗೊಳಿಸುತ್ತೇವೆ. ಎರಡನೇ ಹಂತದಲ್ಲಿ ರೈತರಿಗೆ ಕೃಷಿ ನಿಧಿ ಯೋಜನೆ ಜಾರಿಗೊಳಿಸುತ್ತಿದ್ದೇವೆ. 5 ವರ್ಷಗಳಲ್ಲಿ ಪ್ರತಿ ರೈತನಿಗೆ ₹ 1.50 ಲಕ್ಷ ನೀಡಲಾಗುವುದು. ₹ 30 ಸಾವಿರ ಕೋಟಿ ಅನುದಾನವನ್ನು ರೈತರ ಯೋಜನೆಗಳಿಗೆ ಮೀಸಲಿಡಲಾಗುವುದು. ತೆಂಗು, ಅಡಿಕೆಗೆ ಬೆಂಬಲ ಬೆಲೆ ನೀಡಲಾಗುವುದು. ಹಾಲಿನ ಸಬ್ಸಿಡಿಯನ್ನು ₹5 ರಿಂದ ₹7 ಕ್ಕೆ ಹೆಚ್ಚಿಸಲಾಗುವುದು' ಎಂದರು.

ಪ್ರಚಾರ ಸಭೆಯಲ್ಲಿ ರಾಹುಲ್ ಗಾಂಧಿ ಜನರತ್ತ ಕೈಬೀಸಿದರು

'ಬಿಜೆಪಿಯವರು ನೆಪಗಳನ್ನು ಹೇಳಬಾರದು. ಭ್ರಷ್ಟಾಚಾರದ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೀರಿ? ಪ್ರವಾಹದ ಸಂದರ್ಭದಲ್ಲಿ ಏನು ಮಾಡಿದ್ದೀರಿ? ನಿರುದ್ಯೋಗ ನಿವಾರಣೆಗೆ ಏನು ಕ್ರಮ ಕೈಗೊಂಡಿದ್ದೀರಿ? ಮುಂದಿನ ಐದು ವರ್ಷ ಏನು ಮಾಡುತ್ತೀರಿ ಎಂಬುದನ್ನು ಪ್ರಧಾನಿ ರಾಜ್ಯಕ್ಕೆ ಬಂದಾಗ ಜನರಿಗೆ ಹೇಳಬೇಕು' ಎಂದು ಒತ್ತಾಯಿಸಿದರು.

ಧಾರವಾಡ ಬಿಜೆಪಿ–ಕಾಂಗ್ರೆಸ್ ನೇರ ಹಣಾಹಣಿ • ಅಸ್ತಿತ್ವಕ್ಕಾಗಿ ಜೆಡಿಎಸ್ ತಿಣುಕಾಟ

ಚಿತ್ರಣ ಬದಲಿಸಿದ ಲಿಂಗಾಯತ ಕಿಡಿ

• ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಕೊನೆಯ ಗಳಿಗೆಯಲ್ಲಿ ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಿದ ಜಗದೀಶ ಶೆಟ್ಟರ್ ಹೊತ್ತಿಸಿದ 'ಲಿಂಗಾಯತ ಸ್ವಾಭಿಮಾನ'ದ ಕಿಡಿ, ಧಾರವಾಡ ಜಿಲ್ಲೆಯ ಚುನಾವಣಾ ಕಣದ ಚಿತ್ರಣವನ್ನೇ ಬದಲಾಯಿಸಿದೆ. ಈ ಕಿಡಿ ಯಾರ ಮನೆ ಬೆಳಗುತ್ತದೆ, ಯಾರ ಮನೆ ಸುಟ್ಟುಹಾಕುತ್ತದೆ ಎನ್ನುವುದೇ ಈ ಸಲದ ಕಠಿಣ ಲೆಕ್ಕಾಚಾರವಾಗಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮುನಿಸಿಕೊಂಡಿದ್ದ ಲಿಂಗಾಯತ ಸಮುದಾಯವನ್ನು ಶೆಟ್ಟರ್ ಮೂಲಕ ಮತ್ತೆ ತನ್ನ ತೆಕ್ಕೆಗೆ ಸೆಳೆದುಕೊಳ್ಳಲು ಕಾಂಗ್ರೆಸ್ ಹಾತೊರೆಯುತ್ತಿದೆ. ಮತ್ತೊಂದೆಡೆ, ಇಷ್ಟು ವರ್ಷಗಳ ಕಾಲ ತನಗೆ ಶಕ್ತಿ ತುಂಬಿದ್ದ ಸಮುದಾಯವನ್ನು ಉಳಿಸಿಕೊಳ್ಳಲು ಬಿಜೆಪಿ ಹರಸಾಹಸ ಪಡುತ್ತಿದೆ. ಶೆಟ್ಟರ್ ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರೂ ಅವರು ಹೊತ್ತಿಸಿದ 'ಸ್ವಾಭಿಮಾನದ ಕಿಡಿ' ಜಿಲ್ಲೆಯ ಏಳೂ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಣಿಸಿಕೊಂಡಿದೆ. ಎಲ್ಲ ಕ್ಷೇತ್ರಗಳಲ್ಲೂ ಬಿಜೆಪಿ, ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ. ಜೆಡಿಎಸ್ ಅಸ್ತಿತ್ವಕ್ಕಾಗಿ ಸ್ಪರ್ಧಿಸುತ್ತಿದೆ ಅಷ್ಟೆ.

ಬಿಜೆಪಿ ಕಟ್ಟಿ ಬೆಳೆಸಿದ ತಮಗೆ ಟಿಕೆಟ್ ನೀಡಲಿಲ್ಲ. ಇದು ತಮಗಲ್ಲ, ತಮ್ಮ ಸಮುದಾಯಕ್ಕೆ (ಲಿಂಗಾಯತ) ಮಾಡಿದ ಅವಮಾನವೆಂದು ಅನುಕಂಪ ಗಿಟ್ಟಿಸಲು ಶೆಟ್ಟರ್ ಹೊರಟಿದ್ದಾರೆ. ಲಿಂಗಾಯತ ಮತಗಳನ್ನು ಗಟ್ಟಿಗೊಳಿಸುತ್ತಿದ್ದಾರೆ. ಶೆಟ್ಟರ್ ಅವರಿಗಿರುವ ಸೌಮ್ಯ, ಮೃದು ಸ್ವಭಾವ, ಸರಳ ಸಜ್ಜನಿಕೆಯ ವರ್ಚಸ್ಸು ನೆರವಿಗೆ ಬರಲಿದೆ. ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳಾದ ದಲಿತರು, ಮುಸ್ಲಿಮರು, ಕ್ರೈಸ್ತರ ಜೊತೆ ತಮ್ಮ ಸಮುದಾಯದ ಮತಗಳನ್ನು ಒಟ್ಟುಗೂಡಿಸಲು ಬೆವರು ಸುರಿಸುತ್ತಿದ್ದಾರೆ.

ವಿರೋಧಿ ಪಾಳೆಯದಲ್ಲಿ ಶೆಟ್ಟರ್ ಸೇರಿರುವುದು ಬಿಜೆಪಿಗೆ ಮರ್ಮಾಘಾತ ನೀಡಿದೆ. 'ಉಂಡೂ ಹೋದ, ಕೊಂಡೂ ಹೋದ...' ಎಂದು ಶೆಟ್ಟರ್ ಅವರನ್ನು ಬಿಂಬಿಸಲು ಬಿಜೆಪಿ ಯತ್ನಿಸುತ್ತಿದೆ. 'ಡ್ಯಾಮೇಜ್ ಕಂಟ್ರೋಲ್' ಮಾಡಲು ಪಕ್ಷವು ಅದೇ ಸಮುದಾಯಕ್ಕೆ ಸೇರಿದ ಮಹೇಶ ಟೆಂಗಿನಕಾಯಿ ಅವರನ್ನು ಕಣಕ್ಕಿಳಿಸಿದೆ. ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದ ಟೆಂಗಿನಕಾಯಿ ಹೆಸರು ಪಕ್ಷದಾಚೆ ಕೇಳಿಬಂದಿದ್ದು ವಿರಳ. ಅವರು ಪಕ್ಷದ ಸಂಘಟನೆ ಹಾಗೂ ಕಟ್ಟಾ ಬೆಂಬಲಿಗರನ್ನು ಆಶ್ರಯಿಸಿದ್ದಾರೆ. ಮೋದಿ, ಅಮಿತ್ ಶಾ, ಯಡಿಯೂರಪ್ಪ, ಪ್ರಲ್ಹಾದ ಜೋಶಿ ಪ್ರಭಾವಳಿಯನ್ನು ನೆಚ್ಚಿಕೊಂಡಿದ್ದಾರೆ.

ಹುಬ್ಬಳ್ಳಿ- ಧಾರವಾಡ ಪೂರ್ವ (ಎಸ್.ಸಿ ಮೀಸಲು ಕ್ಷೇತ್ರ): ಶಾಸಕ, ಬಲಗೈ ಸಮುದಾಯದ ಪ್ರಸಾದ ಅಬ್ಬಯ್ಯ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದಾರೆ. ಪಕ್ಷದ ಸಾಂಪ್ರದಾಯಿಕ ಮತಗಳ ಜೊತೆ ಶೆಟ್ಟರ್ ಸೇರ್ಪಡೆಯಿಂದ ಲಿಂಗಾಯತ ಮತಗಳೂ ತಮ್ಮ ಕಡೆ ಬರಲಿವೆ. ಇದು ಹ್ಯಾಟ್ರಿಕ್ ಗೆಲುವಿಗೆ ಸಹಕಾರಿಯಾಗಲಿದೆ ಎನ್ನುವ ವಿಶ್ವಾಸದಲ್ಲಿದ್ದಾರೆ. ಬಿಜೆಪಿಯಿಂದ ಬಲಗೈ ಸಮುದಾಯದ ಡಾ. ಕ್ರಾಂತಿಕಿರಣ ಮೊದಲ ಬಾರಿಗೆ ಕಣಕ್ಕಿಳಿದಿದ್ದಾರೆ. ಪಕ್ಷದ ಸಂಘಟನೆ ಹಾಗೂ ಕಟ್ಟಾ ಬೆಂಬಲಿಗರನ್ನು ನಂಬಿಕೊಂಡಿದ್ದಾರೆ. ಬಿಜೆಪಿ ಟಿಕೆಟ್ ಸಿಗದಿದ್ದರಿಂದ ಎಡಗೈ ಸಮುದಾಯದ ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ ಜೆಡಿಎಸ್ ಸೇರಿದ್ದು, ಬಿಜೆಪಿ ಮತ ಕೀಳುವ ಸಾಧ್ಯತೆ ಇದೆ.

ಹುಬ್ಬಳ್ಳಿ- ಧಾರವಾಡ ಪಶ್ಚಿಮ: ಶಾಸಕ, ಪಂಚಮಸಾಲಿ ಲಿಂಗಾಯತ ಸಮಾಜದ ಅರವಿಂದ ಬೆಲ್ಲದ ಬಿಜೆಪಿಯಿಂದ ಪುನಃ ಕಣಕ್ಕಿಳಿದಿದ್ದಾರೆ. ಬಿಜೆಪಿಯಿಂದ ಟಿಕೆಟ್ ಬಯಸಿದ್ದ ಪಾಲಿಕೆ ಮೇಯರ್ ಈರೇಶ ಅಂಚಟಗೇರಿ, ಟಿಕೆಟ್ ಸಿಗದಿದ್ದರಿಂದ ಚುನಾವಣೆಯಿಂದ ದೂರ ಉಳಿದಿದ್ದಾರೆ. ಕಾಂಗ್ರೆಸ್‌ನಿಂದ ಬ್ರಾಹ್ಮಣ ಸಮಾಜದ ದೀಪಕ ಚಿಂಚೋರೆ ಕಣಕ್ಕಿಳಿದಿದ್ದಾರೆ. ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿದ್ದ ಬಸವರಾಜ ಮಲಕಾರಿ ಪಕ್ಷೇತರ ಅಭ್ಯರ್ಥಿಯಾಗಿ ಕಣದಲ್ಲಿ ಉಳಿದಿರುವುದು ಹಾಗೂ ಟಿಕೆಟ್ ವಂಚಿತ ಆಕಾಂಕ್ಷಿಗಳು ಪ್ರಚಾರದಲ್ಲಿ ಕಾಣಿಸಿಕೊಳ್ಳದಿರುವುದು ಚಿಂಚೋರೆಗೆ ಹಿನ್ನಡೆಯಾಗಲಿದೆ.

ಧಾರವಾಡ ಕ್ಷೇತ್ರ: ಶಾಸಕ, ಬಿಜೆಪಿಯ ಅಮೃತ ದೇಸಾಯಿ ಮತ್ತೆ ಕಣಕ್ಕಿಳಿದಿದ್ದಾರೆ. ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ತವನಪ್ಪ ಅಷ್ಟಗಿ ಕಾಂಗ್ರೆಸ್ ಸೇರಿರುವುದು ಇವರಿಗೆ ಮುಳುವಾಗುವ ಸಾಧ್ಯತೆ ಇದೆ. ಕಳೆದ ಚುನಾವಣೆಯಲ್ಲಿ ಇವರಿಗೆ ಎದುರಾಳಿಯಾಗಿದ್ದ ಕಾಂಗ್ರೆಸ್‌ನ ವಿನಯ ಕುಲಕರ್ಣಿ ಪುನಃ ಸ್ಪರ್ಧಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶಗೌಡ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿನಯ ಕುಲಕರ್ಣಿ ಜಿಲ್ಲೆಯಿಂದ ಗಡಿಪಾರಾಗಿದ್ದು, ಅವರ ಪತ್ನಿ ಶಿವಲೀಲಾ ಕುಲಕರ್ಣಿ ಪ್ರಚಾರ ಮಾಡುತ್ತಿದ್ದಾರೆ. 2013–18ರ ಅವಧಿಯಲ್ಲಿ ಶಾಸಕರಾಗಿದ್ದಾಗ ಮಾಡಿದ ಅಭಿವೃದ್ಧಿಯ ಕೆಲಸಗಳು ತಮ್ಮ ಕೈಹಿಡಿಯುತ್ತವೆ ಎನ್ನುವ ವಿಶ್ವಾಸದಲ್ಲಿದ್ದಾರೆ ವಿನಯ.

ಕುಂದಗೋಳ: ಬಿಜೆಪಿಯಿಂದ ಬಂಡಾಯವೆದ್ದು ಪಕ್ಷೇತರರಾಗಿ ಸ್ಪರ್ಧಿಸಿರುವ, ಪಂಚಮಸಾಲಿ ಲಿಂಗಾಯತ ಸಮುದಾಯದ ಎಸ್.ಐ. ಚಿಕ್ಕನಗೌಡರ ಅವರಿಂದಾಗಿ ಕಣದಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಇವರ ಸ್ಪರ್ಧೆಯಿಂದಾಗಿ ಬಿಜೆಪಿಯ ಎಂ.ಆರ್.ಪಾಟೀಲ ಅವರ ಮತಗಳು ಒಡೆದುಹೋಗುವ ಸಾಧ್ಯತೆ ಇದೆ. ಇವರಿಬ್ಬರ ನಡುವಿನ ತಿಕ್ಕಾಟವು ಕಾಂಗ್ರೆಸ್ ಅಭ್ಯರ್ಥಿ, ಶಾಸಕಿ, ಕುರುಬ ಸಮುದಾಯದ ಕುಸುಮಾವತಿ ಶಿವಳ್ಳಿ ಅವರಿಗೆ ಅನುಕೂಲವಾಗುವ ಸಾಧ್ಯತೆ ಇದೆ. ಕುಸುಮಾವತಿ ವಿರುದ್ಧ ಅವರ ಪಕ್ಷದ ಎಂಟು ಜನ ನಾಯಕರು ತಿರುಗಿ ಬಿದ್ದಿದ್ದು, ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು.

ಕಲಘಟಗಿ: ಶೆಟ್ಟರ್ ಜೊತೆ ಬಿಜೆಪಿ ಟಿಕೆಟ್ ವಂಚಿತ ಶಾಸಕರಲ್ಲಿ ಸಿ.ಎಂ. ನಿಂಬಣ್ಣವರ ಕೂಡ ಸೇರಿದ್ದಾರೆ. ಕಾಂಗ್ರೆಸ್ ಟಿಕೆಟ್ ಸಿಗದಿದ್ದರಿಂದ ಕೊನೆಯ ಗಳಿಗೆಯಲ್ಲಿ ಸೇರ್ಪಡೆಯಾದ ನಾಗರಾಜ ಛಬ್ಬಿ ಅವರಿಗೆ ಬಿಜೆಪಿ ಟಿಕೆಟ್ ನೀಡಿ ಕಣಕ್ಕಿಳಿಸಿದೆ. ಕಳೆದ ಚುನಾವಣೆಯಲ್ಲಿ ಜೊತೆಗೂಡಿ ಕೆಲಸ ಮಾಡಿದ ಕಾಂಗ್ರೆಸ್‌ನ ಸಂತೋಷ ಲಾಡ್ ಅವರಿಗೆ ಸ್ಪರ್ಧೆಯೊಡ್ಡಿದ್ದಾರೆ. ನಿಂಬಣ್ಣವರ ಸೇರಿದಂತೆ ಬಿಜೆಪಿಯಲ್ಲಿ ಅನೇಕ ಜನ ಟಿಕೆಟ್ ಆಕಾಂಕ್ಷಿಗಳಿದ್ದರು. ಕೊನೆ ಕ್ಷಣದಲ್ಲಿ ಕಾಂಗ್ರೆಸ್‌ನಿಂದ ಬಂದ ಛಬ್ಬಿಗೆ ಟಿಕೆಟ್ ನೀಡಿದ್ದರಿಂದ ಒಳಗೊಳಗೆ ಅಸಮಾಧಾನ ಇದೆ. ಬಿಜೆಪಿಗೆ ಒಳ ಏಟು ಬೀಳುವ ಸಾಧ್ಯತೆ ಇದೆ.

ನವಲಗುಂದ: ಶಾಸಕ, ಪಂಚಮಸಾಲಿ ಲಿಂಗಾಯತ ಸಮುದಾಯದ ಶಂಕರ ಪಾಟೀಲ ಮುನೇನಕೊಪ್ಪ ಹಾಗೂ ಕಾಂಗ್ರೆಸ್‌ನ ರಡ್ಡಿ ಲಿಂಗಾಯತ ಸಮಾಜದ ಎನ್.ಎಚ್. ಕೋನರಡ್ಡಿ ನಡುವೆ ತೀವ್ರ ಪೈಪೋಟಿ ಇದೆ. ಕಾಂಗ್ರೆಸ್ ಟಿಕೆಟ್ ಸಿಗದಿದ್ದರಿಂದ ಮುನಿಸಿಕೊಂಡ ಕುರುಬ ಸಮಾಜದ ಕೆ.ಎನ್. ಗಡ್ಡಿ ಜೆಡಿಎಸ್ ಸೇರಿದ್ದಾರೆ. ಇವರು ತಮ್ಮೊಂದಿಗೆ ಸಮುದಾಯದ ಮತಗಳನ್ನು ಕೊಂಡೊಯ್ದರೆ ಕೋನರಡ್ಡಿಗೆ ಕಷ್ಟವಾಗಬಹುದು. ಈ ನಷ್ಟವನ್ನು ಸರಿದೂಗಿಸಲು, ಇದೇ ಸಮುದಾಯದ ವಿನೋದ ಅಸೂಟಿ ಅವರನ್ನು ತಮ್ಮೊಂದಿಗೆ ಕರೆದುಕೊಂಡು ಕೋನರಡ್ಡಿ ಪ್ರಚಾರ ಮಾಡುತ್ತಿದ್ದಾರೆ. ನಾಮಪತ್ರ ವಾಪಸ್ ಪಡೆದಿರುವ ಕುರುಬ ಸಮಾಜದ ಶಿವಾನಂದ ಕರಿಗಾರ, ಇನ್ನೂ ತಮ್ಮ ಬೆಂಬಲ ಯಾರಿಗೆ ಎನ್ನುವುದನ್ನು ಬಹಿರಂಗಪಡಿಸದಿರುವುದು ಕುತೂಹಲ ಮೂಡಿಸಿದೆ.



ಹಿಂದಿನ ಚುನಾವಣೆಯಲ್ಲಿ ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಹುಬ್ಬಳ್ಳಿ-ಧಾರವಾಡ ಸೆಂಟ್ರಲ್	ಬಿಜೆಪಿ	ಬಿಜೆಪಿ
ಹುಬ್ಬಳ್ಳಿ-ಧಾರವಾಡ ಪೂರ್ವ	ಕಾಂಗ್ರೆಸ್	ಕಾಂಗ್ರೆಸ್
ಹುಬ್ಬಳ್ಳಿ-ಧಾರವಾಡ ಪಶ್ಚಿಮ	ಬಿಜೆಪಿ	ಬಿಜೆಪಿ
ಧಾರವಾಡ	ಕಾಂಗ್ರೆಸ್	ಬಿಜೆಪಿ
ಕಲಘಟಗಿ	ಕಾಂಗ್ರೆಸ್	ಬಿಜೆಪಿ
ಕುಂದಗೋಳ	ಕಾಂಗ್ರೆಸ್	ಕಾಂಗ್ರೆಸ್
ನವಲಗುಂದ	ಜೆಡಿಎಸ್	ಬಿಜೆಪಿ

ಮಂಡ್ಯ ಕಾಂಗ್ರೆಸ್‌ನಲ್ಲಿ ಒಗ್ಗಟ್ಟಿನ ಮಂತ್ರ

ದಳದ ಭದ್ರ ಕೋಟೆಯಲ್ಲಿ ಕಮಲದ ನೆಲೆ ಎಲ್ಲಿ?

• ಎಂ.ಎನ್.ಯೋಗೇಶ್

ಮಂಡ್ಯ: ಜೆಡಿಎಸ್ ಭದ್ರಕೋಟೆ ಎನಿಸಿರುವ ಸಕ್ಕರೆ ನಾಡಿನಲ್ಲಿ ನೆಲೆ ಕಂಡುಕೊಳ್ಳಲು ಬಿಜೆಪಿ ಹಲವು ತಂತ್ರ ರೂಪಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ರೋಡ್ ಶೋ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಯಾತ್ರೆಗಳ ಮೂಲಕ ಮತದಾರರನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

2019ರ ಉಪ ಚುನಾವಣೆಯಲ್ಲಿ ಬಿ.ಎಸ್.ಯಡಿಯೂರಪ್ಪ ತವರು ಕೆ.ಆರ್.ಪೇಟೆ ಕ್ಷೇತ್ರ ಗೆದ್ದ ನಂತರ ಬಿಜೆಪಿಯ ಉತ್ಸಾಹ ಇಮ್ಮಡಿಯಾಗಿದೆ. ಇದೇ ಹುಮ್ಮಸ್ಸಿನಿಂದ ಹಳೇ ಮೈಸೂರು ಭಾಗದಲ್ಲಿ ನೆಲೆ ವಿಸ್ತರಿಸಿಕೊಳ್ಳಲು ರಾಷ್ಟ್ರಮಟ್ಟದ ಮುಖಂಡರನ್ನು ಕರೆಸಿ ರ‍್ಯಾಲಿ ನಡೆಸುತ್ತಿದೆ. ಜೆಡಿಎಸ್ ವಿರುದ್ಧ ಬೆಂಕಿ ಉಗುಳುವ ಸಂಸದೆ ಸುಮಲತಾ ಬೆಂಬಲದಿಂದ ಬಿಜೆಪಿ ಮುಖಂಡರಲ್ಲಿ ವಿಶ್ವಾಸ ಹೆಚ್ಚಾಗಿದೆ.

ಚುನಾವಣೆಗೂ ಮೊದಲು ಬಿಜೆಪಿ ಮಂಡ್ಯದಲ್ಲೂ 'ಹಿಂದುತ್ವ' ಅಸ್ತ್ರ ಪ್ರಯೋಗಿಸಿತ್ತು. ಮೂಡಲಬಾಗಿಲು ಆಂಜನೇಯ, ಉರಿಗೌಡ– ನಂಜೇಗೌಡ ವಿಚಾರಗಳ ಬೀಜ ಬಿತ್ತಿತ್ತು. ಆದರೆ, ಜಿಲ್ಲೆಯ ಜನ ಕಿಮ್ಮತ್ತು ಕೊಡಲಿಲ್ಲ. ಉರಿಗೌಡ ವಿಚಾರದಲ್ಲಿ ಬಹುಸಂಖ್ಯಾತ ಒಕ್ಕಲಿಗರ ಮತ ಸೆಳೆಯುವ ಲೆಕ್ಕಾಚಾರವೂ ಬಿಜೆಪಿಗಿತ್ತು. ಆದರೆ, ಆದಿಚುಂಚನಗಿರಿ ಶ್ರೀಗಳು ಮಧ್ಯಪ್ರವೇಶಿಸಿ ಮುಖಂಡರ ಬಾಯಿಗೆ ಬೀಗ ಹಾಕಿದ್ದಾರೆ.

2018ರಲ್ಲಿ ಎಲ್ಲಾ ಏಳೂ ಕ್ಷೇತ್ರಗಳನ್ನು ಗೆದ್ದು, ಉಪ ಚುನಾವಣೆಯಲ್ಲಿ ಕೆ.ಆರ್.ಪೇಟೆ ಕಳೆದುಕೊಂಡಿದ್ದ ಜೆಡಿಎಸ್ ಎಚ್ಚರಿಕೆಯ ಹೆಜ್ಜೆ ಇಡುತ್ತಿದೆ. ಎಲ್ಲೆಡೆ ಸೋತಿದ್ದ ಕಾಂಗ್ರೆಸ್ ಒಗ್ಗಟ್ಟಿನ ಮಂತ್ರ ಪಠಿಸುತ್ತಿದೆ. ವಿಧಾನ ಪರಿಷತ್‌ನ ಎರಡು ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿರುವುದು ಮುಖಂಡರಲ್ಲಿ ಭರವಸೆ ಮೂಡಿಸಿದೆ.

ಕಾಂಗ್ರೆಸ್‌ಗೆ ಹೊರಟು ನಿಂತಿದ್ದ ಸಚಿವ ಕೆ.ಸಿ.ನಾರಾಯಣಗೌಡರನ್ನು ಅಮಿತ್ ಶಾ ಮನವೊಲಿಸಿ ಉಳಿಸಿಕೊಂಡಿದ್ದಾರೆ. ಅವರಿಗೆ ಮತ್ತೆ ಟಿಕೆಟ್ ನೀಡಲಾಗಿದೆ. ಜಿಲ್ಲೆಯಲ್ಲಿ ಮೊದಲ ಬಾರಿಗೆ ಗೆದ್ದು ಇತಿಹಾಸ ಸೃಷ್ಟಿಸಿದ ಕ್ಷೇತ್ರವನ್ನು ಬಿಟ್ಟುಕೊಡಬಾರದೆಂಬುದು ಬಿಜೆಪಿ ಹಟ. ಜೆಡಿಎಸ್ ತೊರೆದು ಬಂದ ಬಿ.ಎಲ್.ದೇವರಾಜು ಕಾಂಗ್ರೆಸ್ ಅಭ್ಯರ್ಥಿ. ಜೆಡಿಎಸ್ ಯುವ ಮುಖ ಎಚ್.ಟಿ.ಮಂಜುಗೆ ಟಿಕೆಟ್ ನೀಡಿದ್ದು ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ಜೆಡಿಎಸ್ ವಿರುದ್ಧ ಬಂಡಾಯ ಸಾರಿರುವ ಮಂಡ್ಯ ಕ್ಷೇತ್ರದ ಶಾಸಕ ಎಂ.ಶ್ರೀನಿವಾಸ್ 'ಸ್ವಾಭಿಮಾನಿ ಪಡೆ'ಯ ನಾಯಕರಾಗಿದ್ದು ಮಾಜಿ ಸಚಿವ ಕೆ.ವಿ.ಶಂಕರಗೌಡ ಅವರ ಮೊಮ್ಮಗ ಕೆ.ಎಸ್. ವಿಜಯ್ ಆನಂದ್ ಅವರನ್ನು ಕಣಕ್ಕಿಳಿಸಿದ್ದಾರೆ. ಮಂಡ್ಯ ಹಾಲು ಒಕ್ಕೂಟದ (ಮನ್‌ಮುಲ್) ಅಧ್ಯಕ್ಷ ಬಿ.ಆರ್.ರಾಮಚಂದ್ರ ಜೆಡಿಎಸ್ ಹುರಿಯಾಳು, ಶ್ರೀನಿವಾಸ್ ಬಂಡಾಯ ಜೆಡಿಎಸ್‌ಗೆ ಬಿಸಿತುಪ್ಪವಾಗಿದೆ.

ಕಾಂಗ್ರೆಸ್‌ನಿಂದ ಕಳೆದ ಬಾರಿ ಸೋತಿದ್ದ ಗಣಿಗ ಪಿ.ರವಿಕುಮಾರ್ ಮತ್ತೆ ಕಣಕ್ಕಿಳಿದಿದ್ದಾರೆ. ಮಾಜಿ ಸಚಿವ ದಿವಂಗತ ಎಸ್.ಡಿ.ಜಯರಾಂ ಪುತ್ರ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಅಶೋಕ್ ಜಯರಾಂ ಬಿಜೆಪಿಯ ಹುರಿಯಾಳು. ಅಮೆರಿಕದಲ್ಲಿ ಕಂಪನಿ ಸ್ಥಾಪಿಸಿ, ನಂತರ ತೊರೆದು ಬಂದಿರುವ 'ಆರ್ಗ್ಯಾನಿಕ್ ಮಂಡ್ಯ' ಸಂಸ್ಥಾಪಕ ಎಸ್.ಸಿ. ಮಧುಚಂದನ್ ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ. ಚತುಷ್ಕೋನ ಪೈಪೋಟಿ ಗೋಚರಿಸುತ್ತಿದೆ.

ಶ್ರೀರಂಗಪಟ್ಟಣದಲ್ಲಿ ಶಾಸಕ, ಜೆಡಿಎಸ್‌ನ ರವೀಂದ್ರ ಶ್ರೀಕಂಠಯ್ಯ ಹಾಗೂ ಕಾಂಗ್ರೆಸ್‌ನ ರಮೇಶ್ ಬಾಬು ಬಂಡಿಸಿದ್ದೇಗೌಡ ನಡುವೆ ನೇರ ಸಮರವಿದೆ. ಜೆಡಿಎಸ್‌ನಲ್ಲಿದ್ದ ತಗ್ಗಹಳ್ಳಿ ವೆಂಕಟೇಶ್ ಪಕ್ಷೇತರ ಅಭ್ಯರ್ಥಿಯಾಗಿರುವುದು ಪಕ್ಷಕ್ಕೆ ತಲೆನೋವಾಗಿದೆ. ಸುಮಲತಾ ಬೆಂಬಲಿಗ ಎಸ್.ಸಚ್ಚಿದಾನಂದ ಬಿಜೆಪಿ ಅಭ್ಯರ್ಥಿ.

ನಾಗಮಂಗಲ ಕ್ಷೇತ್ರದಲ್ಲಿ ಶಾಸಕ, ಜೆಡಿಎಸ್ ಅಭ್ಯರ್ಥಿ ಸುರೇಶ್‌ಗೌಡ ಹಾಗೂ ಕಾಂಗ್ರೆಸ್‌ನ ಚಲುವರಾಯಸ್ವಾಮಿ ನಡುವೆ ಪೈಪೋಟಿ ಇದೆ. 2013ರ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಆಯ್ಕೆಯಾಗಿದ್ದ ಚಲುವರಾಯಸ್ವಾಮಿ 2016ರ ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿ ಕಾಂಗ್ರೆಸ್ ಸೇರಿದರು.

ಚಲುವರಾಯಸ್ವಾಮಿ ಅವರ ಪಕ್ಷಾಂತರದಿಂದ ಸಿಟ್ಟಿಗೆದ್ದ ದೇವೇಗೌಡ, ಕುಮಾರಸ್ವಾಮಿ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಸೋಲಿಸಿದರು. ಈ ಚುನಾವಣೆಯಲ್ಲೂ 'ಪಕ್ಷಾಂತರ' ಅಸ್ತ್ರ ಬಳಕೆಗೆ ಜೆಡಿಎಸ್ ಮುಂದಾಗಿದೆ. ಆದರೆ ಜನ ಪ್ರತಿಷ್ಠೆಯನ್ನು ಪಕ್ಕಕ್ಕಿಟ್ಟು ಹಾಲಿ-ಮಾಜಿ ಶಾಸಕರು ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳ ಬಗ್ಗೆ ಚರ್ಚಿಸುತ್ತಿದ್ದಾರೆ.

ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡರ ಪತ್ನಿ ಸುಧಾ ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ. ಫೈಟರ್ ರವಿ (ಬಿ.ಎಂ.ಮಲ್ಲಿಕಾರ್ಜುನ್) ಪಕ್ಷೇತರ ಅಭ್ಯರ್ಥಿ. ಬೆಂಗಳೂರು, ಮುಂಬೈನಲ್ಲಿ ನೆಲೆಸಿರುವ ನಾಗಮಂಗಲ ಮೂಲದ ಮತದಾರರೇ ಇಲ್ಲಿ ನಿರ್ಣಾಯಕ.

ಮೇಲುಕೋಟೆಯಲ್ಲಿ ಶಾಸಕ, ಜೆಡಿಎಸ್ ಅಭ್ಯರ್ಥಿ ಸಿ.ಎಸ್. ಪುಟ್ಟರಾಜು ಹಾಗೂ ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ನಡುವೆ ಪೈಪೋಟಿ ಇದೆ. ಕಾಂಗ್ರೆಸ್ ಪಕ್ಷ ದರ್ಶನ್ ಅವರನ್ನು ಬೆಂಬಲಿಸಿದೆ. ಡಾ.ಇಂದ್ರೇಶ್ ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ. ಮದ್ದೂರು ಕ್ಷೇತ್ರದಲ್ಲಿ ಜೆಡಿಎಸ್ ಶಾಸಕ ಡಿ.ಸಿ.ತಮ್ಮಣ್ಣ ಹಾಗೂ ಕಾಂಗ್ರೆಸ್‌ನ ಕದಲೂರು ಉದಯ್ ನಡುವೆ ನೇರ ಹಣಾಹಣಿ ಇದೆ. ಕಾಂಗ್ರೆಸ್ ಟಿಕೆಟ್ ವಂಚಿತರಾದ ಎಸ್.ಎಂ.ಕೃಷ್ಣ ಅವರ ತಮ್ಮನ ಮಗ ಎಸ್.ಗುರುಚರಣ್ ಜೆಡಿಎಸ್ ಸೇರಿದ್ದು ಕಾಂಗ್ರೆಸ್ ಓಟಕ್ಕೆ ಬ್ರೇಕ್ ಬಿದ್ದಿದೆ. ಎಸ್.ಪಿ.ಸ್ವಾಮಿ ಬಿಜೆಪಿ ಅಭ್ಯರ್ಥಿ.

ಮಳವಳ್ಳಿ ಎಸ್‌ಸಿ ಮೀಸಲು ಕ್ಷೇತ್ರದಲ್ಲಿ ಶಾಸಕ, ಜೆಡಿಎಸ್‌ನ ಡಾ.ಕೆ.ಅನ್ನದಾನಿ ಮತ್ತು ಕಾಂಗ್ರೆಸ್‌ನ ಪಿ.ಎಂ.ನರೇಂದ್ರಸ್ವಾಮಿ ನಡುವೆ ಪೈಪೋಟಿ ಇದೆ. ಬಿಜೆಪಿಯಲ್ಲಿದ್ದ ಮಾಜಿ ಸಚಿವ ಬಿ.ಸೋಮಶೇಖರ್ ಸೇರಿ ಹಲವು ಮುಖಂಡರು ಕಾಂಗ್ರೆಸ್ ಸೇರಿದ್ದು ಪಿ.ಎಂ.ನರೇಂದ್ರಸ್ವಾಮಿ ಅವರಿಗೆ 'ಪ್ಲಸ್' ಆಗಿದೆ. ಬಿಜೆಪಿಯಿಂದ ಜಿ.ಮುನಿರಾಜು ಕಣದಲ್ಲಿದ್ದಾರೆ.



ಹಿಂದಿನ ಚುನಾವಣೆಯಲ್ಲಿ ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಮಂಡ್ಯ	ಕಾಂಗ್ರೆಸ್	ಜೆಡಿಎಸ್
ಮದ್ದೂರು	ಜೆಡಿಎಸ್	ಜೆಡಿಎಸ್
ಶ್ರೀರಂಗಪಟ್ಟಣ	ಜೆಡಿಎಸ್	ಜೆಡಿಎಸ್
ಕೆ.ಆರ್.ಪೇಟೆ	ಜೆಡಿಎಸ್	ಜೆಡಿಎಸ್
ಮಳವಳ್ಳಿ	ಕಾಂಗ್ರೆಸ್	ಜೆಡಿಎಸ್
ನಾಗಮಂಗಲ	ಜೆಡಿಎಸ್	ಜೆಡಿಎಸ್
ಮೇಲುಕೋಟೆ	ಸರ್ವೋದಯ ಕರ್ನಾಟಕ ಪಕ್ಷ	ಜೆಡಿಎಸ್

(ಕೆ.ಆರ್.ಪೇಟೆ ಕ್ಷೇತ್ರ: 2018ರಲ್ಲಿ ಜೆಡಿಎಸ್‌ನಿಂದ ಆಯ್ಕೆಯಾಗಿದ್ದ ಕೆ.ಸಿ.ನಾರಾಯಣಗೌಡರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ 2019ರ ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಆಯ್ಕೆಯಾದರು.)



ಯುವ ಸ್ಪರ್ಧಿಗಳ ಕಣ!

ಮಂಡ್ಯ ಕ್ಷೇತ್ರದಲ್ಲಿ ಕಣದಲ್ಲಿರುವ ಪ್ರಮುಖ ಪಕ್ಷಗಳ ಅಭ್ಯರ್ಥಿಗಳು 37–46 ವರ್ಷ ವಯಸ್ಸಿನ ಆಸುಪಾಸಿನಲ್ಲಿದ್ದಾರೆ. 37 ವರ್ಷದ ಪಕ್ಷೇತರ ಅಭ್ಯರ್ಥಿ ಕೆ.ಎಸ್. ವಿಜಯ್ ಆನಂದ್ ಜನತಾ ಶಿಕ್ಷಣ ಟ್ರಸ್ಟ್ ಅಧ್ಯಕ್ಷ. 40 ವರ್ಷದ ಅಶೋಕ್ ಜಯರಾಂ ಅಮೆರಿಕದ ಕ್ಯಾಲಿಫೋರ್ನಿಯಾ ವಿ.ವಿಯ ಎಂಬಿಎ ಪದವೀಧರ. ಗಣಿಗ ಪಿ ರವಿಕುಮಾರ್ ಅವರಿಗೆ 43 ವರ್ಷ. 45 ವರ್ಷದ ಬಿ.ಆರ್.ರಾಮಚಂದ್ರ 'ಮನ್‌ಮುಲ್' ಅಧ್ಯಕ್ಷ. 45 ವರ್ಷದ ಮಧುಚಂದನ್ ಎಂಜಿನಿಯರಿಂಗ್ ಪದವೀಧರ, ರೈತಸಂಘ ರಾಜ್ಯ ಘಟಕದ ಸಂಘಟನಾ ಕಾರ್ಯದರ್ಶಿ.

ಸಾಕ್ಷಾತ್ ಸಮೀಕ್ಷೆ

ಕೊಪ್ಪಳ ಬಿಜೆಪಿ– ಕಾಂಗ್ರೆಸ್ ನಡುವೆ ಪೈಪೋಟಿ, ಕುಟುಂಬ ರಾಜಕಾರಣಕ್ಕೆ ಜೆಡಿಎಸ್ ಸಡ್ಡು

ಪ್ರತಿಷ್ಠಿತರ ಕಣದಲ್ಲಿ ಗೆಲುವು ಯಾರಿಗೆ?

• ಪ್ರಮೋದ

ಕೊಪ್ಪಳ: ಕಳೆದ ಚುನಾವಣೆಯಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದ್ದ ಕೊಪ್ಪಳ ಮತ್ತು ಗಂಗಾವತಿ ವಿಧಾನಸಭಾ ಕ್ಷೇತ್ರಗಳಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ (ಕೆಆರ್‌ಪಿಪಿ) ಸಂಸ್ಥಾಪಕ ಜನಾರ್ದನ ರೆಡ್ಡಿ ಸ್ಪರ್ಧೆಯಿಂದ ಗಂಗಾವತಿ ಪ್ರಮುಖ ಕಣಗಳಲ್ಲಿ ಒಂದಾಗಿದೆ. ಅಲ್ಲಿ ಶಾಸಕ, ಬಿಜೆಪಿಯ ಪರಣ್ಣ ಮುನವಳ್ಳಿ ಮತ್ತು ಕಾಂಗ್ರೆಸ್‌ನ ಇಕ್ಬಾಲ್ ಅನ್ಸಾರಿ ಕಣದಲ್ಲಿದ್ದಾರೆ. ನಾಲ್ಕು ತಿಂಗಳ ಹಿಂದೆಯಷ್ಟೇ ಕೆಆರ್‌ಪಿಪಿ ಅಸ್ತಿತ್ವಕ್ಕೆ ಬಂದ ಬಳಿಕ ಅಲ್ಲಿನ ರಾಜಕೀಯ ಚಹರೆ ನಿಧಾನಕ್ಕೆ ಬದಲಾಗುತ್ತಿದೆ. ತೀವ್ರ ಪೈಪೋಟಿ, ಜೊತೆಗೆ ಅಷ್ಟೇ ಕುತೂಹಲಕ್ಕೂ ಎಡೆ ಮಾಡಿಕೊಟ್ಟಿದೆ.

ರೆಡ್ಡಿ ಅವರನ್ನು ಶತಾಯ ಗತಾಯ ಸೋಲಿಸಲೇಬೇಕು ಎಂದು ತಂತ್ರ ರೂಪಿಸುತ್ತಿರುವ ಪರಣ್ಣ ಮತ್ತು ಅನ್ಸಾರಿ 'ಹೊರಗಿನಿಂದ ಬಂದವರು ಚುನಾವಣಾ ಬಳಿಕ ಕ್ಷೇತ್ರ ಬಿಟ್ಟು ಓಡಿ ಹೋಗುತ್ತಾರೆ' ಎಂಬ ಅಸ್ತ್ರ ಪ್ರಯೋಗಿಸುತ್ತಿದ್ದಾರೆ. 'ಹೊರಗಿನವರಿಗಿಂತ ಕ್ಷೇತ್ರದಲ್ಲೇ ಇರುವವರ ಮೇಲೆ ನಂಬಿಕೆಯಿಡಿ. ಸುಲಭವಾಗಿ ಸಂಪರ್ಕಕ್ಕೆ ಸಿಗುವವರಿಗೆ ಆದ್ಯತೆ ನೀಡಿ' ಎಂದು ಮತದಾರರಿಗೆ ಮನಗಾಣಿಸುತ್ತಿದ್ದಾರೆ.

ಅಂಜನಾದ್ರಿ ಸೇರಿ ಸಮಗ್ರ ಅಭಿವೃದ್ಧಿಗೆ ರೂಪುರೇಷೆ ಸಿದ್ಧಪಡಿಸಲಾಗಿದೆ ಎಂದು ಭರವಸೆ ನೀಡಿರುವ ಬಿಜೆಪಿ ನಾಯಕರು, 'ಹನುಮ ಜನಿಸಿದ ಕ್ಷೇತ್ರದಲ್ಲಿ ಹಿಂದೂ ಸಮಾಜದ ನಾಯಕನೇ ಶಾಸಕನಾಗಿ ಆಯ್ಕೆ ಆಗಬೇಕು' ಎಂದು ಮತದಾರರ ಮೇಲೆ ಪ್ರಭಾವಬೀರಲು ಮುಂದಾಗಿದ್ದಾರೆ.

ಅನ್ಸಾರಿ ಅವರಿಗೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಮತಗಳ ಬಲದ ಜೊತೆಗೆ ವೈಯಕ್ತಿಕ ವರ್ಚಸ್ಸೂ ಇದೆ. ಆದರೆ, ಅವರಿಗೆ ಬಂಡಾಯದ ಬಿಸಿ ತಟ್ಟುವ ಸಾಧ್ಯತೆ ಇದೆ. ಕಾಂಗ್ರೆಸ್ ಟಿಕೆಟ್ ಸಿಗದಿರುವುದಕ್ಕೆ ಮುನಿಸಿಕೊಂಡಿರುವ ಎಚ್.ಆರ್.ಶ್ರೀನಾಥ್ ಅವರ ಕೋಪ ಇನ್ನೂ ಶಮನಗೊಂಡಿಲ್ಲ. 'ಅನ್ಸಾರಿಯನ್ನು ಅಭ್ಯರ್ಥಿ ಮಾಡಿ ಪಕ್ಷ ತಪ್ಪು ಮಾಡಿದೆ' ಎಂದು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇನ್ನೊಬ್ಬ ಟಿಕೆಟ್ ಆಕಾಂಕ್ಷಿಯಾಗಿದ್ದ ಮಲ್ಲಿಕಾರ್ಜುನ ನಾಗಪ್ಪ ಕೂಡ ಅಸಮಾಧಾನಗೊಂಡವರ ಪಟ್ಟಿಯಲ್ಲಿ ಇದ್ದಾರೆ. ಆದ್ದರಿಂದ ಅನ್ಸಾರಿ ಎದುರಾಳಿಗಳ ಜೊತೆಗೆ ಸ್ವಪಕ್ಷೀಯರ ಸವಾಲನ್ನೂ ಎದುರಿಸಬೇಕಿದೆ.

ಕುಟುಂಬ ರಾಜಕಾರಣ: ಮೂರು ದಶಕಗಳಿಂದ ಕೊಪ್ಪಳ ಕ್ಷೇತ್ರದ ರಾಜಕಾರಣ ಹಿಟ್ನಾಳ ಮತ್ತು ಕರಡಿ ಕುಟುಂಬಗಳಿಗೆ ಸೀಮಿತವಾಗಿದೆ. ಈ ಬಾರಿಯೂ ಬಿಜೆಪಿಯಿಂದ ಟಿಕೆಟ್ ಸಿಗದೇ ಬಂಡಾಯವೆದ್ದ ಸಿ.ವಿ. ಚಂದ್ರಶೇಖರ್ ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ. ಈ ಕಾರಣ ಅಲ್ಲಿ ತ್ರಿಕೋನ ಸ್ಪರ್ಧೆ ಇದೆ.

ಈ ಕ್ಷೇತ್ರದಲ್ಲಿ 1994ರಿಂದ ಈವರೆಗೆ ನಡೆದ 6 ಚುನಾವಣೆ ಮತ್ತು 1 ಉಪ ಚುನಾವಣೆಯಲ್ಲಿ ಬಿಜೆಪಿಯ ಸಂಸದ ಸಂಗಣ್ಣ ಕರಡಿ ನಾಲ್ಕು ಬಾರಿ ಶಾಸಕರಾದರೆ, ಕಾಂಗ್ರೆಸ್‌ನ ಹಿಟ್ನಾಳ ಕುಟುಂಬದ ಕೆ. ಬಸವರಾಜ ಒಂದು ಸಲ ಮತ್ತು ಅವರ ಪುತ್ರ ರಾಘವೇಂದ್ರ ಹಿಟ್ನಾಳ ಎರಡು ಸಲ ಶಾಸಕರಾಗಿದ್ದಾರೆ. 2018ರಲ್ಲಿ ಸಂಗಣ್ಣ ಅವರ ಪುತ್ರ ಅಮರೇಶ ಕರಡಿ ಸ್ಪರ್ಧಿಸಿ, ಪರಾಭವಗೊಂಡರು.

ಈ ಬಾರಿ ರಾಘವೇಂದ್ರ ಹಿಟ್ನಾಳ ಹ್ಯಾಟ್ರಿಕ್ ಆಯ್ಕೆ ಬಯಸಿ ಕಾಂಗ್ರೆಸ್‌ನಿಂದ ಕಣಕ್ಕಿಳಿದರೆ, ಬಿಜೆಪಿಯು ಸಂಸದ ಸಂಗಣ್ಣ ಕರಡಿ ಅವರ ಸೊಸೆ ಮಂಜುಳಾ ಕರಡಿ ಅವರನ್ನು ಹುರಿಯಾಳು ಆಗಿಸಿದೆ. ಪ್ರಮುಖ ರಾಷ್ಟ್ರೀಯ ಪಕ್ಷವೊಂದು ಕೊಪ್ಪಳ ಕ್ಷೇತ್ರದಲ್ಲಿ ಮಹಿಳೆಗೆ ಟಿಕೆಟ್ ನೀಡಿದ್ದು 29 ವರ್ಷಗಳ ಅವಧಿಯಲ್ಲಿ ಇದೇ ಮೊದಲು. 1994ರಲ್ಲಿ ಕಾಶಮ್ಮ ಶಂಕರಗೌಡ ಬಿಜೆಪಿಯಿಂದ ಸ್ಪರ್ಧಿಸಿದ್ದರು.

2018ರಲ್ಲಿ ಚಂದ್ರಶೇಖರ್ ಅವರಿಗೆ ಟಿಕೆಟ್ ಘೋಷಿಸಿದ್ದ ಬಿಜೆಪಿ ಅಂತಿಮವಾಗಿ ಸಂಸದರ ಪುತ್ರ ಅಮರೇಶ ಕರಡಿಗೆ 'ಬಿ ಫಾರ್ಮ್' ನೀಡಿತ್ತು. ಈ ಬಾರಿಯೂ ಬಿಜೆಪಿ ಟಿಕೆಟ್ ಕೈ ತಪ್ಪಿದ್ದರಿಂದ ಚಂದ್ರಶೇಖರ್ ಕ್ಷೇತ್ರದ ಕುಟುಂಬ ರಾಜಕಾರಣಕ್ಕೆ ಸಡ್ಡು ಹೊಡೆಯಲು 'ತೆನೆ' ಹೊತ್ತಿದ್ದಾರೆ. ಮತ್ತೆ ಕರಡಿ ಕುಟುಂಬಕ್ಕೆ ಟಿಕೆಟ್ ನೀಡಿದ್ದು, ಹಲವು ಬಿಜೆಪಿ ನಾಯಕರ ಬೇಸರಕ್ಕೂ ಕಾರಣವಾಗಿದೆ.

ನೇರ ಹಣಾಹಣಿ: ಚುನಾವಣಾ ವೇಳೆ ನೀರಾವರಿ ವಿಷಯವೇ ಪ್ರಚಾರದ ಅಸ್ತ್ರವಾಗಿರುವ ಯಲಬುರ್ಗಾ ಕ್ಷೇತ್ರದಲ್ಲಿ ಬಿಜೆಪಿಯ ಹಾಲಪ್ಪ ಆಚಾರ್ ಮತ್ತು ಕಾಂಗ್ರೆಸ್‌ನ ಬಸವರಾಜ ರಾಯರಡ್ಡಿ ಸ್ಪರ್ಧಿಸಿದ್ದಾರೆ. ಹಾಲಪ್ಪ ಅವರಿಗೆ ಇದು ಮೂರನೇ ಚುನಾವಣೆಯಾದರೆ, ರಾಯರಡ್ಡಿ ಅವರು ಎಂಟನೇ ಬಾರಿ ಅದೃಷ್ಟ ಪರೀಕ್ಷೆಗೆ ಮುಂದಾಗಿದ್ದಾರೆ. ಈ ಕ್ಷೇತ್ರದಲ್ಲಿ ಎರಡು ಪಕ್ಷಗಳ ನಡುವೆ ನೇರ ಹಣಾಹಣಿ ಇದೆ.

ಜಿಲ್ಲೆಯ ಏಕೈಕ ಪರಿಶಿಷ್ಟ ಮೀಸಲು ಕ್ಷೇತ್ರ ಕನಕಗಿರಿಯಲ್ಲಿ ಬಿಜೆಪಿಯಿಂದ ಬಸವರಾಜ ದಢೇಸೂಗೂರು ಎರಡನೇ ಬಾರಿಗೆ ಆಯ್ಕೆ ಬಯಸಿದ್ದಾರೆ. ದಢೇಸೂಗೂರ 2013ರಲ್ಲಿ ಕೆಜೆಪಿಯಿಂದ ಸ್ಪರ್ಧಿಸಿ ಸೋತಿದ್ದರು. ಕಾಂಗ್ರೆಸ್‌ನಿಂದ ಶಿವರಾಜ ತಂಗಡಗಿ ಸತತ ನಾಲ್ಕನೇ ಸಲ ಸ್ಪರ್ಧಿಸಿದ್ದಾರೆ. 2008ರಲ್ಲಿ ಪಕ್ಷೇತರರಾಗಿ, 2013ರಲ್ಲಿ ಕಾಂಗ್ರೆಸ್‌ನಿಂದ ಗೆದ್ದು ಸಚಿವರಾಗಿದ್ದರು. ಕಳೆದ ಬಾರಿ ಸೋತಿದ್ದರು.

ಸತತ ಎರಡು ಬಾರಿ ಗೆದ್ದಿಲ್ಲ: ಮೊದಲ ಚುನಾವಣೆಯಿಂದಲೂ ಒಬ್ಬ ಅಭ್ಯರ್ಥಿಗೆ ಸತತ ಎರಡು ಬಾರಿ ಗೆಲುವು ಮರೀಚಿಕೆಯಾಗಿರುವ ಕುಷ್ಟಗಿ ಕ್ಷೇತ್ರದಲ್ಲಿ ಶಾಸಕ, ಕಾಂಗ್ರೆಸ್‌ನ ಅಮರೇಗೌಡ ಬಯ್ಯಾಪುರ, ಬಿಜೆಪಿಯಿಂದ ದೊಡ್ಡನಗೌಡ ಎಚ್. ಪಾಟೀಲ ಸ್ಪರ್ಧಿಸಿದ್ದಾರೆ.

2008ರಲ್ಲಿ ಕುಷ್ಟಗಿ ಕ್ಷೇತ್ರದಿಂದ ಅಮರೇಗೌಡ ಬಯ್ಯಾಪುರ ಅವರು ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರು. ಇದಕ್ಕೂ ಮೊದಲು ಲಿಂಗಸಗೂರು ಕ್ಷೇತ್ರದಿಂದ ಮೂರು ಬಾರಿ ಆಯ್ಕೆಯಾಗಿದ್ದರು. ದೊಡ್ಡನಗೌಡ 2004ರಲ್ಲಿ ಗೆಲುವು ಪಡೆದು ಮುಂದಿನ ಚುನಾವಣೆಯಲ್ಲಿ ಸೋತು, 2013ರಲ್ಲಿ ಮರಳಿ ಗೆದ್ದಿದ್ದರು.

ಕೊಪ್ಪಳ ಮತ್ತು ಕುಷ್ಟಗಿ ಕ್ಷೇತ್ರದಲ್ಲಿ ಕುರುಬ ಸಮುದಾಯದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಸಮಾಜದ ಜನ ಕೊಪ್ಪಳದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ್ತು ಕುಷ್ಟಗಿಯಲ್ಲಿ ತಮ್ಮದೇ ಸಮಾಜದ ಬಿಜೆಪಿಯ ದೊಡ್ಡನಗೌಡ ಅವರನ್ನು ಬೆಂಬಲಿಸುತ್ತಾರೆ. ಅಲ್ಲಿನ ಮತದಾರರ ಮನಸ್ಥಿತಿ ಹೀಗೆ ಮುಂದುವರಿಯುವುದೋ ಅಥವಾ ಬದಲಾವಣೆ ಬಯಸುವುದೋ ಎಂಬ ಬಗ್ಗೆ ಅಲ್ಲಿನ ರಾಜಕೀಯ ವಲಯದಲ್ಲಿ ಚರ್ಚೆ ನಡೆದಿದೆ.



ಹಿಂದಿನ ಚುನಾವಣೆಯಲ್ಲಿ ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಕೊಪ್ಪಳ	ಕಾಂಗ್ರೆಸ್	ಕಾಂಗ್ರೆಸ್
ಗಂಗಾವತಿ	ಜೆಡಿಎಸ್	ಬಿಜೆಪಿ
ಕನಕಗಿರಿ	ಕಾಂಗ್ರೆಸ್	ಬಿಜೆಪಿ
ಕುಷ್ಟಗಿ	ಬಿಜೆಪಿ	ಕಾಂಗ್ರೆಸ್
ಯಲಬುರ್ಗಾ	ಕಾಂಗ್ರೆಸ್	ಬಿಜೆಪಿ



ಮಹಿಳಾ ಸಬಲೀಕರಣಕ್ಕೆ ಮೀಸಲಾತಿ ಜಾರಿ ಮಾಡಿ: ದೇವೇಗೌಡ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡಿದ್ದಾರೆ. ಇದು ನಿಜಕ್ಕೂ ನಿಮ್ಮ ಆದ್ಯತೆಯ ವಿಷಯವಾಗಿದ್ದರೆ, ಬೇರೇನೂ ಮಾಡಬೇಕಾಗಿಲ್ಲ. ಶಾಸನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆ ಲೋಕಸಭೆಯಲ್ಲೂ ಅಂಗೀಕಾರ ಆಗುವಂತೆ ನೋಡಿಕೊಳ್ಳಿ. ಅಷ್ಟೇ ಸಾಕು' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಸುರತ್ಕಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ವಿಧಾನಸಭೆ ಮತ್ತು ಲೋಕಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಬಗ್ಗೆ ನಾನು ಪ್ರಧಾನಿ ಆಗಿದ್ದಾಗ ಮಂಡಿಸಿದ್ದ ಮಸೂದೆ ರಾಜ್ಯಸಭೆಯಲ್ಲಿ ಅಂಗೀಕಾರ ಆಗಿದ್ದು, ಲೋಕಸಭೆಯಲ್ಲಿ ಅಂಗೀಕಾರಕ್ಕೆ ಬಾಕಿ ಇದೆ. ಈಗಿನ ಪ್ರಧಾನಿ ಮನಸ್ಸು ಮಾಡಿದರೆ ಅದನ್ನು ಜಾರಿಗೊಳಸುವುದು ಕಷ್ಟವೇನಲ್ಲ' ಎಂದರು.

ಮೋದಿ ಅವರು ಜೆಡಿಎಸ್ ಪಕ್ಷವನ್ನು ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹೋಲಿಕೆ ಮಾಡಿದ ಕುರಿತ ಪ್ರಶ್ನೆಗೆ ದೇವೇಗೌಡರು ನಸುನಕ್ಕರು. 'ಪ್ರಧಾನಿ ಹುದ್ದೆ ಬಗ್ಗೆ ನನಗೆ ಗೌರವ ಇದೆ. ಅವರ ಬಗ್ಗೆ ಏನೂ ಹೇಳಲು ಬಯಸುವುದಿಲ್ಲ' ಎಂದರು.

'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೂ ಜೆಡಿಎಸ್ ಕಾಂಗ್ರೆಸ್‌ನ ಬಿ–ಟೀಂ ಎಂದು ಹೇಳಿದ್ದಾರೆ. ಹಾಸನದಲ್ಲಿ ಮೋದಿಯವರು ಅದೇ ಧಾಟಿಯಲ್ಲಿ ಮಾತನಾಡಿದ್ದರು. ರಾಹುಲ್ ಗಾಂಧಿ 2018ರಲ್ಲಿ ಪೀಠಿಕೆ ಹಾಕಿದ್ದರು. ಅದರ ದುಷ್ಪರಿಣಾಮವನ್ನು ಇವತ್ತು ಕಾಂಗ್ರೆಸ್ ಎದುರಿಸುತ್ತಿದೆ, ನಾನಲ್ಲ' ಎಂದರು.

ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ ಸಮಾನ ನಾಗರಿಕ ಸಂಹಿತೆ ಜಾರಿಗೊಳಿಸುವುದಾಗಿ ಬಿಜೆಪಿ ಹೇಳಿರುವ ಕುರಿತ ಪ್ರಶ್ನೆಗೂ ದೇವೇಗೌಡರು ನಕ್ಕು ಸುಮ್ಮನಾದರು.



ಎಚ್.ಡಿ.ದೇವೇಗೌಡ ಅವರು ಸುರತ್ಕಲ್‌ನಲ್ಲಿ ಬೆಂಬಲಿಗರನ್ನು ಕಂಡು ಹರ್ಷ ವ್ಯಕ್ತಪಡಿಸಿದರು ಪ್ರಜಾವಾಣಿ ಚಿತ್ರ



ಸುಭಾಷಿತ

ಸತ್ಯವನ್ನು ಹೇಳಲೇಬೇಕು. ಯಾರಿಗೆ ನೋವು ಮಾಡಿದರೂ ಸತ್ಯ ಸತ್ಯವೇ.

-ಮಹಾತ್ಮ ಗಾಂಧಿ

ಜಲಮೂಲಗಳ ಗಣತಿ ಸ್ವಾಗತಾರ್ಹ ಹೆಜ್ಜೆ

ಕೇಂದ್ರ ಜಲಶಕ್ತಿ ಸಚಿವಾಲಯವು ದೇಶದಲ್ಲಿರುವ ಜಲಮೂಲಗಳ ಗಣತಿಯನ್ನು ನಡೆಸಿ ಇತ್ತೀಚೆಗೆ ಬಿಡುಗಡೆ ಮಾಡಿರುವ ವರದಿಯು ಕೆಲವು ಉಪಯುಕ್ತ ಮಾಹಿತಿಗಳಿಂದ ಕೂಡಿದೆ. ಕೆರೆ, ಕಟ್ಟೆ, ಸರೋವರ, ಜಲಾಶಯ ಮತ್ತು ಜಲಸಂರಕ್ಷಣೆಗಾಗಿ ಕಟ್ಟಿದ ಜಲಸಂಗ್ರಹಾಗಾರಗಳ ಸಂಖ್ಯೆ, ಅವುಗಳ ಗಾತ್ರ, ಬಳಕೆಯ ಸ್ಥಿತಿಗತಿ ಹಾಗೂ ಅವುಗಳ ಸಂಗ್ರಹ ಸಾಮರ್ಥ್ಯದ ವಿವರ ದಾಖಲಿಸುವ ಯತ್ನವನ್ನು ಈ ಗಣತಿಯಲ್ಲಿ ಮಾಡಲಾಗಿದೆ. ದೇಶದಲ್ಲಿ 24.24 ಲಕ್ಷ ಜಲಮೂಲಗಳಿದ್ದು, ಅವುಗಳಲ್ಲಿ ಶೇ 2.93ರಷ್ಟು ಮಾತ್ರ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿವೆ ಎಂಬ ಅಂಶ ಗಣತಿಯಲ್ಲಿ ಎದ್ದುಕಂಡಿದೆ. ಪಶ್ಚಿಮ ಬಂಗಾಳದಲ್ಲಿ ಅತಿ ಹೆಚ್ಚು, ಅಂದರೆ 7.5 ಲಕ್ಷದಷ್ಟು ಜಲಮೂಲಗಳಿವೆ. ಕರ್ನಾಟಕದ ಗ್ರಾಮಾಂತರ ಭಾಗದಲ್ಲಿ 26,205 ಹಾಗೂ ನಗರ ಪ್ರದೇಶದಲ್ಲಿ 789 ಜಲಮೂಲಗಳಿರುವುದು ಸಹ ವರದಿಯಲ್ಲಿ ದಾಖಲಾಗಿದೆ. ರಾಜ್ಯದ ಶೇ 78ರಷ್ಟು ಜಲಮೂಲಗಳು ನಿರುಪಯುಕ್ತವಾಗಿವೆ ಎನ್ನುವ ಕಳವಳಕಾರಿ ಸಂಗತಿಯ ಮೇಲೂ ವರದಿ ಬೆಳಕು ಚೆಲ್ಲಿದೆ. ಸಂಪೂರ್ಣವಾಗಿ ಬತ್ತಿಹೋಗಿರುವುದು, ಹೂಳು ತುಂಬಿರುವುದು, ಮರುಸ್ಥಾಪನೆ ಮಾಡಲಾಗದಷ್ಟು ಹಾಳಾಗಿರುವುದು, ಉಪ್ಪುನೀರು ಸಂಗ್ರಹವಾಗಿರುವುದು, ಕೈಗಾರಿಕಾ ತ್ಯಾಜ್ಯ ಸೇರಿದ ಆಗುತ್ತಿರುವುದು ಮತ್ತು ಒತ್ತುವರಿ ಆಗಿರುವುದು ಜಲಮೂಲಗಳ ನಿರುಪಯುಕ್ತತೆಗೆ ಮುಖ್ಯ ಕಾರಣಗಳಾಗಿವೆ.

ವರದಿಯನ್ನು ವಿಶ್ಲೇಷಿಸಿದರೆ, ಜನಸಂಖ್ಯೆಯ ಹೆಚ್ಚಳ ಮತ್ತು ನಗರೀಕರಣದ ಒತ್ತಡದಿಂದ ದೇಶ ನಿಧಾನವಾಗಿ ನೀರಿನ ಕೊರತೆಯತ್ತ ಸಾಗುತ್ತಿರುವುದು ಎದ್ದು ಕಾಣುತ್ತದೆ. ಶತಮಾನಗಳಿಂದ ಇದ್ದ 'ಜಲ ದೇವತೆ'ಯ ತಾಣಗಳನ್ನು ಕ್ಷಿಪ್ರಗತಿಯಲ್ಲಿ ಕಳೆದುಕೊಳ್ಳುತ್ತಾ ಹೊರಟಿರುವುದು ಆತಂಕಕಾರಿ ವಿದ್ಯಮಾನ. ಇಂದಿನ ಈ ಕಾಲಘಟ್ಟದಲ್ಲಿ ನಗರೀಕರಣವನ್ನು ತಡೆಯುವುದು ಕಷ್ಟಸಾಧ್ಯವೇ ಸರಿ. ಈ ಹಂತದಲ್ಲಿ ಮುಖ್ಯವಾಗಿ ಆಗಬೇಕಿರುವ ಕೆಲಸ ಏನೆಂದರೆ, ಗ್ರಾಮಾಂತರ ಹಾಗೂ ಅರೆ ಪಟ್ಟಣ ಪ್ರದೇಶಗಳ ಜಲಮೂಲಗಳನ್ನು ಜತನದಿಂದ ಕಾಪಾಡಿಕೊಳ್ಳುವುದು. ಜಲಮೂಲಗಳ ಸಂರಕ್ಷಣೆ ಮಾಡುವುದರ ಅರ್ಥ ಅವುಗಳ ಬಳಕೆಯನ್ನೇ ಮಾಡದಿರುವುದು ಎಂದಲ್ಲ. ವಾಸ್ತವವಾಗಿ, ಸಮರ್ಪಕವಾಗಿ ಬಳಕೆ ಮಾಡದಿರುವ ಕಾರಣಕ್ಕೆ ಅವು ಹಾಳಾಗಿ ಹೋಗುತ್ತಿವೆ. ಜಲಮೂಲಗಳನ್ನು ಸಂರಕ್ಷಿಸಲು ಅವುಗಳನ್ನು ಸರಿಯಾಗಿ ಬಳಕೆ ಮಾಡುವುದು, ಹಾಗೆಯೇ ಮರುಪೂರಣಕ್ಕೂ ಸೂಕ್ತ ವ್ಯವಸ್ಥೆ ಮಾಡುವುದು ಸರಿಯಾದ ತಂತ್ರವಾಗಿದೆ. ನೀರಿನ ಸಮರ್ಪಕ ಬಳಕೆ, ತ್ಯಾಜ್ಯ ನೀರು ಅವುಗಳ ಒಡಲು ಸೇರುವುದಕ್ಕೆ ತಡೆ, ಒಡಲಲ್ಲಿ ಹೂಳು ತುಂಬದಂತೆ ನಿಗಾ- ಇಂತಹ ಕ್ರಮಗಳಿಂದ ಜಲಮೂಲಗಳ ಆರೋಗ್ಯ ಕಾಪಾಡಿ, ಅವುಗಳನ್ನು ಸಂರಕ್ಷಣೆ ಮಾಡಲು ಸಾಧ್ಯ. ಸ್ಥಳೀಯ ಸನ್ನಿವೇಶಗಳಿಗೆ ತಕ್ಕಂತೆ ಒಂದೊಂದು ಜಲಮೂಲಕ್ಕೂ ಒಂದೊಂದು ವಿಧದ ಸಂರಕ್ಷಣಾ ತಂತ್ರವನ್ನು ಅಳವಡಿಸಿಕೊಳ್ಳಬೇಕಿರುವುದು ಇಂದಿನ ತುರ್ತು ಅಗತ್ಯ.

ಒಂದೊಂದು ಜಲಮೂಲಕ್ಕೂ ಒಂದೊಂದು ವಿಧದ ಸಂರಕ್ಷಣಾ ತಂತ್ರ ಅಳವಡಿಸಿ ಕೊಳ್ಳಬೇಕಿರುವುದು ಇಂದಿನ ತುರ್ತು ಅಗತ್ಯ

ಜಲಮೂಲಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ನೀತಿ ನಿರೂಪಣೆ ಮಾಡುವಾಗ ಇಂತಹ ವರದಿಗಳು ಹೆಚ್ಚು ಉಪಯುಕ್ತ ಎನಿಸುತ್ತವೆ. ಜಲಮೂಲಗಳು ಕುಡಿಯುವ ನೀರನ್ನು ಮಾತ್ರ ಪೂರೈಸುತ್ತಿಲ್ಲ. ಅದರ ಜೊತೆಗೆ ನೀರಾವರಿಗೂ ಮೂಲಗಳಾಗಿವೆ. ಅಂತರ್ಜಲ ಮಟ್ಟ ಹೆಚ್ಚಳಕ್ಕೂ ಕಾರಣವಾಗುತ್ತಿವೆ. ಜಲಸಾರಿಗೆ, ಜಲಕ್ರೀಡೆಗಳಿಗೆ, ಕೈಗಾರಿಕೆಗಳಿಗೆ ಮತ್ತು ಧಾರ್ಮಿಕ ಆಚರಣೆಗಳಿಗೆ ಕೂಡ ಬಳಕೆಯಾಗುತ್ತಿವೆ. ಆಯಾ ಪ್ರದೇಶದ ಹವಾಮಾನದ ಮೇಲೂ ಅವು ಪರಿಣಾಮವನ್ನು ಬೀರುತ್ತಿವೆ. ಸಾಂಸ್ಕೃತಿಕವಾಗಿಯೂ ಅವುಗಳ ಮಹತ್ವ ದೊಡ್ಡದಾಗಿದೆ. ಆಯಾ ಜಲಮೂಲಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪ್ರತ್ಯೇಕಿಸಿ, ಅದರ ಪಾಲನೆಯ ಹೊಣೆ ಹೊತ್ತ ಸ್ಥಳೀಯ ಸಂಸ್ಥೆಗೆ ಅದನ್ನು ಒದಗಿಸಬೇಕು. ಒತ್ತುವರಿ ತೆರವುಗೊಳಿಸುವುದು ಸೇರಿದಂತೆ ಜಲಮೂಲದ ಸಂರಕ್ಷಣೆಗೆ ಆಯಾ ಸ್ಥಳೀಯ ಸಂಸ್ಥೆಯು ಪರಿಣಾಮಕಾರಿ ಕ್ರಮ ಕೈಗೊಳ್ಳಲು ಇದರಿಂದ ಸಾಧ್ಯ. ದೊಡ್ಡ ಸಂಖ್ಯೆಯ ಜಲಮೂಲಗಳು ಖಾಸಗಿ ಒಡೆತನದಲ್ಲಿರುವುದು ಸಹ ಗಣತಿಯಿಂದ ಬೆಳಕಿಗೆ ಬಂದಿದೆ. ಇಂತಹ ಖಾಸಗಿ ಜಲಮೂಲಗಳ ಕುರಿತು ನೀತಿ ನಿರೂಪಣೆಗೂ ಅದು ಒತ್ತಾಯಿಸುತ್ತಿದೆ. ವರದಿಯಲ್ಲಿ ಕೆಲವು ಸ್ಪಷ್ಟತೆಗಳ ಕೊರತೆ ಇದೆ ಎಂದೂ ವಿಶ್ಲೇಷಿಸಲಾಗಿದೆ. ಅಂತಹ ಕೊರತೆಗಳನ್ನು ನೀಗಿಸುವತ್ತ ಮತ್ತು ಕಾಲಕಾಲಕ್ಕೆ ಸಮೀಕ್ಷೆಗಳನ್ನು ನಡೆಸುವ ಮೂಲಕ ದತ್ತಾಂಶವನ್ನು ನವೀಕರಿಸುವತ್ತ ಜಲಶಕ್ತಿ ಸಚಿವಾಲಯ ಗಮನಹರಿಸಬೇಕು.

ಭಾರತದ ಸಂದರ್ಭದಲ್ಲಿ ಜನಸಂಖ್ಯೆ ಹೆಚ್ಚಳದ ಸಮಸ್ಯೆಗೆ ಹಲವು ಆಯಾಮಗಳಿವೆ

ಜನಸಂಖ್ಯೆಯಲ್ಲಿ ಮುಂಚೂಣಿಗೆ, ಮುಂದೆ?

ವಿಶ್ಲೇಷಣೆ

ವಸಂತ ಶೆಟ್ಟಿ

ಜನಸಂಖ್ಯೆಯಲ್ಲಿ ಭಾರತವು ಚೀನಾವನ್ನು ಹಿಂದಿಕ್ಕಿ ಜಗತ್ತಿನ ಮೊದಲ ಸ್ಥಾನಕ್ಕೆ ಏರಿರುವ ಸುದ್ದಿ ಇತ್ತೀಚೆಗೆ ಬಂತು. ವಿಶ್ವಸಂಸ್ಥೆಯ ಅಧಿಕೃತ ಅಂಕಿಅಂಶಗಳ ಪ್ರಕಾರ, 142.86 ಕೋಟಿ ಜನಸಂಖ್ಯೆಯೊಂದಿಗೆ ಭಾರತ ಈಗ ಈ ಸ್ಥಾನಕ್ಕೆ ತಲುಪಿದೆ. 1950ಕ್ಕೆ ಹೋಲಿಸಿದಾಗ, ಭಾರತದ ಜನಸಂಖ್ಯೆ 75 ವರ್ಷದಲ್ಲಿ ನೂರು ಕೋಟಿಯಷ್ಟು ಹೆಚ್ಚಿದೆ. ಜಗತ್ತಿನ ಜನಸಂಖ್ಯೆ 800 ಕೋಟಿ ತಲುಪಿರುವಾಗ, ಜಗತ್ತಿನ ಪ್ರತಿ ಐವರಲ್ಲಿ ಒಬ್ಬರು ಭಾರತೀಯರು ಅನ್ನುವುದು ಇದರ ಅಗಾಧತೆಯನ್ನು ಗ್ರಹಿಸಲು ನೆರವಾಗಬಹುದು.

ಎರಡನೆಯ ಮಹಾಯುದ್ಧದ ನಂತರ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಾದ ಅಗಾಧ ಬದಲಾವಣೆಗಳು ಆಹಾರ ಉತ್ಪಾದನೆ, ಆರೋಗ್ಯ ಸೇವೆಯಲ್ಲಿ ದೊಡ್ಡ ಮಟ್ಟದ ಬದಲಾವಣೆ ತಂದ ಪರಿಣಾಮ, ಮನುಷ್ಯನ ಸರಾಸರಿ ಜೀವಿತಾವಧಿ ಹೆಚ್ಚಿದ್ದೂ ಈ ಹೆಚ್ಚಳಕ್ಕೆ ಬಹು ಮುಖ್ಯ ಕಾರಣಗಳಲ್ಲೊಂದು. ಈಗಿರುವ ಅಂದಾಜಿನ ಪ್ರಕಾರ, ದೊಡ್ಡ ಪ್ರಮಾಣದ ಸಾಂಕ್ರಾಮಿಕ ಕಾಯಿಲೆಗಳು, ಯುದ್ಧದಂತಹವು ಜರುಗದೇ ಇದ್ದಲ್ಲಿ ಜಗತ್ತಿನ ಜನಸಂಖ್ಯೆ 2090ಕ್ಕೆ ಸಾವಿರ ಕೋಟಿ ತಲುಪಿ ಆಮೇಲಷ್ಟೇ ಇಳಿಮುಖವಾಗಬಹುದು. ಪರಿಸರವನ್ನು, ಇತರೆಲ್ಲ ಜೀವರಾಶಿಗಳನ್ನು ಬುದ್ಧಿವಂತಿಕೆಯ ಬಲದಿಂದ ತನ್ನ ಕೈವಶ ಮಾಡಿಕೊಂಡು ನಡೆಯಬಲ್ಲ ಮನುಷ್ಯ ಎಂಬ ಒಂದೇ ಒಂದು ಪ್ರಭೇದದ ಎಣಿಕೆ ಹೀಗೆ ಏರುವುದು ಯಾವ ರೀತಿಯಲ್ಲೂ ಭೂಮಿಗಾಗಲಿ, ಒಟ್ಟಾರೆ ಮನುಕುಲಕ್ಕಾಗಲಿ ಒಳಿತು ಮಾಡಲಿಕ್ಕಿಲ್ಲ.

ಹೀಗೆ ಏರುತ್ತಿರುವ ಜನಸಂಖ್ಯೆಯನ್ನು ಪೊರೆಯಲು ಬೇಕಿರುವ ಶಕ್ತಿಮೂಲಗಳನ್ನು ನಿರಂತರವಾಗಿ ಪೂರೈಸುವ ಸವಾಲುಗಳು, ಅವುಗಳಿಗಾಗಿ ನಡೆಯುವ ಸಂಘರ್ಷಗಳು ಮತ್ತು ಈ ಶಕ್ತಿಮೂಲಗಳ ಅತಿಯಾದ ಬಳಕೆಯನ್ನೇ ಬುನಾದಿಯನ್ನಾಗಿ ಇರಿಸಿಕೊಂಡಿರುವ ಆಧುನಿಕ ಅರ್ಥವ್ಯವಸ್ಥೆ ತರುವ ಪರಿಸರದ ಬಿಕ್ಕಟ್ಟುಗಳು ಮುಂದಿನ ದಿನಗಳಲ್ಲಿ ಜಗತ್ತಿನ ರಾಜಕಾರಣವನ್ನು ಸಹಕಾರದ ಹಾದಿಗಿಂತ ಸಂಘರ್ಷದ ಹಾದಿಯತ್ತ ತಳ್ಳಬಹುದು. ಇದು ವಿಶ್ವಸಂಸ್ಥೆಯಂತಹ ಸಂಸ್ಥೆಗಳ ಹೊಣೆಗಾರಿಕೆಯನ್ನು ಇನ್ನೂ ಹೆಚ್ಚಿಸಿದೆ. ಇಂತಹ ಸಂಸ್ಥೆಗಳು ಕೆಲ ಮುಂದುವರಿದ ದೇಶಗಳ ಕೈಗೊಂಬೆಯಾಗದೆ ನಿಜ ಅರ್ಥದಲ್ಲಿ 'ಜಗತ್ತೇ ಒಂದು ಕುಟುಂಬ' ಅನ್ನುವ ತತ್ವವನ್ನು ನಂಬಿ ನಡೆಯುವ ಕಾಯಕಕ್ಕೆ ಮುಂದಾಗಬೇಕಿದೆ. 'ನನ್ನ ದೇಶವೇ ಶ್ರೇಷ್ಠ' ಅನ್ನುವ ಅತಿರೇಕದ ರಾಷ್ಟ್ರವಾದ ಎಲ್ಲೆಡೆ ಮುನ್ನೆಲೆಗೆ ಬರುತ್ತಿರುವಾಗ, ಇಂತಹ ಸಂಸ್ಥೆಗಳು ಎಲ್ಲ ದೇಶಗಳನ್ನು ವಿಶ್ವಾಸಕ್ಕೆ ಪಡೆದು ಮುನ್ನಡೆಯುವುದು ಕಪ್ಪೆಗಳನ್ನು ತಕ್ಕಡಿಗೆ ಹಾಕುವಷ್ಟೇ ಸವಾಲಿನದ್ದು.

ಜನಸಂಖ್ಯೆಯ ಏರಿಕೆಯು ದೇಶ ದೇಶಗಳ ನಡುವೆ ತರುವ ರಾಜಕೀಯ, ಸಾಮಾಜಿಕ ಮತ್ತು ಪರಿಸರದ ಬಿಕ್ಕಟ್ಟುಗಳು ಒಂದು ತೆರನಾದರೆ, ದೇಶಗಳ ಒಳಗೂ ಅದು ಹಲವು ರೀತಿಯ ಸಮಸ್ಯೆಗಳನ್ನು ಹುಟ್ಟುಹಾಕಲಿದೆ.

ಭಾರತದ ಸಂದರ್ಭದಲ್ಲಿ ಜನಸಂಖ್ಯೆ ಹೆಚ್ಚಳದ ಸಮಸ್ಯೆಗೆ ಇನ್ನೂ ಹಲವು ಆಯಾಮಗಳಿವೆ. ಮೊದಲಿಗೆ, ಭಾರತದ ಜನಸಂಖ್ಯೆಯ ಬೆಳವಣಿಗೆ ದೇಶದೆಲ್ಲೆಡೆ ಒಂದೇ ತೆರನಾಗಿಲ್ಲ. ಗುಜರಾತ್, ಮಹಾರಾಷ್ಟ್ರ ಮತ್ತು ದಕ್ಷಿಣದ ಎಲ್ಲ ರಾಜ್ಯಗಳಲ್ಲೂ ಜನಸಂಖ್ಯೆ ಬೆಳವಣಿಗೆಯ ಸಮತೋಲನದ ಮಟ್ಟವನ್ನು ಸೂಚಿಸುವ ಫಲವಂತಿಕೆ ದರದ (ಟಿ.ಎಫ್.ಆರ್) ಪ್ರಮಾಣ 2.1ಕ್ಕಿಂತ ಕೆಳಗಿದೆ. ಸರಳವಾಗಿ ಹೇಳಬೇಕು ಅಂದರೆ, 100 ಗಂಡು, 100 ಹೆಣ್ಣಿಗೆ 210 ಮಕ್ಕಳಾಗುವುದು ಜನಸಂಖ್ಯೆ ಏರದೇ ಇಳಿಯದೇ ಸಮತೋಲನದ ಮಟ್ಟ ಸಾಧಿಸುವ ಪ್ರಮಾಣ ಎನ್ನಲಾಗುತ್ತದೆ. ಅದು ಈಗಾಗಲೇ ಕರ್ನಾಟಕದಂತಹ ರಾಜ್ಯದಲ್ಲಿ 170ಕ್ಕೆ ಇಳಿದಿದೆ. ಇದರರ್ಥ, ಮುಂದಿನ ಒಂದು ದಶಕದಲ್ಲಿ ಕರ್ನಾಟಕದ ಮೂಲನಿವಾಸಿಗಳ ಜನಸಂಖ್ಯೆ ಕುಸಿಯುತ್ತ ಸಾಗಲಿದೆ.

1951ರಲ್ಲಿ ಭಾರತದ ಜನಸಂಖ್ಯೆಯಲ್ಲಿ ಕನ್ನಡಿಗರ ಪ್ರಮಾಣ ಶೇ 4.05ರಷ್ಟು ಇತ್ತು. 2011ರ ಗಣತಿಯ ಹೊತ್ತಿಗೆ ಅದು ಶೇ 3.59ಕ್ಕೆ ಕುಸಿದಿದೆ. ಅದು ಇನ್ನೂ ಇಳಿಮುಖವಾಗಲಿದೆ. ಆದರೆ ಇದೇ ಹೊತ್ತಿನಲ್ಲಿ ಉತ್ತರ ಪ್ರದೇಶ, ಬಿಹಾರದಂತಹ ರಾಜ್ಯಗಳಲ್ಲಿ ಇಂದಿಗೂ ಫಲವಂತಿಕೆ ದರದ ಪ್ರಮಾಣ ಸಮತೋಲನದ ಮಟ್ಟಕ್ಕಿಂತ ಬಹಳಷ್ಟು ಮೇಲಿದೆ. ಇದರ ಪರಿಣಾಮವಾಗಿ, ಮುಂದಿನ ಒಂದೆರಡು ದಶಕಗಳಲ್ಲಿ ಭಾರತದ ಜನಸಂಖ್ಯೆಯ ಏರಿಕೆಯಲ್ಲಿ ಉತ್ತರದ ಈ ಕೆಲವೇ ರಾಜ್ಯಗಳ ಕೊಡುಗೆ ಸಿಂಹಪಾಲಿನದ್ದಾಗಿರಲಿದೆ.

ಜನಸಂಖ್ಯೆ ಬೆಳವಣಿಗೆಯ ಸಮಸ್ಯೆಯನ್ನು ಭಾರತದ ಮಟ್ಟದಲ್ಲಿ, ಒಟ್ಟಂದದಲ್ಲಿ ನೋಡಬೇಕು ಅನ್ನುವುದು ನಿಜ. ಆದರೂ ಭಾರತದಂತಹ ಒಕ್ಕೂಟ ವ್ಯವಸ್ಥೆಯಲ್ಲಿ ಇದು ರಾಜ್ಯಗಳ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಗತಿಯ ಮೇಲೆ ಬೀರುವ ಪರಿಣಾಮವನ್ನು ಲೆಕ್ಕಕ್ಕೆ ಹಿಡಿಯದೇ ಹೋದರೆ, ಮುಂದಿನ ಕೆಲವು ದಶಕಗಳಲ್ಲಿ ಹತ್ತಾರು ಹೊಸ ಬಿಕ್ಕಟ್ಟುಗಳು ದೇಶದೊಳಗೂ ಸೃಷ್ಟಿಯಾಗಬಹುದು.

ಜನಸಂಖ್ಯೆಯ ಆಧಾರದ ಮೇಲೆ ರಾಜಕೀಯ ಪ್ರತಿನಿಧಿತ್ವ ಕಲ್ಪಿಸಿರುವ, ಬಹಳಷ್ಟು ಕೇಂದ್ರೀಕೃತವಾಗಿರುವ ವ್ಯವಸ್ಥೆ ನಮ್ಮಲ್ಲಿದೆ. ಇದರಿಂದಾಗಿ ಜನಸಂಖ್ಯೆಯ ಬಲವುಳ್ಳ ರಾಜ್ಯಗಳು ದೆಹಲಿಯಲ್ಲಿ ಹೆಚ್ಚಿನ ಪ್ರತಿನಿಧಿತ್ವ ಪಡೆದಿವೆ. ಸಹಜವಾಗಿಯೇ ಲೋಕಸಭೆಯಲ್ಲಿ ಚಿಕ್ಕ ಚಿಕ್ಕ ರಾಜ್ಯಗಳಿಗೆ ಹೆಚ್ಚಿನ ದನಿಯಿಲ್ಲ. ರಾಜ್ಯಗಳ ಲೋಕಸಭೆ ಸದಸ್ಯರ ಸಂಖ್ಯೆ 1971ರ ಜನಗಣತಿಯ ಮೇಲೆ ನಿಗದಿಯಾಗಿದೆ. ಇದೇ ಕಾರಣಕ್ಕೆ ಕರ್ನಾಟಕದಲ್ಲಿ ಇಂದು 28 ಲೋಕಸಭಾ ಸದಸ್ಯರಿದ್ದಾರೆ. 2026ರವರೆಗೆ ಇದೇ ಮಾನದಂಡ ಇರಲಿದೆಯಾದರೂ, ತದನಂತರದ ಜನಗಣತಿಯ ಮೇಲೆ ಹೊಸದಾಗಿ ಲೋಕಸಭೆ ಸ್ಥಾನಗಳು ನಿರ್ಧಾರವಾಗಲಿವೆ. ಜನಸಂಖ್ಯೆಯನ್ನು ನಿಯಂತ್ರಿಸಿದ ಕರ್ನಾಟಕದಂತಹ ರಾಜ್ಯಗಳ ಪ್ರತಿನಿಧಿತ್ವ ಕಡಿಮೆಯಾಗಿ, ಉತ್ತರದ ಕೆಲವು ರಾಜ್ಯಗಳಿಗೆ ಇನ್ನಷ್ಟು ಪ್ರತಿನಿಧಿತ್ವ ದೆಹಲಿಯಲ್ಲಿ ಸಿಗಲಿದೆ. ಇದು, ಕರ್ನಾಟಕದ ಲೋಕಸಭಾ ಸದಸ್ಯರ ಸಂಖ್ಯೆಯನ್ನು 23ಕ್ಕೆ ಇಳಿಸಬಹುದು.



ಎರಡನೆಯದಾಗಿ, ರಾಜ್ಯಗಳು ಕಾನೂನು ಸುವ್ಯವಸ್ಥೆ, ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯಗಳ ದೊಡ್ಡ ಹೊಣೆ ಹೊತ್ತಿದ್ದರೂ ಅದನ್ನು ನಿಭಾಯಿಸಲು ಬೇಕಾದ ತೆರಿಗೆ ಸಂಪನ್ಮೂಲವನ್ನು ಸಂಗ್ರಹಿಸಲು ಅವುಗಳಿಗೆ ಇರುವ ಅವಕಾಶ ಅತ್ಯಂತ ಸೀಮಿತವಾಗಿದೆ. ಕೇಂದ್ರ ಸಂಗ್ರಹಿಸುವ ನೇರ ಮತ್ತು ಆದಾಯ ತೆರಿಗೆಯಲ್ಲಿ ಪಾಲೊಂದನ್ನು ಹಣಕಾಸು ಆಯೋಗದಡಿ ಒಂದು ನಿರ್ದಿಷ್ಟ ಸೂತ್ರದಲ್ಲಿ ರಾಜ್ಯಗಳಿಗೆ ಹಂಚುವ ಕ್ರಮವಿದ್ದರೂ ಆ ಸೂತ್ರದಲ್ಲೂ ರಾಜ್ಯವೊಂದರ ಜನಸಂಖ್ಯೆಗೆ ದೊಡ್ಡ ತೂಕವಿದೆ. ಈ ಕಾರಣದಿಂದಲೂ ಜನಸಂಖ್ಯೆ ನಿಯಂತ್ರಿಸಿದ ರಾಜ್ಯಗಳಿಗೆ ಕಡಿಮೆ ತೆರಿಗೆ ಪಾಲು ಸಿಗುವಂತಹ ಬೆಳವಣಿಗೆಯನ್ನು ಈಗ ಗಮನಿಸಬಹುದಾಗಿದೆ. ಕರ್ನಾಟಕದ ಇಂದಿನ ಸರ್ಕಾರವೂ ಸೇರಿದಂತೆ ಹಿಂದಿನ ಹಲವು ಸರ್ಕಾರಗಳು ಈ ವಿಷಯದಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದು ಅಳಲು ತೋಡಿಕೊಂಡ ಉದಾಹರಣೆಗಳಿವೆ.

ಮೂರನೆಯದಾಗಿ, ಭಾರತದ ಅರ್ಥವ್ಯವಸ್ಥೆಯನ್ನು ಮುನ್ನಡೆಸುತ್ತಿರುವ ಮುಂಚೂಣಿಯ ಬಹುತೇಕ ರಾಜ್ಯಗಳು ಈಗಾಗಲೇ ಜನಸಂಖ್ಯೆಯ ಸಮತೋಲನದ ಮಟ್ಟವನ್ನು ತಲುಪಿವೆ. ಈ ರಾಜ್ಯಗಳಲ್ಲೇ ಹೆಚ್ಚಿನ ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿರುವುದರಿಂದ ಜನಸಂಖ್ಯೆಯ ತೀವ್ರ ಸಮಸ್ಯೆ ಹೊಂದಿರುವ ರಾಜ್ಯಗಳಿಂದ ಈ ರಾಜ್ಯಗಳಿಗೆ ದೊಡ್ಡ ಮಟ್ಟದ ವಲಸೆ ನಿರಂತರವಾಗಿ ಆಗುತ್ತಿದೆ. ನಮ್ಮ ನಗರಗಳ ಸ್ಥಳೀಯ ಜನಲಕ್ಷಣವನ್ನು ಕಾಯ್ದುಕೊಳ್ಳುವುದು ದಿನಗಳೆದಂತೆ ಕಷ್ಟವಾಗುತ್ತಿದೆ. ಇಂತಹ ವಲಸೆ ನಗರಗಳ ಮೂಲಸೌಕರ್ಯದ ಮೇಲೆ ತೀವ್ರ ಒತ್ತಡವನ್ನು ತರುತ್ತಿದೆ, ನಗರಗಳಲ್ಲಿನ ಪರಿಸರ ಮತ್ತು ಬದುಕಿನ ಮಟ್ಟದ ಕುಸಿತಕ್ಕೂ ಕಾರಣವಾಗಿದೆ. ಅಲ್ಲದೆ ವಲಸೆ ಬಂದವರು ಕಾಲಕ್ರಮೇಣ ಸ್ಥಳೀಯ ಮುಖ್ಯವಾಹಿನಿಯಲ್ಲಿ ಬೆರೆಯುವುದನ್ನು ಪ್ರೋತ್ಸಾಹಿಸುವ ನೀತಿಗಳನ್ನು ಜಾರಿಗೆ ತರುವ ಯಾವುದೇ ಸ್ವಾಯತ್ತತೆ ರಾಜ್ಯಗಳಿಗೆ ಇಲ್ಲದಿರುವುದರಿಂದ, ಇಂತಹ ವಲಸೆಯು ಸ್ಥಳೀಯರು ಮತ್ತು ವಲಸಿಗರ ನಡುವೆ ಸಂಘರ್ಷಕ್ಕೆ ಎಡೆ ಮಾಡಿಕೊಡುತ್ತಿರುವಂಥ ಹತ್ತಾರು ಪ್ರಕರಣಗಳನ್ನು ಈಗ ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಕಾಣಬಹುದಾಗಿದೆ.

ಭಾರತದ ಜನಸಂಖ್ಯಾ ಬೆಳವಣಿಗೆಯ ಈಗಿನ ಚಿತ್ರಣವನ್ನು ಕಂಡಾಗ, ಇಂತಹ ಸಮಸ್ಯೆಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಬಹುದು ಅನ್ನಿಸುತ್ತದೆ.

ಒಟ್ಟಿನಲ್ಲಿ ಅತಿರೇಕದ ರಾಷ್ಟ್ರವಾದ, ಅಣುಯುದ್ಧದ ಸಾಧ್ಯತೆ, ಎ.ಐ (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನದ ಕ್ಷಿಪ್ರ ಬೆಳವಣಿಗೆ, ಜಾಗತಿಕ ತಾಪಮಾನ ಏರಿಕೆಯಂತಹ 21ನೇ ಶತಮಾನದ ಸವಾಲುಗಳ ಮೂಲದಲ್ಲಿ ಜನಸಂಖ್ಯೆಯ ತೀವ್ರ ಬೆಳವಣಿಗೆ ತಳುಕು ಹಾಕಿಕೊಂಡಿದೆ. ಭಾರತದ ಸಂದರ್ಭದಲ್ಲಿ ಈ ಸಮಸ್ಯೆ ಕುರಿತ ಚರ್ಚೆಯಲ್ಲಿ, ಭಾರತದ ವೈವಿಧ್ಯವನ್ನು ಕೇಂದ್ರವಾಗಿ ಇರಿಸಿಕೊಂಡು, ಇದಕ್ಕಿರುವ ಒಳ ಮತ್ತು ಹೊರ ಮುಖಗಳೆರಡರ ಬಗೆಗೂ ಚರ್ಚೆಯಾಗಬೇಕು.

ಚುರುಮುರಿ



ರಾಜಕೀಯ ವರ್ಣಮಾಲೆ

• ಲಿಂಗರಾಜು ಡಿ.ಎಸ್.

'ಕೋಟಿ ಕೋಟಿ ಖರ್ಚು ಮಾಡಿ ದಿನಕ್ಕೊಂದು ರೋಡ್ ಶೋ ನಡೆಸ್ತಾವ್ರೆ. ರಸ್ತೆ ಬಂದ್ ಮಾಡಿದ್ರೆ ಜನಕ್ಕೆ ತೊಂದರೆ ಆಯ್ತದೆ ಅನ್ನದೂ ತಿಳಿಯಕುಲ್ವಾ ಇವುಕ್ಕೆ! ಏನೋದಿಕ್ಯಂಡವುಲಾ ಇವು?' ಯಂಟಪ್ಪಣ್ಣ ಸಿಡಿಯಿತು.

'ರಾಜಕೀಯದ ಹಣಕ್ಷರಸ್ಥರಿಗೆ ಓ ಅಂದ್ರೆ ಠೋ ಅನ್ನಕೆ ಬರಕಿಲ್ಲ. ಎಲೆಕ್ಷನ್ನಿಗೆ ನಿಲ್ಲಕೆ ಮುಂಚೆ ಇವುಕ್ಕೆ ಕನ್ನಡ ವರ್ಣಮಾಲೆ ಪರೀಕ್ಷೆ ಕಡ್ಡಾಯ ಮಾಡಬಕು ಸಾ' ನನ್ನ ಯೋಜನೆ ಹೇಳಿದೆ.

'ಬಡ್ಡೆತ್ತುದೇ, ಇವುಕ್ಕೆ ಬಣ್ಣಗುರುಡುತನ ಅದೆ ಕಲಾ. ಇವುಗಳ ಬಣ್ಣ ನಮಗೆ ಕಾಣ್ತದೆ, ಆದರೆ ನಮ್ಮ ಬಣ್ಣ ಇವುಕ್ಕೆ ಕಾಣಕ್ಕಿಲ್ಲ. ಇವರ ವರ್ಣಮಾಲೆನೇ ಬ್ಯಾರೆ ಅದೆ' ಅಂದ್ರು ತುರೇಮಣೆ.

'ಇವುಕ್ಕೆ ಪಿಂಕ್ ಕಲರ್ ಭಾರಿ ಇಷ್ಟವಂತೆ. ಅದುಕ್ಕೇ ಸ್ಯಾನೆ ಪಿಂಕ್ ನೋಟುಗಳು ಚಲಾವಣೆಗೆ ಬಂದವಂತೆ. ರಾಜಕೀಯದ ವರ್ಣಮಾಲೆ ಅಂದ್ರೆ ಯಂಗಿದ್ದದೋ?' ಅಂತ ಕೇಳಿದೆ.

'ಇಲ್ಲಿ ಕಾಸು ಮಾಡೋ ಕ್ರಿಯಾಪದಗಳು, ಮೈತ್ರಿ ಮಾಡೋ ಸಂಧಿಗಳು, ನಾಮ ಇಕ್ಕೋ ನಾಮಪದಗಳು, ಯೋಗ್ತೆ ವಿವರಿಸೋ ದುರ್ಗುಣ ವಾಚಕಗಳು ಬುಟ್ರೆ ಇನ್ನೇನಿದ್ದವ್ವಾ' ಅಂತು ಯಂಟಪ್ಪಣ್ಣ.

'ನೋಡ್ರಲಾ, ಈ ನಿರಕ್ಷರಮಾಲೇನೆ ಮುಂದಿನ ಸರ್ಕಾರಿ ಸಂಧಿಕಾರ್ಯಕ್ಕೆ ದಾರಿ ತೋರಿಸ್ತದೆ. ಅ ಅಂದ್ರೆ ಅಡಕೆ, ಆ-ಆಷಾಢ ಭೂತಿ, ಇ-ಇಡುಗಂಟು, ಈ-ಈರ್ಷ್ಯೆ, ಉ-ಉಚಿತ ಕೊಡುಗೆ, ಊ-ಊಸರವಳ್ಳಿ, ಎ-ಎಡವಟ್ಟ, ಏ-ಏಣಿ ಒದೆಯುವುದು, ಐ-ಐಶ್ವರ್ಯ, ಓ-ಓಟು, ಕ-ಕಮಿಷನ್, ಕಲ್ಲೇಟು, ಗ-ಗ್ಯಾರಂಟಿ, ಚ-ಚಪಲ, ಜ-ಜಾತಿ ಬೆಂಬಲ, ಟ-ಟಿಕೇಟ್, ಡ-ಡಬಲ್ ಎಂಜಿನ್, ತ-ತಂತ್ರ, ಥ-ಥಳಕು, ದ-ದರ್ಬಾರು, ಧ-ಧಮ್ಮಿಲ್ಲದೋನು, ನ-ನರಿಬುದ್ಧಿ, ಪ-ಪರ್ಸೆಂಟೇಜ್, ಭ-ಭ್ರಷ್ಟಾಚಾರ, ಮ-ಮೀಸಲಾತಿ, ಯ- ಯೋಗ್ಯತೆ, ರ-ರಕ್ತ, ಲ-ಲೋಕಾಯುಕ್ತ, ವ-ವಿಷ, ಶಾ-ಶಾಸನಸಭೆ, ಸಾ-ಸಾಲಮನ್ನಾ, ಹ ಅಂದ್ರೆ ಹೈಕಮಾಂಡ್. ಜನ ತಪ್ಪದೆ ವೋಟು ಮಾಡಗಂಟಾ ರಾಜಕೀಯ ಬಣ್ಣಗೆಡತ್ತೆ ಇರತದೆ ಕನ್ರೋ' ಅಂದು ಸುಮ್ಮಗಾದರು.

ವರ್ಣಮಾಲೆಯ ಕಾರುಬಾರು ನೋಡಿ ನಾನು, ಯಂಟಪ್ಪಣ್ಣ ಬಾಯಿಕಳೆದು ಕುಂತಿದ್ದೋ!

ದಿನದ ಟ್ವೀಟ್

ಆಗ...ಈಗ

ಚಿತ್ರನಟರಾದ ಸುದೀಪ್ ಮತ್ತು ದರ್ಶನ್ ಅವರು ಬಿಜೆಪಿ ಪರ ಚುನಾವಣಾ ಪ್ರಚಾರ ಆರಂಭಿಸಿದಾಗ ಅವರ ವಿರುದ್ಧ ಅತ್ಯುತ್ಸಾಹದಿಂದ ಆರೋಪಗಳನ್ನು ಮಾಡಿದವರು, ಈಗ ಶಿವರಾಜ್ ಕುಮಾರ್ ಅವರು ಕಾಂಗ್ರೆಸ್ ಪರ ಪ್ರಚಾರ ಆರಂಭಿಸುತ್ತಿದ್ದಂತೆಯೇ ಗಾಢ ನಿದ್ರೆಗೆ ಜಾರಿದ್ದಾರೆ.

ಬಿ.ಎಲ್.ಸಂತೋಷ್, ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

ಕಿಡಿನುಡಿ

ಕಳೆದ ಮೂರು ವರ್ಷಗಳಲ್ಲಿ 1,258 ಕಂಪನಿಗಳು ರಾಜ್ಯದಲ್ಲಿ ಮುಚ್ಚಿ 60,000 ಜನ ಉದ್ಯೋಗ ಕಳೆದುಕೊಂಡಿದ್ದಾರೆ. ಸರ್ಕಾರಿ ಸ್ವಾಮ್ಯದ 13 ಉದ್ಯಮಗಳು ಮುಚ್ಚಿವೆ. ಈ ಅನಾಹುತಗಳಿಗೆಲ್ಲ ಕಾರಣವಾದ ಬಿಜೆಪಿಯು ಈಗ 'ಸಮನ್ವಯ' ಎಂಬ ಹೊಸ ಯೋಜನೆಯ ಭರವಸೆಯನ್ನು ನೀಡಿದರೆ ನಂಬುವವರು ಯಾರು?

ಸಿದ್ದರಾಮಯ್ಯ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಶನಿವಾರ, 2-5-1998

• **'ಆರೋಪಿತ ವ್ಯಕ್ತಿಗಳಿಗೆ ಸಂಪುಟದಲ್ಲಿ ಸ್ಥಾನವಿಲ್ಲ'**

ಮುಂಬೈ, ಮೇ 1 (ಯುಎನ್ಐ, ಪಿಟಿಐ)– ನ್ಯಾಯಾಲಯಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿರುವ ಯಾವುದೇ ವ್ಯಕ್ತಿಗೆ ತಮ್ಮ ಸಂಪುಟದಲ್ಲಿ ಸ್ಥಾನವಿಲ್ಲ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಪ್ರಕಟಿಸಿದರು.

ಇಲ್ಲಿನ ರಾಜಭವನದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಅವರು, 'ಆರೋಪಗಳನ್ನು ನ್ಯಾಯಾಲಯ ಸ್ಥಿರೀಕರಿಸದ ಹೊರತು ಯಾವುದೇ ವ್ಯಕ್ತಿಯನ್ನು ತಪ್ಪಿತಸ್ಥ ಎಂದು ಸಾಬೀತು ಮಾಡುವುದು ಕಷ್ಟ' ಎಂದು ಹೇಳಿದರು.

ರಾಮಕೃಷ್ಣ ಹೆಗಡೆ ಹಾಗೂ ರಾಂ ಜೇಠ್ಮಲಾನಿ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂಬ ಜಯಲಲಿತಾ ಅವರ ಆಗ್ರಹದ ಬಗ್ಗೆ ಕೇಳಲಾದ ಪ್ರಶ್ನೆಗೆ, 'ಸಚಿವರಿಂದ ವಿವರಣೆ ಕೇಳಿದ್ದೇನೆ. ಅಗತ್ಯವಾದರೆ ಈ ವಿಷಯದಲ್ಲಿ ಕಾನೂನು ತಜ್ಞರ ಸಲಹೆ ಪಡೆಯಲಾಗುವುದು' ಎಂದರು.

ಹಿಮಾಚಲಪ್ರದೇಶ ಸಂಪುಟಕ್ಕೆ ಸುಖರಾಂ ಇತ್ತೀಚೆಗೆ ರಾಜೀನಾಮೆ ನೀಡಿದ್ದನ್ನು ಪ್ರಸ್ತಾಪಿಸಿದ ಅವರು, 'ರಾಜೀನಾಮೆ ನೀಡುವಂತೆ ನಾನು ಅವರಿಗೆ ಸೂಚಿಸಿದ್ದೆ' ಎಂದರು.

• **ಕುರ್ಲಾ– ಮಂಗಳೂರು ನಡುವೆ ಹೊಸ ರೈಲು ಜೂನ್ 1ರಿಂದ ಆರಂಭ**

ರತ್ನಗಿರಿ (ಮಹಾರಾಷ್ಟ್ರ), ಮೇ 1 (ಯುಎನ್ಐ, ಪಿಟಿಐ)– 'ಈ ವರ್ಷದ ಜೂನ್ 1ರಿಂದಲೇ ಕುರ್ಲಾ– ಮಂಗಳೂರು ನಡುವೆ ಹೊಸ ರೈಲು ಸಂಚಾರ ಆರಂಭವಾಗಲಿದೆ. ಆರಂಭದಲ್ಲಿ ವಾರಕ್ಕೆ ಮೂರು ಬಾರಿ ಈ ರೈಲು ಸಂಚರಿಸಲಿದೆ' ಎಂದು ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಇಂದು ಇಲ್ಲಿ ಪ್ರಕಟಿಸಿದರು.

ಮಹಾರಾಷ್ಟ್ರ ಪ್ರತಿಷ್ಠಾನ ದಿನಾಚರಣೆ ಅಂಗವಾಗಿ ಇಂದು ನಡೆದ ಸಮಾರಂಭದಲ್ಲಿ, 760 ಕಿ.ಮೀ. ಉದ್ದದ ಕೊಂಕಣ ರೈಲು ಮಾರ್ಗವನ್ನು ರಾಷ್ಟ್ರಕ್ಕೆ ಸಮರ್ಪಿಸಿದರು.

50 ವರ್ಷಗಳ ಹಿಂದೆ

ಬುಧವಾರ, 2-5-1973

• **ಶಿಕ್ಷಣ ತಜ್ಞ, ಗಾಂಧಿ ಅನುಯಾಯಿ ಸಂಪದ್ಗಿರಿರಾಯರ ನಿಧನ**

ಬೆಂಗಳೂರು, ಮೇ 1– ಸುಪ್ರಸಿದ್ಧ ಶಿಕ್ಷಣ ತಜ್ಞ, ಸ್ವಾತಂತ್ರ್ಯ ಸಂಗ್ರಾಮದ ಯೋಧ ಹಾಗೂ ಗಾಂಧಿ ಮಾರ್ಗಾನುಯಾಯಿ ಕೋಲಾರ ಸಂಪದ್ಗಿರಿರಾಯರು ಇಂದು ಇಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಅವರಿಗೆ 76 ವರ್ಷ ವಯಸ್ಸಾಗಿತ್ತು.

ಶಿಕ್ಷಣ ಕ್ಷೇತ್ರದಲ್ಲಿ ಯುಗವನ್ನೇ ಸೃಷ್ಟಿಸಿದ ಆಚಾರ್ಯರು ಇಂದು ಕಣ್ಮರೆಯಾದರು.

ಅವರ ಶಿಷ್ಯರು, ಅಭಿಮಾನಿಗಳು ಮತ್ತು ಸಹ ಕಾರ್ಯಕರ್ತರು ಆಸ್ಪತ್ರೆ ಮತ್ತು ನರಸಿಂಹ ರಾಜ ಕಾಲೊನಿಯಲ್ಲಿರುವ ಅವರ ಗೃಹಕ್ಕೆ ತೆರಳಿ ಗುರುನಮನ ಸಲ್ಲಿಸಿದರು.

• **ಆಡಳಿತದಲ್ಲಿ ರಾಜಕಾರಣಿಗಳ ಹಸ್ತಕ್ಷೇಪ ತಪ್ಪಿಸಲು ದೇವೇಗೌಡರ ಆಗ್ರಹ**

ಬೆಂಗಳೂರು, ಮೇ 1– ಆಡಳಿತದಲ್ಲಿ ರಾಜಕಾರಣಿಗಳ ಹಸ್ತಕ್ಷೇಪವನ್ನು ತಪ್ಪಿಸಲು ವಿರೋಧ ಪಕ್ಷದ ನಾಯಕ ಶ್ರೀ ಎಚ್.ಡಿ. ದೇವೇಗೌಡ ಅವರು ಇಂದು ವಿಧಾನಸಭೆಯಲ್ಲಿ ಆಗ್ರಹಪಡಿಸಿದರು.

ಸಾರ್ವತ್ರಿಕ ಆಡಳಿತ, ಅಬಕಾರಿ, ಪೊಲೀಸ್ ಇಲಾಖೆ ಬೇಡಿಕೆಗಳ ಮೇಲೆ ನಡೆದ ಚರ್ಚೆಯನ್ನು ಪ್ರಾರಂಭಿಸಿದ ವಿರೋಧ ಪಕ್ಷದ ನಾಯಕರು, ಸಾರ್ವತ್ರಿಕ ಆಡಳಿತದಲ್ಲಿ ದಕ್ಷತೆ ವರ್ಧನೆಗೆ ಕರೆಯಿತ್ತರು.

ಸಂಗತ

ಸಭಾ ನಿರೂಪಣೆ: ಮಹತ್ವದ ಹೊಣೆ

ಇಂದಿನ ಹೆಚ್ಚಿನ ಸಭೆಗಳು ಗಾಂಭೀರ್ಯ ಕಳೆದುಕೊಂಡು ಸಹೃದಯರು ದೂರವುಳಿಯುತ್ತಿರುವ ಈ ಹೊತ್ತಿನಲ್ಲಿ, ಅವರನ್ನು ಮರಳಿ ಸೆಳೆಯಲು ನಿರೂಪಣೆಯೆಂಬ ಕಲಾಸ್ತ್ರ ಖಂಡಿತಾ ಸಹಕಾರಿ

• ಡಾ. ಮುರಳೀಧರ ಕಿರಣಕೆರೆ

ಅದು ವಿಚಾರ ಸಂಕಿರಣವೊಂದರ ಉದ್ಘಾಟನಾ ಕಾರ್ಯಕ್ರಮ. ಸ್ವಾಗತ, ಪ್ರಾಸ್ತಾವಿಕ ನುಡಿಗಳು ಮುಗಿಯುತ್ತಿದ್ದಂತೆ ನಿರೂಪಕರು 'ಈಗ ವಿಚಾರ ಸಂಕಿರಣಕ್ಕೆ ಚಾಲನೆ ನೀಡುವ ಸಮಯ. ಸನ್ಮಾನ್ಯ... ಅವರು ಬೆಂಕಿ ಹಚ್ಚುವ ಮೂಲಕ ಕಾರ್ಯಕ್ರಮ ಉದ್ಘಾಟಿಸಬೇಕು' ಎಂದು ಉದ್ಘೋಷಿಸುತ್ತಿದ್ದಂತೆಯೇ ಸಭೆಯಲ್ಲಿ ದಿಗ್ಭ್ರಮೆ! ದೀಪ ಬೆಳಗುವ ಮೂಲಕ ಎನ್ನುವುದರ ಬದಲು ಬೆಂಕಿ ಹಚ್ಚಬೇಕೆಂಬ ನಿರೂಪಕರ ನುಡಿ ಆಘಾತ, ಮುಜುಗರ ತಂದಿತ್ತು.

ಹಾಗೆಂದು ಅವರೇನು ಅನನುಭವಿಯಲ್ಲ. ಸಭಾ ಕಂಪನದ ಕಾರಣದಿಂದಲೂ ಈ ಲೋಪವಾಗಿರಲಿಲ್ಲ. ಉದ್ದೇಶಪೂರ್ವಕ ಅಲ್ಲದಿದ್ದರೂ ಬಾಯಿತಪ್ಪಿ ಆಡಿದ ಒಂದು ಮಾತು ಸಭಾ ಮರ್ಯಾದೆಗೆ ಭಂಗ ತಂದಿತ್ತು. ಒಂದು ವೇಳೆ ಇದು ಯಾವುದಾದರೂ ರಾಜಕೀಯ ಸಭೆಯಾಗಿದ್ದರೆ, ಹಿಂದಿನಿಂದ ಯಾರದ್ದೋ ಚಿತಾವಣೆಯಿದೆ ಎಂದೆನಿಸಿ ಗಂಭೀರ ಪ್ರತಿಕ್ರಿಯೆಗಳಿಗೆ ಕಾರಣವಾಗುತ್ತಿತ್ತೇನೋ!

ಹೌದು, ಸಭೆಯ ನಿರೂಪಣೆಯಲ್ಲಿ ಇಂತಹ ಹತ್ತಾರು ಗೊಂದಲಗಳು ಈ ದಿನಗಳಲ್ಲಿ ಸಾಮಾನ್ಯವಾಗಿಬಿಟ್ಟಿವೆ. ಸ್ವಾಗತದ ನಂತರ ಪ್ರಾರ್ಥನೆಗೆ ಮರಳುವುದು, ಪಟ್ಟಿಯಲ್ಲಿನ ಮುಖ್ಯ ಕಾರ್ಯಕ್ರಮವನ್ನೇ ಮರೆಯುವುದು, ಉಪನ್ಯಾಸಕರ ಹೆಸರು, ಹುದ್ದೆಯನ್ನು ತಪ್ಪಾಗಿ ಹೇಳುವುದು, ಶ್ರದ್ಧಾಂಜಲಿ ಸಭೆಯಲ್ಲಿ ಚಪ್ಪಾಳೆ ಹೊಡೆಸುವುದು... ಏನೇನೋ ಆಭಾಸಗಳು! ಇವಕ್ಕೆಲ್ಲಾ ಪ್ರಮುಖ ಕಾರಣ, ನಿರೂಪಣೆಯ ಮಹತ್ವ, ಗಾಂಭೀರ್ಯವನ್ನು ನಿರೂಪಕರು ಅರಿಯದೇ ಇರುವುದು. ಸರಿಯಾದ ಸಿದ್ಧತೆಗಳನ್ನು ಮಾಡಿಕೊಳ್ಳದೆ ಈ ಜವಾಬ್ದಾರಿಯನ್ನು ತುಂಬಾ ಲಘುವಾಗಿ ತೆಗೆದುಕೊಂಡು ಲೋಪವೆಸಗಿದಾಗ, ನಗೆಪಾಟಲಿಗೀಡಾಗುವ ಇಲ್ಲಾ ಸಭೆಯೇ ಮುಜುಗರಕ್ಕೆ ಒಳಗಾಗುವ ಸನ್ನಿವೇಶ ಎದುರಾಗುತ್ತದೆ.

ನಿರೂಪಣೆ ಎಂಬುದು ಪ್ರಕರಣಗಳ ಹರಿವನ್ನು ವಿವರಿಸುವ ಒಂದು ಸಾಹಿತ್ಯ ಪ್ರಕಾರ. ಇಲ್ಲಿ ಒಂದು ಕ್ರಮಬದ್ಧತೆ ಇರುತ್ತದೆ. ಓಟ ನಿರ್ದಿಷ್ಟ ಜಾಡಿನಲ್ಲಿ ಸಾಗುತ್ತದೆ. ಹಾಗೆಯೇ ಸಭಾ ನಿರೂಪಣೆಗೂ ಸ್ಪಷ್ಟ ದಿಕ್ಕಿನ ಜೊತೆಗೆ ನಿಯಮಗಳ ಚೌಕಟ್ಟಿದೆ. ಇಲ್ಲಿ ಇಡೀ ಕಾರ್ಯಕ್ರಮವನ್ನು ಪ್ರೇಕ್ಷಕರೆದುರು ಅನಾವರಣಗೊಳಿಸುವ ಪ್ರಕ್ರಿಯೆ ವ್ಯವಸ್ಥಿತವಾಗಿ ನಡೆಯುತ್ತದೆ. ಕಾರ್ಯಸೂಚಿಯಲ್ಲಿರುವ ಅಂಶಗಳು ಹಳಿ ತಪ್ಪದಂತೆ ಒಂದರ ನಂತರ ಮತ್ತೊಂದು ಮೈದಳೆಯಲು ಅವಕಾಶ ಮಾಡಿಕೊಡುತ್ತಾ ಮುನ್ನಡೆಸುವುದು ನಿರ್ವಾಹಕನ ಜವಾಬ್ದಾರಿ. ನಿರೂಪಣೆ ಇಡೀ ಕಾರ್ಯಕ್ರಮದ ಸಮನ್ವಯದ ಕೊಂಡಿಯಷ್ಟೇ ಅಲ್ಲ ಜೀವಾಳ ಕೂಡ.

ಬಹುತೇಕ ಸಂದರ್ಭಗಳಲ್ಲಿ ಕಾರ್ಯಕ್ರಮದ ಯಶಸ್ಸು ಅಥವಾ ವೈಫಲ್ಯ ನಿರ್ವಾಹಕನ ಕೈಯಲ್ಲಿರುತ್ತದೆ. ಹಾಗೆಂದು ಯಶಸ್ವಿ ನಿರೂಪಣೆಗೆ ಸಿದ್ಧ ಸೂತ್ರಗಳೇನೂ ಇಲ್ಲ. ಒಳ್ಳೆಯ ನಿರ್ವಹಣೆ ಎಂತಹ ನೀರಸ ಕಾರ್ಯಕ್ರಮಕ್ಕೂ ಜೀವ ತುಂಬಿದರೆ, ಕೆಟ್ಟ ನಿರ್ವಹಣೆ ಉತ್ತಮ ಕಾರ್ಯಕ್ರಮವನ್ನೂ ಕುಲಗೆಡಿಸುವುದು. ಸಂಸತ್ತು, ವಿಧಾನಮಂಡಲಗಳ ಕಲಾಪವನ್ನು ನಿರ್ವಹಿಸುವುದು ಸಭಾಧ್ಯಕ್ಷರಿಗೆ ದತ್ತವಾದ ಅಧಿಕಾರ. ವ್ಯಕ್ತಿತ್ವ ವಿಕಸನದಂತಹ ಸಂಸ್ಥೆಗಳಲ್ಲಿ ಸಭೆಯನ್ನು ಸಂಪೂರ್ಣವಾಗಿ ಅಧ್ಯಕ್ಷರೇ ನಡೆಸುತ್ತಾರೆ. ಇಲ್ಲಿ ನಿರೂಪಣೆಗೆ ಅವಕಾಶ ಇರುವುದಿಲ್ಲ. ಆದರೆ ಅಧ್ಯಕ್ಷ ಹುದ್ದೆ ಆಲಂಕಾರಿಕವಾಗಿದ್ದಾಗ, ಅನುಭವದ ಕೊರತೆಯಿದ್ದಾಗ, ಸಭೆಯನ್ನು ನಡೆಸುವ ಕಲೆಗಾರಿಕೆ ಇಲ್ಲದಿದ್ದಾಗ, ಆ ಕಾರ್ಯಕ್ರಮಕ್ಕೆ ಅಧ್ಯಕ್ಷತೆಯೇ ಇರದಾಗ ಇಲ್ಲವೇ ಕಾರ್ಯಕ್ರಮಕ್ಕೆ ರಂಗು ತುಂಬಲೆಂದು ನಿರೂಪಣೆಯ ಮೊರೆ ಹೋಗಲಾಗುತ್ತದೆ. ನಾವಿಕ ನಾವೆಯನ್ನು ನಿರ್ಧರಿತ ಸ್ಥಳಕ್ಕೆ ನಡೆಸುವಂತೆ ನಿರೂಪಕನೂ ಯೋಜನೆಯನ್ನು ಉದ್ದೇಶಿತ ಗುರಿ ತಲುಪಿಸಲು ನೆರವಾಗುತ್ತಾನೆ.

ನಿರೂಪಣೆಯಲ್ಲಿ ಪೂರ್ವಸಿದ್ಧತೆ ಎಂಬುದು ತುಂಬಾ ಮಹತ್ವದ್ದು. ಮೊದಲೇ ಚರ್ಚಿಸಿ ಯಾವ ಅಂಶ, ಯಾರ ಮಾತು ಮೊದಲಿಗೆ ಬರಬೇಕು, ನಂತರದಲ್ಲಿ ಏನು ಎಂಬುದನ್ನು ಖಚಿತಪಡಿಸಿಕೊಂಡು ಪೂರ್ಣ ವಿನ್ಯಾಸ ತಯಾರಿಸಬೇಕು. ಕಾರ್ಯಸೂಚಿಯಲ್ಲಿ ಅನಿವಾರ್ಯ ಬದಲಾವಣೆಗಳಾದಾಗ ಸೂಕ್ತವಾಗಿ ನಿರ್ವಹಣೆ ಮಾಡುವ ಮನೋಸಿದ್ಧತೆಯೂ ಮುಖ್ಯ.



ಹಸನ್ಮುಖ, ಭಾಷೆಯ ಮೇಲೆ ಹಿಡಿತ, ಸ್ಪಷ್ಟ ಉಚ್ಚಾರಣೆ, ಪ್ರೀತಿಯ ವರ್ತನೆ, ಗೌರವಾರ್ಹ ಉಡುಪು, ಆತ್ಮವಿಶ್ವಾಸ, ಆಂಗಿಕ ಭಾಷೆ, ಸಾಂದರ್ಭಿಕ ಹಾವಭಾವ, ಧ್ವನಿಯ ಏರಿಳಿತ, ಸಮಯ ನಿರ್ವಹಣೆ, ಸಭೆಯ ಶಿಷ್ಟಾಚಾರದ ಅರಿವು ನಿರೂಪಕನಿಗೆ ಇರಬೇಕಾದ ಪ್ರಾಥಮಿಕ ಅರ್ಹತೆಗಳು. ಜೊತೆಗೆ ಸಮಯ ಪ್ರಜ್ಞೆ, ಸಂದರ್ಭ ಪ್ರಜ್ಞೆ, ಸಭಾ ಪ್ರಜ್ಞೆ, ಹಾಸ್ಯ ಪ್ರಜ್ಞೆ, ಸಾಮಾನ್ಯ ಜ್ಞಾನವೂ ಅಷ್ಟೇ ಮುಖ್ಯ. ಕಾರ್ಯಕ್ರಮದ ಕುರಿತಾಗಿ ಮೊದಲೇ ಸಮಗ್ರ ಮಾಹಿತಿ ಕಲೆ ಹಾಕು ವುದು ತುಂಬಾ ಅಗತ್ಯ.

ಭಾಷಣಗಳ ನಡುನಡುವೆ ಆ ಯೋಜನೆಗೆ ಸಂಬಂಧಿಸಿದಂತೆ ಪೂರಕ ಮಾಹಿತಿ, ಅಂಕಿಅಂಶಗಳು, ರೋಚಕ ಅನುಭವಗಳನ್ನು ಒಂದೆರಡು ಮಾತುಗಳಲ್ಲಿ ತೆರೆದಿಟ್ಟಾಗ, ಸಭಿಕರ ಜ್ಞಾನದ ಜೊತೆಗೆ ಕುತೂಹಲವನ್ನೂ ಕಾಪಿಡಬಹುದು. ಅತಿಥಿ ಅಥವಾ ಉಪನ್ಯಾಸಕನ ಮಾತಿನಲ್ಲಿ ಸಭಿಕರಿಗೆ ಅರ್ಥವಾಗದಂತಹ ಕ್ಲಿಷ್ಟ ವಿಚಾರಗಳಿದ್ದರೆ, ಅವನ್ನು ಸಂಕ್ಷಿಪ್ತವಾಗಿ ವಿವರಿಸುವ ಹೊಣೆಗಾರಿಕೆ ನಿರೂಪಕನದ್ದು.

ಹೌದು, ನಿರೂಪಣೆಗೆ ಹತ್ತಾರು ಆಯಾಮಗಳಿವೆ. ಒಬ್ಬರ ಮಾತು ಮುಗಿದೊಡನೆ ಧನ್ಯವಾದ ಹೇಳಿ, ಮುಂದಿನ ಕಾರ್ಯಕ್ರಮ ಇಂಥದ್ದು ಎಂದು ಘೋಷಿಸುವುದು ಖಂಡಿತಾ ನಿರೂಪಣೆಯಾಗದು, ಅದು ಬರೀ ಉದ್ಘೋಷವಷ್ಟೆ. ಹೆಚ್ಚಿನ ಸಭೆಗಳು ಗಾಂಭೀರ್ಯ ಕಳೆದುಕೊಂಡು ಸಪ್ಪೆಯೆನಿಸಿ ಸಹೃದಯರು ದೂರವುಳಿಯುತ್ತಿರುವ ಈ ಹೊತ್ತಿನಲ್ಲಿ, ಅವರನ್ನು ಮರಳಿ ಸೆಳೆಯಲು ನಿರೂಪಣೆಯೆಂಬ ಕಲಾಸ್ತ್ರ ಖಂಡಿತಾ ಸಹಕಾರಿ.

ವಾಚಕರ ವಾಣಿ

ಪ್ಯಾಸೆಂಜರ್ ರೈಲು: ಸಮಸ್ಯೆ ಕೇಳುವವರಾರು?

ಮೈಸೂರಿನಿಂದ ಚಾಮರಾಜನಗರಕ್ಕೆ ಪ್ರತಿನಿತ್ಯ ಬೆಳಗ್ಗೆ 9.25ಕ್ಕೆ ಒಂದು ಪ್ಯಾಸೆಂಜರ್ ರೈಲು ಇದೆ. ಈ ಮೂರು ತಿಂಗಳಿನಿಂದ ಅದು ಒಂದು ದಿನವೂ ಸಮಯಕ್ಕೆ ಸರಿಯಾಗಿ ಬಂದದ್ದಿಲ್ಲ. ಇದರಲ್ಲಿ ಸರ್ಕಾರಿ ನೌಕರರು ಪ್ರಯಾಣ ಮಾಡುತ್ತಾರೆ. ಸಂಜೆ ಅದೇ ಮೈಸೂರಿನಿಂದ 7 ಗಂಟೆಗೆ ಚಾಮರಾಜನಗರಕ್ಕೆ ಸಾವಿರಾರು ಕೂಲಿ ಕಾರ್ಮಿಕರನ್ನು ಕರೆದೊಯ್ಯುವ ಪ್ಯಾಸೆಂಜರ್ ಎಂದೂ ನಿಗದಿತ ಹೊತ್ತಿಗೆ ಹೊರಡುವುದಿಲ್ಲ. ಆ ಕೂಲಿಯವರು ಆಯಾ ಸ್ಟೇಷನ್‌ನಲ್ಲಿ ಇಳಿದು ಅಲ್ಲಿಂದ ಮುಂದೆ ತಮ್ಮ ತಮ್ಮ ಗ್ರಾಮಗಳಿಗೆ ಬಸ್ಸು ಹಿಡಿಯಬೇಕು ಅಥವಾ ನಡೆಯಬೇಕು.

ಮೊನ್ನೆ ನಗರದಿಂದ ಮೈಸೂರಿಗೆ ಬರಲು ಇದೇ ರೈಲು 60 ಕಿ.ಮೀ. ದೂರಕ್ಕೆ ತೆಗೆದುಕೊಂಡ ಸಮಯ 3 ಗಂಟೆ. ಮೈಸೂರು, ಚಾಮರಾಜನಗರ ಪ್ರಯಾಣಿಕರ ಈ ನಿತ್ಯ ಸಮಸ್ಯೆಯನ್ನು ಯಾರಿಗೆ ತಿಳಿಸುವುದು? ತಿಳಿಸಿದರೆ ಕೇಳುವವರುಂಟೇ?

ಹನೂರು ಕೃಷ್ಣಮೂರ್ತಿ, ಮೈಸೂರು

ಮನೆಯಿಂದಲೇ ಮತದಾನ: ಸ್ವಾಗತಾರ್ಹ ಪ್ರಯೋಗ

ಎಂಬತ್ತು ವರ್ಷ ಮೇಲ್ಪಟ್ಟ ಮತದಾರರು ಮನೆಯಿಂದಲೇ ಮತ ಚಲಾಯಿಸಲು ಅನುವು ಮಾಡಿರುವ ಚುನಾವಣಾ ಆಯೋಗದ ಹೊಸ ಪ್ರಯೋಗ ಸ್ವಾಗತಾರ್ಹ. ಚುನಾವಣಾ ಕರ್ತವ್ಯ ನಿರ್ವಹಿಸುವ ಆರೇಳು ಸದಸ್ಯರ ತಂಡದ ಜತೆಗೆ ಬೆಂಗಳೂರಿನ ಹೊಸಕೆರೆ ಬಡಾವಣೆಯ ಹಿರಿಯರಿರುವ ಮನೆಮನೆಗೆ ಬಂದಿದ್ದ ಕೆಲವು ಶಿಕ್ಷಕಿಯರು, ಮಾಹಿತಿ ಪಡೆದು ಅಗತ್ಯ ಪತ್ರಗಳಿಗೆ ಸಹಿ ಮಾಡಿಸಿಕೊಂಡಿದ್ದರು. ಮತ ಚಲಾಯಿಸುವ ದಿನ ತಾವು ಬರುವುದಾಗಿ ದೂರವಾಣಿ ಮೂಲಕ ತಿಳಿಸಿದ್ದರು. ಅದರಂತೆ, ನಿಗದಿತ ದಿನದಂದು ಬೆಳಿಗ್ಗೆ 10 ಗಂಟೆಗೆ ಆರೇಳು ಸಿಬ್ಬಂದಿ ಮತದಾನಕ್ಕೆ ಅಗತ್ಯವಾದ ಸಲಕರಣೆಗಳೊಂದಿಗೆ ಮನೆಗೆ ಬಂದರು. ತಂಡದ ಮುಖ್ಯಸ್ಥರು ಅಗತ್ಯ ಗುರುತಿನ ಚೀಟಿ ಪರಿಶೀಲಿಸಿ, ಮತ ಚಲಾಯಿಸುವ ವಿಧಾನವನ್ನು ವಿವರಿಸಿ, ಉಳಿದ ಸಿಬ್ಬಂದಿಯನ್ನು ಹೊರಕ್ಕೆ ಕಳುಹಿಸಿ, ಮತದ ಗೋಪ್ಯತೆ ಕಾಪಾಡುವ ಸಲುವಾಗಿ ಮೂರು ಕಡೆ ಮುಚ್ಚಿ ಒಂದು ಕಡೆ ತೆಗೆದಿರುವ ಡಬ್ಬ ಇಟ್ಟು ಮತ ಚಲಾಯಿಸಲು ಅನುವು ಮಾಡಿಕೊಟ್ಟರು.

ನಂತರ ಐದಾರು ಪದರವಾಗಿ ಮಡಿಸಿಕೊಟ್ಟ ಮತಪತ್ರವನ್ನು ಒಂದು ಕವರಿನಲ್ಲಿ ಹಾಕಿ ಸೀಲ್ ಮಾಡಿ, ಮತ್ತೊಂದು ಕವರಿನಲ್ಲಿ ಇಟ್ಟು ಮತಪೆಟ್ಟಿಗೆಯಲ್ಲಿ ಹಾಕುವಂತೆ ತಿಳಿಸಿದರು. ಈ ಸಂದರ್ಭದ ವಿಡಿಯೊ ಚಿತ್ರೀಕರಣ ಮಾಡಲಾಯಿತು. ಗಡಿಬಿಡಿ, ಧಾವಂತವಿಲ್ಲದೆ ಎಲ್ಲ ಪ್ರಕ್ರಿಯೆ ಸುಸೂತ್ರವಾಗಿ ನಡೆಯಿತು. ಹಿರಿಯರು ಹೂ ಎತ್ತಿದಂತೆ ಮತ ಚಲಾಯಿಸಲು ಸಾಧ್ಯವಾಯಿತು. ಈ ತಂಡವು ಹಿರಿಯರನ್ನು ನಡೆಸಿಕೊಂಡ ರೀತಿ ಪ್ರಶಂಸನೀಯ.

ಸತ್ಯಬೋಧ, ಬೆಂಗಳೂರು

ರೋಡ್ ಶೋ: ಪ್ರಧಾನಿಗೆ ಸಲ್ಲ

ಮೈಸೂರಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗವಹಿಸಿದ್ದ ರೋಡ್ ಶೋನಲ್ಲಿ ಅವರತ್ತ ಹೂವಿನ ಜತೆಗೆ ಮೊಬೈಲ್ ಅನ್ನೂ ಎಸೆದಿದ್ದು ವರದಿಯಾಗಿದೆ. ಈಚೆಗೆ ಹುಬ್ಬಳ್ಳಿಯಲ್ಲೂ ಇಂಥದ್ದೇ ಪ್ರಕರಣ ವರದಿಯಾಗಿತ್ತು. ಚುನಾವಣಾ ಪ್ರಚಾರದ ವೇಳೆ ಕಾಂಗ್ರೆಸ್ ಮುಖಂಡ ಜಿ.ಪರಮೇಶ್ವರ ಅವರ ತಲೆಗೆ ಇತ್ತೀಚೆಗೆ ಕಲ್ಲಿನೇಟು ಬಿದ್ದಿದೆ. ಈ ಎಲ್ಲ ಪ್ರಕರಣಗಳ ನಂತರವಾದರೂ ರೋಡ್ ಶೋಗಳಲ್ಲಿ ಹೂವು ಎಸೆಯುವುದಕ್ಕೆ ನಿಷೇಧ ಹೇರಬಹುದು ಎನ್ನುವ ನಿರೀಕ್ಷೆ ಸುಳ್ಳಾಗಿದೆ.

ದೇಶದ ಅತ್ಯುನ್ನತ ಸ್ಥಾನದಲ್ಲಿರುವ ಪ್ರಧಾನಿಯವರು ಈ ರೀತಿ ರೋಡ್ ಶೋನಲ್ಲಿ ಪಾಲ್ಗೊಳ್ಳುವುದು ಭದ್ರತೆಯ ದೃಷ್ಟಿಯಿಂದ ಯಾವ ಕಾರಣಕ್ಕೂ ಸರಿಯಲ್ಲ. ಮಾಜಿ ಪ್ರಧಾನಿ ರಾಜೀವ್ ಗಾಂಧಿ ಇಂತಹ ಭದ್ರತಾ ಲೋಪದಿಂದಲೇ ಬಾಂಬ್ ದಾಳಿಗೊಳಗಾಗಿ ಹತ್ಯೆಗೀಡಾದರು ಎಂಬುದನ್ನು ಮರೆಯಬಾರದು. ಪ್ರಧಾನಿ ಸ್ಥಾನದಲ್ಲಿ ಇರುವವರು ಇನ್ನು ಮುಂದಾದರೂ ಯಾವ ಕಾರಣಕ್ಕೂ ರೋಡ್ ಶೋಗಳಲ್ಲಿ ಭಾಗವಹಿಸದಂತೆ ಎಚ್ಚರಿಕೆ ವಹಿಸಬೇಕಿದೆ. ದೇಶದ ಹಿತದೃಷ್ಟಿಯಿಂದಲೂ ಇದು ಅತ್ಯಗತ್ಯ.

ಮುಳ್ಳೂರು ಪ್ರಕಾಶ್, ಮೈಸೂರು

ಜೋಗುಳವೂ ಹೌದು, ಬೈಗುಳವೂ ಹೌದು!

ಚುನಾವಣಾ ಪ್ರಚಾರದ ಅಬ್ಬರ ಕುರಿತಂತೆ 'ಬೈಗುಳವೇ ಜೋಗುಳ' ಎಂಬ ಮುಖಪುಟದ ಸುದ್ದಿಯ ಶೀರ್ಷಿಕೆ (ಪ್ರ.ವಾ., ಮೇ 1) ಅರ್ಥಪೂರ್ಣವಾಗಿದೆ. ರಾಷ್ಟ್ರೀಯ ನಾಯಕರೆಂದು ಭಾವಿಸಿಕೊಂಡವರು ತಮ್ಮ ಬಾಯಿಹರಕುತನದಿಂದಾಗಿ ಹೀಗೆ ಪರಸ್ಪರ ಬೆತ್ತಲೆಯಾಗಿಸಿಕೊಳ್ಳುತ್ತಿರುವುದು ಮುಜುಗರದ ಸಂಗತಿ. ಏಕಕಾಲಕ್ಕೆ ಈ 'ಬೈಗುಳ'ವು ಮತದಾರನನ್ನು ತಟ್ಟಿ ಮಲಗಿಸುವ 'ಜೋಗುಳ'ವೂ ಹೌದು, ಮಲಗಿದ್ದವನನ್ನು ತಿವಿದೆಬ್ಬಿಸಿ ಕೆರಳಿಸುವ 'ಬೈಗುಳ'ವೂ ಹೌದು.

ಈರಪ್ಪ ಎಂ. ಕಂಬಳಿ, ಬೆಂಗಳೂರು

ತೋಳ– ಕುರಿಮರಿ ನ್ಯಾಯ ತರವೇ?

'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದಂಗೆಗಳು ಉಂಟಾಗುತ್ತವೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಹೇಳಿರುವುದು ವಿಪರ್ಯಾಸ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಬೇಕಾದ ಸಚಿವರೇ ಹೀಗೆ ಹೇಳಿದರೆ ಮತದಾರ ಏನೆಂದು ಭಾವಿಸಬೇಕು? ವೋಟು ಚಲಾಯಿಸಬೇಕಾದುದು ಭಯದಿಂದಲೋ ಅಥವಾ ಅಭಿವೃದ್ಧಿಯ ಸಲುವಾಗಿಯೋ? ಹಾಗೆಯೇ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಎಚ್ಚರತಪ್ಪಿ, ಪ್ರಧಾನಿ ನರೇಂದ್ರ ಮೋದಿ ಅವರನ್ನು 'ವಿಷಸರ್ಪ' ಎಂದದ್ದು ಆಕ್ಷೇಪಾರ್ಹ. 'ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು'!

ಇನ್ನು ಪ್ರಧಾನಿ ನರೇಂದ್ರ ಮೋದಿ ಅವರು 'ಕಾಂಗ್ರೆಸ್ ಆಡಳಿತದ ಕಾಲದಲ್ಲಿ ಶೇ 85ರಷ್ಟು ಕಮಿಷನ್ ಇತ್ತು' ಎಂದು ಹೇಳುವ ಮೂಲಕ, ಪ್ರಸ್ತುತ ರಾಜ್ಯ ಸರ್ಕಾರದ ಮೇಲಿರುವ ಶೇ 40ರ ಕಮಿಷನ್ ಆರೋಪಕ್ಕೆ ಪರವಾನಗಿ ನೀಡಿದ್ದಾರೆಯೇ? ಇದು 'ನೀನೋ ನಿನ್ನಪ್ಪನೋ ಅಜ್ಜನೋ ಹರಿವ ನೀರನ್ನು ಎಂಜಲು ಮಾಡಿರಲಿಲ್ಲವೇ?' ಎಂದು ತೋಳವು ಕುರಿಮರಿಯ ಮೇಲೆ ಎರಗಿದಂತಾಯಿತು. ಪ್ರಧಾನಿಯಾದ ಅವರಿಗೆ ತೋಳ– ಕುರಿಮರಿಯ ನ್ಯಾಯ ಶೋಭೆ ತರುವುದಿಲ್ಲ. ಮತದಾರ ಎಲ್ಲವನ್ನೂ ಗಮನಿಸುತ್ತಿರುತ್ತಾನೆ.

ಪ್ರೊ. ಶಿವರಾಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕರ್ನಾಟಕದ ರಾಜಕಾರಣದಲ್ಲಿ ಲಿಂಗಾಯತ ಸಮುದಾಯವನ್ನು ನಿರ್ಲಕ್ಷಿಸಲಾಗಿದೆಯೇ?

ಕಾಂಗ್ರೆಸ್ ಬಸವತತ್ವಕ್ಕೆ ಬದ್ಧವಾದ ಪಕ್ಷ

ಬಸವಣ್ಣನವರ ಈ ಎಲ್ಲ ತತ್ವ-ಸಿದ್ಧಾಂತಗಳನ್ನು ಭಾರತೀಯ ಜನತಾ ಪಕ್ಷ ಮತ್ತು ಅದರ ಮಾತೃಸಂಸ್ಥೆಯಾದ ಆರ್‌ಎಸ್‌ಎಸ್‌ನ ಸಿದ್ಧಾಂತದ ಜೊತೆ ಹೋಲಿಸಿ ನೋಡಿದರೆ ಯಾವ ಪಕ್ಷ ಲಿಂಗಾಯತ ಧರ್ಮವನ್ನು ಒಳಗೊಂಡಿದೆ ಎನ್ನುವುದು ಸ್ಪಷ್ಟವಾಗಬಹುದು. ಭಾರತೀಯ ಜನತಾ ಪಕ್ಷ ಬಹಿರಂಗವಾಗಿ ಆಡುವ ಮಾತುಗಳು ಏನೇ ಇದ್ದರೂ ಆ ಪಕ್ಷ ಮತ್ತು ಪರಿವಾರದ ಗುಪ್ತ ಕಾರ್ಯಸೂಚಿ ಬಸವಧರ್ಮಕ್ಕೆ ವಿರುದ್ಧವಾದುದು

• ಸಿದ್ದರಾಮಯ್ಯ

ರಾಜಕೀಯ ಕೂಡಾ ಒಂದು ಸೈದ್ಧಾಂತಿಕ ಚಳವಳಿ ಎಂದು ನಂಬಿರುವ ನಾನು ಸಿದ್ಧಾಂತಗಳ ಮೂಲಕವೇ ರಾಜಕೀಯ ಪಕ್ಷಗಳನ್ನು ನೋಡಬಯಸುವವನು.

ಕರ್ನಾಟಕದ ನೆಲದಲ್ಲಿ ಹುಟ್ಟಿ ಬೆಳೆದ ವ್ಯಕ್ತಿ ಇಲ್ಲವೇ ಸಮುದಾಯ ಬಸವಣ್ಣನವರ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ.

ಬಸವಣ್ಣನವರನ್ನು ಒಂದು ಜಾತಿ, ಧರ್ಮ ಇಲ್ಲವೇ ಪಕ್ಷಕ್ಕೆ ಕಟ್ಟಿಹಾಕುವುದು ಸರಿ ಅಲ್ಲ. ಬಸವಣ್ಣ ನನ್ನ ಪಾಲಿನ ಆಧ್ಯಾತ್ಮಿಕ ಗುರು ಮಾತ್ರವಲ್ಲ ಸೈದ್ಧಾಂತಿಕ ಸಂಗಾತಿಯೂ ಹೌದು. ನಾನು ಸೈದ್ಧಾಂತಿಕ ಸ್ಪಷ್ಟತೆಯನ್ನು ಬಸವತತ್ವದಿಂದಲೇ ಪಡೆದುಕೊಂಡಿರುವುದನ್ನು ವಿನಮ್ರವಾಗಿ ಹೇಳಬಯಸುತ್ತೇನೆ.

ನಾನು ಮುಖ್ಯಮಂತ್ರಿಯಾಗಿ 2013ರಲ್ಲಿ ಪ್ರಮಾಣ ಸ್ವೀಕರಿಸಿದಾಗ ಮುಹೂರ್ತ ನೋಡಿರಲಿಲ್ಲ, ಉದ್ದೇಶಪೂರ್ವಕವಾಗಿಯೇ ಬಸವಣ್ಣನವರ ಜಯಂತಿಯ ದಿನವನ್ನೇ ಆರಿಸಿಕೊಂಡಿದ್ದೆ. ನಮ್ಮ ಸರ್ಕಾರ ಘೋಷಿಸಿದ ಮೊದಲ ಕಾರ್ಯಕ್ರಮ ಅನ್ನಭಾಗ್ಯ ಯೋಜನೆ ಕೂಡಾ ಬಸವಣ್ಣನವರ ಅನ್ನದಾಸೋಹದಿಂದಲೇ ಪ್ರೇರಣೆ ಪಡೆದದ್ದಾಗಿದೆ.

ಸರ್ಕಾರಿ ನೌಕರರು ಪ್ರತಿಕ್ಷಣದಲ್ಲಿಯೂ ಬಸವ ತತ್ವದ ನೆನಪು ಮಾಡಿಕೊಳ್ಳಲಿ ಎಂಬ ಉದ್ದೇಶದಿಂದಲೇ ಸರ್ಕಾರದ ಪ್ರತಿ ಕಚೇರಿಯಲ್ಲಿಯೂ ಬಸವಣ್ಣನವರ ಭಾವಚಿತ್ರವನ್ನು ಇಟ್ಟುಕೊಳ್ಳಬೇಕೆಂದು ನಿಯಮಮಾಡಿದ್ದು. ಇದು ನಮ್ಮ ಪಕ್ಷದ ಮತ್ತು ನನ್ನ ಬದ್ಧತೆ.

ಸಂವಿಧಾನದ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ಸಾಮಾಜಿಕ ನ್ಯಾಯವನ್ನೇ ತನ್ನ ಸಿದ್ಧಾಂತ ಎಂದು ನಂಬಿಕೊಂಡು ಬಂದಿರುವ ಪಕ್ಷ ಕಾಂಗ್ರೆಸ್. ಬಸವ ತತ್ವದ ಸಾರ ಕೂಡಾ ಇದೇ ಆಗಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷ ತಾತ್ವಿಕವಾಗಿ ಬಸವಧರ್ಮದ ವಾರಸುದಾರಿಕೆಯನ್ನು ಹೊಂದಿದೆ ಎನ್ನುವುದು ನನ್ನ ಖಚಿತ ಅಭಿಪ್ರಾಯ.

ಬಸವತತ್ವವನ್ನು ಸರಿಯಾಗಿ ಅರ್ಥಮಾಡಿಕೊಂಡ ಯಾವ ವ್ಯಕ್ತಿ ಕೂಡಾ ಯಾವುದೇ ಕಾರಣಕ್ಕೂ ಭಾರತೀಯ ಜನತಾ ಪಕ್ಷವನ್ನು ಬೆಂಬಲಿಸಲಾರ, ಯಾಕೆಂದರೆ ಆ ಪಕ್ಷದ ಸಿದ್ಧಾಂತ ಮತ್ತು ಬಸವಣ್ಣನವರ ಸಿದ್ಧಾಂತ ಸಂಪೂರ್ಣ ಭಿನ್ನವಾದುದು.



ಭಾರತೀಯ ಜನತಾ ಪಕ್ಷ ಮತ್ತು ಅದರ ಮಾತೃಸಂಸ್ಥೆಯಾದ ರಾಷ್ಟ್ರೀಯ ಸ್ವಯಂಸೇವಕ ಸಂಘ ಪ್ರತಿನಿಧಿಸುತ್ತಿರುವ ಮನುಧರ್ಮವನ್ನು ವಿರೋಧಿಸಿಯೇ ಬಸವಧರ್ಮ ಹುಟ್ಟಿಕೊಂಡಿರುವುದು. ಮನುಧರ್ಮ ಪ್ರತಿಪಾದಿಸುವ ಚಾತುರ್ವರ್ಣ ವ್ಯವಸ್ಥೆಯನ್ನು ಬಸವಣ್ಣನವರು ಧಿಕ್ಕರಿಸಿದ್ದರು.

ಸ್ವತಃ ಬ್ರಾಹ್ಮಣನಾಗಿದ್ದ ಬಸವಣ್ಣನವರು ತಮ್ಮನ್ನು ತಾವು ಅಪವರ್ಗೀಕರಣಗೊಳಿಸುತ್ತಾ ತಮ್ಮನ್ನು ಅಸ್ಪೃಶ್ಯರ ಮನೆಯ ಮಗನೆಂದು ಹೇಳುತ್ತಾ ಸರ್ವರನ್ನು ಒಳಗೊಳ್ಳುತ್ತಾ ಹೊರಟವರು. ಬಸವಣ್ಣನವರು ಈ ನೆಲದ ಮೊದಲ ಸಾಮಾಜಿಕ ನ್ಯಾಯದ ಹೋರಾಟಗಾರ. ಅಸ್ಪೃಶ್ಯ ಮೂಲದ ಲೋಹರ, ಕಕ್ಕರ, ಮಾದರ ಮೊದಲಾದ ವಂಚಿತ ಸಮುದಾಯಗಳನ್ನು ತಬ್ಬಿಕೊಂಡು ನಡೆದದ್ದು ಬಸವ ಚಳವಳಿ. ಸರ್ವಕಾಯಕಗಳಿಗೆ ವೃತ್ತಿ ಘನತೆಯನ್ನು ತಂದು ಕೊಟ್ಟು ಅವುಗಳನ್ನು ಸತ್ಯಶುದ್ಧ ಕಾಯಕವೆಂದು ಗೌರವಿಸಿದವರು ಬಸವಣ್ಣನವರು.

ಕಾಂಗ್ರೆಸ್ ಕೂಡಾ ಇದೇ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವ ಪಕ್ಷ. ಬಸವಣ್ಣನವರು ಸ್ಥಾವರ ರೂಪದ ದೇವಾಲಯದ ಸಂಸ್ಕೃತಿಯನ್ನು ನಿರಾಕರಿಸಿ ಇಷ್ಟಲಿಂಗ ಜಂಗಮ ಸಂಸ್ಕೃತಿಯನ್ನು ಜಾರಿಗೆ ತಂದವರು. ಅಂಧಶ್ರದ್ಧೆ, ಮೌಢ್ಯ, ಕಂದಾಚಾರಗಳನ್ನು ವಿರೋಧಿಸಿದವರು, ಮಡಿ-ಮೈಲಿಗೆಯನ್ನು ಕಿತ್ತು ಎಸೆದವರು ಮಹಿಳೆಯರಿಗೆ ಸಮಾನತೆಯನ್ನು ಕೊಟ್ಟವರು, ಅಂತರ್ ಜಾತಿ ವಿವಾಹವನ್ನು ಪುರಸ್ಕರಿಸಿದವರು. ಗುರುಕುಲಕ್ಕೆ ಪರ್ಯಾಯವಾದ ಸಾಲಿಮಠ, ಓದೋ ಮಠದ ಮೂಲಕ ಅಕ್ಷರ ವಂಚಿತರನ್ನು ಜ್ಞಾನದ ಬೆಳಕಿಗೆ ತೆರೆದುಕೊಳ್ಳುವಂತೆ ಮಾಡಿದವರು. ಸಂಸ್ಕೃತಕ್ಕೆ ಬದಲಾಗಿ ಕನ್ನಡವನ್ನು ಧಾರ್ಮಿಕ ಭಾಷೆಯಾಗಿ ಮಾತ್ರವಲ್ಲ ಆಡುವ ಭಾಷೆಯಾಗಿ ಬೆಳೆಸಿದವರು.

ಬಸವಣ್ಣನವರ ಈ ಎಲ್ಲ ತತ್ವ-ಸಿದ್ಧಾಂತಗಳನ್ನು ಭಾರತೀಯ ಜನತಾ ಪಕ್ಷ ಮತ್ತು ಅದರ ಮಾತೃಸಂಸ್ಥೆಯಾದ ಆರ್‌ಎಸ್‌ಎಸ್‌ನ ಸಿದ್ಧಾಂತದ ಜೊತೆ ಹೋಲಿಸಿ ನೋಡಿದರೆ ಯಾವ ಪಕ್ಷ ಲಿಂಗಾಯತ ಧರ್ಮವನ್ನು ಒಳಗೊಂಡಿದೆ ಎನ್ನುವುದು ಸ್ಪಷ್ಟವಾಗಬಹುದು. ಭಾರತೀಯ ಜನತಾ ಪಕ್ಷ ಬಹಿರಂಗವಾಗಿ ಆಡುವ ಮಾತುಗಳು ಏನೇ ಇದ್ದರೂ ಆ ಪಕ್ಷ ಮತ್ತು ಪರಿವಾರದ ಗುಪ್ತ ಕಾರ್ಯಸೂಚಿ ಬಸವಧರ್ಮಕ್ಕೆ ವಿರುದ್ಧವಾದುದು ಎಂದು ಮೇಲ್ನೋಟಕ್ಕೆ ಯಾರಿಗೂ ಅನಿಸಿಬಿಡುತ್ತದೆ.

ಇನ್ನು ರಾಜಕೀಯವಾಗಿಯೇ ನೋಡುವುದಾದರೆ ಭಾರತೀಯ ಜನತಾ ಪಕ್ಷ ಲಿಂಗಾಯತ ರಾಜಕೀಯ ನಾಯಕರನ್ನು ಹೇಗೆ ನಡೆಸಿಕೊಂಡು ಬಂದಿದೆ ಎನ್ನುವುದು ಅರಿವಾಗುತ್ತದೆ. ಕಾಂಗ್ರೆಸ್ ಪಕ್ಷದಿಂದಲೇ ಎಸ್.ಆರ್. ಕಂಠಿಯವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಅದರ ನಂತರ ಬಿ.ಡಿ.ಜತ್ತಿಯವರು ಮುಖ್ಯಮಂತ್ರಿ ಆಗಿದ್ದಲ್ಲದೆ ದೇಶದ ಉಪರಾಷ್ಟ್ರಪತಿ, ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದ್ದರು. ಎಸ್.ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿದ್ದು ಮಾತ್ರವಲ್ಲ ಅಖಿಲಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದವರು. ಅದರ ನಂತರ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದರು. ಲಿಂಗಾಯತ ಸಮುದಾಯಕ್ಕೆ ಉನ್ನತ ರಾಜಕೀಯ ಹುದ್ದೆಗಳ ಅವಕಾಶವನ್ನು ಕಲ್ಪಿಸಿದ್ದು ಕಾಂಗ್ರೆಸ್ ಪಕ್ಷ ಎನ್ನುವುದಕ್ಕೆ ಇತಿಹಾಸವೇ ಸಾಕ್ಷಿ.

ವೀರೇಂದ್ರ ಪಾಟೀಲ್ ಅವರ ಪದಚ್ಯುತಿ ಒಂದು ಕಹಿಘಟನೆ. ಅದರ ನಂತರ ವೀರೇಂದ್ರ ಪಾಟೀಲರು ಅನಾರೋಗ್ಯದಿಂದ ಸುಧಾರಿಸಿಕೊಂಡು ಸಕ್ರಿಯ ರಾಜಕಾರಣಕ್ಕೆ ಮರಳಲೇ ಇಲ್ಲ ಎನ್ನುವುದನ್ನು ಕೂಡಾ ನಾವು ಗಮನಿಸಬೇಕಾಗುತ್ತದೆ. ವೀರೇಂದ್ರ ಪಾಟೀಲರ ಪದಚ್ಯುತಿ ಮತ್ತು ಬಿಜೆಪಿ ಈಗ ನಡೆಸುತ್ತಿರುವ ತಮ್ಮ ಪಕ್ಷದಲ್ಲಿರುವ ಲಿಂಗಾಯತ ನಾಯಕರ ತಲೆಸಂಹಾರಗಳ ನಡುವಣ ವ್ಯತ್ಯಾಸಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ನಮ್ಮ ನಡುವಣ ರಾಜಕೀಯ ಭಿನ್ನಾಭಿಪ್ರಾಯಗಳು ಏನೇ ಇದ್ದರೂ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಬಿ.ಎಸ್.ಯಡಿಯೂರಪ್ಪನವರು ಕಾರಣ ಎನ್ನುವುದನ್ನು ಒಪ್ಪಿಕೊಳ್ಳಲು ನನಗೆ ಯಾವ ಹಿಂಜರಿಕೆಯೂ ಇಲ್ಲ.

ಆದರೆ ಬಿಜೆಪಿಯ ಪ್ರಭಾವಿ ನಾಯಕರು ಅದರಲ್ಲಿಯೂ ಮುಖ್ಯವಾಗಿ ಸಂಘ ಪರಿವಾರದ ಪ್ರಮುಖರು ತಮ್ಮದೇ ಪಕ್ಷದ ಒಬ್ಬ ಪ್ರಬಲ ನಾಯಕನ ವಿರುದ್ಧ ಮಾಡಿರುವ ಪಿತೂರಿ-ಕಾರಸ್ತಾನಗಳಿಗೆ ಏನು ಕಾರಣ ಎನ್ನುವುದನ್ನು ಅವರೇ ಹೇಳಬೇಕು.

ಯಡಿಯೂರಪ್ಪನವರು ಜೈಲಿಗೆ ಹೋಗಿದ್ದಾಗ ರಾಜ್ಯದಲ್ಲಿ ಅಧಿಕಾರದಲ್ಲಿದ್ದದ್ದು ಭಾರತೀಯ ಜನತಾ ಪಕ್ಷ. ತಮ್ಮ ಸಾಮರ್ಥ್ಯ ಬಲದಿಂದ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದ ಯಡಿಯೂರಪ್ಪನವರನ್ನು ಪೂರ್ಣಾವಧಿ ಮುಖ್ಯಮಂತ್ರಿಗಳಾಗಲು ಬಿಡದೆ ಅನ್ಯಾಯ ಮಾಡಿರುವುದು ಕೂಡಾ ಅವರದ್ದೇ ಪಕ್ಷ ಮತ್ತು ಪರಿವಾರದ ನಾಯಕರು. ಇದನ್ನು ಯಡಿಯೂರಪ್ಪನವರೇ ಖುದ್ದಾಗಿ ಹೇಳಿದ್ದರು.

ತಾವೇ ಕಟ್ಟಿದ್ದ ಪಕ್ಷವನ್ನು ಬಿಟ್ಟು ಅವರು ಹೋಗಬೇಕಾಯಿತು. ಇಂದು ಅವರನ್ನು ಕೊಂಡಾಡುತ್ತಿರುವ ಬಿಜೆಪಿ ನಾಯಕರು ಆ ಸಂದರ್ಭದಲ್ಲಿ ಆಡಿದ್ದ ಚಾರಿತ್ರ್ಯಹನನದ ಕೊಂಕು ಮಾತುಗಳು ಇತಿಹಾಸದ ಪುಟದಲ್ಲಿವೆ. ನಾಲ್ಕು ವರ್ಷಗಳ ಹಿಂದೆ ಆಪರೇಷನ್ ಕಮಲದಂತಹ ಅನೈತಿಕ ರಾಜಕಾರಣವನ್ನು ಯಡಿಯೂರಪ್ಪನವರಿಂದಲೇ ನಡೆಸಿ ಕೊನೆಗೆ ವರ್ಷ ಮುಗಿಯುವುದರೊಳಗೆ ಅವರನ್ನು ನಿರ್ದಯವಾಗಿ ಮುಖ್ಯಮಂತ್ರಿ ಸ್ಥಾನದಿಂದ ಕಿತ್ತುಹಾಕಿರುವುದಕ್ಕೆ ಕಾರಣಗಳೇನು ಎನ್ನುವುದನ್ನು ಬಿಜೆಪಿ ಹೈಕಮಾಂಡ್ ಈವರೆಗೆ ತಿಳಿಸಿಲ್ಲ. ಅವರ ಮಗ ವಿಧಾನಪರಿಷತ್ ಸದಸ್ಯರಾಗಲು ಬಯಸಿದರೂ ಅವಕಾಶ ನೀಡಲಿಲ್ಲ, ಅವರನ್ನು ಸಚಿವರನ್ನಾಗಿಯೂ ಮಾಡಲಿಲ್ಲ. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಂತಹವರು ಬಿ.ಎಸ್. ಯಡಿಯೂರಪ್ಪ ಮತ್ತು ಕುಟುಂಬದ ವಿರುದ್ಧ ನಿರಂತರವಾಗಿ ಮುಕ್ತವಾಗಿ ಬಗೆಬಗೆಯ ಆರೋಪಗಳನ್ನು ಮಾಡುತ್ತಿದ್ದರೂ ಪಕ್ಷದ ಹೈಕಮಾಂಡ್ ಮೌನವಾಗಿದ್ದು ಪರೋಕ್ಷ ಬೆಂಬಲವನ್ನು ನೀಡಿತು.

ಈಗ ಯಡಿಯೂರಪ್ಪನವರ ನಂತರದ ತಲೆಮಾರಿನ ಲಿಂಗಾಯತ ನಾಯಕರ ಮೇಲೆ ದಾಳಿ ಶುರುವಾಗಿದೆ. ಈ ಬಾರಿ ಲಿಂಗಾಯತ ಸಮುದಾಯದ ಹಿರಿಯ ನಾಯಕರಾಗಿದ್ದ ಜಗದೀಶ ಶೆಟ್ಟರ್ ಮೇಲೆ ಕಣ್ಣುಬಿದ್ದಿದೆ. ಅದರೊಬ್ಬರೇ ಅಲ್ಲ ಲಕ್ಷ್ಮಣ ಸವದಿ, ಆಯನೂರು ಮಂಜುನಾಥ, ಸಂಜಯ ಪಾಟೀಲ, ಸೊಗಡು ಶಿವಣ್ಣ ಸೇರಿದಂತೆ ಹಲವಾರು ಲಿಂಗಾಯತ ನಾಯಕರನ್ನು ಕಡೆಗಣಿಸಿರುವುದು ಸ್ಪಷ್ಟವಾಗಿದೆ.

ತಮ್ಮನ್ನು ಪಕ್ಷದಲ್ಲಿ ಬಳಸಿಕೊಂಡು ಹೇಗೆ ಬಿಸಾಡಿದ್ದಾರೆ ಎನ್ನುವುದನ್ನು ಈ ನಾಯಕರೇ ಹೇಳುತ್ತಿದ್ದಾರೆ. ಇದು ನಮ್ಮ ಕಪೋಲಕಲ್ಪಿತ ಆರೋಪ ಅಲ್ಲ. ಈ ಎಲ್ಲ ಬಿಡಿ ಬಿಡಿ ಘಟನೆಗಳನ್ನು ಒಟ್ಟಾಗಿ ಜೋಡಿಸಿ ನೋಡಿದರೆ ಭಾರತೀಯ ಜನತಾ ಪಕ್ಷ ತಮ್ಮಲ್ಲಿನ ಹಿರಿಯ ನಾಯಕರಲ್ಲಿ ಲಿಂಗಾಯತರನ್ನು ಮಾತ್ರ ಆಯ್ದು ದಮನಿಸುವ ಸಂಚಿನಲ್ಲಿ ತೊಡಗಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣಗಳೇನು ಎನ್ನುವುದನ್ನು ಬಿಜೆಪಿಯೇ ತಿಳಿಸಬೇಕು.

ಲೇಖಕ: ವಿಧಾನಸಭೆ ವಿರೋಧ ಪಕ್ಷದ ನಾಯಕ

ಲಿಂಗಾಯತರಿಗೆ ಗೌರವ ತಂದುಕೊಟ್ಟಿದ್ದೇ ಬಿಜೆಪಿ

ಲಿಂಗಾಯತ ಸಮುದಾಯ, ನಾಯಕರನ್ನು ಗೌರವಿಸುವ ಬಿಜೆಪಿ ಯಾವುದೇ ಜಾತಿ ಆಧಾರದ ಮೇಲೆ ಪಕ್ಷವನ್ನು ಮುನ್ನಡೆಸದೇ ಅಭಿವೃದ್ಧಿ ಮತ್ತು ರಾಷ್ಟ್ರ ಹಿತವನ್ನು ಪ್ರಧಾನವಾಗಿಟ್ಟುಕೊಂಡು ಆಡಳಿತ ನಡೆಸುತ್ತ ಬಂದಿದೆ. ಅದೇ ಕಾರಣಕ್ಕೆ ಸದಾ ಅಭಿವೃದ್ಧಿ ಪರ ವಿಚಾರಗಳಿಗೆ ಲಿಂಗಾಯತ ಸಮುದಾಯ ಬಿಜೆಪಿಗೆ ತನ್ನ ಬೆಂಬಲವನ್ನು ನಿರಂತರ ನೀಡುತ್ತ ಬಂದಿರುವುದನ್ನು ಅಲ್ಲಗಳೆಯುವಂತಿಲ್ಲ

• ಸಿ. ಸೋಮಶೇಖರ್

‘ಕರ್ನಾಟಕದ ಬಗ್ಗೆ ನನಗೆ ಅಪಾರ ಹೆಮ್ಮೆ ಇದೆ. ಇಡೀ ದೇಶದಲ್ಲಿ ನನಗೆ ಅತ್ಯಂತ ಇಷ್ಟವಾಗುವ ರಾಜ್ಯ ಇದು. ಈ ನಾಡಿನಲ್ಲಿ ಜನ್ಮತಳೆದು ವಿಶ್ವಕ್ಕೆ ಜ್ಞಾನದ ಬೆಳಕು ಚೆಲ್ಲಿದ ಬಸವಣ್ಣನವರು ಸಮಾನತೆ ಸಾರಿದ ನೆಲವಿದು. ಅಂತಹ ಬಸವಣ್ಣನವರ ಕಾಯಕ, ದಾಸೋಹ ಆಶಯಗಳನ್ನು ಈಡೇರಿಸಲು ಬಿಜೆಪಿ ಡಬಲ್ ಎಂಜಿನ್ ಸರ್ಕಾರ ಆದ್ಯತೆ ನೀಡಿದೆ. ‘ಸಬ್ ಕಾ ಸಾಥ್, ಸಬ್ ಕಾ ವಿಕಾಸ್’ ಎನ್ನುವ ಬಿಜೆಪಿ ಉಕ್ತಿಗೆ ಬಸವಣ್ಣನವರ ಆಶಯವೇ ಆಧಾರವಾಗಿದೆ...’

ವಿಶ್ವವೇ ಮೆಚ್ಚುವಂತಹ ವ್ಯಕ್ತಿತ್ವದ ಪ್ರಧಾನಿ ನರೇಂದ್ರ ಮೋದಿ ಅವರು ನಮ್ಮ ಜಗಜ್ಯೋತಿ ಬಸವಣ್ಣನವರ ಪ್ರೇರಣೆ ಬಗ್ಗೆ ಹೇಳಿದ ಮಾತಿದು. ಕೇಂದ್ರ ಮತ್ತು ರಾಜ್ಯದಲ್ಲಿರುವ ಡಬಲ್ ಎಂಜಿನ್ ಸರ್ಕಾರಗಳು ಅಣ್ಣ ಬಸವಣ್ಣನವರು ತೋರಿಸಿಕೊಟ್ಟ ಹಾದಿಯಲ್ಲೇ ಸಾಗುತ್ತಿವೆ ಎಂಬುದಕ್ಕೆ ಬೇರೆ ನಿದರ್ಶನವೇ ಬೇಕಿಲ್ಲ. ಆದರೆ, ಲಿಂಗಾಯತರಿಗೆ ಯಾರು ಅನ್ಯಾಯ ಮಾಡಿದ್ದಾರೆ, ಯಾರು ಆದ್ಯತೆ ಕೊಟ್ಟಿದ್ದಾರೆ ಎಂಬ ವಿಷಯವೇ ರಾಜ್ಯ ರಾಜಕಾರಣದ ಮುಖ್ಯಭೂಮಿಕೆಯಲ್ಲಿ ಹೆಚ್ಚು ಚರ್ಚಿತವಾಗುತ್ತಿದೆ.

ರಾಜ್ಯದಲ್ಲಿನ ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಲಿಂಗಾಯತ ಸಮುದಾಯಕ್ಕೆ ಆಡಳಿತ ಪಕ್ಷ ಬಿಜೆಪಿ ಅನ್ಯಾಯ ಮಾಡುತ್ತಿದೆ ಎಂಬ ವಾದವನ್ನು ಪ್ರತಿಪಕ್ಷ ಕಾಂಗ್ರೆಸ್ ಮಾಡುತ್ತಿರುವುದು ವಿಪರ್ಯಾಸದ ಸಂಗತಿ. ಸ್ವಾತಂತ್ರ್ಯ ಬಂದ ಈಚೆಗಿನ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅತ್ಯಲ್ಪ ಅವಧಿ ಎಂದರೆ 9 ವರ್ಷವಷ್ಟೇ ಬಿಜೆಪಿ ಅಧಿಕಾರ ನಡೆಸಿದೆ. ಈ ಅವಧಿಯಲ್ಲಿ ಒಂದು ವರ್ಷ ಡಿ.ವಿ. ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದ ಅವಧಿ ಬಿಟ್ಟರೆ ಉಳಿದ ಅವಧಿಯಲ್ಲಿ ಲಿಂಗಾಯತರೇ ಮುಖ್ಯಮಂತ್ರಿಯಾಗಿದ್ದರು. ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್ ಹಾಗೂ ಬಸವರಾಜ ಬೊಮ್ಮಾಯಿ ಅಧಿಕಾರ ನಡೆಸಿದ್ದಾರೆ. ಬಿಜೆಪಿಯಿಂದ ಮುಖ್ಯಮಂತ್ರಿಯಾದವರು ಸಮುದಾಯದ ಹಿನ್ನೆಲೆಯಿಂದ ಲಿಂಗಾಯತರಾದರೂ, ತಾವು ಹುಟ್ಟಿದ ಸಮುದಾಯವನ್ನಷ್ಟೇ ಅವರು ಉದ್ಧಾರದತ್ತ ಕೊಂಡೊಯ್ದವರಲ್ಲ. ಬಸವಣ್ಣನವರ ಕಾಲದಲ್ಲಿ ಎಲ್ಲ ಕಾಯಕ ಸಮಾಜಗಳಿಗೆ ನ್ಯಾಯ ಕೊಟ್ಟಂತೆ, ಅನುಭವ ಮಂಟಪದಲ್ಲಿ ಎಲ್ಲರಿಗೂ ಸಮಾನವಾಗಿ ಅವಕಾಶ ಕಲ್ಪಿಸಿದಂತೆ ಎಲ್ಲ ಜನವರ್ಗಗಳ ಹಿತವನ್ನು ಬಯಸಿದವರು. ಅದಕ್ಕಾಗಿ ಅನುದಾನವನ್ನೂ ದೊಡ್ಡ ಮಟ್ಟದಲ್ಲಿ ನೀಡಿದವರು.

ಅನುಭವ ಮಂಟಪಕ್ಕೆ ವಿಶೇಷ ನೆರವು: ವೀರಶೈವ-ಲಿಂಗಾಯತ ಸಮುದಾಯದವರ ಅಭಿವೃದ್ಧಿಗೆ ಬಿಜೆಪಿ ಕೊಟ್ಟಷ್ಟು ಕೊಡುಗೆಯನ್ನು ಯಾವ ಪಕ್ಷವೂ ಕೊಟ್ಟಿಲ್ಲ.

ವೀರಶೈವ ಸಮುದಾಯದಲ್ಲಿಯೂ ಹಿಂದುಳಿದವರು ಇರುವುದನ್ನು ಗಮನಿಸಿದ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿ, ಸಮುದಾಯದ ಕಲ್ಯಾಣಕ್ಕೆ ಆದ್ಯತೆ ಕೊಟ್ಟರು. ಜಗತ್ತಿನ ಪ್ರಥಮ ಸಂಸತ್ತು ಎಂದು ಕರೆಯಲಾಗುವ ಜಗತ್ತಿಗೆ ಸಮಾನತೆಯ ಸಂದೇಶ ಸಾರಿದ್ದ ಅನುಭವ ಮಂಟಪ ನಿರ್ಮಾಣಕ್ಕೆ ಬಿಜೆಪಿ ಸರ್ಕಾರ ಕ್ರಮ ವಹಿಸಿದೆ. ಬಸವಣ್ಣನವರ ಕರ್ಮಭೂಮಿಯನ್ನು ಜಾಗತಿಕ ಆಕರ್ಷಣೆಯ ಕೇಂದ್ರವಾಗಿ ಮರು ನಿರ್ಮಾಣ ಮಾಡಲು ಅಗತ್ಯ ಅನುದಾನವನ್ನೂ ಒದಗಿಸಿದೆ.

ಬಸವಣ್ಣನವರ ಆದರ್ಶಗಳನ್ನು ಜಗತ್ತಿಗೆ ತಿಳಿಸಲು ವಿಧಾನಸೌಧದ ಮುಂದೆ ಬಸವಣ್ಣನವರ ಪ್ರತಿಮೆ ಸ್ಥಾಪಿಸುವ ಮೂಲಕ ಸಮಾನತೆಯ ಹರಿಕಾರ ಹಾಗೂ ಲಿಂಗಾಯತ ಸಮುದಾಯಕ್ಕೆ ಗೌರವ ಸಲ್ಲಿಸುವ ಕೆಲಸ ಮಾಡಿದೆ.

ಎಲ್ಲಾ ಸಮುದಾಯವನ್ನು ಸಮಾನವಾಗಿ ಕಾಣುವ ಬಿಜೆಪಿ, ಕೆಳಸ್ತರದ ಸಮುದಾಯಗಳ ಹಿತಾಸಕ್ತಿಗೆ ಧಕ್ಕೆ ಬಾರದಂತೆ ನಡೆದುಕೊಂಡಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರು ದಶಕಗಳಿಂದ ಮೀಸಲಾತಿ ಪ್ರಮಾಣದ ಹೆಚ್ಚಳಕ್ಕೆ ಆಗ್ರಹಿಸುತ್ತಲೇ ಬಂದಿದ್ದರು. ಒಳಮೀಸಲಾತಿಯ ಬೇಡಿಕೆಯನ್ನು ಪ್ರಬಲವಾಗಿಯೇ ಮಂಡಿಸಿದ್ದರು. ಯಾರೊಬ್ಬರೋ ಈ ಧೈರ್ಯ ಮಾಡಿರಲಿಲ್ಲ. ತಮ್ಮ ಸಚಿವ ಸಂಪುಟ ಸದಸ್ಯರನ್ನು ಒಪ್ಪಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಈ ಎರಡೂ ವಿಷಯದಲ್ಲಿ ಐತಿಹಾಸಿಕ ನಿರ್ಧಾರ ತೆಗೆದುಕೊಂಡರು. ಲಿಂಗಾಯತ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಸಿಗುತ್ತಿರುವ ಮೀಸಲಾತಿ ಪ್ರಮಾಣ ಕಡಿಮೆ ಇದೆ ಎನ್ನುವುದನ್ನು ಗಮನಿಸಿದ ಬೊಮ್ಮಾಯಿಯವರು, ಲಿಂಗಾಯತರ ಮೀಸಲಾತಿ ಪ್ರಮಾಣವನ್ನು ಶೇ 5ರಿಂದ ಶೇ 7ಕ್ಕೆ ಹೆಚ್ಚಿಸುವ ಚಾರಿತ್ರಿಕ ತೀರ್ಮಾನ ತೆಗೆದುಕೊಂಡರು. ಆದರೆ, ಸಾಮಾಜಿಕ ನ್ಯಾಯ ಒದಗಿಸುವ ಈ ನಿರ್ಧಾರವನ್ನು ವಿರೋಧಿಸುತ್ತಿರುವ ಲಿಂಗಾಯತ ವಿರೋಧಿ ಕಾಂಗ್ರೆಸ್ ನಾಯಕರು, ಬೇರೆ ಸಮುದಾಯವನ್ನು ಪ್ರಚೋದಿಸುವ ಮೂಲಕ ಸುಪ್ರೀಂ ಕೋರ್ಟ್‌ನಲ್ಲಿ ಇದನ್ನು ಪ್ರಶ್ನಿಸಿ, ದೊರೆಯಬಹುದಾಗಿದ್ದ ಮೀಸಲಾತಿ ಅವಕಾಶವನ್ನು ತಪ್ಪಿಸುವ ಹುನ್ನಾರ ನಡೆಸಿದ್ದಾರೆ.

ವೀರೇಂದ್ರ ಪಾಟೀಲರಿಗೆ ಅವಮಾನ: ಕರ್ನಾಟಕದ ರಾಜಕೀಯ ಇತಿಹಾಸ ಲಿಂಗಾಯತ ಸಮುದಾಯದೊಂದಿಗೆ ಅಭಿನ್ನವೆಂಬಂತೆ ಬೆರೆತುಕೊಂಡು ಬಂದಿದೆ. ಭಾಷಾವಾರು ಪ್ರಾಂತ್ಯಗಳ ರಚನೆಯ ನಂತರ ಎಸ್. ನಿಜಲಿಂಗಪ್ಪ, ಬಿ.ಡಿ. ಜತ್ತಿ, ಎಸ್.ಆರ್.ಕಂಠಿ, ವೀರೇಂದ್ರ ಪಾಟೀಲ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅಂತಹ ಮಹಾನ್ ನಾಯಕರನ್ನು ಕಾಂಗ್ರೆಸ್ ನಡೆಸಿಕೊಂಡ ರೀತಿ ಮಾತ್ರ ಅತ್ಯಂತ ಅವಮಾನಕರ.

ಪ್ರಭಾವಿ ಲಿಂಗಾಯತ ನಾಯಕರಾಗಿದ್ದ ವೀರೇಂದ್ರ ಪಾಟೀಲರ ಪ್ರಯತ್ನದ ಫಲವಾಗಿ ಅತ್ಯಧಿಕ ಬಹುಮತ ಪಡೆದು ಕಾಂಗ್ರೆಸ್ ಅಧಿಕಾರ ಹಿಡಿದಿತ್ತು. ಅನಾರೋಗ್ಯದ ನೆಪ ಒಡ್ಡಿದ ಕಾಂಗ್ರೆಸ್, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿತು. ನಿಜಲಿಂಗಪ್ಪ, ರಾಜಶೇಖರ ಮೂರ್ತಿ ಅವರಿಗೂ ಅವಮಾನ ಮಾಡಲಾಗಿತ್ತು. ಅಂದಿನಿಂದಲೇ ವೀರಶೈವ ಲಿಂಗಾಯತ ಸಮುದಾಯ ಕಾಂಗ್ರೆಸ್ಸಿನ ಈ ಕುಕೃತ್ಯವನ್ನು ಗ್ರಹಿಸುತ್ತ ಬಂದಿದೆ.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ರಾಜಕೀಯ ಲಾಭಕ್ಕೋಸ್ಕರ ವೀರಶೈವರು ಮತ್ತು ಲಿಂಗಾಯತರನ್ನು ಪ್ರತ್ಯೇಕಿಸಿ ಧರ್ಮ ಒಡೆಯುವ ಕೆಲಸ ಮಾಡಿದರು. ಪರಿಣಾಮವಾಗಿ, ಕಾಂಗ್ರೆಸ್ 2018ರ ಚುನಾವಣೆಯಲ್ಲಿ ಅಧಿಕಾರ ಕಳೆದುಕೊಂಡಿತು. ಲಿಂಗಾಯತ ಸಮುದಾಯದ ಪರ ಮೊಸಳೆ ಕಣ್ಣೀರು ಸುರಿಸುತ್ತಿರುವ ಕಾಂಗ್ರೆಸ್ ಈಗಲೂ ತನ್ನ ಪಕ್ಷದಲ್ಲಿರುವ ಲಿಂಗಾಯತ ನಾಯಕರನ್ನು ನಡೆಸಿಕೊಳ್ಳುತ್ತಿರುವ ರೀತಿ ನೋಡಿದರೆ, ಕಾಂಗ್ರೆಸ್ ಆ ಸಮುದಾಯಕ್ಕೆ ಎಷ್ಟು ಗೌರವ ಕೊಡುತ್ತಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಹಿರಿಯ ನಾಯಕರಾಗಿರುವ ಎಸ್. ಆರ್. ಪಾಟೀಲರಿಗೆ ವಿಧಾನ ಪರಿಷತ್ತಿನ ಸಭಾಪತಿ ಸ್ಥಾನವನ್ನು ತಪ್ಪಿಸಿ ಅವರನ್ನು ಅವಮಾನಿಸಲಾಯಿತು.

ಅಷ್ಟೇ ಅಲ್ಲ; ಈಶ್ವರ ಖಂಡ್ರೆ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ತಪ್ಪಿಸಿ ಕಾರ್ಯಾಧ್ಯಕ್ಷರನ್ನಾಗಿ ಮಾಡಿ ಕಲ್ಯಾಣ ಕರ್ನಾಟಕ್ಕೆ ಮಾತ್ರ ಸೀಮಿತಗೊಳಿಸಲಾಯಿತು. ಶಾಮನೂರು ಶಿವಶಂಕರಪ್ಪ ಅವರನ್ನು ಪಕ್ಷ ಸಂಘಟನೆಗೆ ಎಟಿಎಂ ಥರ ಬಳಸಿಕೊಂಡು, ಪಕ್ಷ ಅಧಿಕಾರಕ್ಕೆ ಬಂದಾಗ ಯಾವುದೇ ಮಹತ್ವದ ಸಚಿವ ಸ್ಥಾನವನ್ನೂ ನೀಡದೇ, ಅವರಿಗೆ ಅನ್ಯಾಯ ಮಾಡಿರುವುದನ್ನು ರಾಜ್ಯದ ಜನತೆ ಕಂಡಿಲ್ಲವೇ ?

ಎಲ್ಲ ಅಧಿಕಾರ ಅನುಭವಿಸಿ ಈಗ ಕಾಂಗ್ರೆಸ್ ಪಡಸಾಲೆ ಸೇರಿರುವ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಅವರಿಗೆ ಕಾಂಗ್ರೆಸ್‌ನ ಲಿಂಗಾಯತ ವಿರೋಧಿ ಮನಸ್ಥಿತಿ ಅರಿತುಕೊಳ್ಳಲು ಬಹಳ ದಿನಗಳೇನು ಬೇಕಾಗುವುದಿಲ್ಲ. ಈ ಇಬ್ಬರೂ ಬಿಜೆಪಿಯಲ್ಲಿ ದಶಕಗಳ ಕಾಲ ಇದ್ದರು ಮತ್ತು ಅವರು ಲಿಂಗಾಯತ ಸಮುದಾಯದವರು ಎನ್ನುವ ಕಾರಣಕ್ಕೆ ಉನ್ನತ ಸ್ಥಾನಗಳನ್ನು ನೀಡಲಾಗಿತ್ತು.

ಇದುವರೆವಿಗೂ ಕಾಂಗ್ರೆಸ್ ಹಾಗೂ ಬಿಜೆಪಿಯಿಂದ ಮುಖ್ಯಮಂತ್ರಿಗಳಾದ ಲಿಂಗಾಯತ ಸಮುದಾಯದ ಎಲ್ಲರೂ ಜ್ಯಾತ್ಯತೀತ ನೆಲೆಯಲ್ಲಿ ಒಳ್ಳೆಯ ಆಡಳಿತ ನೀಡಿದ್ದಾರೆ. ಅದೇ ಹಾದಿಯಲ್ಲಿ ಸಾಗಿದ ಬೊಮ್ಮಾಯಿ, ಪಕ್ಷದ ವರಿಷ್ಠರ ಮೆಚ್ಚುಗೆ ಪಡೆಯುವ ಜತೆಗೆ, ಜನಪರ ಆಡಳಿತ ನೀಡುವ ಮೂಲಕ ‘ಸಿಎಂ’ ಎಂದರೆ ಕಾಮನ್ ಮ್ಯಾನ್ ಎಂದು ನಿರೂಪಿಸಿದ್ದಾರೆ. ಜತೆಗೆ, ತಮ್ಮ ನೇತೃತ್ವದ ಬಿಜೆಪಿ ಸರ್ಕಾರವು ಅನ್ಯ ಸಮುದಾಯಗಳಿಗೆ ಅನ್ಯಾಯ ಆಗದಂತೆ ಲಿಂಗಾಯತ ಸಮುದಾಯವನ್ನು ಗೌರವದಿಂದ ನಡೆಸಿಕೊಳ್ಳುತ್ತಿದೆ ಎಂಬುದನ್ನು ನಿರೂಪಿಸಿದ್ದಾರೆ.

ಲೇಖಕ: ಕನ್ನಡ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಈಜಿಪ್ಟ್‌ನ ವಿಶ್ವಪ್ರಸಿದ್ಧ ಪಿರಮಿಡ್‌ನ ಅಡಿಯಲ್ಲಿ ಪುರಾತನ ಹಿಂದೂ ದೇವಾಲಯವೊಂದು ಪತ್ತೆಯಾಗಿದೆ ಎಂದು ಹೇಳಲಾಗುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ಈ ದೇವಸ್ಥಾನದಲ್ಲಿ ಶಿವಲಿಂಗಗಳಿವೆ. ಇದು ಸೂರ್ಯ ದೇವಾಲಯ’ ಎಂಬುದಾಗಿ ಹೇಳಲಾಗಿದೆ. ‘ಇಡೀ ಜಗತ್ತೇ ಸನಾತನ ಧರ್ಮವಾಗಿದೆ. ಹಿಂದೂ ಆಗಿದ್ದಕ್ಕೆ ಹೆಮ್ಮೆಪಡು’ ಎಂದು ಹೇಳುವ ಪೋಸ್ಟ್‌ಗಳು ಹರಿದಾಡುತ್ತಿವೆ. ‘ದೇವಸ್ಥಾನಗಳ ಮೇಲೆ ಹಾಗೂ ಸುತ್ತಲೂ ಪಿರಮಿಡ್‌ಗಳನ್ನು ಕಟ್ಟಲಾಗಿದೆ’ ಎಂದೂ ಹೇಳಲಾಗಿದೆ. ಆದರೆ ಇದು ಸುಳ್ಳು.

ಪ್ರಸಿದ್ಧ ಗಿಝಾ ಪಿರಮಿಡ್‌ಗೆ 300 ಮೀಟರ್ ದೂರದಲ್ಲಿ ಉತ್ಖನನ ವೇಳೆ ಪತ್ತೆಯಾಗಿದ್ದ, ಆಗಿನ ಕಾಲದ ಪುರೋಹಿತನ ಗೋರಿಯಲ್ಲಿ ಚಿತ್ರಗಳು ಕಂಡುಬಂದಿದ್ದು, ಇದನ್ನೇ ದೇವಾಲಯ ಎಂಬುದಾಗಿ ತಪ್ಪಾಗಿ ಅರ್ಥೈಸಲಾಗಿದೆ ಎಂದು ‘ದಿ ಲಾಜಿಕಲ್ ಇಂಡಿಯನ್’ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. 2014ರಲ್ಲೇ ಪುರೋಹಿತನ ಗೋರಿ ಪತ್ತೆಯಾಗಿತ್ತು ಎಂದು ಹಲವಾರು ವೆಬ್‌ಸೈಟ್‌ಗಳು ಸುದ್ದಿ ಪ್ರಕಟಿಸಿದ್ದವು. ಈ ಗೋರಿಯಲ್ಲಿ ಬಿಡಿಸಲಾಗಿರುವ ಚಿತ್ರಗಳಲ್ಲಿ ಅಂದಿನ ಜನಜೀವನ, ಮೀನುಗಾರಿಕೆ, ಸಮುದ್ರಯಾನವನ್ನು ಬಿಂಬಿಸುವ ದೃಶ್ಯಗಳಿವೆ. ಗೋರಿಯಲ್ಲಿ ಮೂರು ಕೋಣೆಗಳಿವೆ. ಇದು ಹಿಂದೂ ದೇವಸ್ಥಾನ ಎಂಬುದು ಸುಳ್ಳು ಸುದ್ದಿ ಎಂದು ‘ದಿ ಲಾಜಿಕಲ್ ಇಂಡಿಯನ್’ ವರದಿ ಮಾಡಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ನಿಲುಕದ ಆಸೆ

ಮಡಕೆಯನು ಬಡಿದು ಹೊನ್‌ಕೊಡವ ತೋರುವ ಸಖನೆ
ಪಡೆದಿಹೆಯ ರಹದಾರಿಯನು ಹೊನ್ನ ಗಣಿಗೆ ? ||
ಒಡಲಿಗೊಗ್ಗಿದ ನೀರ ಚೆಲ್ಲಿದೊಡದೇಂ ಪಾಲ |
ಕುಡಿವ ಸಂತಸಕೆಣೆಯೆ? – ಮಂಕುತಿಮ್ಮ || 874 ||

ಪದ-ಅರ್ಥ: ಹೊನ್‌ಕೊಡವ = ಬಂಗಾರದ ಕೊಡವನ್ನು, ರಹದಾರಿಯನ್ನು = ಪರವಾನಗಿಯನ್ನು, ಒಡಲಿಗೊಗ್ಗಿದ = ಒಡಲಿಗೆ(ದೇಹಕ್ಕೆ) + ಒಗ್ಗಿದ, ಚೆಲ್ಲಿದೊಡದೇಂ = ಚೆಲ್ಲಿದೊಡೆ + ಅದೇ , ಪಾಲ = ಹಾಲು, ಸಂತಸಕೆಣೆಯೆ = ಸಂತಸಕೆ + ಎಣೆ-ಯೆ(ಸಮವೇ).

ವಾಚ್ಯಾರ್ಥ: ಇದ್ದ ಮಣ್ಣಿನ ಮಡಕೆಯನ್ನು ಒಡೆದು ಚಿನ್ನದ ಕೊಡದ ಆಸೆಯನ್ನು ತೋರುವ ಗೆಳೆಯನೆ, ಹೊನ್ನ ಗಣಿಗೆ ರಹದಾರಿಯನ್ನು ಪಡೆದಿರುವೆಯಾ? ದೇಹಕ್ಕೆ ಒಗ್ಗಿದ ನೀರನ್ನು ಚೆಲ್ಲಿ ಹಾಲು ಕೊಟ್ಟರೂ ನೀರು ಕುಡಿದ ಸಂತಸಕ್ಕೆ ಅದು ಸಮವೆ?

ವಿವರಣೆ: ಆಸೆಯ ಬಲೆ ತುಂಬ ತೆಳುವಾಗಿರುವಂತೆ ಕಂಡರೂ ಅದು ತುಂಬ ಗಟ್ಟಿಯಾದದ್ದು. ಒಮ್ಮೆ ಅದರಲ್ಲಿ ಸಿಕ್ಕಿಬಿಟ್ಟರೆ ತೀರಿತು. ಅದು ಸೆಳೆದು ಕಟ್ಟಿಹಾಕಿ ಶಕ್ತಿಯನ್ನು ಹೀರಿ ಬಿಡುತ್ತದೆ. ಇಂಥ ಆಸೆಯ ಬಲೆಗೆ ತಳ್ಳುವವರೂ ಅನೇಕರಿದ್ದಾರೆ. ಅಮಾಯಕರು, ಅದು ಹೇಗೋ ಬದುಕು ಸಾಗಿಸಿಕೊಂಡು ಹೋಗುತ್ತಿರುವಾಗ ಆಸೆಯ ಮಾರೀಚ ಮೃಗವನ್ನು ಹಿಡಿದುಕೊಂಡು, ಒಂದು ಸಂಭ್ರಮದ, ದೂರದ ಗೋಪುರವನ್ನು ತೋರುತ್ತಾರೆ. ಅದರ ಬೆನ್ನ ಹಿಂದೆ ಬಿದ್ದ ವ್ಯಕ್ತಿ ಹೊಸದನ್ನು ಪಡೆಯುವುದು ಹೋಗಲಿ, ಮೊದಲು ಇದ್ದದ್ದನ್ನು ಕಳೆದುಕೊಳ್ಳುತ್ತಾನೆ. ಒಬ್ಬ ಬಡವ, ಗುಡಿಸಲು ಹಾಕಿಕೊಂಡು ಬಂದದ್ದರಲ್ಲೇ ನೆಮ್ಮದಿಯನ್ನು ಕಾಣುತ್ತ ಬದುಕಿದ್ದ. ಒಬ್ಬ ಸಮಾಜ ಸುಧಾರಕ ಬಂದ. ಇವನ ಕುಲ-ಗೋತ್ರ ವಿಚಾರಿಸಿದ. ನಂತರ ಆಶ್ಚರ್ಯದಿಂದ ಕೇಳಿದ, “ಅಯ್ಯಾ, ನೀನು ಈ ಮುರುಕು ಗುಡಿಸಲಿನಲ್ಲಿ ಏಕಿದ್ದೀಯಾ? ಸರ್ಕಾರ ನಿಮ್ಮಂಥವರಿಗೆಂದೇ ಸುಂದರವಾದ ಸಾಲು ಮನೆಗಳನ್ನು ಕಟ್ಟಿಸಿ ಇಟ್ಟಿದೆ. ಅವುಗಳಲ್ಲಿ ಒಂದನ್ನು ಪಡೆಯಬಾರದೇ?” ಮರುದಿನ ಬಂದು ಈತನನ್ನು ಕರೆದುಕೊಂಡು ಊರ ಹೊರಗೆ ಹೌಸಿಂಗ್ ಬೋರ್ಡನವರು ಕಟ್ಟಿಸಿದ್ದ ಮನೆಗಳನ್ನು ತೋರಿಸಿದ. ಬಡವ್ಯಕ್ತಿ ಕೇಳಿದ, “ಸ್ವಾಮೀ, ನಮಗೆಲ್ಲ ಅಂಥ ಮನೆ ಎಲ್ಲಿ ಸಿಕ್ಕೀತು? ನಮಗೆ ಯಾರು ಕೊಡುತ್ತಾರೆ?”. ಈ ಸುಧಾರಕ ಬಲೆ ಹೆಣೆದ. ಬಡವನಿಗೆ ಜಾತಿಪತ್ರಮಾಡಿಸಿಕೊಂಡು ಬರಲು ಹೇಳಿದ. ತನ್ನ ಹಿಂಬಾಲಕರಾದ ನಾಲ್ಕಾರು ಜನರನ್ನು ಕರೆದುಕೊಂಡು ಹೋಗಿ ಇವರಿಗೆಲ್ಲ ಮನೆ ಸಿಕ್ಕಿದೆ ಎಂದ. ಪಾಪ! ಬಡ ವ್ಯಕ್ತಿ ಆಸೆಯ ಬಲೆಯಲ್ಲಿ ಬಿದ್ದ.ಹೇಗಾದರೂ ಮಾಡಿ ಆ ಮನೆಯನ್ನು ಪಡೆಯಲೇಬೇಕೆಂದು ಹಟತೊಟ್ಟ. ಆ ದಾಖಲೆಗೆ, ಅಲ್ಲಿ ಲಂಚಕ್ಕೆಂದು ಬಡವನಿಂದ ಹಣ ಕಿತ್ತ ಸುಧಾರಕ. ಬಡವ ಸಾಲ ಮಾಡಿ, ಹೆಂಡತಿಯ ಇದ್ದ ಚೂರು-ಪಾರು ಬಂಗಾರವನ್ನು ಮಾರಿ ಕೇಳಿದಷ್ಟು ಹಣ ಕೊಟ್ಟ. ನಂತರ ಸುಧಾರಕ ಕೈಕೊಟ್ಟು ಮಾಯವಾದ. ಬಡವ ಇದ್ದದ್ದನ್ನು ಕಳೆದುಕೊಂಡ. ಕಗ್ಗ ಕೇಳುತ್ತದೆ, ಮಡಕೆಯನ್ನು ಒಡೆದು ಹಾಕಿ ಬಂಗಾರದ ಕೊಡದ ಆಸೆಯನ್ನು ತೋರುವವನೇ, ನಿನಗೆ ಬಂಗಾರದ ಗಣಿಗೆ ಹೋಗಿ, ಬೇಕಾದಷ್ಟು ಬಂಗಾರ ತರುವ ರಹದಾರಿ ದೊರಕಿದೆಯೇ? ಒಬ್ಬನ ಹತ್ತಿರ ಮಣ್ಣಿನ ಗಡಿಗೆ ಇದೆ. ಅದರ ನೀರು ದೇಹಕ್ಕೆ ಒಗ್ಗಿ ಹೋಗಿದೆ. ಅದರ ನೀರು ಸಂತೋಷ, ತೃಪ್ತಿಯನ್ನು ನೀಡುತ್ತದೆ. ಅದನ್ನೆಲ್ಲ ಚೆಲ್ಲಿಸಿ ಹಾಲುಕುಡಿ ಎಂದರೆ ಸಂತೋಷವಾದೀತೇ?. ಆದ್ದರಿಂದ ಯಾರಿಗೂ, ನಿಲುಕಲಾರದ ಸ್ವರ್ಗದ ಆಸೆ ತೋರಿಸಿ, ಅವರು ಸಂತೋಷವಾಗಿದ್ದ ಭೂಮಿಯ ತೃಪ್ತಿಯನ್ನು ಕಳೆಯುವುದು ಬೇಡ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮೇ 2, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ದ್ವಾದಶಿ ಗಂ. 23-18 ನಕ್ಷತ್ರ: ಉತ್ತರಫಲ್ಗುಣಿ ಗಂ. 19.41 ಯೋಗ: ವ್ಯಾಘಾತ ಗಂ. 11-49, ಕರಣ: ಬವ ಗಂ. 10-49 ನಂತರ ಬಾಲವ ಗಂ. 23- 18, ಮೇಷ ಮಾಸದ 18 ನೇ ದಿನ, ಮಳೆನಕ್ಷತ್ರ: ಭರಣಿ

2. ರಾಹುಕಾಲ : ಮಧ್ಯಾಹ್ನ 03-00 – 04-30, ಸೂರ್ಯೋದಯ : 06-12 ಸೂರ್ಯಾಸ್ತ : 06-43, ಮುಸ್ಲಿಂ ದಿನಾಂಕ : 11 ಶವ್ವಾಲ್ ದಿನ ವಿಶೇಷ : ಮೀನಾಕ್ಷಿ ಕಲ್ಯಾಣಂ. ಅದೃಷ್ಟ ಸಂಖ್ಯೆ : 1, 7

ಮೇಷ: ಬಂಧುಗಳು ಮತ್ತು ಸ್ನೇಹಿತರಿಂದ ಮಾರ್ಗದರ್ಶನಕ್ಕೇನು ಕೊರತೆ ಇರದು. ನಿಮ್ಮ ತೀವ್ರ ಪ್ರತಿಸ್ಪರ್ಧಿಯನ್ನು ಭೇಟಿ ಮಾಡುವ ಅವಕಾಶ ಬರಲಿದೆ. ಆಂಜನೇಯ ಸ್ವಾಮಿಯ ದರ್ಶನವು ಮನಸ್ಸಿಗೆ ಧೈರ್ಯ ತರುವುದು.

ವೃಷಭ: ಸ್ಟೇಷನರಿ ಹೋಲ್‌ಸೇಲ್ ವ್ಯಾಪಾರಿಗಳು ವ್ಯಾಪಾರ ವಿಸ್ತರಿಸುವ ಬಗ್ಗೆ ಮಾತುಕತೆ ನಡೆಸಿ. ವೃತ್ತಿಯಲ್ಲಿ ಬದಲಾವಣೆ ಮಾಡುವವರು ಲಕ್ಷ್ಮಿ ಸಮೇತನಾದ ಶ್ರೀನಿವಾಸ ದೇವರ ಸೇವೆಯನ್ನು ಮಾಡುವುದರಿಂದ ಅಭಿವೃದ್ಧಿ ಕಾಣಬಹುದು.

ಮಿಥುನ: ಕಟ್ಟಡ ನಿರ್ಮಾಣದ ಕಾರ್ಮಿಕರಿಗೆ ಹೆಚ್ಚಿನ ಸಂಪಾದನೆಯ ಜತೆಯಲ್ಲಿ ಉಡುಗೊರೆ ಸಿಗುವ ಯೋಗ ಇರುವುದು. ಕರಕುಶಲ ವಸ್ತುಗಳ ತಯಾರಕರು ತಮ್ಮ ಉತ್ತಮವಾದ ಕೆಲಸಗಳಿಂದ ಆದಾಯ ಹೆಚ್ಚಿಸಿಕೊಳ್ಳಬಹುದು.

ಕರ್ಕಾಟಕ: ಒಡಹುಟ್ಟಿದವರ ಸಹಾಯ ಸಹಕಾರದಿಂದ ಮಾನಸಿಕ ನೆಮ್ಮದಿ ಹಾಗೂ ಸಂಸಾರದಲ್ಲಿ ಸಮತೋಲನ ಪಡೆಯುವಿರಿ. ಮನೋಭಿಲಾಷೆಗಳನ್ನು ವ್ಯಕ್ತ ಪಡಿಸಲು ಹಿಂಜರಿಯಬೇಡಿ. ಮಕ್ಕಳ ಆರೋಗ್ಯದ ಕಡೆ ಗಮನ ಹರಿಸಿ.

ಸಿಂಹ: ಸುಖ-ದುಃಖ, ಲಾಭ-ನಷ್ಟಗಳೆರಡು ಸಮಾನವಾಗಿದ್ದರೂ ಪ್ರತಿಷ್ಠಿತ ಜನರ ಸಹಕಾರದಿಂದ ಸುಧಾರಣೆ ಕಂಡುಬರಲಿದೆ. ರೈತರಿಗೆ ಹೆಚ್ಚಿನ ಲಾಭಾಂಶ ಅದರಲ್ಲೂ ತೆಂಗಿನಕಾಯಿ ಬೆಳೆಗಾರರಿಗೆ ತಮ್ಮ ಬೆಳೆಗೆ ಬೆಲೆ ಕಂಡು ಬರುತ್ತದೆ.

ಕನ್ಯಾ: ಅಪರೂಪದ ಅತಿಥಿಯ ಆಗಮನ ಸಂತೋಷ ತರಲಿದೆ. ನಂಬಿಕೆಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ. ಪೂರ್ವನಿಯೋಜಿತ ಕೆಲಸ ಕಾರ್ಯಗಳು ಸರ್ವರ ಸಹಾಯದಿಂದ ಹಂತ ಹಂತವಾಗಿ ಪೂರ್ಣಗೊಳ್ಳುವುದು.

ತುಲಾ: ವ್ಯಕ್ತಿತ್ವವು ಇತರರನ್ನು ಈ ದಿನ ವಿಶೇಷವಾಗಿ ಆಕರ್ಷಿಸುವುದು. ಮಾನಸಿಕ ಒತ್ತಡ ಹೆಚ್ಚಾಗಿರುವುದು ಹಾಗೆಯೇ ತಾಂತ್ರಿಕವಾಗಿ ಯಾವುದೇ ತಪ್ಪುಗಳು ಆಗದಂತೆ ಎಚ್ಚರವಹಿಸಿ.

ವೃಶ್ಚಿಕ: ಮೇಲಧಿಕಾರಿಗಳು ನಿರ್ಧಾರಗಳನ್ನು ಕೈಗೊಳ್ಳಲು ಇಚ್ಛೆಗೆ ಬಿಡುವರು. ಸ್ನೇಹಿತರ ಮಧ್ಯಸ್ಥಿಕೆಯಿಂದ ಸಮಸ್ಯೆ ಪರಿಹಾರವಾಗುವುದು. ಕುಟುಂಬ ನಿರ್ವಹಣೆಗೆ ಒಡಹುಟ್ಟಿದವರಿಂದ ಕೊಡುಗೆ ಅಪಾರವಾಗಿರಲಿದೆ.

ಧನು: ವ್ಯವಹಾರದಲ್ಲಿ ತಪ್ಪುಗಳಾಗದಂತೆ ಜಾಗರೂಕತೆ ವಹಿಸಿರಿ. ಚಿಂತಾಕ್ರಾಂತರಾದಾಗ ನಿಮ್ಮ ಸುಖ-ದುಃಖಗಳನ್ನು ಹಂಚಿಕೊಳ್ಳುವ ಮಿತ್ರರನ್ನು ಹೊಂದುವಿರಿ. ಹಣಕಾಸಿನ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ದೊರೆಯಲಿದೆ.

ಮಕರ: ದೂಷಿಸಿದ ವ್ಯಕ್ತಿಗಳಿಗೆ ನಿಮ್ಮ ಅಭಿವೃದ್ಧಿಯನ್ನು ನೋಡಿ ಸಹಿಸಲಾಗದಂತಾಗುವುದು. ತಂದೆ ತಾಯಿಯ ಆರೋಗ್ಯದಲ್ಲಿ ಸಣ್ಣ-ಪುಟ್ಟ ಬದಲಾವಣೆಯಾಗಲಿದೆ. ಧನಾತ್ಮಕ ಮನೋಭಾವವೇ ಸೋಲಿಗೆ ಕಾರಣವಾಗಲಿದೆ.

ಕುಂಭ: ಕೈಗೊಂಡ ಕೆಲಸಗಳು ಭಾಗಶಃ ಆರ್ಥಿಕ ದುಸ್ಥಿತಿಯಿಂದಾಗಿ ವಿಳಂಬವಾಗುವ ರೀತಿಯಲ್ಲಿ ಕಾಣಲಿದೆ. ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನು ಬಿಟ್ಟುಬಿಡಿ. ಆತ್ಮವಿಶ್ವಾಸ ರೂಢಿಸಿಕೊಂಡು ಪರಿಶ್ರಮದತ್ತ ಗಮನಹರಿಸಿ.

ಮೀನ: ಮಹತ್ವದ ನಿರ್ಧಾರ ಕೈಗೊಳ್ಳಲು ಚಂಚಲ ಮನಸ್ಸು ಅಡ್ಡಿ ಮಾಡುವುದು. ನಿಮ್ಮ ಕೆಲಸಗಳು ಸುಲಭವಾಗಿಸಲು ಸ್ನೇಹಿತರೊಬ್ಬರು ನೆರವಾಗಲಿದ್ದಾರೆ. ವಿವಾಹ ವಯಸ್ಕ ಮಗಳಿಗೆ ಅನುರೂಪ ವರ ದೊರೆತು ನೆಮ್ಮದಿ ಸಿಗಲಿದೆ.

ಪದಬಂಧ 5306

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಾಲೆ ಧರಿಸಿಯೇ ಸುತ್ತಾಡುವ ಸ್ವಭಾವದವನು (4)
3.ಹೀಗೆ ವಾಸನೆ ನೋಡು (4)
5.ಜನನಿ ನುಡಿದಿರುವ ಸತ್ಯ (2)
7.ಈತ ತಿರುಪೆ ಬೇಡುವವನು (3)
8.ಹಂತಕನೇರಿದ ಮೆಟ್ಟಿಲು (2)
9.ಗಂಜಲದಲ್ಲಿರುವ ನೀರು (2)
10.ಸುರನ ಹತ್ತಿರವೇ ರಾಕ್ಷಸನಿದ್ದಾನಲ್ಲಾ! (3)
12.ಕರ್ತಾರನ ಕೈಯಿದು (2)
14.ಮನುಷ್ಯನ ಆಕಾರ (4)
15.ಒಬ್ಬೊಬ್ಬರಿಗೆ ಸಂಬಂಧಪಟ್ಟದ್ದು (4)

ಮೇಲಿಂದ ಕೆಳಕ್ಕೆ

1.ಸ್ಮರಣ ಶಕ್ತಿ ಚನ್ನಾಗಿರುವವನು (4)
2.ಕನ್ನಡಿಗ ಪಡೆದುಕೊಂಡಿರುವ ರಿಬೇಟ್ (4)
3.ಪರಲೋಕಕ್ಕೆ ಸಂಬಂಧಿಸಿದ್ದು (4)
4.ಚನ್ನಾಗಿ ಕಾಪಾಡಿದುದು (4)
6.ಜಲದೊಳಗಿರುವ ಕ್ಲಿಷ್ಟತೆ (3)
8.ಆತಂಕದಿಂದಿರುವ ಕೊಲೆಗಾರ (3)
9.ದಪ್ಪ ನೂಲಿರುವ ನೆಲ ಹಾಸು (4)
10.ಬುದ್ಧಿ ಇಟ್ಟುಕೊಂಡೇ ನೀಡಿದ ಒಪ್ಪಿಗೆ (4)
11.ರಾತ್ರಿಯ ಒಡೆಯನಿವನು (4)
13.ಬೆಲೆಬಾಳುವ ಮಣಿಗಳನ್ನೊಳಗೊಂಡಿರುವ ಮುದ್ರ (4)



5305ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಭಾರೆ 5.ಬಡನಡು
7.ಪಲ್ಲವಿ 9.ಮಸಣ
10.ಜ್ಞಾತಿಕಲಹ
11.ಪಾವನ 12.ತ್ವರಿತ
14.ಪರಿತೋಷ
17.ಹಸೆಮಣೆ

ಮೇಲಿಂದ ಕೆಳಕ್ಕೆ:
1.ಪರಿತಾಪ 2.ರೆಪ್ಪೆ
3.ಬಿಂಬ 4.ಕಡುಜಾಣ
6.ಏಕೀಕರಣ 8.ವಿಜ್ಞಾನ
9.ಮಹತ್ವ 11.ಪಾರುಪತ್ಯ
13.ತವದೊಣೆ 15.ಷಷ್ಠಿ
16.ದಾಹ

ಸುಡೊಕು 5692

2		9			7	1		4
				3			5	
5		7	4		6	2		3
					5			1
	5	1		8			2	7
3			9					
		2		1			9	
			7		8			2
	8			2		4		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5691 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಎ.ಐ. ವಿಭಾಗದಲ್ಲಿ ಹೆಚ್ಚು ಉದ್ಯೋಗ ಸೃಷ್ಟಿ: ವರದಿ

ನವದೆಹಲಿ (ಪಿಟಿಐ): ಭಾರತದಲ್ಲಿ ಮುಂದಿನ ದಿನಗಳಲ್ಲಿ ಹೊಸದಾಗಿ ಸೃಷ್ಟಿಯಾಗಲಿರುವ ಉದ್ಯೋಗಗಳಲ್ಲಿ ಹೆಚ್ಚಿನವು ಕೃತಕ ಬುದ್ಧಿಮತ್ತೆ (ಎ.ಐ) ಮತ್ತು ಮೆಷಿನ್ ಲರ್ನಿಂಗ್ ವಲಯದಲ್ಲಿ ಇರಲಿವೆ ಎಂದು ವಿಶ್ವ ಆರ್ಥಿಕ ವೇದಿಕೆ ಸಿದ್ಧಪಡಿಸಿರುವ ವರದಿಯೊಂದು ಹೇಳಿದೆ.

ಮುಂದಿನ ಐದು ವರ್ಷಗಳಲ್ಲಿ ಭಾರತದ ಉದ್ಯೋಗ ಮಾರುಕಟ್ಟೆಯಲ್ಲಿ ಹೊಸ ಉದ್ಯೋಗಗಳು ಸೃಷ್ಟಿಯಾಗುವ ಹಾಗೂ ಹಳೆಯ ಕೆಲವು ಉದ್ಯೋಗಗಳು ನಿರುಪಯುಕ್ತವಾಗುವ ಪ್ರಮಾಣವು ಶೇಕಡ 22ರಷ್ಟು ಇರಲಿದೆ ಎಂದು ವರದಿ ಅಂದಾಜಿಸಿದೆ.

2027ಕ್ಕೆ ಮೊದಲು ವಿಶ್ವದ ಉದ್ಯೋಗ ಮಾರುಕಟ್ಟೆಯಲ್ಲಿ 6.9 ಕೋಟಿ ಉದ್ಯೋಗಗಳು ಸೃಷ್ಟಿಯಾಗಲಿವೆ, 8.3 ಕೋಟಿ ಉದ್ಯೋಗಗಳು ಕಣ್ಮರೆಯಾಗಲಿವೆ ಎಂದು ವರದಿಯು ಅಂದಾಜು ಮಾಡಿದೆ. ಅಂದರೆ ಒಟ್ಟು ಉದ್ಯೋಗ ಸಂಖ್ಯೆಯು ಜಗತ್ತಿನಾದ್ಯಂತ 1.4 ಕೋಟಿಯಷ್ಟು ಕಡಿಮೆ ಆಗಲಿದೆ.

ಈ ವರದಿ ಸಿದ್ಧಪಡಿಸಲು ಒಟ್ಟು 803 ಕಂಪನಿಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಶೇಕಡ 50ರಷ್ಟು ಕಂಪನಿಗಳು ಕೃತಕ ಬುದ್ಧಿಮತ್ತೆಯಿಂದಾಗಿ ಉದ್ಯೋಗ ಸೃಷ್ಟಿ ಆಗಲಿದೆ ಎಂದು ಭಾವಿಸಿವೆ. ಆದರೆ ಶೇ 25ರಷ್ಟು ಕಂಪನಿಗಳು, ಕೃತಕ ಬುದ್ಧಿಮತ್ತೆಯು ಉದ್ಯೋಗ ನಷ್ಟಕ್ಕೆ ಕಾರಣವಾಗಲಿದೆ ಎಂದು ಅಂದಾಜು ಮಾಡಿವೆ.

ಮುಂಬೈ ಧಾರಣೆ

ಶೇಂಗಾ

01-05-2023

ಜಾವಾ 70/80(ಹೊಸ)	11000-11050
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	11800-11900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630(1630
ಒಂದು ವಾರದ ಡೆಲಿವರಿ	1625(1625)
ಸೋಯಾ ಕಚ್ಚಾ	850(852)
ಪಾಮ್ ವಾರದ ಡೆಲಿವರಿ	818(923)
ಸೂರ್ಯಕಾಂತಿ ಎಣ್ಣೆ ಕಚ್ಚಾ	895(900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60450(60150)
ಬೆಳ್ಳಿ ಕೆ.ಜಿ 75500(74150)

ಆವರಣದಲ್ಲಿ ಶನಿವಾರದ ಧಾರಣೆ

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620(1620)
ಸೋಯಾ (ರಿಫೈನ್ಡ್)	₹960(965)
ಸೂರ್ಯಕಾಂತಿ (ರಿಫೈನ್ಡ್)	₹1015(1020)
ಪಾಮೋಲಿನ್	₹820(925)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹460

ತಯಾರಿಕಾ ವಲಯ ಮತ್ತಷ್ಟು ಚುರುಕು

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು ಏಪ್ರಿಲ್ ತಿಂಗಳಲ್ಲಿ ಮತ್ತಷ್ಟು ಚುರುಕು ಪಡೆದುಕೊಂಡಿವೆ. ಹೊಸ ವಹಿವಾಟುಗಳಲ್ಲಿ ಬೆಳವಣಿಗೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ವಹಿವಾಟು ಸುಧಾರಣೆ ಮತ್ತು ಪೂರೈಕೆ ವ್ಯವಸ್ಥೆಯಲ್ಲಿ ಸುಧಾರಣೆ ಕಂಡುಬಂದಿರುವುದು ಇದಕ್ಕೆ ಕಾರಣ.



ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) ಮಾರ್ಚ್‌ನಲ್ಲಿ 56.4 ಇದ್ದುದು, ಏಪ್ರಿಲ್ ತಿಂಗಳಲ್ಲಿ 57.2ಕ್ಕೆ ತಲುಪಿದೆ. ಏಪ್ರಿಲ್‌ನಲ್ಲಿ ದಾಖಲಾಗಿರುವುದು ನಾಲ್ಕು ತಿಂಗಳ ಗರಿಷ್ಠ ಮಟ್ಟ.

ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು, 50ಕ್ಕಿಂತ ಕಡಿಮೆ ಇದ್ದರೆ ಅದನ್ನು ಕುಸಿತ ಎಂದು ಅರ್ಥೈಸಲಾಗುತ್ತದೆ.

'ಬೆಲೆ ಹೆಚ್ಚಳದ ಒತ್ತಡವು ಜಾಸ್ತಿ ಇಲ್ಲದಿದ್ದುದು ಕಂಪನಿಗಳ ಪಾಲಿಗೆ ಅನುಕೂಲಕರ ಆಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರಾಟ ಹೆಚ್ಚಾಗಿದ್ದುದು, ಪೂರೈಕೆ ವ್ಯವಸ್ಥೆಯಲ್ಲಿನ ಸುಧಾರಣೆ ಕೂಡ ಕಂಪನಿಗಳಿಗೆ ನೆರವಾಗಿವೆ' ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಹೇಳಿದ್ದಾರೆ.

'ಭಾರತದ ತಯಾರಿಕಾ ವಲಯದ ಪಾಲಿಗೆ ಅವಕಾಶಗಳು ವಿಪುಲವಾಗಿವೆ ಎಂದು ಅನಿಸುತ್ತಿದೆ. ತಯಾರಿಕಾ ವಲಯವು ಉದ್ಯೋಗ ಸೃಷ್ಟಿಯ ಮೂಲಕ ಸಾಮರ್ಥ್ಯ ಹೆಚ್ಚಿಸಿಕೊಂಡಿದೆ. ಕಚ್ಚಾ ವಸ್ತುಗಳ ಖರೀದಿ ಹೆಚ್ಚಾಗಿದೆ' ಎಂದು ಲಿಮಾ ಅವರು ತಿಳಿಸಿದ್ದಾರೆ.

ಫಸ್ಟ್ ರಿಪಬ್ಲಿಕ್ ಬ್ಯಾಂಕ್ ಖರೀದಿಸಿದ ಜೆಪಿಮಾರ್ಗನ್ ಚೇಸ್

ನ್ಯೂಯಾರ್ಕ್ (ಎಪಿ): ಅಮೆರಿಕ ಫಸ್ಟ್ ರಿಪಬ್ಲಿಕ್ ಬ್ಯಾಂಕ್‌ನಲ್ಲಿ ಇರುವ ಅಷ್ಟೂ ಠೇವಣಿಗಳು ಹಾಗೂ ಆ ಬ್ಯಾಂಕ್ ನೀಡಿರುವ ಬಹುತೇಕ ಸಾಲಗಳನ್ನು ಜೆಪಿಮಾರ್ಗನ್ ಚೇಸ್ ಬ್ಯಾಂಕ್ ಖರೀದಿಸಿದೆ. ಫಸ್ಟ್ ರಿಪಬ್ಲಿಕ್ ಬ್ಯಾಂಕ್ ಈಚೆಗೆ ದಿವಾಳಿಯಾಗಿತ್ತು.

ಎರಡು ತಿಂಗಳ ಅವಧಿಯಲ್ಲಿ ಅಮೆರಿಕದಲ್ಲಿ ದಿವಾಳಿಯೆದ್ದಿರುವ ಮೂರನೆಯ ಮಧ್ಯಮಗಾತ್ರದ ಬ್ಯಾಂಕ್ ಇದು.

ಸಿಲಿಕಾನ್ ವ್ಯಾಲಿ ಬ್ಯಾಂಕ್ ಮತ್ತು ಸಿಗ್ನೇಚರ್ ಬ್ಯಾಂಕ್ ದಿವಾಳಿಯೆದ್ದ ನಂತರದಲ್ಲಿ ಫಸ್ಟ್ ರಿಪಬ್ಲಿಕ್ ಬ್ಯಾಂಕ್ ಕೂಡ ಸಂಕಷ್ಟಕ್ಕೆ ಸಿಲುಕಿತ್ತು.

ವಾಣಿಜ್ಯ ಬಳಕೆ ಎಲ್‌ಪಿಜಿ ಬೆಲೆ ಇಳಿಕೆ

ನವದೆಹಲಿ (ಪಿಟಿಐ): 19 ಕೆ.ಜಿ ತೂಕದ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ದರವು ಸೋಮವಾರ ಪ್ರತಿ ಸಿಲಿಂಡರ್‌ಗೆ ₹ 171.5ರಷ್ಟು ಇಳಿಕೆಯಾಗಿದೆ. ವಿಮಾನ ಇಂಧನ (ಎಟಿಎಫ್) ದರವನ್ನು ಶೇಕಡ 2.45ರಷ್ಟು ಕಡಿಮೆ ಮಾಡಲಾಗಿದೆ.

ರಾಜಧಾನಿ ದೆಹಲಿಯಲ್ಲಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ದರವು ಈಗ ₹ 1,856.5 ಆಗಿದೆ. ಬೆಂಗಳೂರಿನಲ್ಲಿ ಇದರ ದರ ₹ 1,936 ಆಗಿದೆ. ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ದರವು ಸತತ ಎರಡು ತಿಂಗಳುಗಳಿಂದ ಇಳಿಕೆಯಾಗಿದೆ.

ಏಪ್ರಿಲ್ 1ರಂದು ಇದರ ದರವನ್ನು ಸಿಲಿಂಡರ್‌ಗೆ ₹ 91.5ರಷ್ಟು ಕಡಿಮೆ ಮಾಡಲಾಗಿತ್ತು. ಇದಕ್ಕೂ ಮೊದಲು, ಮಾರ್ಚ್ 1ರಂದು ದರವನ್ನು ₹ 350.5ರಷ್ಟು ಹೆಚ್ಚಿಸಲಾಗಿತ್ತು. ಮನೆಬಳಕೆಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಸೋಮವಾರ ಬದಲಾವಣೆ ಆಗಿಲ್ಲ.

ಕಚ್ಚಾ ತೈಲ ಉತ್ಪಾದನೆ ಕಡಿಮೆ ಮಾಡುವುದಾಗಿ ಪೆಟ್ರೋಲಿಯಂ ರಫ್ತುದಾರ ದೇಶಗಳ ಸಂಘಟನೆ (ಒಪೆಕ್+) ಪ್ರಕಟಣೆ ಹೊರಡಿಸಿದ ನಂತರದಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏರಿಕೆ ಕಂಡಿದ್ದ ಕಚ್ಚಾ ತೈಲದ ಬೆಲೆಯು ಆರ್ಥಿಕ ಹಿಂಜರಿತ ಭೀತಿಯ ಕಾರಣದಿಂದಾಗಿ ಮತ್ತೆ ಕುಸಿದಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ 79.62 ಅಮೆರಿಕನ್ ಡಾಲರ್‌ಗೆ ಇಳಿಕೆಯಾಗಿದೆ. ಏಪ್ರಿಲ್ 2ರಂದು ಇದರ ಬೆಲೆಯು 88 ಡಾಲರ್ ಆಗಿತ್ತು.

ವಿಶ್ವದಾದ್ಯಂತ ಕಾರ್ಮಿಕರ ರ್‍ಯಾಲಿ

ಸೋಲ್ (ಎಪಿ): ಹೆಚ್ಚಿನ ವೇತನ, ಕಡಿಮೆ ಕೆಲಸದ ಸಮಯ ಮತ್ತು ಇತರೆ ಸೌಲಭ್ಯಕ್ಕಾಗಿ ಒತ್ತಾಯಿಸಿ ವಿಶ್ವದಾದ್ಯಂತ ಕಾರ್ಮಿಕರು ಮತ್ತು ಕಾರ್ಯಕರ್ತರು ಸೋಮವಾರ ರ್‍ಯಾಲಿ ನಡೆಸುವುದರೊಂದಿಗೆ ಮೇ ದಿನ ಆಚರಿಸಿದರು.

ಫ್ರಾನ್ಸ್‌ನಲ್ಲಿ ನಿವೃತ್ತಿ ವಯಸ್ಸನ್ನು 62 ರಿಂದ 64 ಕ್ಕೆ ಹೆಚ್ಚಿಸುವ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರನ್ ಅವರ ಇತ್ತೀಚಿನ ಕ್ರಮವನ್ನು ವಿರೋಧಿಸಿ ಒಕ್ಕೂಟಗಳು ಬೃಹತ್ ಪ್ರದರ್ಶನಗಳನ್ನು ಯೋಜಿಸಿವೆ.

ನೂತನ ಪಿಂಚಣಿ ಯೋಜನೆಯು ಕಾರ್ಮಿಕ ವಿರೋಧಿಯಾಗಿದೆ ಮತ್ತು ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ಹಾಳುಗೆಡವುತ್ತದೆ ಎಂಬುದು ಪ್ರತಿಭಟನಕಾರರ ಆಕ್ಷೇಪ.

ಮೇ 1 ರಂದು ಅನೇಕ ದೇಶಗಳಲ್ಲಿ ರ್‍ಯಾಲಿ, ಮೆರವಣಿಗೆ ಮತ್ತು ಇತರ ಕಾರ್ಯಕ್ರಮಗಳೊಂದಿಗೆ ಕಾರ್ಮಿಕರ ಹಕ್ಕುಗಳ ದಿನವಾಗಿ ಆಚರಿಸಲಾಗುತ್ತದೆ. ಕೋವಿಡ್ -19 ನಿರ್ಬಂಧ ಸಡಿಲಿಸಿದ್ದ ಪರಿಣಾಮ ಈ ವರ್ಷ ಹೆಚ್ಚಿನ ಕಾರ್ಯಕ್ರಮಗಳು ನಡೆದಿವೆ ಮತ್ತು ಕಾರ್ಮಿಕರ ಜೀವನ ಮಟ್ಟ ಸುಧಾರಿಸಲು ಸರ್ಕಾರಗಳು ಹೆಚ್ಚಿನದನ್ನು ಮಾಡಬೇಕು ಎಂದು ಸಂಘಟನೆಗಳು ಆಗ್ರಹಿಸಿವೆ.

ಹಿಂದಿನ ವರ್ಷಗಳಂತೆ, ಟರ್ಕಿಯಲ್ಲಿ ಪೊಲೀಸರು ಪ್ರತಿಭಟನಕಾರರ ಗುಂಪನ್ನು ಇಸ್ತಾಂಬುಲ್‌ನ ಮುಖ್ಯ ಚೌಕವಾದ ತಕ್ಸಿಮ್ ತಲುಪದಂತೆ ತಡೆದರು. ಪ್ರತಿಭಟನಕಾರರನ್ನು ವಶಕ್ಕೆ ತೆಗೆದುಕೊಂಡರು ಎಂದು ಸ್ವತಂತ್ರ ದೂರದರ್ಶನ ಕೇಂದ್ರ ಸೋಜ್ಕು ವರದಿ ಮಾಡಿದೆ.

ಸುದ್ದಿ 2 ನಿಮಿಷ

ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಶ್ರೀಲಂಕಾಕ್ಕೆ

ಕೊಲಂಬೊ (ಪಿಟಿಐ): ಭಾರತೀಯ ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್.ಚೌಧರಿ ಅವರು ಶ್ರೀಲಂಕಾಗೆ ನಾಲ್ಕು ದಿನಗಳ ಅಧಿಕೃತ ಭೇಟಿ ಆರಂಭಿಸಿದ್ದು, ಸೋಮವಾರ ಇಲ್ಲಿಗೆ ಬಂದಿಳಿದರು.

ಭೇಟಿ ವೇಳೆ ಅವರು ದೇಶದ ಪ್ರಮುಖ ರಾಜಕಾರಣಿಗಳು, ಸೇನಾ ನಾಯಕರನ್ನು ಭೇಟಿಯಾಗಿ ದ್ವಿಪಕ್ಷೀಯ ರಕ್ಷಣಾ ಸಹಕಾರ ವೃದ್ಧಿ ಬಗ್ಗೆ ಚರ್ಚೆ ನಡೆಸಲಿದ್ದಾರೆ ಎಂದು ಭಾರತ ಹೈಕಮಿಷನ್ ಟ್ವೀಟ್ ಮಾಡಿದೆ.

ದ್ವೀಪರಾಷ್ಟ್ರದ ಮೇಲೆ ಚೀನಾ ತನ್ನ ಪ್ರಭಾವ ಬೀರಲು ಯತ್ನಿಸುತ್ತಿರುವ ನಡುವೆಯೇ ಚೌಧರಿ ಅವರು ಶ್ರೀಲಂಕಾದ ಪ್ರಮುಖ ನಾಯಕರೊಂದಿಗೆ ಚರ್ಚೆ ನಡೆಸಲಿದ್ದಾರೆ.

ಭಾರತದ ಘೋಷಣೆಗೆ ಜಿ7 ಉದ್ಯಮ ಪ್ರತಿನಿಧಿಗಳ ಬೆಂಬಲ

ವಾಷಿಂಗ್ಟನ್ (ಪಿಟಿಐ): ಜಿ7 ರಾಷ್ಟ್ರಗಳ ಪ್ರಮುಖ ಉದ್ಯಮಗಳ ಪ್ರತಿನಿಧಿಗಳು ಭಾರತ ಅಧ್ಯಕ್ಷತೆಯ ಜಿ20 ಶೃಂಗದ ಪ್ರಮುಖ ಆಶಯ ಘೋಷಣೆಯಾದ ವಸುದೈವ ಕುಟುಂಬಕಂಗೆ 'ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ) ಬೆಂಬಲ ಸೂಚಿಸಿದ್ದಾರೆ. ಜಾಗತಿಕ ಪರಿಸರ ರಕ್ಷಣೆಗೆ ಹೊಂದಿಕೆಯಾಗುವಂಥ ಸುಸ್ಥಿರ ಅಭಿವೃದ್ಧಿ ಸಾಧಿಸಲು ಈ ಆಶಯವು ಅತ್ಯಗತ್ಯ ಎಂದು ಅವರು ಹೇಳಿದ್ದಾರೆ.

ಈ ತಿಂಗಳ ಕೊನೆಯಲ್ಲಿ ಜಿ7 ಶೃಂಗಸಭೆ ನಡೆಯಲಿದೆ. ಅದಕ್ಕೆ ಮುಂಚಿತವಾಗಿ ಏಪ್ರಿಲ್ 19, 20ರಂದು ಜಪಾನ್, ಇಟಲಿ, ಕೆನಡ, ಫ್ರಾನ್ಸ್, ಅಮೆರಿಕ, ಜರ್ಮನಿ ಮತ್ತು ಯುರೋಪ್ ಒಕ್ಕೂಟಗಳ ಒಕ್ಕೂಟಗಳ ವಾಣಿಜ್ಯೋದ್ಯಮ ಪ್ರತಿನಿಧಿಗಳ ಬಿ7 ಟೋಕಿಯೊ ಸಮ್ಮೇಳನ ನಡೆದಿತ್ತು. ಈ ವೇಳೆ ಜಿ20 ಶೃಂಗದ ಆಶಯ ಘೋಷಣೆಗೆ ಪ್ರತಿನಿಧಿಗಳು ಬೆಂಬಲ ನೀಡಿದ್ದಾರೆ.

ಈ ಸಾಲಿನ ಜಿ20 ಶೃಂಗದ ಅಧ್ಯಕ್ಷತೆಯನ್ನು ಭಾರತ ವಹಿಸಿಕೊಂಡಿದೆ. ಶೃಂಗದ ಪ್ರಮುಖ ಆಶಯವಾದ 'ವಸುದೈವ ಕುಟುಂಬಕಂ'ಅನ್ನು (ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ) ಪ್ರಧಾನಿ ನರೇಂದ್ರ ಮೋದಿ ಅವರ ಕಳೆದ ವರ್ಷವೇ ಅನಾವರಣಗೊಳಿಸಿದ್ದರು.

ಮಳೆಯ ಸಿಂಚನ

ನವದೆಹಲಿಯ ಕರ್ತವ್ಯ ಪಥಕ್ಕೆ ಮಳೆಯ ನಡುವೆಯೂ ಯುವತಿಯರು ಭೇಟಿ ನೀಡಿ, ಸಂಭ್ರಮಿಸಿದರು –ಪಿಟಿಐ ಚಿತ್ರ

'ಮಾತುಕತೆ ವಿಫಲವಾದರೆ ಇಮ್ರಾನ್ ಖಾನ್‌ಗೆ ನಷ್ಟ'

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಸಂಸತ್ತನ್ನು ಮೇ 14ರ ಒಳಗೆ ವಿಸರ್ಜಿಸಬೇಕು ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ, ಪಾಕಿಸ್ತಾನ ತಹ್ರೀಕ್ ಇನ್ಸಾಫ್ (ಪಿಟಿಐ) ಪಕ್ಷದ ಮುಖ್ಯಸ್ಥ ಇಮ್ರಾನ್ ಖಾನ್ ಅವರು ನೀಡಿರುವ ಪ್ರಸ್ತಾವನೆಯನ್ನು ಪಾಕಿಸ್ತಾನದ ಆಡಳಿತಾರೂಢ ಮೈತ್ರಿಕೂಟ ತಿರಸ್ಕರಿಸಿದೆ.

ಪಾಕಿಸ್ತಾನ ಮುಸ್ಲಿಂ ಲೀಗ್ (ನವಾಜ್) ನೇತೃತ್ವದ ಆಡಳಿತಾರೂಢ ಮೈತ್ರಿಕೂಟ ಮತ್ತು ಪಿಟಿಐ ನಡುವಿನ ಮೂರನೇ ಸುತ್ತಿನ ಮಾತುಕತೆಯನ್ನು ಮಂಗಳವಾರ ನಿಗದಿಪಡಿಸಲಾಗಿದೆ. ಸಂಸತ್ತನ್ನು ವಿಸರ್ಜಿಸದಿದ್ದರೆ ಸಂಧಾನ ಯಶಸ್ವಿಯಾಗುವುದು ಅಸಾಧ್ಯ ಎಂದು ಇಮ್ರಾನ್ ಖಾನ್ ಹೇಳಿದ್ದರು. ಅದಕ್ಕೆ ತಿರುಗೇಟು ನೀಡಿರುವ ಪಿಎಂಎಲ್–ಎನ್, ಒಂದು ವೇಳೆ ಮಾತುಕತೆ ವಿಫಲವಾದರೆ ಪಿಟಿಐ ಬಹುವಾಗಿ ನಷ್ಟ ಅನುಭವಿಸುತ್ತದೆ ಎಂದು ಹೇಳಿದೆ.

'ಜುಲೈನಲ್ಲಿ ಚುನಾವಣೆ ನಡೆಸದಿದ್ದರೆ ದೇಶದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವುದಾಗಿ ಇಮ್ರಾನ್ ಎಚ್ಚರಿಕೆ ನೀಡಿದ್ದಾರೆ. ಈ ಹಿನ್ನಲೆಯಲ್ಲಿ, ಸಂವಿಧಾನದ ಅಡಿ ಚುನಾವಣೆಯನ್ನು ಒಂದು ವರ್ಷಕ್ಕೆ ಮುಂದೂಡಲು ಅವಕಾಶವಿದೆ. ಹೀಗಾಗಿ ಸಂಧಾನ ವಿಫಲವಾದರೆ ಇಮ್ರಾನ್ ಖಾನ್ ಅವರ ಪಿಟಿಐ ಪಕ್ಷಕ್ಕೇ ನಷ್ಟ' ಎಂದು ಅವರು ಹೇಳಿದ್ದಾರೆ.

ಪಾಕಿಸ್ತಾನದ ಲೋಕಸಭೆ ಅವಧಿಯು ಇದೇ ಆಗಸ್ಟ್‌ನಲ್ಲಿ ಮುಕ್ತಾಯವಾಗಲಿದೆ. ಮೇ 14ರಂದು ಪಾಕಿಸ್ತಾನದ ಪಂಜಾಬ್‌ನಲ್ಲಿ ಚುನಾವಣೆ ನಡೆಸಲು ಸುಪ್ರೀಂ ಕೋರ್ಟ್ ಆದೇಶ ನೀಡಿದೆ. ಆದರೆ ಸಂವಿಧಾನದ ಪ್ರಕಾರ ಲೋಕಸಭೆ ವಿಸರ್ಜಿಸಿದ ಬಳಿಕ ಚುನಾವಣೆ ನಡೆಸಲು 90 ದಿನಗಳ ಕಾಲಾವಕಾಶ ಇರುತ್ತದೆ. ಹೀಗಾಗಿ ಅಕ್ಟೋಬರ್‌ನಲ್ಲಿ ಲೋಕಸಭೆ ಚುನಾವಣೆ ನಡೆಯುವ ಸಾಧ್ಯತೆ ಇದೆ.

ಅಮೆರಿಕ ಸಂಸ್ಥೆ ಅಸಮಾಧಾನ

'ಭಾರತದಲ್ಲಿ ಅಲ್ಪಸಂಖ್ಯಾತರ ಸ್ವಾತಂತ್ರ್ಯಕ್ಕೆ ಧಕ್ಕೆ'

ವಾಷಿಂಗ್ಟನ್ (ಎಎಫ್‌ಪಿ): ಭಾರತದಲ್ಲಿ ಧಾರ್ಮಿಕ ಸ್ವಾತಂತ್ರ್ಯ ಕುರಿತ ವಿಷಯವನ್ನು ಅಮೆರಿಕದ ಸ್ವಾಯತ್ತ ಸಂಸ್ಥೆಯೊಂದು ಸೋಮವಾರ ಪ್ರಸ್ತಾಪಿಸಿದ್ದು, ಭಾರತವನ್ನು ಕಪ್ಪುಪಟ್ಟಿಗೆ ಸೇರಿಸುವ ಮಾತು ಆಡಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಆಡಳಿತಾವಧಿಯಲ್ಲಿ ದೇಶದಲ್ಲಿ ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳುವ ಕ್ರಮ ಇನ್ನಷ್ಟು ಹದಗೆಡುತ್ತಿದೆ ಎಂದು ಸಂಸ್ಥೆಯು ಅಭಿಪ್ರಾಯಪಟ್ಟಿದೆ.

ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗ ಈ ನಿಲುವು ವ್ಯಕ್ತಪಡಿಸಿದೆ. ತನ್ನ ಈ ನಿಲುವನ್ನು ದೇಶದ ವಿದೇಶಾಂಗ ಇಲಾಖೆಯೂ ಒಪ್ಪುತ್ತದೆ ಎಂಬ ನಿರೀಕ್ಷೆಯಲ್ಲಿದೆ. ವಿವಿಧ ದೇಶಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಸ್ವಾತಂತ್ರ್ಯ, ಸ್ಥಿತಿ-ಗತಿಯನ್ನು ಪ್ರತಿ ವರ್ಷ ವಿಮರ್ಶಿಸುವ ವಿದೇಶಾಂಗ ಇಲಾಖೆಯು, ನಿರ್ಬಂಧ ಹೇರುವ ಕುರಿತಂತೆ ದೇಶಗಳ ಹೆಸರನ್ನು ಪಟ್ಟಿ ಮಾಡಲಿದೆ.

ಸಂಸ್ಥೆಯ ವಾರ್ಷಿಕ ವರದಿಯಲ್ಲಿ ಭಾರತದ ಉಲ್ಲೇಖವಿದೆ. ಮುಸಲ್ಮಾನರು ಮತ್ತು ಕ್ರೈಸ್ತರನ್ನು ಗುರಿಯಾಗಿಸಿ ಹಿಂಸೆ, ಆಸ್ತಿ ನಷ್ಟ ಹಾಗೂ ಈ ಸಂಬಂಧ ಮೋದಿ ಅವರು ಪ್ರತಿನಿಧಿಸುವ ಬಿಜೆಪಿಯ ಹಲವು ಸದಸ್ಯರು ಜಾಲತಾಣಗಳಲ್ಲಿ ಮಾಡಿರುವ ಪೋಸ್ಟ್‌ಗಳನ್ನು ತನ್ನ ವರದಿಯಲ್ಲಿ ಉಲ್ಲೇಖಿಸಿದೆ. ಭಾರತವನ್ನು ಗುರಿಯಾಗಿಸಿ ಸಂಸ್ಥೆ ಹೀಗೆ ಶಿಫಾರಸು ಮಾಡುತ್ತಿರುವುದು ಇದು ಸತತ ನಾಲ್ಕನೆಯ ಬಾರಿ. ಭಾರತ ಇದಕ್ಕೆ ಕಟುವಾಗಿ ಪ್ರತಿಕ್ರಿಯಿಸಿದ್ದು, ಆಯೋಗ ತಾರತಮ್ಯ ಧೋರಣೆ ಹೊಂದಿದೆ ಎಂದು ಟೀಕಿಸಿದೆ.

ಸಂಕ್ಷಿಪ್ತ ಸುದ್ದಿ

ಅಭಿವೃದ್ಧಿಗೆ ಕೈಜೋಡಿಸಿ: ವಿಕ್ರಮಸಿಂಘೆ ಆಹ್ವಾನ

ಕೊಲಂಬೊ(ಪಿಟಿಐ): ನಗದು ಕೊರತೆ ಎದುರಿಸುತ್ತಿರುವ ದ್ವೀಪ ರಾಷ್ಟ್ರವನ್ನು 2048ರ ವೇಳೆಗೆ ಅಭಿವೃದ್ಧಿಹೊಂದಿದ ದೇಶವನ್ನಾಗಿಸಲು ಎಲ್ಲಾ ಕಾರ್ಮಿಕರು ಕೈಜೋಡಿಸಬೇಕೆಂದು ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಸೋಮವಾರ ಕರೆ ನೀಡಿದ್ದಾರೆ.

'ದೇಶವು ಆರ್ಥಿಕವಾಗಿ ಅಭಿವೃದ್ಧಿ ಹೊಂದುವಲ್ಲಿ ದುಡಿಯುವ ವರ್ಗವು ಮಹತ್ವದ ಪಾತ್ರ ವಹಿಸಲಿದೆ' ಎಂದು ಅಂತರರಾಷ್ಟ್ರೀಯ ಕಾರ್ಮಿಕ ದಿನದ ಅಂಗವಾಗಿ ನೀಡಿರುವ ಸಂದೇಶದಲ್ಲಿ ಅವರು ಹೇಳಿದ್ದಾರೆ.

'ಎಲ್ಲಾ ಸವಾಲುಗಳನ್ನು ಎದುರಿಸಿ ದೇಶವನ್ನು ಮುನ್ನಡೆಸುವ ಶಕ್ತಿ ಕಾರ್ಮಿಕರಿಗಿದೆ' ಎಂದೂ ಅವರು ತಿಳಿಸಿದ್ದಾರೆ.

ಭದ್ರತಾ ಮಂಡಳಿಗೆ ಭಾರತ ಸೇರ್ಪಡೆ: ಚೀನಾ ಮೌನ

ಬೀಜಿಂಗ್ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ (ಯುಎನ್‌ಎಸ್‌ಸಿ) ಅಭಿವೃದ್ಧಿಶೀಲ ರಾಷ್ಟ್ರಗಳಿಗೂ ಪ್ರಾತಿನಿಧ್ಯ ನೀಡಬೇಕೆಂದು ಪ್ರತಿಪಾದಿಸಿರುವ ಚೀನಾವು, ಭಾರತಕ್ಕೆ ಕಾಯಂ ಸದಸ್ಯತ್ವ ನೀಡುವ ಬಗ್ಗೆ ತನ್ನ ಮೌನವನ್ನು ಮುಂದುವರಿಸಿದೆ.

ಭದ್ರತಾ ಮಂಡಳಿಯ ಸುಧಾರಣೆಗೆ ಸಂಬಂಧಿಸಿದಂತೆ ಚೀನಾ ವಿದೇಶಾಂಗ ವ್ಯವಹಾರ ಆಯೋಗದ ಕಚೇರಿಯ ನಿರ್ದೇಶಕ ವಾಂಗ್ ಯಿ ನೇತೃತ್ವದ ಸಮಿತಿಯು ಶನಿವಾರ ಇಲ್ಲಿ ಯುಎನ್‌ಎಸ್‌ಸಿ ತಂಡದ ಮುಖ್ಯಸ್ಥರನ್ನು ಭೇಟಿಯಾಗಿ ತನ್ನ ಅಭಿಪ್ರಾಯ ತಿಳಿಸಿದೆ.

ಭದ್ರತಾ ಮಂಡಳಿಯಲ್ಲಿ ವಿಟೊ ಅಧಿಕಾರ ಹೊಂದಿರುವ ಐದು ರಾಷ್ಟ್ರಗಳ ಪೈಕಿ ಚೀನಾವೂ ಒಂದಾಗಿದೆ. ಭಾರತ ಕೂಡ ವಿಟೊ ಅಧಿಕಾರಕ್ಕೆ ಪ್ರಯತ್ನಿಸುತ್ತಿದೆ.

ಈ ನಡುವೆಯೇ ಚೀನಾವು, 'ಭದ್ರತಾ ಮಂಡಳಿಯಲ್ಲಿ ಅಭಿವೃದ್ಧಿಶೀಲ ಸಣ್ಣ ಮತ್ತು ಮಧ್ಯಮ ರಾಷ್ಟ್ರಗಳಿಗೆ ಪ್ರಾತಿನಿಧ್ಯ ನೀಡಬೇಕು' ಎಂದು ಪ್ರತಿಪಾದಿಸಿದೆ.

ಆದರೆ, ಭಾರತವನ್ನು ಯುಎನ್‌ಎಸ್‌ಸಿ ಸೇರ್ಪಡೆಗೊಳಿಸಬೇಕೆಂಬ ಒತ್ತಾಯದ ಬಗ್ಗೆ ಯಾವುದೇ ವಾಂಗ್ ಯಿ ನೇತೃತ್ವದ ಸಮಿತಿಯು ಪ್ರತಿಕ್ರಿಯೆ ನೀಡಿಲ್ಲ.

ಪ್ರೀತಿ ಪಟೇಲ್‌ಗೆ ಬೆದರಿಕೆ ಪತ್ರ: ವ್ಯಕ್ತಿಗೆ ಜೈಲು

ಲಂಡನ್ (ಪಿಟಿಐ): ಬ್ರಿಟನ್‌ನ ಮಾಜಿ ಗೃಹ ಕಾರ್ಯದರ್ಶಿ ಹಾಗೂ ಭಾರತ ಸಂಜಾತೆ ಪ್ರೀತಿ ಪಟೇಲ್ ಅವರಿಗೆ ಬೆದರಿಕೆ ಪತ್ರ ಕಳುಹಿಸಿದ್ದ ಆರೋಪದಲ್ಲಿ 65 ವರ್ಷದ ವ್ಯಕ್ತಿಯೊಬ್ಬರಿಗೆ ಐದು ತಿಂಗಳ ಜೈಲು ಶಿಕ್ಷೆ ವಿಧಿಸಲಾಗಿದೆ.

ಪೂನೀರಾಜ್ ಕನಕಯ್ಯ ಎಂಬವರಿಗೆ ಲಂಡನ್‌ನ ವೆಸ್ಟ್‌ಮಿನ್‌ಸ್ಟರ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಶಿಕ್ಷೆ ವಿಧಿಸಿದೆ.

ಕಳೆದ ವರ್ಷ ಜನವರಿ 22ರಂದು ಪ್ರೀತಿ ಪಟೇಲ್ ಅವರಿಗೆ ಬೆದರಿಕೆ ಪತ್ರ ಕಳುಹಿಸಲಾಗಿತ್ತು. ಆಗ ಅವರು ಗೃಹ ಕಾರ್ಯದರ್ಶಿಯಾಗಿದ್ದರು. ಕೈಬರಹದಲ್ಲಿದ್ದ ಪತ್ರವು ಪ್ರೀತಿ ಅವರ ಕಚೇರಿಯ ಸಿಬ್ಬಂದಿಗೆ ಲಭಿಸಿತ್ತು ಎಂದು ಮೂಲಗಳು ತಿಳಿಸಿವೆ.

ಪತ್ರವನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಲಾಗಿತ್ತು. ಪತ್ರ ಬರೆದಿದ್ದ ವ್ಯಕ್ತಿಯನ್ನು ಈ ಮೂಲಕ ಪತ್ತೆ ಹಚ್ಚಲಾಗಿದೆ ಎಂದು ಹೇಳಿವೆ.

'ಅಲ್ ಜಝೀರಾ' ವರದಿಗಾರನ ಬಿಡುಗಡೆ

ದುಬೈ(ಎಪಿ): 'ಈಜಿಪ್ಟ್‌ನಲ್ಲಿ 2019ರಿಂದ ಬಂಧನದಲ್ಲಿದ್ದ ತನ್ನ ವಾಹಿನಿಯ ವರದಿಗಾರನನ್ನು ಪೂರ್ವ ವಿಚಾರಣೆಯ ಬಳಿಕ ಬಿಡುಗಡೆಗೊಳಿಸಲಾಗಿದೆ' ಎಂದು 'ಅಲ್ ಜಝೀರಾ' ಮಾಧ್ಯಮ ಸಂಸ್ಥೆ ಹೇಳಿದೆ.

ಹಿಶಾಮ್ ಅಬ್ದೆಲ್ ಅಜೀಜ್ ಬಿಡುಗಡೆಗೊಂಡಿರುವ ವರದಿಗಾರ. ಈ ಕುರಿತು ಈಜಿಪ್ಟ್‌ನ ಅಧಿಕಾರಿಗಳು ಹೆಚ್ಚಿನ ಮಾಹಿತಿ ಬಹಿರಂಗಪಡಿಸಿಲ್ಲ.

ಅಬ್ದೆಲ್ ಅಜೀಜ್ ಅವರನ್ನು ಭಾನುವಾರ ಬಿಡುಗಡೆಗೊಳಿಸಲಾಗಿದೆ ಎಂದು ಈಜಿಪ್ಟ್‌ನ ಪತ್ರಕರ್ತರ ಸಂಘದ ಮುಖ್ಯಸ್ಥ ಖಲೀದ್ ಅಲ್ ಬಾಲ್ಶಿಹೇಳಿದ್ದಾರೆ. 2019ರ ಜೂನ್‌ನಲ್ಲಿ ಪ್ರವಾಸ ತೆರಳಿದ್ದ ಸಂದರ್ಭದಲ್ಲಿ ಕೈರೊ ವಿಮಾನ ನಿಲ್ದಾಣದಲ್ಲಿ ಅಬ್ದೆಲ್ ಅವರನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದರು ಎಂದು 'ಅಲ್ ಜಝೀರಾ' ಹೇಳಿದೆ.

ದಾನಿಗಳು, ಉದ್ಯಮಿಗಳ ಸಭೆ ನಡೆಸಿದ ಬೈಡನ್

ವಾಷಿಂಗ್ಟನ್ (ಪಿಟಿಐ): 2024ರ ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ಮರು ಸ್ಪರ್ಧೆ ಬಯಸಿರುವ ಹಾಲಿ ಅಧ್ಯಕ್ಷ ಜೋ ಬೈಡನ್ ಮತ್ತು ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು, ಚುನಾವಣಾ ಪ್ರಚಾರಕ್ಕಾಗಿ ನಿಧಿ ಸಂಗ್ರಹಿಸಲು 150ಕ್ಕೂ ಹೆಚ್ಚು ದಾನಿಗಳು, ಭಾರತ ಸಂಜಾತ ಅಮೆರಿಕದ ಉದ್ಯಮಿಗಳನ್ನು ಭೇಟಿ ಮಾಡಿದ್ದಾರೆ.

ಅಮೆರಿಕದಲ್ಲಿ ಪ್ರಜಾಪ್ರಭುತ್ವ ರಕ್ಷಣೆ ದೃಷ್ಟಿಯಿಂದ ದಾನಿಗಳ ನೆರವು ಅತ್ಯಗತ್ಯ. ಸಂವಿಧಾನವನ್ನು ಗೌರವಿಸದಂತಹ ಡೊನಾಲ್ಡ್ ಟ್ರಂಪ್ ಅವರನ್ನು ಅಧಿಕಾರದಿಂದ ದೂರವಿಡಲು ನಿಮ್ಮ ಸಹಾಯಬೇಕಿದೆ ಎಂದು ಸಭೆಯಲ್ಲಿ ಬೈಡನ್ ಹೇಳಿದರು.

'ನಮ್ಮ ಅಧಿಕಾರಾವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇವೆ. ಇನ್ನೂ ಬಹಳಷ್ಟು ಕೆಲಸಗಳು ಬಾಕಿ ಉಳಿದಿವೆ. ಅವುಗಳನ್ನು ಪೂರ್ಣಗೊಳಿಸಲು ನಿಮ್ಮೆಲ್ಲರ ಆರ್ಥಿಕ ಸಹಕಾರ ಬೇಕಿದೆ' ಎಂದು ಕೋರಿದರು.

ಭಾರತ ಸಂಜಾತ ಅಮೆರಿಕ ಉದ್ಯಮಿ ಹಾಗೂ ಮುಖ್ಯ ನಿಧಿ ಸಂಗ್ರಹಕಾರ ಅಜಯ್ ಜೈನ್ ಭುಟೋರಿಯಾ ಸೇರಿದಂತೆ ಡೆಮಾಕ್ರಟಿಕ್ ಪಕ್ಷದ ಹಲವು ದಾನಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು.

ಹೆಸರಷ್ಟೇ ಬದಲಾಗಿದೆ.
ಬದಲಾಗಲಿಲ್ಲ ಬದ್ಧತೆ.

ಐಡಿಎಫ್‌ಸಿ ಮ್ಯೂಚುವಲ್ ಫಂಡ್ ಈಗ ಆಗಿದೆ ಬಂಧನ್ ಮ್ಯೂಚುವಲ್ ಫಂಡ್. ಬಂಧನ್ ಸಮೂಹದ ಬಲದಿಂದ, ಸದ್ಭಾವನೆ ಮತ್ತು ಒಳಗೊಳ್ಳುವಿಕೆಯ ಮೌಲ್ಯಗಳೊಂದಿಗೆ ನೀವು ಸದಾ ನಮ್ಮಿಂದ ನಿರೀಕ್ಷಿಸುತ್ತಿರುವ ಅದೇ ಉತ್ಸಾಹ, ಪರಿಣತಿ ಮತ್ತು ಹೂಡಿಕೆದಾರರಿಗೆ ಪ್ರಥಮ ಆದ್ಯತೆಯೊಂದಿಗೆ ನಾವು ಭವಿಷ್ಯದತ್ತ ವಿಶ್ವಾಸದೊಂದಿಗೆ ಹೆಜ್ಜೆ ಹಾಕುತ್ತಿದ್ದೇವೆ.
ಇಲ್ಲಿದೆ ಹೊಸ ಶುಭಾರಂಭ.

IDFC MUTUAL FUND ಈಗ ಆಗಿದೆ Bandhan Mutual Fund

www.bandhanmutual.com

ಮ್ಯೂಚುವಲ್ ಫಂಡ್ ಹೂಡಿಕೆಯು ಮಾರುಕಟ್ಟೆಯ ಅಪಾಯಗಳಿಗೆ ಒಳಪಟ್ಟಿರುತ್ತವೆ.ಎಲ್ಲ ಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ಗಮನವಿಟ್ಟು ಓದಿ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಕೆ. ಪಿ. ಗಾಯತ್ರಿದೇವಿ
ಜನನ: 23-10-1950 - ಮರಣ: 27-04-2021
ಮತ್ತು ಶ್ರೀಮಾನ್ ಪುಟ್ಟಸ್ವಾಮಿ ಎನ್.
ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್
ಜನನ: 10-06-1948 - ಮರಣ: 02-05-2021
ಸದಾ ನಿಮ್ಮನ್ನು ಸ್ಮರಿಸುವ ಹಾಗೂ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ.
ಇಂತಿ:
ಶ್ರೀ ಹೆಚ್.ಪಿ ವಿನೋದ್‌ಕುಮಾರ್ ಮತ್ತು ಶ್ರೀಮತಿ ಡಾ|| ಪದ್ಮ ಎಸ್.
ಬೇಬಿ ವೀರ ವೈಭವಿ ಹೆಚ್.ವಿ
ಗಿರಿನಗರ, ಬೆಂಗಳೂರು. Ph: 9845118459.

3ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎಸ್.ಎನ್. ಸಾವಿತ್ರಿ
ಎಸ್.ಎನ್.ಗೋಪಾಲರೆಡ್ಡಿರವರ ಧರ್ಮಪತ್ನಿ
ಸುದ್ದಗುಂಟೆಪಾಳ್ಯ, ಬೆಂಗಳೂರು.
ಜನನ: 13.03.1957 ನಿಧನ: 02.05.2020
ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷ, ನಿಮ್ಮ ಅಗಲಿಕೆಯಿಂದ ನಿಮ್ಮ ಪ್ರೀತಿವಾತ್ಸಲ್ಯ, ಆರೈಕೆಗಳು ನಮಗೆ ಇಂದು ನೆನಪು ಮಾತ್ರ. ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ಪ್ರತಿನಿತ್ಯವೂ ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ,
ದುಃಖತಪ್ತರು: ಪತಿ, ಮಕ್ಕಳು, ಕುಟುಂಬದವರು ಹಾಗೂ ಬಂಧು–ಮಿತ್ರರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Marketing & Sales

ASM- AREA Sales Manager with 4 Yrs Experience in Pesticide or Fertilizers marketing in Karnataka State. 12 posts to be filled. Email- hr@hifield-ag.com. Pls call - 8380012272, 8380012271

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ M.R.S.ಕಂಪನಿಗೆ ಆಫೀಸ್ ಕೆಲಸಕ್ಕೆ ಮಹಿಳೆಯರು PUC,BA,BCom,BSc, BBM, MA, M.Com, MSc, G.N.M., A.N.M, BSc/MSc Nursing ಆಗಿರುವಂತಹ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ-ವಸತಿ ಸಂಬಳ 15,000 ರಿಂದ 17,000/- ಬೆಂಗಳೂರು-56 ತಕ್ಷಣ ಸಂಪರ್ಕಿಸಿ: 7349463892, 8904463086

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. 12000-15000 ಸಂಬಳ, ಊಟ ವಸತಿ ಉಚಿತ; ಸಂಪರ್ಕಿಸಿರಿ: 9036776032 ಮಂಗಳೂರು

ಪ್ರವಾಸ

Travel

1.6.2023 ದೆಹಲಿ,ವೈಷ್ಣೋದೇವಿ, ಅಮೃತ್‌ಸರ್, ಹರಿದ್ವಾರ, ಅಯೋಧ್ಯಾ,ಕಾಶಿ 11.6.2023 ಯಮುನೋತ್ರಿ,ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. 12.6.2023 ಚಿತ್ರಕೂಟ, ನೈಮೀಶರಣ್ಯ, ಅಯೋಧ್ಯಾ,ಕಾಶಿ 29-6-2023 ಅಮರನಾಥ್ ಯಾತ್ರಾ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

13ದಿನಗಳ ಜೈಪುರ, ಆಗ್ರಾ,ಮಥುರ,ಅಮೃತಸರ,ಕಟ್ರಾ, ಚಾಮುಂಡಾ,ಮನಾಲಿ,ಚಂಡಿಘಡ್ ,ದೆಹಲಿ. 13ದಿನಗಳ ಚಾರ್ ಧಾಮ್ ಯಾತ್ರೆ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್, ಬೆಂಗಳೂರು. 9980270467, 9632776916, 080-41467722

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 08/06 ಚಾರ್ಧಾಮ್, ಕೇದಾರನಾಥ, ಬದ್ರಿನಾಥ್,ಯಮುನೋತ್ರಿ. 22/06 ಅಮರನಾಥ ಯಾತ್ರೆ. 17/05 ಕಾಶಿ, ಅಯೋಧ್ಯ. 9964527782,9591017782

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತಪರಿಹಾರ ಸ್ತ್ರೀಪುರುಷ ವಶೀಕರಣಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್. ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಶಿಕ್ಷಣಕ್ಕೆ

ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಂಕ್ಷಿಪ್ತ ಸುದ್ದಿ

ದಾಖಲೆ ತಿದ್ದಿದ ಪ್ರಕರಣ: ಅಸಾರಾಂಗೆ ಜಾಮೀನು

ಜೋಧಪುರ (ಪಿಟಿಐ): 'ಗುರುಕುಲ'ದ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ, 2018ರಿಂದ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಅಪರಾಧಿ, ಸ್ವಯಂ ಘೋಷಿತ ದೇವಮಾನವ ಅಸಾರಾಂ ಬಾಪುಗೆ, ತಿದ್ದಿದ ಆರ್‌ಟಿಐ ಉತ್ತರವನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಆರೋಪ ಪ್ರಕರಣದಲ್ಲಿ ರಾಜಸ್ಥಾನ ಹೈಕೋರ್ಟ್ ಸೋಮವಾರ ಜಾಮೀನು ನೀಡಿದೆ.

'ತಿದ್ದಿರುವ ಆರ್‌ಟಿಐ ಉತ್ತರದ ದಾಖಲೆಯನ್ನು 'ಸುಪ್ರೀಂ'ಗೆ ಸಲ್ಲಿಸಿದ ಪ್ರಕರಣದಲ್ಲಿ ಅರ್ಜಿದಾರರ ನೇರ ಪಾತ್ರವಿಲ್ಲ. ಅಲ್ಲದೆ, ಸಹ ಆರೋಪಿ ರವಿರೈ ಮಾರ್ವಾಗೆ ಈಗಾಗಲೇ ಜಾಮೀನು ನೀಡಲಾಗಿದೆ. ವಿಚಾರಣೆ ದೀರ್ಘ ಕಾಲ ನಡೆಯುವ ಸಾಧ್ಯತೆ ಇದೆ' ಎಂದು ಅಭಿಪ್ರಾಯಪಟ್ಟಿದೆ.

ರಿಯಾಯಿತಿ ರದ್ದು: ₹2,242 ಕೋಟಿ ಅಧಿಕ ಆದಾಯ

ನವದೆಹಲಿ (ಪಿಟಿಐ): ಪ್ರಯಾಣ ದರದಲ್ಲಿ ಹಿರಿಯ ನಾಗರಿಕರಿಗೆ ನೀಡಿದ್ದ ರಿಯಾಯಿತಿಯನ್ನು ರದ್ದುಪಡಿಸಿದ್ದರಿಂದ ರೈಲ್ವೆ ಇಲಾಖೆ 2022-23ನೇ ಆರ್ಥಿಕ ವರ್ಷದಲ್ಲಿ ಹೆಚ್ಚುವರಿ ₹ 2,242 ಕೋಟಿ ಆದಾಯ ಗಳಿಸಿದೆ.

ಕೋವಿಡ್ ಸಂದರ್ಭದಲ್ಲಿ ರಿಯಾಯಿತಿ ರದ್ದುಪಡಿಸಿದ ಬಳಿಕ ಮಾರ್ಚ್ 20, 2020 ಮತ್ತು ಮಾರ್ಚ್ 31, 2022 ನಡುವಣ ಅವಧಿಯಲ್ಲಿ ಹೆಚ್ಚುವರಿಯಾಗಿ ₹1,500 ಕೋಟಿ ಆದಾಯವನ್ನು ಇಲಾಖೆ ಗಳಿಸಿತ್ತು.

ಮಧ್ಯಪ್ರದೇಶದ ಚಂದ್ರಶೇಖರ್ ಗೌರ್ ಅವರು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಸಲ್ಲಿಸಿದ್ದ ಅರ್ಜಿಗೆ ರೈಲ್ವೆ ಇಲಾಖೆ ಈ ಮಾಹಿತಿ ನೀಡಿದೆ.

12 ಗಂಟೆವರೆಗೂ ಕೆಲಸದ ಅವಧಿ, ಕಾಯ್ದೆ ಹಿಂಪಡೆದ ತಮಿಳುನಾಡು ಸರ್ಕಾರ

ಚೆನ್ನೈ (ಪಿಟಿಐ): ನಿತ್ಯದ ಕೆಲಸದ ಅವಧಿಯನ್ನು 12 ಗಂಟೆವರೆಗೆ ವಿಸ್ತರಿಸಲು ಅವಕಾಶವಿದ್ದ 'ಕಾರ್ಖಾನೆಗಳ (ತಿದ್ದುಪಡಿ) ಕಾಯ್ದೆ 2023' ಅನ್ನು ತಮಿಳುನಾಡು ಸರ್ಕಾರ ಹಿಂಪಡೆದಿದೆ. 'ಕಾರ್ಮಿಕರ ಹಿತಾಸಕ್ತಿಯ ರಕ್ಷಣೆ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿದ್ದಾರೆ.

'ಸುಧಾರಣೆ ತರುವುದಕ್ಕಷ್ಟೇ ಅಲ್ಲ. ವಿಷಯ ಕುರಿತ ಜನಾಭಿಪ್ರಾಯದ ನಿಲುವು ಒಪ್ಪಿಕೊಳ್ಳಲೂ ಧೈರ್ಯ ಇರಬೇಕು' ಎಂದು ಹೇಳಿದರು. ಈ ಕಾಯ್ದೆಗೆ ಹಲವು ಕಾರ್ಮಿಕ ಸಂಘಟನೆಗಳು ವಿರೋಧ ವ್ಯಕ್ತಪಡಿಸಿ-ದ್ದವು. ಸೋಮವಾರ ನಡೆದ ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಸ್ಟಾಲಿನ್ ಈ ಘೋಷಣೆ ಮಾಡಿದರು.

ವಿವರಣೆ ನೀಡಲು ಹಾಜರಾಗುವಂತೆ ರಾಜ್ಯಸಭೆ ಸಭಾಪತಿ ಬುಲಾವ್ • ವಿರೋಧ ಪಕ್ಷಗಳ ಸಂಸದರ ಖಂಡನೆ

ಶಾ ಹೇಳಿಕೆ ಖಂಡಿಸಿ ಲೇಖನ: ಸಂಸದನಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಯನ್ನು ಖಂಡಿಸಿ, ಟೀಕಿಸಿ ಪತ್ರಿಕೆಯಲ್ಲಿ ಲೇಖನ ಬರೆದಿದ್ದ ಸಿಪಿಎಂನ ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್ ಅವರಿಗೆ ರಾಜ್ಯಸಭೆಯ ಸಭಾಪತಿ ಜಗದೀಪ್ ಧನ್‌ಕರ್ ನೋಟಿಸ್ ನೀಡಿದ್ದು ವಿವರಣೆ ನೀಡಲು ತಮ್ಮ ಎದುರು ಹಾಜರಾಗುವಂತೆ ಸೂಚಿಸಿದ್ದಾರೆ.

ಜಾನ್ ಬ್ರಿಟ್ಟಾಸ್

ಸಭಾಪತಿಯ ಈ ಕ್ರಮವನ್ನು ಬ್ರಿಟ್ಟಾಸ್ ಖಂಡಿಸಿದ್ದಾರೆ. ಈ ಮಧ್ಯೆ ಬ್ರಿಟ್ಟಾಸ್ ಅವರ ಪರ ಹಲವು ಸಂಸದರು ಧ್ವನಿ ಎತ್ತಿದ್ದಾರೆ. 'ಇದು, ವಿರೋಧದ ಧ್ವನಿಯನ್ನು ಹತ್ತಿಕ್ಕುವ ಯತ್ನ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನೋಟಿಸ್ ಜಾರಿ ಕುರಿತು ಪ್ರತಿಕ್ರಿಯಿಸಿರುವ ಬ್ರಿಟ್ಟಾಸ್, 'ರಾಜಕೀಯ ದ್ವೇಷ ಸಾಧನೆಗೆ ಸಾಂವಿಧಾನಿಕ ಸಂಸ್ಥೆಗಳನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದೆ' ಎಂದು ಆಕ್ಷೇಪಿಸಿದ್ದಾರೆ.

ಲೋಕಸಭೆ ಸಚಿವಾಲಯದ ಮಾಜಿ ಪ್ರಧಾನ ಕಾರ್ಯದರ್ಶಿ ಪಿಡಿಟಿ ಆಚಾರ್ಯ ಅವರು, 'ಕ್ರಿಮಿನಲ್ ಆರೋಪ ಪ್ರಕರಣದ ವಿಚಾರಣೆಯನ್ನು ರಾಜ್ಯಸಭೆ ಸಭಾಪತಿ ನಡೆಸುವುದು ಹೇಗೆ ಸಾಧ್ಯ?' ಎಂದು ಪ್ರಶ್ನಿಸಿದ್ದಾರೆ.

'ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ವಿಷಯ. ಲೇಖನ ಕುರಿತಂತೆ ಬಿಜೆಪಿಯ ಕಾರ್ಯಕರ್ತರೊಬ್ಬರು ನೀಡಿರುವ ದೂರು, ಅದನ್ನು ರಾಜ್ಯಸಭೆ ಸಭಾಪತಿ ನಿರ್ವಹಿಸುತ್ತಿರುವ ಬಗೆ ಎರಡೂ ಗೊಂದಲ ಮೂಡಿಸುತ್ತಿವೆ. ಇದು, ರಾಜಕೀಯ ದ್ವೇಷದ ಪ್ರಕರಣ' ಎಂದರು.

ಕೇರಳದ ಬ್ರಿಟ್ಟಾಸ್ ಅವರು, ಕೇರಳ ಕುರಿತಂತೆ ಶಾ ಆಡಿದ ಮಾತು ಉಲ್ಲೇಖಿಸಿ, ಗೃಹ ಸಚಿವರನ್ನು ಟೀಕಿಸಿ ಲೇಖನ ಬರೆದಿದ್ದರು. ಶಾ ಅವರಿಂದ ಉತ್ತರವನ್ನು ಬಯಸಿದ್ದರು. 'ಲೇಖನವು ಪ್ರತ್ಯೇಕತಾ ಭಾವನೆ ಹೊಂದಿದೆ. ದೇಶದ್ರೋಹ ವರ್ತನೆಗೆ ಸೂಕ್ತ ಕ್ರಮ ಅಗತ್ಯ' ಎಂದು ಕಾರ್ಯಕರ್ತ ದೂರಿನಲ್ಲಿ ಒತ್ತಾಯಿಸಿದ್ದರು.

'ಲೇಖನ ಬರೆಯುವುದು ನನ್ನ ಮೂಲಭೂತ ಹಕ್ಕು. ಕೇರಳ ಕುರಿತಂತೆ ಶಾ ಆಡಿರುವ ಮಾತಿಗೆ ಪ್ರತಿಕ್ರಿಯಿಸುವ ಸ್ವಾತಂತ್ರ್ಯ ನನಗಿದೆ' ಎಂದು ಸಭಾಪತಿಗೆ ಬ್ರಿಟ್ಟಾಸ್ ಪ್ರತಿಕ್ರಿಯಿಸಿದ್ದರು.

'ಇಂತಹ ಪ್ರಕರಣದಲ್ಲಿ ಸದಸ್ಯರಿಗೆ ನೋಟಿಸ್ ನೀಡಲಾಗದು. ಇದು, ಹಕ್ಕುಚ್ಯುತಿ ವ್ಯಾಪ್ತಿಗೆ ಬರುವುದಿಲ್ಲ. ಸಚಿವರನ್ನು ಟೀಕಿಸುವ ಹಕ್ಕು ಎಲ್ಲ ಸಂಸದರಿಗೆ ಇರುತ್ತದೆ. ಅಲ್ಲದೆ, ಇದು, ಸಂಸತ್ತಿನ ಹೊರಗೆ ಆಡಿರುವ ಮಾತು. ಹಕ್ಕುಚ್ಯುತಿ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಆಚಾರ್ಯ ಹೇಳಿದರು.

'ನಿಯಮಗಳ ಪ್ರಕಾರ, ಸಭಾಪತಿ ವಿಚಾರಣೆ ನಡೆಸಲಾಗದು. ಅವರಿಗೆ ಸದನದೊಳಗೂ ಆ ಅಧಿಕಾರ ಇಲ್ಲ. ಏನು ಕ್ರಮ ಕೈಗೊಳ್ಳಬೇಕು ಎಂದು ಸದನ ನಿರ್ಧರಿಸಲಿದೆ. ಆದರೆ, ಈ ಪ್ರಕರಣವನ್ನು ರಾಜ್ಯಸಭೆಯ ವಿಚಾರಣೆಗೆ ಪರಿಗಣಿಸಬಾರದು' ಎಂದು ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿದರು.

ಬ್ರಿಟ್ಟಾಸ್ ಪರ ಧ್ವನಿ ಎತ್ತಿದ ಹಲವು ಸಂಸದರು

ನವದೆಹಲಿ: ಕೇರಳದ ಸಂಸದ ಜಾನ್ ಬ್ರಿಟ್ಟಾಸ್ ಅವರನ್ನು ಬೆಂಬಲಿಸಿ ವಿರೋಧ ಪಕ್ಷಗಳ ಸಂಸದರು ಧ್ವನಿ ಎತ್ತಿದ್ದು, ಅವರ ಬೆಂಬಲಕ್ಕೆ ನಿಂತಿದ್ದಾರೆ.

ತೃಣಮೂಲ ಕಾಂಗ್ರೆಸ್ ಪಕ್ಷದ, ಲೋಕಸಭೆ ಸದಸ್ಯೆ ಮಹುಆ ಮೊಯಿತ್ರಾ, 'ಇದು, ಆಶ್ಚರ್ಯಕರ. ಶಾ ಅವರನ್ನು ಟೀಕಿಸಿದ್ದು ಏಕೆ ಎಂದು ರಾಜ್ಯಸಭೆ ಸಭಾಪತಿ ಕೇಳುತ್ತಾರೆ. ನಾನು ಹಲವು ಬಾರಿ ಟೀಕಿಸಿದ್ದೇನೆ. ನನಗೆ ಕರೆ ಬರುವುದನ್ನು ಕಾಯುತ್ತಿದ್ದೇನೆ' ಎಂದರು.

ಆರ್‌ಜೆಡಿ ಪಕ್ಷದ ಹಿರಿಯ ಸಂಸದ ಮನೋಜ್ ಕೆ.ಜಾ, 'ಇಡೀ ಪ್ರಕರಣವು ಆಡಳಿತವು ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ತಿಳಿಸುತ್ತಿದೆ' ಎಂದು ಟ್ವೀಟ್ ಮಾಡಿದ್ದಾರೆ.

ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರು ಟ್ವೀಟ್‌ನಲ್ಲಿ, ಬಹುಶಃ, ಸತ್ಯ ಹೇಳಿದ್ದಕ್ಕೆ ಜಾನ್ ಬ್ರಿಟ್ಟಾಸ್ ಮೇಲೆ ಮುಗಿಬೀಳಲಾಗಿದೆ' ಎಂದಿದ್ದಾರೆ.

ಡಿ.ಎಂ.ಕೆ ಸಂಸದೆ ಕನಿಮೋಳಿ ಅವರು, 'ಇದು ದಿಗ್ಭ್ರಮೆ ಮೂಡಿಸುವ ಸಂಗತಿ. ಮುಂದೆ ನಾವು ಇನ್ನು ಏನೇನನ್ನು ನಿರೀಕ್ಷಿಸಬಹುದು? ವಿರೋಧ ಪಕ್ಷಗಳ ಎಲ್ಲ ಸಂಸದರಿಗೆ ನೋಟಿಸ್ ಜಾರಿ? ನಾವು ನೀಡುವ ಪ್ರತಿ ಹೇಳಿಕೆಗೂ ವಿಚಾರಣೆ? ಪ್ರಜಾಪ್ರಭುತ್ವವನ್ನು ಕತ್ತಲು ಆವರಿಸುವ ದಿನಗಳು ಹತ್ತಿರದಲ್ಲಿಯೇ ಇವೆ ಎನಿಸುತ್ತದೆ' ಎಂದು ಟ್ವೀಟ್ ಮಾಡಿದ್ದಾರೆ.

ಕೇರಳದ ಮಾಜಿ ಹಣಕಾಸು ಸಚಿವ ಥಾಮಸ್ ಇಸಾಕ್ ಅವರು, ಮೋದಿ ಅವರು ಹಿಂದೊಮ್ಮೆ ಕೇರಳವನ್ನು ಸೋಮಾಲಿಯಾ ಎಂದಿದ್ದರು. ಶಾ ಅವರು ಕೇರಳವನ್ನು ಧಿಕ್ಕರಿಸಿ ಹೇಳಿಕೆ ನೀಡಿದ್ದಾರೆ. ಅವರು ಕೇರಳವನ್ನು ನಿಂದಿಸಬಹುದು. ಆದರೆ, ಕೇರಳ ಸಂಸದ ಅವರ ಬಣ್ಣ ಬಯಲು ಮಾಡುವಂತಿಲ್ಲ' ಎಂದು ಅಸಮಾಧಾನ ಹೊರಹಾಕಿದ್ದಾರೆ.

'ಮನದ ಮಾತು' ಕುರಿತ ಟ್ವೀಟ್: ಈಸುದಾನ್ ಗಡವಿ ಮೇಲೆ ಪ್ರಕರಣ



ಅಹಮದಾಬಾದ್ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರ 'ಮನದ ಮಾತು' ಬಾನುಲಿ ಕಾರ್ಯಕ್ರಮದ ನೂರು ಕಂತುಗಳಿಗೆ ಕೇಂದ್ರ ಸರ್ಕಾರವು ಇದುವರೆಗೆ ತೆರಿಗೆ ಪಾವತಿದಾರರ ₹830 ಕೋಟಿ ಖರ್ಚು ಮಾಡಿದೆ' ಎಂದು ಆರೋಪಿಸಿ ಟ್ವೀಟ್ ಮಾಡಿದ್ದ ಆಮ್ ಆದ್ಮಿ ಪಕ್ಷದ (ಎಎಪಿ) ಗುಜರಾತ್ ಘಟಕದ ಅಧ್ಯಕ್ಷ ಈಸುದಾನ್ ಗಡವಿ ಅವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಯಾವುದೇ ಸಾಕ್ಷ್ಯಗಳಿಲ್ಲದೆ ಆರೋಪ ಮಾಡಿರುವುದಕ್ಕೆ ಈಸುದಾನ್ ಅವರ ವಿರುದ್ಧ ಅಹಮದಾಬಾದ್‌ನ ಸೈಬರ್ ಕ್ರೈಂ ವಿಭಾಗದ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈಸುದಾನ್ ಅವರು ಈ ಟ್ವೀಟ್ ಅನ್ನು ಬಳಿಕ ಅಳಿಸಿದ್ದಾರೆ.

ಅಫ್ಜಲ್ ಅನ್ಸಾರಿ ಅನರ್ಹ

ನವದೆಹಲಿ (ಪಿಟಿಐ): ಅಪಹರಣ ಮತ್ತು ಕೊಲೆ ಪ್ರಕರಣದಲ್ಲಿ ಭಾಗಿಯಾದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದ ಜನಪ್ರತಿನಿಧಿಗಳ ನ್ಯಾಯಾಲಯದಿಂದ ನಾಲ್ಕು ವರ್ಷ ಶಿಕ್ಷೆಗೆ ಗುರಿಯಾಗಿರುವ ಘಾಜಿಪುರ ಲೋಕಸಭಾ ಕ್ಷೇತ್ರದ ಬಿಎಸ್‌ಪಿ ಸಂಸದ ಅಫ್ಜಲ್ ಅನ್ಸಾರಿ ಅವರನ್ನು ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆ.

ಉಗ್ರರಿಂದ ಬಳಕೆ ಶಂಕೆ: 14 ಮೊಬೈಲ್ ಆ್ಯಪ್ ನಿಷೇಧ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಭಾರತ ವಿರುದ್ಧ ಅಪಪ್ರಚಾರಕ್ಕೆ ಆ್ಯಪ್ ಬಳಕೆ
- ಬಳಕೆದಾರರ ಗುರುತು ಸಿಗದಂತೆ ಆ್ಯಪ್ ವಿನ್ಯಾಸ
- ಐ.ಟಿ ಕಾಯ್ದೆ ಸೆಕ್ಷನ್ 69ಎ ಅನ್ವಯ ಕ್ರಮ

ನವದೆಹಲಿ: ಮುಖ್ಯವಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ಸಂಘಟನೆಗಳು ಸಂವಹನಕ್ಕಾಗಿ ವ್ಯಾಪಕವಾಗಿ ಬಳಸುತ್ತಿವೆ ಎನ್ನಲಾದ 14 ಮೊಬೈಲ್ ಅಪ್ಲಿಕೇಷನ್‌ಗಳನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ.

ಸಂಘಟನೆಗಳು ಕೆಳಹಂತದ ಕಾರ್ಯಕರ್ತರಿಗೆ ಸಂದೇಶ ರವಾನಿಸಲು ಹಾಗೂ ಪಾಕಿಸ್ತಾನದ ನೆಲದಿಂದ ಸಂದೇಶವನ್ನು ಸ್ವೀಕರಿಸಲು ಈ ಅಪ್ಲಿಕೇಷನ್‌ಗಳು ಬಳಕೆಯಾಗುತ್ತಿದ್ದವು ಎಂದು ಆರೋಪಿಸಲಾಗಿದೆ.

ಕ್ರಿಪ್‌ವೈಸರ್, ಎನಿಗ್ಮಾ, ಸೇಫ್‌ಸ್ವಿಸ್, ವಿಕ್ರ್‌ಮೀ, ಮೀಡಿಯಾಫೈರ್, ಬ್ರಯರ್, ಬಿ-ಚಾಟ್, ನಂಡ್‌ಬಾಕ್ಸ್, ಕೊನಿಯನ್, ಐಎಂಒ, ಎಲಿಮೆಂಟ್, ಸೆಕೆಂಡ್ ಲೈನ್, ಜಂಗಿ, ತ್ರೀಮಾ –ನಿಷೇಧಿಸಲಾದ ಅಪ್ಲಿಕೇಷನ್‌ಗಳು.

ಭದ್ರತೆ ಮತ್ತು ಗುಪ್ತದಳ ಸಂಸ್ಥೆಗಳ ಶಿಫಾರಸು ಆಧಾರದಲ್ಲಿ, ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಸೆಕ್ಷನ್ 69ಎ ಅನ್ವಯ ಈ ಅಪ್ಲಿಕೇಷನ್‌ಗಳನ್ನು ನಿಷೇಧಿಸಲಾಗಿದೆ. ಈ ಅಪ್ಲಿಕೇಷನ್‌ಗಳಿಂದ ರಾಷ್ಟ್ರೀಯ ಭದ್ರತೆಗೆ ಧಕ್ಕೆ ಆಗುತ್ತಿತ್ತು ಹಾಗೂ ಇವು ದೇಶದ ಕಾನೂನುಗಳನ್ನು ಪಾಲಿಸುತ್ತಿರಲಿಲ್ಲ ಎಂದು ಕೇಂದ್ರ ಸರ್ಕಾರವು ತಿಳಿಸಿದೆ.

ಭಯೋತ್ಪಾದಕ ಸಂಘಟನೆಗಳು ಈ ಅಪ್ಲಿಕೇಷನ್‌ಗಳ ಮೂಲಕ ಸಂವಹನ ನಡೆಸುತ್ತಿವೆ. ಇದನ್ನು ಬಳಸಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭಾರತದ ವಿರುದ್ಧ ಅಪಪ್ರಚಾರ ಕಾರ್ಯದಲ್ಲಿ ತೊಡಗಿವೆ. ಇವುಗಳನ್ನು ನಿಷೇಧಿಸಬೇಕು ಎಂದು ಭದ್ರತಾ ಸಂಸ್ಥೆಗಳು ಶಿಫಾರಸು ಮಾಡಿದ್ದವು.

ಈ ಪೈಕಿ ಬಹುತೇಕ ಅಪ್ಲಿಕೇಷನ್‌ಗಳನ್ನು ಬಳಕೆದಾರರ ಗೋಪ್ಯತೆಯನ್ನು ರಕ್ಷಿಸಲು ಅನುವಾಗುವಂತೆ ರೂಪಿಸಲಾಗಿತ್ತು. ಅಲ್ಲದೆ, ಈ ಅಪ್ಲಿಕೇಷನ್ ಮೂಲಕ ಯಾರೆಲ್ಲಾ ಪರಸ್ಪರ ಸಂಪರ್ಕದಲ್ಲಿ ಇದ್ದಾರೆ ಎಂದು ಗೊತ್ತಾಗದಂತೆ ವಿನ್ಯಾಸವನ್ನು ಮಾಡಲಾಗಿತ್ತು ಎಂದು ಹೇಳಲಾಗಿದೆ.

ಈ ಹಿಂದೆ ಕೇಂದ್ರವು ಚೀನಾ ಮೂಲದ ಹಲವು ಅಪ್ಲಿಕೇಷನ್‌ಗಳನ್ನು ನಿಷೇಧಿಸಿತ್ತು. ದೇಶದ ಸಾರ್ವಭೌಮತೆ, ಏಕತೆ, ದೇಶದ ರಕ್ಷಣೆ ಬಗ್ಗೆ ಈ ಅಪ್ಲಿಕೇಷನ್‌ಗಳು ಪೂರ್ವಗ್ರಹಪೀಡಿತವಾಗಿವೆ ಎಂದು ಕಾರಣ ನೀಡಲಾಗಿದೆ.

ಕಳೆದ ಹಲವು ವರ್ಷಗಳಲ್ಲಿ, ಚೀನಾ ಮೂಲದ ಸುಮಾರು 250ಕ್ಕೂ ಹೆಚ್ಚು ಅಪ್ಲಿಕೇಷನ್‌ಗಳನ್ನು ನಿಷೇಧಿಸಲಾಗಿದೆ. ಜನರು ಹೆಚ್ಚಾಗಿ ಬಳಸುತ್ತಿದ್ದ ಟಿಕ್‌ಟಾಕ್, ಶೇರ್ ಇಟ್, ವಿ ಚಾಟ್, ಹೆಲೊ, ಯುಸಿ ಬ್ರೌಸರ್, ಕ್ಯಾಮ್‌ಸ್ಕ್ಯಾನರ್ ಕೂಡಾ ಇವುಗಳಲ್ಲಿ ಸೇರಿದ್ದವು.

ಮಹಿಳಾ ಹೋರಾಟಗಾರರ 'ಮನದ ಮಾತು' ಕೇಳಿ: ಪ್ರಧಾನಿಗೆ ಕಪಿಲ್ ಸಿಬಲ್ ಆಗ್ರಹ

ಕುಸ್ತಿಪಟುಗಳ ಹೋರಾಟಕ್ಕೆ ಬೆಂಬಲ

ನವದೆಹಲಿ (ಪಿಟಿಐ): ಇಲ್ಲಿನ ಜಂತರ್ ಮಂಥರ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಮಹಿಳಾ ಕುಸ್ತಿಪಟುಗಳಿಗೆ ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್, ಕಾಶ್ಮೀರದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಕಾಂಗ್ರೆಸ್ ಮುಖಂಡ ನವಜೋತ್ ಸಿಂಗ್ ಸಿಧು ಸೇರಿದಂತೆ ಹಲವರು ಸೋಮವಾರ ಬೆಂಬಲ ಘೋಷಿಸಿದ್ದಾರೆ.

ಕುಸ್ತಿಪಟುಗಳ 'ಮನದ ಮಾತು' (ಮನ್ ಕಿ ಬಾತ್) ಆಲಿಸಿ. ಆಗ ಮಾತ್ರ ನಿಮಗೆ ಅವರ ನೋವು ಅರ್ಥವಾಗುತ್ತದೆ' ಎಂದು ಕಪಿಲ್ ಸಿಬಲ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಒತ್ತಾಯಿಸಿದ್ದಾರೆ.

'ನೀವು ನಡೆಸಿಕೊಡುವ ಬಾನುಲಿ ಕಾರ್ಯಕ್ರಮ 100 ಕಂತುಗಳನ್ನು ಪೂರೈಸಿದೆ. ಇದಕ್ಕಾಗಿ ಅಭಿನಂದನೆಗಳು. ಪ್ರಧಾನಿಯವರೇ, ನಿಮಗೆ ಬಿಡುವಿದ್ದರೆ ಜಂತರ್ ಮಂಥರ್ ಕಡೆಗೆ ಹೋಗಿ. ಅಲ್ಲಿ ಪ್ರತಿಭಟನೆ ಕೈಗೊಂಡಿರುವ ಮಹಿಳಾ ಕುಸ್ತಿಪಟುಗಳ ಮನದ ಮಾತನ್ನೂ ಕೇಳಿ' ಎಂದು ಟ್ವೀಟ್ ಮಾಡಿದ್ದಾರೆ.

ಜಂತರ್ ಮಂಥರ್‌ಗೆ ಸೋಮವಾರ ಭೇಟಿ ನೀಡಿದ ಕಾಂಗ್ರೆಸ್ ಮುಖಂಡ ನವಜೋತ್ ಸಿಂಗ್ ಸಿಧು ಸುದ್ದಿಗಾರರೊಂದಿಗೆ ಮಾತನಾಡಿದರು. ಕುಸ್ತಿಪಟುಗಳಾದ ಸಾಕ್ಷಿ ಮಲಿಕ್, ವಿನೇಶಾ ಫೋಗಟ್ ಇದ್ದಾರೆ – ಪಿಟಿಐ ಚಿತ್ರ

ಕುಸ್ತಿಪಟುಗಳ ನಡೆಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಜಮ್ಮು ಮತ್ತು ಕಾಶ್ಮೀರದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ, 'ಒಗ್ಗಟ್ಟಿನಲ್ಲಿ ಶಕ್ತಿ ಇದೆ. ಅದು ಎಂತಹುದೇ ಸರ್ಕಾರವನ್ನಾದರೂ ಅಲುಗಾಡಿಸಬಲ್ಲದು' ಎಂದು ಹೇಳಿದ್ದಾರೆ.

ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಸರ್ಕಾರ ಕೂಡ ಹೋರಾಟಕ್ಕೆ ಬೆಂಬಲ ಸೂಚಿಸಿದೆ. ಪಕ್ಷದ ಸಂಸದ ಎಂ.ಎಂ. ಅಬ್ದುಲ್ಲಾ ಪ್ರತಿಭಟನೆನಿರತರ ಜೊತೆ ಚರ್ಚಿಸಿದ್ದಾರೆ ಎಂದು ಪಕ್ಷದ ಅಧ್ಯಕ್ಷ ಹಾಗೂ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ತಿಳಿಸಿದ್ದಾರೆ.

ಮುಖ್ಯಾಂಶಗಳು
- ಪ್ರತಿಭಟನಾ ಸ್ಥಳಕ್ಕೆ ನವಜೋತ್ ಸಿಂಗ್ ಸಿಧು ಭೇಟಿ
- ಬ್ರಿಜ್‌ಭೂಷಣ್ ವಿರುದ್ಧ 2 ಎಫ್‌ಐಆರ್ ದಾಖಲು

'ಪದಕ ಗಳಿಸಿ ಭಾರತಕ್ಕೆ ಗೌರವ ತಂದಿರುವ ಕುಸ್ತಿಪಟುಗಳು ಈಗ ಆತ್ಮಗೌರವ ಮತ್ತು ಲೈಂಗಿಕ ಕಿರುಕುಳದಿಂದ ರಕ್ಷಿಸಿಕೊಳ್ಳಲು ಧರಣಿ ನಡೆಸಬೇಕಾಗಿರುವುದು ಹೃದಯ ಕಲಕುವ ಬೆಳವಣಿಗೆ' ಎಂದು ಸ್ಟಾಲಿನ್ ಟ್ವೀಟ್ ಮಾಡಿದ್ದಾರೆ.

ಮಾಜಿ ಕ್ರಿಕೆಟಿಗ ಹಾಗೂ ಕಾಂಗ್ರೆಸ್ ಮುಖಂಡ ನವಜೋತ್ ಸಿಂಗ್ ಸಿಧು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದರು. ಈ ವೇಳೆ ಮಾತನಾಡಿದ ಅವರು, 'ಜಾಮೀನುರಹಿತ ಪ್ರಕರಣ ದಾಖಲಾಗಿದ್ದರೂ ಬ್ರಿಜ್‌ಭೂಷಣ್ ಅವರನ್ನು ಬಂಧಿಸಿಲ್ಲ ಏಕೆ' ಎಂದು ಪ್ರಶ್ನಿಸಿದರು.

'ನನ್ನ ಗಲ್ಲಿಗೇರಿಸಿ; ಕುಸ್ತಿ ನಿಲ್ಲಿಸಬೇಡಿ'

ಗೊಂಡಾ (ಉತ್ತರಪ್ರದೇಶ) (ಪಿಟಿಐ): ಪ್ರಮುಖ ಕುಸ್ತಿಪಟುಗಳು ನಡೆಸುತ್ತಿರುವ ಧರಣಿಯ ಕಾರಣ ದೇಶದಲ್ಲಿ ನಾಲ್ಕು ತಿಂಗಳುಗಳಿಂದ ಕುಸ್ತಿ ಚಟುವಟಿಕೆಗಳು ಸ್ಥಗಿತಗೊಂಡಿವೆ ಎಂದು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಸೋಮವಾರ ಹೇಳಿದ್ದಾರೆ.

'ನನ್ನನ್ನು ಬೇಕಾದರೆ ಗಲ್ಲಿಗೇರಿಸಿ. ಆದರೆ, ರಾಷ್ಟ್ರೀಯ ಚಾಂಪಿಯನ್‌ಷಿಪ್ ಮತ್ತು ಶಿಬಿರಗಳು ಸೇರಿದಂತೆ ಕುಸ್ತಿ ಚಟುವಟಿಕೆಗಳು ನಿಂತು ಹೋಗಬಾರದು. ಇದರಿಂದ ಕೆಡೆಟ್ ಹಾಗೂ ಜೂನಿಯರ್ ಕುಸ್ತಿಪಟುಗಳಿಗೆ ತೊಂದರೆಯಾಗುತ್ತದೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಬ್ರಿಜ್‌ಭೂಷಣ್

'ಕೆಡೆಟ್, ಜೂನಿಯರ್, ಇನ್ನುಳಿದ ಚಾಂಪಿಯನ್‌ಷಿಪ್‌ಗಳನ್ನು ಪ್ರತಿಭಟನನಿರತ ಕುಸ್ತಿಪಟುಗಳು, ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಥವಾ ಸರ್ಕಾರ ಯಾರಾದರೂ ಆಯೋಜಿಸಲಿ. ನಮಗೇನೂ (ಡಬ್ಲ್ಯುಎಫ್‌ಐ) ಸಮಸ್ಯೆಯಿಲ್ಲ. ಈಗ 14 ವರ್ಷ 9 ತಿಂಗಳ ವಯಸ್ಸಿರುವ ಕುಸ್ತಿಪಟು ಇನ್ನು ಮೂರು ತಿಂಗಳ ಕಳೆದರೆ 15ನೇ ವರ್ಷಕ್ಕೆ ತಲುಪುತ್ತಾನೆ. ಆಗ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸುವ ಅವಕಾಶ ಆತನ ಕೈತಪ್ಪುತ್ತದೆ. ಈ ಸಂಗತಿಯನ್ನು ಅರ್ಥಮಾಡಿಕೊಳ್ಳಬೇಕು' ಎಂದು ಅವರು ಹೇಳಿದರು.

ಸುಪ್ರೀಂ ಕೋರ್ಟ್‌ಗೆ ತಮಿಳುನಾಡು ಸರ್ಕಾರದ ಲಿಖಿತ ಉತ್ತರ

'ಧರ್ಮ ಪ್ರಚಾರ ಕಾನೂನುಬಾಹಿರವಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮಿಷನರಿಗಳು ಕ್ರೈಸ್ತ ಧರ್ಮವನ್ನು ಪ್ರಚಾರ ಮಾಡುವುದು ಕಾನೂನುಬಾಹಿರ ಚಟುವಟಿಕೆಯಲ್ಲ. ಧರ್ಮ ಪ್ರಚಾರ ಮಾಡುವ ಹಕ್ಕನ್ನು ಸಂವಿಧಾನದ 25ನೇ ವಿಧಿಯಲ್ಲಿ ಪ್ರತಿ ನಾಗರಿಕನಿಗೂ ನೀಡಲಾಗಿದೆ' ಎಂದು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

'ತಮಿಳುನಾಡಿನಲ್ಲಿ ಕ್ರೈಸ್ತ ಮಿಷನರಿಗಳು ಧರ್ಮ ಪ್ರಚಾರ ಮಾಡುತ್ತಿವೆ. ಇದು ಕಾನೂನುಬಾಹಿರ' ಎಂದು ವಕೀಲ ಅಶ್ವಿನ್ ಕುಮಾರ್ ಉಪಾಧ್ಯಾಯ ಅವರು ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ತಮಿಳುನಾಡು ಸರ್ಕಾರವು ನ್ಯಾಯಾಲಯಕ್ಕೆ ಲಿಖಿತ ಉತ್ತರ ನೀಡಿದೆ. 'ಈ ಅರ್ಜಿಯು ಕೋಮುವಾದಿ ಮನೋಭಾವ ಹೊಂದಿದೆ' ಎಂದೂ ಸರ್ಕಾರ ಹೇಳಿದೆ.

'ಮಿಷನರಿಗಳು ಧರ್ಮ ಪ್ರಚಾರ ಮಾಡುವುದು ತಪ್ಪಲ್ಲ. ಆದರೆ, ಹೀಗೆ ಮಾಡುವಾಗ, ಸಮಾಜದ ಸ್ವಾಸ್ಥ್ಯ ಹಾಳಾದರೆ, ನೈತಿಕತೆ ಅಳಿದರೆ, ಆರೋಗ್ಯಕ್ಕೆ ತೊಂದರೆಯಾದರೆ ಮಾತ್ರವೇ ಅದು ಕಾನೂನು ಬಾಹಿರವಾಗುತ್ತದೆ. ಈ ಕುರಿತು ಗಂಭೀರ ಕ್ರಮವನ್ನೂ ಕೈಗೊಳ್ಳಬೇಕಾಗುತ್ತದೆ' ಎಂದು ತಮಿಳುನಾಡು ಸರ್ಕಾರ ಹೇಳಿದೆ.

'ಹಿಂದಿ ಭಾಷಿಕ ಪ್ರದೇಶದಲ್ಲಿ ಆಗುತ್ತಿರುವ ಕೆಲವು ಪ್ರಕರಣಗಳ ಕುರಿತು ಅರ್ಜಿದಾರರು ಆರೋಪಗಳನ್ನು ಮಾಡುತ್ತಿದ್ದಾರಷ್ಟೆ. ತಮಿಳನಾಡಿನಲ್ಲಿ ಹಲವು ವರ್ಷಗಳಿಂದ ಒತ್ತಾಯದಿಂದ ಮತಾಂತರ ಮಾಡಿದ ಒಂದೂ ಪ್ರಕರಣವೂ ದಾಖಲಾಗಿಲ್ಲ' ಎಂದಿದೆ.

'ವ್ಯಕ್ತಿಯೊಬ್ಬನನ್ನು ಒತ್ತಾಯದಿಂದ ಮತಾಂತರ ಮಾಡುವ ಹಕ್ಕನ್ನು ನಮ್ಮ ಸಂವಿಧಾನ ಯಾವ ವ್ಯಕ್ತಿಗೂ ನೀಡಿಲ್ಲ. ಅಂತೆಯೇ, ವ್ಯಕ್ತಿಯೊಬ್ಬನಿಗೆ ಅವನಿಷ್ಟದ ಧರ್ಮಕ್ಕೆ ಮತಾಂತರವಾಗುವ ಅವಕಾಶವನ್ನು ನಿರಾಕರಿಸಿಲ್ಲ. ವ್ಯಕ್ತಿಯೊಬ್ಬ ತಾನು ಬಯಸಿದ ಧರ್ಮಕ್ಕೆ ಮತಾಂತರವಾಗಲು ದೇಶವು ಪ್ರತಿ ನಾಗರಿಕನಿಗೆ ಅವಕಾಶ ನೀಡಬೇಕು. ವ್ಯಕ್ತಿಯೊಬ್ಬನ ಖಾಸಗಿತನ, ನಂಬಿಕೆಯನ್ನು ಗೌರವಿಸುವುದು ಯಾವುದೇ ಸರ್ಕಾರದ ಆದ್ಯ ಕರ್ತವ್ಯವಾಗಬೇಕು' ಎಂದು ಸರ್ಕಾರ ಹೇಳಿದೆ.

'ಸುಪ್ರೀಂ' ಸುದ್ದಿಗಳು

ಮತಾಂತರ ನಿಷೇಧ ಕಾನೂನು ರೂಪಿಸುವುದು ಸಲ್ಲ. ಇಂಥ ಕಾನೂನು ಅಲ್ಪಸಂಖ್ಯಾತರ ವಿರುದ್ಧ ಸುಳ್ಳು ಆರೋಪ ಹೊರಿಸಲು ಬಳಕೆಯಾಗುತ್ತದೆ
ತಮಿಳುನಾಡು ಸರ್ಕಾರ

'ದೇಶದ್ರೋಹ ಕಾನೂನಿನ ಸಿಂಧುತ್ವ ಮರುಪರಿಶೀಲನೆ ಪ್ರಗತಿಯಲ್ಲಿದೆ'

ನವದೆಹಲಿ (ಪಿಟಿಐ): 'ದೇಶದ್ರೋಹ ಕಾನೂನಿನ ಸಾಂವಿಧಾನಿಕ ಸಿಂಧುತ್ವಕ್ಕೆ ಸಂಬಂಧಿಸಿದಂತೆ ಉನ್ನತ ಮಟ್ಟದ ಮರುಪರಿಶೀಲನೆ ಪ್ರಗತಿಯಲ್ಲಿದೆ' ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿತು.

ಈ ಕಾನೂನಿನ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾದ ಹಲವು ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠವು, ಮುಂದಿನ ವಿಚಾರಣೆಯನ್ನು ಆಗಸ್ಟ್ ಎರಡನೇ ವಾರಕ್ಕೆ ನಿಗದಿ ಮಾಡಿತು.

'ಮರುಪರಿಶೀಲನೆಯ ಕೆಲಸ ಪ್ರಗತಿಯಲ್ಲಿದೆ. ಆದ್ದರಿಂದ, ಮುಂದಿನ ವಿಚಾರಣೆಯನ್ನು ಸಂಸತ್ತಿನ ಮುಂಗಾರು ಅಧಿವೇಶನದ ಬಳಿಕ ನಡೆಸಿ' ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ನ್ಯಾಯಾಲಯಕ್ಕೆ ಮನವಿ ಮಾಡಿದರು.

'ಅರ್ಜಿಗಳ ವಿಚಾರಣೆಯನ್ನು ಏಳು ನ್ಯಾಯಮೂರ್ತಿಗಳ ಪೀಠಕ್ಕೆ ವರ್ಗಾಯಿಸಿ' ಎಂದು ಅರ್ಜಿದಾರರ ಪರ ವಕೀಲ ಗೋಪಾಲ್ ಶಂಕರನಾರಾಯಣ ನ್ಯಾಯಾಲಯವನ್ನು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, 'ಮೊದಲು ಮರು ಪರಿಶೀಲನೆ ನಡೆಯಲಿ. ನಂತರ ಏಳು ನ್ಯಾಯಮೂರ್ತಿಗಳ ಪೀಠಕ್ಕೆ ವಿಚಾರಣೆಯನ್ನು ವರ್ಗಾಯಿಸುವ ಕುರಿತು ವಿಚಾರ ಮಾಡೋಣ' ಎಂದಿತು.

ಕಾರಿನ ಬಾನೆಟ್ ಮೇಲೆ ಯುವಕನ ಹೊತ್ತೊಯ್ದ ಚಾಲಕ

ನವದೆಹಲಿ (ಪಿಟಿಐ): ಟ್ಯಾಕ್ಸಿಗೆ ಡಿಕ್ಕಿ ಹೊಡೆದು ಪರಾರಿಯಾಗಲು ಯತ್ನಿಸಿದ ಐಷಾರಾಮಿ ಕಾರನ್ನು ತಡೆಯುವ ಸಲುವಾಗಿ ಅದರ ಬಾನೆಟ್ ಮೇಲೇರಿದ್ದ ಟ್ಯಾಕ್ಸಿ ಚಾಲಕನನ್ನು ಮೂರು ಕಿ.ಮೀ. ದೂರದವರೆಗೆ ಹೊತ್ತೊಯ್ದ ಘಟನೆ ಇಲ್ಲಿನ ಆಶ್ರಮ ಪ್ರದೇಶದಲ್ಲಿ ಭಾನುವಾರ ರಾತ್ರಿ ನಡೆದಿದೆ.

ಚಲಿಸುತ್ತಿದ್ದ ಕಾರಿನ ಬಾನೆಟ್ ಮೇಲೆ ಯುವಕ ನೇತಾಡುತ್ತಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಈ ಬಗ್ಗೆ ಟ್ಯಾಕ್ಸಿ ಚಾಲಕ ಚೇತನ್ ಎಂಬುವವರು ಪೊಲೀಸರಿಗೆ ದೂರು ನೀಡಿದ್ದಾರೆ ಎಂದು ಡಿಸಿಪಿ (ಆಗ್ನೇಯ) ರಾಜೇಶ್ ಡಿಯೊ ಹೇಳಿದ್ದಾರೆ.

'ನನ್ನ ಕಾರಿಗೆ ಬಿಹಾರದ ಡುಮ್ರಿ ಜಿಲ್ಲೆಯ ರಾಮ್ ಅಚಲ್(35) ಎಂಬುವವರ ಲ್ಯಾಂಡ್ ರೋವರ್ ಡಿಸ್ಕವರಿ ಕಾರು ಡಿಕ್ಕಿ ಹೊಡೆದಿತ್ತು. ಅವರು ಸ್ಥಳದಿಂದ ಪರಾರಿಯಾಗಲು ಯತ್ನಿಸಿದಾಗ ನಾನು ಕಾರಿನ ಬಾನೆಟ್ ಮೇಲೇರಿದ್ದೆ. ಇದನ್ನು ಲೆಕ್ಕಿಸದೆ ಅವರು ಕಾರನ್ನು ಚಲಾಯಿಸಿಕೊಂಡು ಮುಂದೆ ಸಾಗಿದ್ದಾರೆ. ನಿಜಾಮುದ್ದೀನ್ ಠಾಣೆಯ ಬಳಿ ತಲುಪಿದಾಗ ಪೊಲೀಸರು ತಡೆದಿದ್ದಾರೆ' ಎಂದು ಚೇತನ್ ಅವರು ದೂರಿನಲ್ಲಿ ತಿಳಿಸಿದ್ದಾರೆ.

ರಾಮ್ ಅಚಲ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಚುಟುಕು ಸುದ್ದಿ

ವಿಷಾನಿಲ ಪ್ರಕರಣ: ತನಿಖೆಗೆ ಎಸ್‌ಐಟಿ ರಚನೆ

ಲುಧಿಯಾನ(ಪಿಟಿಐ): ಇಲ್ಲಿನ ಗಿಯಾಸ್ಪುರ ವಿಷಾನಿಲ ಪ್ರಕರಣದ ಸಮಗ್ರ ತನಿಖೆಗೆ ಪಂಜಾಬ್ ರಾಜ್ಯ ಸರ್ಕಾರ ಐವರು ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದೆ.

ಭಾನುವಾರ ವಿಷಾನಿಲ ಸೇವಿಸಿ 11 ಮಂದಿ ಮೃತಪಟ್ಟಿದ್ದರು. ಹೈಡ್ರೋಜನ್ ಸಲ್ಫೈಡ್ ಅನಿಲವೇ ಈ ಸಾವಿಗೆ ಕಾರಣ ಇರಬಹುದು ಎಂದು ಶಂಕಿಸಲಾಗಿದೆ.

ಪದ್ಮ ಪ್ರಶಸ್ತಿಗಳಿಗೆ ಸಾಧಕರ ಶಿಫಾರಸಿಗೆ ಮನವಿ

ನವದೆಹಲಿ (ಪಿಟಿಐ): ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಸಾಧಕರನ್ನು ಗುರುತಿಸಿ ಪದ್ಮ ಪ್ರಶಸ್ತಿಗೆ ಹೆಸರು ಶಿಫಾರಸು ಮಾಡಬೇಕು ಎಂದು ಕೇಂದ್ರ ಸರ್ಕಾರ ದೇಶದ ಜನತೆಗೆ ಮನವಿ ಮಾಡಿದೆ.

ಪದ್ಮ ಪ್ರಶಸ್ತಿಗಳನ್ನು ಗಣರಾಜ್ಯ ದಿನದಂದು ಪ್ರಕಟಿಸಲಾಗುತ್ತದೆ. ಆನ್‌ಲೈನ್ ಮೂಲಕ ಹೆಸರುಗಳನ್ನು ಮೇ 1ರಿಂದ ಸೆಪ್ಟೆಂಬರ್ 15ರವರೆಗೆ ಶಿಫಾರಸು ಮಾಡಬಹುದಾಗಿದೆ. ಆನ್‌ಲೈನ್‌ನಲ್ಲಿ ಹೆಸರು ಶಿಫಾರಸು ಮಾಡಲು ವಿಳಾಸ: https://awards.gov.in

ಸ್ಮಾರ್ಟ್ ಸಿಟಿ: ಗಡುವು ಒಂದು ವರ್ಷ ವಿಸ್ತರಣೆ

ನವದೆಹಲಿ(ಪಿಟಿಐ): ದೇಶದ ವಿವಿಧ ನಗರಗಳಲ್ಲಿ ಅನುಷ್ಠಾನಗೊಂಡಿರುವ ಸ್ಮಾರ್ಟ್ ಸಿಟಿ ಮಿಷನ್‌ನ ಕಾಲಾವಧಿಯನ್ನು ಕೇಂದ್ರ ಸರ್ಕಾರವು 2024ರ ಜೂನ್‌ವರೆಗೆ ವಿಸ್ತರಿಸಿದೆ.

ಈ ಯೋಜನೆಯಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲ. ಹಾಗಾಗಿ, ಗಡುವು ವಿಸ್ತರಿಸಬೇಕು ಎಂಬ ಒತ್ತಾಯ ರಾಜ್ಯಗಳಿಂದ ಕೇಳಿಬಂದಿತ್ತು. ಈ ವರ್ಷದ ಜೂನ್ ಅಂತ್ಯಕ್ಕೆ ಯೋಜನೆಯಡಿ ಕಾಮಗಾರಿಗಳ ಪೂರ್ಣಕ್ಕೆ ಗಡುವು ನಿಗದಿಯಾಗಿತ್ತು.

ಛತ್ತೀಸಗಢ: ಬುಡಕಟ್ಟು ನಾಯಕ ನಂದಕುಮಾರ್ ಕಾಂಗ್ರೆಸ್‌ಗೆ ಸೇರ್ಪಡೆ

ರಾಯಪುರ (ಪಿಟಿಐ): ಛತ್ತೀಸಗಢದ ಬುಡಕಟ್ಟು ನಾಯಕ ನಂದಕುಮಾರ್ ಸಾಯಿ ಅವರು ಬಿಜೆಪಿ ತೊರೆದು ಆಡಳಿತಾರೂಢ ಕಾಂಗ್ರೆಸ್ ಪಕ್ಷಕ್ಕೆ ಸೋಮವಾರ ಸೇರಿದ್ದಾರೆ. ಮುಖ್ಯಮಂತ್ರಿ ಭೂಪೇಶ್ ಬಘೇಲ್, ಛತ್ತೀಸಗಢ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮೋಹನ್ ಮರ್ಕಂ ಅವರ ಸಮ್ಮುಖದಲ್ಲಿ ನಂದ ಕುಮಾರ್ ಅವರು ಕಾಂಗ್ರೆಸ್ ಸೇರಿದರು.

'ಮಹಿಳೆಯರ ದೇಹವು ಅಮೂಲ್ಯ ಮುಚ್ಚಿಕೊಂಡಷ್ಟೂ ಒಳ್ಳೆಯದು'

ಮುಂಬೈ (ಪಿಟಿಐ): 'ಮಹಿಳೆಯರ ದೇಹವು ಅಮೂಲ್ಯವಾದುದು. ಈ ದೇಹವನ್ನು ಹೆಚ್ಚಾಗಿ ಮುಚ್ಚಿಕೊಂಡಷ್ಟೂ ಒಳ್ಳೆಯದು' ಎಂದು ನಟ ಸಲ್ಮಾನ್ ಖಾನ್ ಹೇಳಿದ್ದಾರೆ.



'ಸಿನಿಮಾ ಸೆಟ್‌ನಲ್ಲಿ ಇರುವ ಪ್ರತಿಯೊಬ್ಬ ಹುಡುಗಿಯೂ, ಒಳ್ಳೆಯ ಹುಡುಗಿಯರ ಹಾಗೆ ಕುತ್ತಿಗೆ ಮುಚ್ಚುವವರೆಗೂ ಬಟ್ಟೆ ಹಾಕಬೇಕು ಎಂದು ಸಲ್ಮಾನ್ ಖಾನ್ ಅವರು ಕಾನೂನು ಮಾಡಿದ್ದರು' ಎಂದು 'ಕಿಸಿ ಕಾ ಭಾಯ್, ಕಿಸಿ ಕಿ ಜಾನ್' ಸಿನಿಮಾದಲ್ಲಿ ನಟಿಸಿರುವ ನಟಿ, ಪಾಲಕ್ ತಿವಾರಿ ಅವರು ಸಂದರ್ಶನವೊಂದರಲ್ಲಿ ಹೇಳಿದ್ದರು.

ಪತ್ರಕರ್ತ ರಜತ್ ಶರ್ಮಾ ಅವರು ತಮ್ಮ 'ಆಪ್ ಕಿ ಅದಾಲತ್' ಸಂದರ್ಶನದಲ್ಲಿ ತಿವಾರಿ ಅವರ ಈ ಹೇಳಿಕೆಯ ಕುರಿತು ಸಲ್ಮಾನ್ ಅವರಿಗೆ ಪ್ರಶ್ನೆ ಕೇಳಿದರು. ಕಾರ್ಯಕ್ರಮವು ಭಾನುವಾರ ರಾತ್ರಿ ಪ್ರಸಾರವಾಗಿದೆ.

'ನೀವು ದ್ವಂದ್ವ ನೀತಿ ಅನುಸರಿಸುತ್ತಿದ್ದೀರಿ ಅನ್ನಿಸುತ್ತಿಲ್ಲವೆ? ನಿಮ್ಮ ಚಿತ್ರಗಳಲ್ಲಿ ನೀವು ಶರ್ಟ್ ತೆಗೆಯುತ್ತೀರಲ್ಲಾ' ಎಂದು ರಜತ್ ಶರ್ಮಾ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಸಲ್ಮಾನ್, 'ನೀವು ಒಂದು ಸದಭಿರುಚಿಯ ಸಿನಿಮಾ ಮಾಡಿದರೆ, ಪ್ರತಿಯೊಬ್ಬರೂ ತಮ್ಮ ಕುಟುಂಬದೊಂದಿಗೆ ಬಂದು ಸಿನಿಮಾ ನೋಡುತ್ತಾರೆ. ಹಾಗಾಗಿ ಇಲ್ಲಿ ಯಾವುದೇ ದ್ವಂದ್ವ ನಿಲುವು ಇಲ್ಲ. ಮಹಿಳೆಯರ ದೇಹವು ಅಮೂಲ್ಯವಾಗಿದ್ದು, ದೇಹವನ್ನು ಮುಚ್ಚಿಕೊಂಡಷ್ಟು ಒಳ್ಳೆಯದು' ಎಂದರು.

'ಇದು ಮಹಿಳೆಯರ ವಿಷಯವಲ್ಲ. ಇದು ಹುಡುಗರು ಹುಡುಗಿಯರನ್ನು ಯಾವ ರೀತಿ ನೋಡುತ್ತಾರೆ ಎನ್ನುವುದರ ವಿಷಯ. ನಮ್ಮ ಹೆಂಡತಿ, ನಮ್ಮ ಸಹೋದರಿ, ನಮ್ಮ ತಾಯಿಯನ್ನು ಹುಡುಗರು ಕೆಟ್ಟದಾಗಿ ನೋಡುವುದು ನನಗೆ ಇಷ್ಟವಿಲ್ಲ. ಇವರೆಲ್ಲರೂ ಅವಮಾನ ಅನುಭವಿಸುವುದನ್ನು ನಾನು ಸಹಿಸಲಾರೆ' ಎಂದರು.

ಪಾಲಕ್ ಅವರು ಸಲ್ಮಾನ್ ಅವರನ್ನು 'ಸಂಪ್ರದಾಯವಾದಿ' ಎಂದು ಕರೆದಿದ್ದರು. ಈ ಹೇಳಿಕೆಯು ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೂ ಕಾರಣವಾಯಿತು. ನಂತರ ಇದಕ್ಕೆ ಪಾಲಕ್ ಸ್ಪಷ್ಟನೆಯನ್ನೂ ನೀಡಿದ್ದರು.

ಮಹಾರಾಷ್ಟ್ರದ ಸಾವಂತವಾಡಿ ಮರದ ಆಟಿಕೆ ತಯಾರಿಸುವ ಕುಶಲಕರ್ಮಿಗಳ ಅಳಲು

'ಮನದ ಮಾತಿನ ಪ್ರಚಾರ; ಕುದುರಲಿಲ್ಲ ವ್ಯಾಪಾರ'

ಸಾವಂತವಾಡಿಯ ಆಟಿಕೆಗಳು

ಸಾವಂತವಾಡಿ (ಮಹಾರಾಷ್ಟ್ರ) (ಪಿಟಿಐ): 'ಸಾವಂತವಾಡಿಯ ಮರದ ಕೆತ್ತನೆಯ ಆಟಿಕೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 'ಮನದ ಮಾತು' 2022ರ ಸೆಪ್ಟೆಂಬರ್ ತಿಂಗಳ ಕಂತಿನಲ್ಲಿ ಪ್ರಸ್ತಾಪ ಮಾಡಿದ್ದರು. ಇದರಿಂದ ಆಟಿಕೆಗಳಿಗೆ ಪ್ರಚಾರ ಸಿಕ್ಕಿತಷ್ಟೆ. ವ್ಯಾಪಾರ ಕುದುರಲಿಲ್ಲ' ಎಂದು ತಲೆತಲಾಂತರಗಳಿಂದ ಮರದ ಆಟಿಕೆ ತಯಾರಿಸುವ ವ್ಯಾಪಾರದಲ್ಲಿ ತೊಡಗಿರುವ ಮಂಜುನಾಥ ಗುಡಿಗಾರ್ ಅವರು ಬೇಸರ ವ್ಯಕ್ತಪಡಿಸಿದರು.

'ಪ್ರಚಾರಕ್ಕಿಂತ ನಮಗೆ ಸರ್ಕಾರದ ಯೋಜನೆ ಬೇಕು. ನಮ್ಮ ಈ ಕಲೆ, ವ್ಯಾಪಾರ ಉಳಿಸುವಂಥ ಸರ್ಕಾರದ ಸರಿಯಾದ ಯೋಜನೆ ಬೇಕು' ಎನ್ನುತ್ತಾರೆ ಮಂಜುನಾಥ್ ಅವರು.

ಚೀನಾ ಆಟಿಕೆಗಳ ಹಠಾತ್ ಆಮದು, ನಮ್ಮ ಆಟಿಕೆಗಳ ಬೇಡಿಕೆ ತಗ್ಗಿಸಿತು. ಗ್ರಾಹಕರಿಗೆ ಕಡಿಮೆ ಬೆಲೆಯ ಚೀನಾ ಆಟಿಕೆ ಮುಂದೆ ನಮ್ಮ ಆಟಿಕೆಗಳ ಬೆಲೆ ಹೆಚ್ಚಾಗಿ ತೋರಿತು
ಗಣಪತಿ ಚಿತಾರಿ, ಕರಕುಶಲಕರ್ಮಿ

'ಕಡಿಮೆ ಬೆಲೆಗೆ ಮಾರಾಟವಾಗುವ 'ಮೇಡ್ ಇನ್ ಚೀನಾ'ದ ಆಟಿಕೆಗಳು, ಏರಿದ ಮರದ ತುಂಡುಗಳ ಬೆಲೆ, ಕೂಲಿ ಹಣ ಹೆಚ್ಚಳವಾಗಿರುವುದು, ಕಚ್ಚಾ ವಸ್ತುಗಳ ಬೆಲೆ ಏರಿಕೆ, ಕೆತ್ತನೆ ಮಾಡಲು ಸಿಗದ ಕುಶಲಕರ್ಮಿಗಳು... ಹೀಗೆ ನಾನಾ ಕಾರಣಗಳಿಗಾಗಿ ನಮ್ಮ ಈ ಕಸುಬು ನಶಿಸುತ್ತಿದೆ' ಎನ್ನುತ್ತಾರೆ ಕರಕುಶಲಕರ್ಮಿ ಗಣಪತಿ ಚಿತಾರಿ.

'ಹೆಚ್ಚು ಬೇಡಿಕೆ ಇರುವ ಕಾಲದಲ್ಲೂ ದಿನವೊಂದಕ್ಕೆ 10 ಆಟಿಕೆಗಳು ವ್ಯಾಪಾರವಾಗುವುದು ಕಷ್ಟವಾಗಿದೆ. 10–15 ವರ್ಷಗಳ ಹಿಂದೆ ಪ್ರತಿ ದಿನ 20ರಿಂದ 50 ಆಟಿಕೆಗಳು ಮಾರಾಟವಾಗುತ್ತಿದ್ದವು. ಹಿಂದೆಲ್ಲಾ ಗುಡಿ ಕೈಗಾರಿಕೆಯಿಂದ ಹಲವರು ಜೀವನ ಕಟ್ಟಿಕೊಂಡಿದ್ದರು. ಆದರೆ, ಈಗ 5ರಿಂದ 6 ಕುಟುಂಬಗಳಷ್ಟೇ ಈ ವ್ಯಾಪಾರದಲ್ಲಿ ತೊಡಗಿಕೊಂಡಿವೆ' ಎಂದು ಅವರು ಹೇಳಿದರು.

ಕರ್ನಾಟಕ ಮೂಲದ ಚಿತಾರಿ ಸಮುದಾಯ

'ಗುಡಿ ಕೈಗಾರಿಕೆಯು ಸಾವಂತವಾಡಿಯಲ್ಲಿನ ನಮ್ಮ ಸಮುದಾಯದ (ಚಿತಾರಿ ಸಮುದಾಯ) ಕಲಕಸುಬು. ನಮ್ಮ ಸಮುದಾಯದ ಮೂಲ ಇರುವುದು ಕರ್ನಾಟಕದಲ್ಲಿ. ಇಂದಿಗೂ ಕರ್ನಾಟಕದಲ್ಲಿ, ದಕ್ಷಿಣ ಗೋವಾದ ಕುಂಕೋಲಿಂ ಗ್ರಾಮದಲ್ಲಿ ನಮ್ಮ ಸಮುದಾಯದಕ್ಕೆ ಸೇರಿದ ಜನರಿದ್ದಾರೆ. ಈ ಕರಕುಶಲ ಕಲೆಯನ್ನು ಮಹಾರಾಷ್ಟ್ರದಲ್ಲೂ ಪರಿಚಯಿಸುವ ದೃಷ್ಟಿಯಿಂದ ಯಾವುದೋ ಒಬ್ಬ ರಾಜ ನಮ್ಮ ಹಿರೀಕರನ್ನು ಇಲ್ಲಿಗೆ ಕರೆದುಕೊಂಡು ಬಂದರು' ಎನ್ನುತ್ತಾರೆ ಗಣಪತಿ ಚಿತಾರಿ ಅವರು.

ಮುಯ್ಯಿ ತೀರಿಸಿಕೊಂಡ ಆರ್‌ಸಿಬಿ

ಲಖನೌ ಸೂಪರ್ ಜೈಂಟ್ಸ್ ವಿರುದ್ಧ 18 ರನ್ ಗೆಲುವು; ಹ್ಯಾಜಲ್‌ವುಡ್, ಕರ್ಣ ಶರ್ಮಾ ಮಿಂಚು

ಲಖನೌ ತಂಡದ ವಿಕೆಟ್ ಬಿದ್ದಾಗ ಆರ್‌ಸಿಬಿ ಆಟಗಾರರ ಸಂಭ್ರಮ– ಎಎಫ್‌ಪಿ ಚಿತ್ರ

ಲಖನೌ (ಪಿಟಿಐ): ಬೌಲರ್‌ಗಳು ಮೇಲುಗೈ ಸಾಧಿಸಿದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, 18 ರನ್‌ಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಮಣಿಸಿತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಹಿಂದೆ ತನಗೆ ಎದುರಾಗಿದ್ದ ಸೋಲಿಗೆ ಮುಯ್ಯಿ ತೀರಿಸಿಕೊಂಡಿತು.

ಏಕನಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಎರಡೂ ತಂಡಗಳ ಬೌಲರ್‌ಗಳು ಮಿಂಚಿದರು. ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ ತಂಡವನ್ನು ಲಖನೌ ಸ್ಪಿನ್ನರ್‌ಗಳು 20 ಓವರುಗಳಲ್ಲಿ 9 ವಿಕೆಟ್‌ಗೆ 126 ರನ್‌ಗಳಿಗೆ ನಿಯಂತ್ರಿಸಿದರು.

ಆದರೆ ಫಫ್ ಡುಪ್ಲೆಸಿ ಬಳಗದ ಬೌಲರ್‌ಗಳೂ ಪರಿಣಮಕಾರಿ ದಾಳಿ ನಡೆಸಿ ಎದುರಾಳಿ ತಂಡವನ್ನು 108 ರನ್‌ಗಳಿಗೆ ಆಲೌಟ್ ಮಾಡಿತು. ಜೋಶ್ ಹ್ಯಾಜಲ್‌ವುಡ್ (15ಕ್ಕೆ2) ಮತ್ತು ಕರ್ಣ ಶರ್ಮಾ (20ಕ್ಕೆ 2) ಮಿಂಚಿದರು. ಆರ್‌ಸಿಬಿ ಪರ ಬೌಲ್ ಮಾಡಿದ ಏಳು ಮಂದಿಯಲ್ಲಿ ಆರು ಬೌಲರ್‌ಗಳೂ ವಿಕೆಟ್ ಪಡೆದರು.

ಸಾಧಾರಣ ಗುರಿ ಮುಂದಿದ್ದರೂ ಲಖನೌ ತಂಡ ಆರ್‌ಸಿಬಿಯ ಶಿಸ್ತಿನ ಬೌಲಿಂಗ್ ಮುಂದೆ ತಡಬಡಾಯಿಸಿತು. ಫೀಲ್ಡಿಂಗ್ ವೇಳೆ ಬಲತೊಡೆಯ ಸ್ನಾಯು ಸೆಳೆತದಿಂದ ಅಂಗಳದಿಂದ ನಿರ್ಗಮಿಸಿದ್ದ ಲಖನೌ ತಂಡದ ನಾಯಕ ಕೆ.ಎಲ್. ರಾಹುಲ್ ಇನಿಂಗ್ಸ್ ಆರಂಭಿಸಲಿಲ್ಲ. ಅವರು ಕೊನೆಯವರಾಗಿ ಕ್ರೀಸ್‌ಗೆ ಬಂದರು.

ಕೈಲ್ ಮೇಯರ್ಸ್ (0) ಎರಡನೇ ಎಸೆತದಲ್ಲಿ ಮೊಹಮ್ಮದ್ ಸಿರಾಜ್‌ಗೆ ವಿಕೆಟ್ ಒಪ್ಪಿಸಿದರು. ಅವರ ಜತೆ ಇನಿಂಗ್ಸ್ ಆರಂಭಿಸಿದ್ದ ಆಯುಷ್ ಬಡೋಣಿ (4) ಕೂಡಾ ವಿಫಲರಾದರು. ಮಾರ್ಕಸ್ ಸ್ಟೊಯಿನಿಸ್ ಮತ್ತು ನಿಕೊಲಸ್ ಪೂರನ್ ಅವರ ಮಹತ್ವದ ವಿಕೆಟ್ ಪಡೆದ ಕರ್ಣ ಶರ್ಮಾ, ಲಖನೌ ಬ್ಯಾಟಿಂಗ್‌ನ ಬೆನ್ನೆಲುಬು ಮುರಿದರು.

ಕನ್ನಡಿಗ ಕೆ.ಗೌತಮ್ (23 ರನ್, 13 ಎ.) ಅಲ್ಪ ಹೋರಾಟದ ಸೂಚನೆ ನೀಡಿದರೂ, ರನೌಟ್ ಆದರು. ಆ ಬಳಿಕ ಆತಿಥೇಯ ತಂಡ ಸೋಲಿನ ಹಾದಿ ಹಿಡಿಯಿತು.

ಉತ್ತಮ ಆರಂಭ: ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ ಉತ್ತಮ ಆರಂಭ ಮಾಡಿತ್ತು. ಆದರೆ ನಂತರ ಸ್ಪಿನ್ನರ್‌ಗಳ ಶಿಸ್ತುಬದ್ಧ ಬೌಲಿಂಗ್ ಎದುರು ಬ್ಯಾಟರ್‌ಗಳು ಪರದಾಡಿದರು. ಆರಂಭ ಆಟಗಾರ ಫಫ್ ಡುಪ್ಲೆಸಿ (44, 40ಎ,4x1, 6x1) ಬಿಟ್ಟರೆ ಉಳಿದವರಿಂದ ಅಂಥ ಕೊಡುಗೆ ಬರಲಿಲ್ಲ. ಅವರು ನಾಯಕ ವಿರಾಟ್ ಕೊಹ್ಲಿ (31, 30ಎ, 4x3) ಜೊತೆ 8.5 ಓವರುಗಳಲ್ಲಿ 62 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದ್ದರು.

ನಿಧಾನಗತಿಯ ಪಿಚ್‌ನಲ್ಲಿ ಹೊಡೆತಗಳಿಗೆ ಹೋಗುವುದು ಸುಲಭವಾಗಿರಲಿಲ್ಲ. ರವಿ ಬಿಷ್ಣೋಯಿ 9ನೇ ಓವರ್‌ನಲ್ಲಿ ಈ ಜೊತೆಯಾಟ ಮುರಿದರು. ಅವರ 'ಗೂಗ್ಲಿ' ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಮುನ್ನುಗ್ಗಿದ ಕೊಹ್ಲಿ ನೇರ ಗುರುತಿಸದೇ ಸ್ಟಂಪ್ಡ್ ಆದರು.

ಮಧ್ಯಮ ಕ್ರಮಾಂಕ ಎಂದಿನಂತೆ ಕೈಕೊಟ್ಟಿತು. ಅನುಜ್ ರಾವತ್ (9), ಆಫ್ ಸ್ಪಿನ್ನರ್ ಕೃಷ್ಣಪ್ಪ ಗೌತಮ್ ಅವರಿಗೆ ವಿಕೆಟ್ ತೆತ್ತರು. ಗ್ಲೆನ್ ಮ್ಯಾಕ್ಸ್‌ವೆಲ್ (4), ರವಿ ಬಿಷ್ಣೋಯಿ ಲೆಗ್ ಬ್ರೇಕ್ ಎಸೆತದಲ್ಲಿ ರಿವರ್ಸ್ ಸ್ವೀಪ್ ಯತ್ನದಲ್ಲಿ ಲೆಗ್‌ಬಿಫೋರ್ ಬಲೆಗೆ ಬಿದ್ದರು. 16ನೇ ಓವರ್‌ನಲ್ಲಿ ಮೊತ್ತ 4 ವಿಕೆಟ್‌ಗೆ 93 ರನ್‌ಗಳಾಗಿದ್ದಾಗ ಮಳೆಯಿಂದ ಕೆಲಕಾಲ ಆಟಕ್ಕೆ ಅಡ್ಡಿಯಾಯಿತು. ಒಂದೆಡೆ ವಿಕೆಟ್‌ಗಳು ಬೀಳುತ್ತಿದ್ದರೂ ಸ್ಥಿರವಾಗಿ ಆಡುತ್ತಿದ್ದ ಡುಪ್ಲೆಸಿ 17ನೇ ಓವರ್‌ನಲ್ಲಿ ನಿರ್ಗಮಿಸಿದರು.

ಕೊಹ್ಲಿ–ಗಂಭೀರ್ 'ಜಟಾಪಟಿ': ಪಂದ್ಯದ ಬಳಿಕ ವಿರಾಟ್ ಕೊಹ್ಲಿ ಮತ್ತು ಲಖನೌ ತಂಡದ ಮೆಂಟರ್ ಗೌತಮ್ ಗಂಭೀರ್ ನಡುವೆ ಮಾತಿನ ಚಕಮಕಿ ನಡೆಯಿತು. ಸಹ ಆಟಗಾರರು ಇಬ್ಬರನ್ನೂ ಸಮಾಧಾನಪಡಿಸಿದರು.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 9ಕ್ಕೆ 126 (20 ಓವರ್)
ವಿರಾಟ್ ಸ್ಟಂಪ್ಡ್ ಪೂರನ್ ಬಿ ಬಿಷ್ಣೋಯಿ 31 (30ಎ, 4X3)
ಡುಪ್ಲೆಸಿ ಸಿ ಕೃಣಾಲ್ ಬಿ ಮಿಶ್ರಾ 44 (40ಎ, 4X1, 6X1)
ಅನುಜ್ ಸಿ ಮೇಯರ್ಸ್ ಬಿ ಗೌತಮ್ 9 (11ಎ)
ಮ್ಯಾಕ್ಸ್‌ವೆಲ್ ಎಲ್‌ಬಿಡಬ್ಲ್ಯು ಬಿಷ್ಣೋಯಿ 4 (5ಎ)
ಸುಯಶ್ ಸಿ ಗೌತಮ್ ಬಿ ಮಿಶ್ರಾ 6 (7ಎ)
ದಿನೇಶ್ ರನೌಟ್ (ಯಶ್) 16 (11ಎ, 4X1, 6X1)
ಲೊಮ್ರೊರ್ ಎಲ್‌ಬಿಡಬ್ಲ್ಯು ಹಕ್ 3 (4ಎ)
ಹಸರಂಗ ಔಟಾಗದೆ 8 (7ಎ, 4X1)
ಕರ್ಣ ಸಿ ಗೌತಮ್ ಬಿ ಹಕ್ 2 (2ಎ)
ಸಿರಾಜ್ ಸಿ ಪೂರನ್ ಬಿ ಹಕ್ 0 (1ಎ)
ಹ್ಯಾಜಲ್‌ವುಡ್ ಔಟಾಗದೆ 1 (2ಎ)
ಇತರೆ: (ವೈಡ್ 2)
ವಿಕೆಟ್ ಪತನ: 1-62 (ವಿರಾಟ್ ಕೊಹ್ಲಿ, 8.6), 2-75 (ಅನುಜ್ ರಾವತ್, 11.4), 3-80 (ಗ್ಲೆನ್ ಮ್ಯಾಕ್ಸ್‌ವೆಲ್, 12.4), 4-90 (ಸುಯಶ್ ಪ್ರಭುದೇಸಾಯಿ, 14.3), 5-109 (ಫಫ್ ಡುಪ್ಲೆಸಿ, 16.5), 6-114 (ಮಹಿಪಾಲ್ ಲೊಮ್ರೊರ್, 17.5), 7-117 (ದಿನೇಶ್ ಕಾರ್ತಿಕ್, 18.4), 8-121 (ಕರ್ಣ ಶರ್ಮಾ, 19.2), 9-121 (ಮೊಹಮ್ಮದ್ ಸಿರಾಜ್, 19.3)
ಬೌಲಿಂಗ್: ಕೃಣಾಲ್ ಪಾಂಡ್ಯ 4–0–21–0, ಮಾರ್ಕಸ್ ಸ್ಟೊಯಿನಿಸ್ 1–0–11–0, ನವೀನ್ –ಉಲ್ –ಹಕ್ 4–0–30–3, ರವಿ ಬಿಷ್ಣೋಯಿ 4–0–21–2, ಅಮಿತ್ ಮಿಶ್ರಾ 3–0–21–2, ಯಶ್ ಠಾಕೂರ್ 2–0–12–0, ಕೃಷ್ಣಪ್ಪ ಗೌತಮ್ 2–0–10–1

ಲಖನೌ ಸೂಪರ್ ಜೈಂಟ್ಸ್ 108 (19.5 ಓವರ್)
ಮೇಯರ್ಸ್ ಸಿ ಅನುಜ್ ಬಿ ಸಿರಾಜ್ 0 (2ಎ)
ಆಯುಷ್ ಸಿ ವಿರಾಟ್ ಬಿ ಹ್ಯಾಜಲ್‌ವುಡ್ 4 (11ಎ)
ಕೃಣಾಲ್ ಸಿ ವಿರಾಟ್ ಬಿ ಮ್ಯಾಕ್ಸ್‌ವೆಲ್ 14 (11ಎ, 4X3)
ಹೂಡಾ ಸ್ಟಂಪ್ಡ್ ದಿನೇಶ್ ಬಿ ಹಸರಂಗ 1 (2ಎ)
ಸ್ಟೊಯಿನಿಸ್ ಸಿ ಸುಯಶ್ ಬಿ ಕರ್ಣ 13 (19ಎ, 6X1)
ಪೂರನ್ ಸಿ ಲೊಮ್ರೊರ್ ಬಿ ಕರ್ಣ 9 (7ಎ, 6X1)
ಗೌತಮ್ ರನೌಟ್ ಸೋನು (ಬದಲಿ)/ ಕಾರ್ತಿಕ್ 23 (13ಎ, 4X1, 6X2)
ಬಿಷ್ಣೋಯಿ ರನೌಟ್ (ಹರ್ಷಲ್/ ದಿನೇಶ್) 5 (10ಎ)
ಮಿಶ್ರಾ ಸಿ ದಿನೇಶ್ ಬಿ ಹರ್ಷಲ್ 19 (30ಎ, 4X2)
ನವೀನ್ ಸಿ ದಿನೇಶ್ ಬಿ ಹ್ಯಾಜಲ್‌ವುಡ್ 13 (13ಎ, 4X2)
ರಾಹುಲ್ ಔಟಾಗದೆ 0 (3ಎ)
ಇತರೆ: 7 (ಬೈ 1, ಲೆಗ್‌ಬೈ 1, ನೋಬಾಲ್ 2 ವೈಡ್ 3)
ವಿಕೆಟ್ ಪತನ: 1-0 (ಕೈಲ್ ಮೇಯರ್ಸ್, 0.2), 2-19 (ಕೃಣಾಲ್ ಪಾಂಡ್ಯ, 3.3), 3-21 (ಆಯುಷ್ ಬಡೋಣಿ, 4.1), 4-27 (ದೀಪಕ್ ಹೂಡಾ, 5.1), 5-38 (ನಿಕೊಲಸ್ ಪೂರನ್, 6.6), 6-65 (ಮಾರ್ಕಸ್ ಸ್ಟೊಯಿನಿಸ್, 10.4), 7-66 (ಕೃಷ್ಣಪ್ಪ ಗೌತಮ್, 11.1), 8-77 (ರವಿ ಬಿಷ್ಣೋಯಿ, 14.4), 9-103 (ನವೀನ್–ಉಲ್–ಹಕ್, 18.4), 10-108 (ಅಮಿತ್ ಮಿಶ್ರಾ, 19.5)
ಬೌಲಿಂಗ್: ಮೊಹಮ್ಮದ್ ಸಿರಾಜ್ 3–0–24–1, ಜೋಶ್ ಹ್ಯಾಜಲ್‌ವುಡ್ 3–0–15–2, ಗ್ಲೆನ್ ಮ್ಯಾಕ್ಸ್‌ವೆಲ್ 1–0–3–1, ವನಿಂದು ಹಸರಂಗ 4–0–20–1, ಕರ್ಣ ಶರ್ಮಾ 4–0–20–2, ಹರ್ಷಲ್ ಪಟೇಲ್ 3.5–0–20–1, ಮಹಿಪಾಲ್ ಲೊಮ್ರೊರ್ 1–0–4–0

ಫಲಿತಾಂಶ: ಆರ್‌ಸಿಬಿಗೆ 18 ರನ್‌ಗಳ ಜಯ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	8	6	2	0	12	0.638
ರಾಜಸ್ಥಾನ	9	5	4	0	10	0.800
ಲಖನೌ	9	5	4	0	10	0.639
ಚೆನ್ನೈ	9	5	4	0	10	0.329
ಬೆಂಗಳೂರು	9	5	4	0	10	-0.030
ಪಂಜಾಬ್	9	5	4	0	10	-0.447
ಮುಂಬೈ	8	4	4	0	8	-0.502
ಕೋಲ್ಕತ್ತ	9	3	6	0	6	-0.147
ಹೈದರಾಬಾದ್	8	3	5	0	6	-0.577
ಡೆಲ್ಲಿ	8	2	6	0	4	-0.898

ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ತುಷಾರ್	ಚೆನ್ನೈ	17

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	459

ಇಂದು ಪ್ರಬಲ ಗುಜರಾತ್ ಟೈಟನ್ಸ್ ಸವಾಲು

ಡೆಲ್ಲಿಗೆ 'ಮಾಡು–ಮಡಿ' ಪಂದ್ಯ

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮಿಚೆಲ್ ಮಾರ್ಷ್

ಅಹಮದಾಬಾದ್ (ಪಿಟಿಐ): ಪ್ರಮುಖ ಬ್ಯಾಟರ್‌ಗಳ ವೈಫಲ್ಯದಿಂದ ಕಂಗೆಟ್ಟಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡ ಮಂಗಳವಾರ ಇಲ್ಲಿ ನಡೆಯುವ ಐಪಿಎಲ್ ಪಂದ್ಯದಲ್ಲಿ ಪ್ರಬಲ ಗುಜರಾತ್ ಟೈಟನ್ಸ್ ವಿರುದ್ಧ ಆಡಲಿದೆ. ಈ ಪಂದ್ಯ ಗೆದ್ದರಷ್ಟೇ ಡೆಲ್ಲಿ ತಂಡಕ್ಕೆ ಪ್ಲೇ ಆಫ್‌ಗೆ ಸ್ಥಾನ ಪಡೆಯುವ ಕ್ಷೀಣ ಅವಕಾಶ ಜೀವಂತವಾಗಿ ಇರಲಿದೆ.

ಅನುಭವಿಗಳಾದ ಪ್ರಿಥ್ವಿ ಶಾ ಮತ್ತು ಸರ್ಫರಾಜ್ ಖಾನ್ ಸತತವಾಗಿ ವಿಫಲರಾಗುತ್ತಿರುವುದು ದೆಹಲಿ ತಂಡದ ಕಳವಳಕ್ಕೆ ಕಾರಣವಾಗಿದೆ. ಎಂಟು ಪಂದ್ಯಗಳಲ್ಲಿ ಆರನ್ನು ಸೋತಿರುವ ಡೇವಿಡ್ ವಾರ್ನರ್ ಬಳಗ ಈಗ 'ಮಾಡು ಇಲ್ಲ ಮಡಿ' ಪರಿಸ್ಥಿತಿ ಎದುರಿಸುತ್ತಿದೆ. ತಂಡದ ಪ್ರಸಕ್ತ ನಿರ್ವಹಣೆ ನೋಡಿದರೆ ಪ್ಲೇ ಆಫ್ ಅವಕಾಶ ಮರೀಚಿಕೆಯಂತೆ ಕಂಡುಬರುತ್ತಿದೆ.

ಪ್ರಿಥ್ವಿ ಅವರ ಕಳಪೆ ಪ್ರದರ್ಶನದಿಂದಾಗಿ, ಈ ಹಿಂದಿನ ಪಂದ್ಯದಲ್ಲಿ ವಾರ್ನರ್ ಜೊತೆ ಫಿಲ್ ಸಾಲ್ಟ್ ಅವರಿಗೆ ಇನಿಂಗ್ಸ್ ಆರಂಭಿಸುವ ಅವಕಾಶ ದೊರಕಿತ್ತು. ಹೈದರಾಬಾದ್ ವಿರುದ್ಧದ ಆ ಪಂದ್ಯದಲ್ಲಿ ಸಾಲ್ಟ್ ಚೆನ್ನಾಗಿ ಆಡಿ ಅರ್ಧ ಶತಕ ಸಿಡಿಸಿದ್ದರು. ಮೂರನೇ ಕ್ರಮಾಂಕದಲ್ಲಿ ಮಿಚೆಲ್ ಮಾರ್ಷ್ ಕೂಡ ಲಯ ಕಂಡುಕೊಂಡಿದ್ದು, ಬೌಲಿಂಗ್‌ನಲ್ಲೂ ಕೈಚಳಕ ತೋರಿಸಿರುವುದು ಸಮಾಧಾನದ ಅಂಶ.

ಪ್ರಿಯಂ ಗರ್ಗ್ ಕೊಟ್ಟ ಅವಕಾಶಗಳಲ್ಲಿ ಮಿಂಚಲಿಲ್ಲ. ನಾಲ್ಕನೇ ಕ್ರಮಾಂಕದಲ್ಲಿ ಮನೀಷ್ ಪಾಂಡೆ ನಿರ್ವಹಣೆಯೂ ಅಷ್ಟಕ್ಕಷ್ಟೇ. ಕೆಳ ಕ್ರಮಾಂಕದಲ್ಲಿ ಆಡಲು ಬಂದು ಗಮನಾರ್ಹ ಕೊಡುಗೆ ನೀಡುತ್ತಿರುವ ಅಕ್ಷರ್ ಪಟೇಲ್ ಅವರಿಗೆ ವಾರ್ನರ್ ಅವರು ಮೇಲಿನ ಕ್ರಮಾಂಕಕ್ಕೆ ಬಡ್ತಿ ನೀಡುವ ಸಾಧ್ಯತೆಯಿದೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲೂ ಅಕ್ಷರ್ ಉಪಯುಕ್ತ ಇನಿಂಗ್ಸ್ ಆಡಿದ್ದಾರೆ.

ಪಂದ್ಯ ಆರಂಭ
ಸಂಜೆ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಆದರೆ ಬೌಲಿಂಗ್ ವಿಭಾಗ ಅಷ್ಟೇನೂ ಸೊರಗಿಲ್ಲ. ಹಳೆಯ ಹುಲಿ ಇಶಾಂತ್ ಶರ್ಮಾ ಪರಿಣಾಮಕಾರಿ ಆಗಿದ್ದಾರೆ. ಆ್ಯನ್ರಿಚ್ ನಾಕಿಯಾ ಅವರಿಂದ ತಂಡ ಸುಧಾರಿತ ಪ್ರದರ್ಶನ ನಿರೀಕ್ಷಿಸುತ್ತಿದೆ. ಮುಕೇಶ್ ಕುಮಾರ್ ಓವರೊಂದಕ್ಕೆ 11 ರನ್ ನೀಡುತ್ತಿರುವುದು ಆ ತಂಡಕ್ಕೆ ಕಳವಳಕಾರಿ ವಿಚಾರ.

ಇನ್ನೊಂದೆಡೆ ಗುಜರಾತ್ ಆತ್ಮವಿಶ್ವಾಸದಲ್ಲಿದೆ. ಯಾವುದೇ ಸಂದರ್ಭದಲ್ಲೂ ಹಿನ್ನಡೆಯಿಂದ ಪುಟಿದೇಳುವ ಸಾಮರ್ಥ್ಯ ಹಾರ್ದಿಕ್ ಪಾಂಡ್ಯ ಬಳಗಕ್ಕಿದೆ. ತಂಡ ಎಂಟು ಪಂದ್ಯಗಳಲ್ಲಿ ಆರನೇ ಜಯ ದಾಖಲಿಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಕೋಲ್ಕತ್ತ ವಿರುದ್ಧ ಡೇವಿಡ್ ಮಿಲ್ಲರ್ ಅವರ ಜೊತೆ ವಿಜಯ್ ಶಂಕರ್ ಅವರೂ ಅತ್ಯುತ್ತಮ ಇನಿಂಗ್ಸ್ ಕಟ್ಟಿದ್ದರು. ಹಾಲಿ ಚಾಂಪಿಯನ್ ತಂಡ ಗೆಲುವಿಗಾಗಿ ಯಾರೊಬ್ಬರನ್ನು ಬಲವಾಗಿ ನೆಚ್ಚಿಕೊಂಡಿಲ್ಲ.

ತಂಡದ ಸ್ಪಿನ್ ವಿಭಾಗ ಬಲವಾಗಿದ್ದು ರಶೀದ್ ಖಾನ್ ಜೊತೆ ಅಫ್ಗಾನಿಸ್ತಾನದ ಇನ್ನೊಬ್ಬ ಬೌಲರ್ ನೂರ್ ಅಹ್ಮದ್ ಉಪಯುಕ್ತ ಕೊಡುಗೆ ನೀಡುತ್ತಿದ್ದಾರೆ. ನಾಲ್ಕು ಪಂದ್ಯಗಳಿಂದ ನೂರ್ ಎಂಟು ವಿಕೆಟ್‌ಗಳನ್ನು (ಇಕಾನಮಿ: 7.33) ಗಳಿಸಿದ್ದಾರೆ.

'ಯಶಸ್ವಿ' ಕಥೆ: ಅಂದು ನಿರ್ವಸಿತ, ಈಗ ಐಪಿಎಲ್ ಹೀರೊ...

ಯಶಸ್ವಿ ಜೈಸ್ವಾಲ್

ನವದೆಹಲಿ (ಎಎಫ್‌ಪಿ): ಒಂದು ಕಾಲದಲ್ಲಿ ಕ್ರಿಕೆಟ್ ಖರ್ಚು ಭರಿಸಲು ಕತ್ತಲಾದ ಮೇಲೆ ಬೀದಿಬದಿ ಪಾನಿಪೂರಿ ಮಾರುತ್ತಿದ್ದ, ರಾತ್ರಿ ವೇಳೆ ಟೆಂಟ್‌ನಲ್ಲಿ ಮಲಗುತ್ತಿದ್ದ ಯಶಸ್ವಿ ಜೈಸ್ವಾಲ್ ಈಗ ಮನೆಮಾತಾಗಿರುವ ಬ್ಯಾಟರ್. ಐಪಿಎಲ್‌ನಲ್ಲಿ ಭಾನುವಾರ ರಾತ್ರಿ ಮುಂಬೈ ಇಂಡಿಯನ್ಸ್ ವಿರುದ್ಧ ಹೊಡೆದ ಬಿರುಸಿನ ಶತಕ ಕ್ರಿಕೆಟ್ ಪರಿಣತರಿಂದ ಶ್ಲಾಘನೆಗೆ ಪಾತ್ರವಾಗಿದೆ.

ವಾಂಖೆಡೆಯಲ್ಲಿ ಕಿಕ್ಕಿರಿದು ನೆರೆದಿದ್ದ ಪ್ರೇಕ್ಷಕರೆದುರು 21 ವರ್ಷದ ಜೈಸ್ವಾಲ್ 62 ಎಸೆತಗಳಲ್ಲಿ 124 ರನ್‌ಗಳ ಸ್ಫೋಟಕ (ಎಂಟು ಸಿಕ್ಸರ್, 16 ಬೌಂಡರಿ) ಇನಿಂಗ್ಸ್ ಆಡಿದ್ದರು. ಉತ್ತರ ಪ್ರದೇಶದ ಬಡ ಕುಟುಂಬವೊಂದಕ್ಕೆ ಸೇರಿದ ಜೈಸ್ವಾಲ್ ಕ್ರಿಕೆಟ್ ಆಡಬೇಕೆಂಬ ಉತ್ಕಟ ಬಯಕೆಯಿಂದ ಹಿಂದೆ ಇದೇ ಕನಸಿನ ನಗರಿಗೆ ಬಂದಿದ್ದರು.

'ಎಂಥ ಕಥೆ. ಎಂಥ ವಿಶೇಷ ಪ್ರತಿಭೆ. ಯಶಸ್ವಿ ಜೈಸ್ವಾಲ್ ಸೂಪರ್‌ಸ್ಟಾರ್ ಹಾದಿಯಲ್ಲಿದ್ದಾರೆ' ಎಂದು ಐಪಿಎಲ್‌ನ ಮಾಜಿ ಕೋಚ್ ಟಾಮ್ ಮೂಡಿ ಅವರು ಮನಸಾರೆ ಮೆಚ್ಚಿ ಟ್ವೀಟ್ ಮಾಡಿದ್ದಾರೆ.

'ಅವನದು ನೈಜ ಪ್ರತಿಭೆ. ದೇಶೀಯ ಕ್ರಿಕೆಟ್‌ನಲ್ಲಿ ತೋರಿದ ಅಮೋಘ ಲಯವನ್ನೇ ಐಪಿಎಲ್‌ನಲ್ಲೂ ಮುಂದುವರಿಸಿದ್ದಾನೆ. ಅವನಿಗೂ, ಭಾರತೀಯ ಕ್ರಿಕೆಟ್‌ಗೂ, ರಾಜಸ್ಥಾನ ರಾಯಲ್ಸ್ ತಂಡಕ್ಕೂ ಒಳಿತೇ ಆಗಿದೆ' ಎನ್ನುವ ಮೆಚ್ಚುಗೆಯ ಮಾತು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರದು.

ಸಾಮಾಜಿಕ ಮಾಧ್ಯಮಗಳಲ್ಲೂ ಜೈಸ್ವಾಲ್ ಆಟಕ್ಕೆ ಹೊಗಳಿಕೆಯ ಸುರಿಮಳೆಯಾಗಿದೆ. 2008ರಲ್ಲಿ ಆರ್‌ಸಿಬಿ ಎದುರು ಕೆಕೆಆರ್ ತಂಡದ ಬ್ರೆಂಡನ್ ಮೆಕಲಂ ಗಳಿಸಿದ 158 ರನ್‌ಗಳ ಆಟಕ್ಕೆ ಅವರ ಬ್ಯಾಟಿಂಗ್ ಹೋಲಿಸುತ್ತಿದ್ದಾರೆ.

ಈ ಎಡಗೈ ಆಟಗಾರ ಐಪಿಎಲ್‌ನಲ್ಲಿ ಗಳಿಸಿದ ಮೊದಲ ಶತಕ ಈ ಋತುವಿನ ಅತ್ಯಧಿಕ ವೈಯಕ್ತಿಕ ಮೊತ್ತ ಎನಿಸಿತು. ಮಾತ್ರವಲ್ಲ, 2023ರ ಲೀಗ್‌ನಲ್ಲಿ ಈಗ 428 ರನ್‌ಗಳೊಂದಿಗೆ ಯಶಸ್ವಿ ಎರಡನೇ ಸ್ಥಾನಕ್ಕೇರಿದ್ದಾರೆ.

ಬಡಕುಟುಂಬ: ತಂದೆ–ತಾಯಿಯನ್ನು ಬಿಟ್ಟು ಮುಂಬೈಗೆ ಬಂದಿಳಿದಾಗ ಜೈಸ್ವಾಲ್ ವಯಸ್ಸು ಆಗ ಬರೇ 11. 'ನಾನು ಡೇರಿಯೊಂದರಲ್ಲಿ ಮಲಗುತ್ತಿದ್ದೆ. ಸಂಬಂಧಿಯೊಬ್ಬರ ಮನೆಯಲ್ಲಿ ದಿನ ಕಳೆಯುತ್ತಿದ್ದೆ. ಅದು ಇಕ್ಕಟ್ಟಾಗಿದ್ದ ಕಾರಣ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವಂತೆ ಅವರು ಹೇಳಿದರು. ಆಜಾದ್ ಮೈದಾನದ ಬಳಿಯ ಟೆಂಟ್ ಒಂದರಲ್ಲಿ ರಾತ್ರಿ ಕಳೆದು, ಹಗಲಿನಲ್ಲಿ ಕ್ರಿಕೆಟ್ ಆಡುತ್ತಿದ್ದೆ' ಎಂದು ಜೈಸ್ವಾಲ್ ಈ ಹಿಂದೆ ಸಂದರ್ಶನವೊಂದರಲ್ಲಿ ತಿಳಿಸಿದ್ದರು.

ಕೋಚ್ ಜ್ವಾಲಾ ಸಿಂಗ್ ಅವರ ಕಣ್ಣಿಗೆ ಬಿದ್ದ ನಂತರ ಜೈಸ್ವಾಲ್ ಅವರ ದುರ್ದೆಸೆ ಕರಗತೊಡಗಿತು. 2019ರಲ್ಲಿ ಮುಂಬೈ ತಂಡದಲ್ಲಿ ಸ್ಥಾನ. ದೇಶಿ ಕ್ರಿಕೆಟ್‌ನಲ್ಲಿ ಶತಕ ಹೊಡೆದ ಅತಿ ಕಿರಿಯ ಆಟಗಾರ ಎಂಬ ಹೆಗ್ಗಳಿಕೆ ಅವರದಾಯಿತು. ಆಗ ಅವರ ವಯಸ್ಸು 17 ವರ್ಷ 292 ದಿನ.

ಅವರ ಜೀವನಕ್ಕೆ ದೊಡ್ಡ ತಿರುವು ದೊರಕಿದ್ದು 2019ರಲ್ಲಿ. ಆ ಸಾಲಿನ ಐಪಿಎಲ್ ಹರಾಜಿನಲ್ಲಿ ಅವರನ್ನು ಆರ್‌ಆರ್ ತಂಡ ₹2.76 ಕೋಟಿ ಮೊತ್ತಕ್ಕೆ ಖರೀದಿಸಿತ್ತು. 2020ರಲ್ಲಿ ಅವರು ಭಾರತ 19 ವರ್ಷದೊಳಗಿನವರ ತಂಡದಲ್ಲಿ ಆಡಿ ಅತ್ಯಧಿಕ ರನ್ ಕಲೆಹಾಕಿದರು. ಟೂರ್ನಿಯ ಶ್ರೇಷ್ಠ ಆಟಗಾರ ಎಂಬ ಶ್ರೇಯಕ್ಕೂ ಪಾತ್ರರಾಗಿದ್ದರು. ಅವರ ಮೊದಲ ಮೂರು ಐಪಿಎಲ್ ಋತುಗಳು ಸಾಧಾರಣ ಆಗಿದ್ದವು. ಆದರೆ ಈ ಬಾರಿ ಅವರು ಜೋಸ್ ಬಟ್ಲರ್ ಜೊತೆಗೂಡಿ ರಾಯಲ್ಸ್ ತಂಡಕ್ಕೆ ಒಳ್ಳೆಯ ಆರಂಭ ನೀಡುತ್ತಿದ್ದಾರೆ.

ಆರ್‌ಸಿಬಿ ತಂಡಕ್ಕೆ ಕೇದಾರ್ ಜಾಧವ್

ನವದೆಹಲಿ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್‌ನ ಇನ್ನುಳಿದ ಪಂದ್ಯಗಳಿಗೆ ಡೇವಿಡ್ ವಿಲಿ ಅವರಿಗೆ ಬದಲಿ ಆಟಗಾರನಾಗಿ ಆಲ್‌ರೌಂಡರ್ ಕೇದಾರ್ ಜಾಧವ್‌ಗೆ ಸ್ಥಾನ ಕಲ್ಪಿಸಿದೆ.

ಇಂಗ್ಲೆಂಡ್‌ನ ಆಲ್‌ರೌಂಡರ್ ವಿಲಿ ಅವರು ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧದ ಹಿಂದಿನ ಪಂದ್ಯದಲ್ಲಿ ಬ್ಯಾಟಿಂಗ್ ವೇಳೆ ಗಾಯಗೊಂಡಿದ್ದು, ಇನ್ನುಳಿದ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಈ ಋತುವಿನಲ್ಲಿ ನಾಲ್ಕು ಪಂದ್ಯಗಳನ್ನು ಆಡಿರುವ ಅವರು ಮೂರು ವಿಕೆಟ್ ಪಡೆದಿದ್ದಾರೆ.

2010 ರಲ್ಲಿ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದ ಜಾಧವ್, ಈ ಬಾರಿಯ ಹರಾಜಿನಲ್ಲಿ ಯಾವುದೇ ತಂಡದಲ್ಲಿ ಸ್ಥಾನ ಪಡೆದಿರಲಿಲ್ಲ. ಇದೀಗ ಅವರನ್ನು ₹ 1 ಕೋಟಿ ಮೂಲ ಬೆಲೆಗೆ ಆರ್‌ಸಿಬಿ ತನ್ನ ತಂಡಕ್ಕೆ ಸೇರಿಸಿಕೊಂಡಿದೆ.

ಡಬ್ಲ್ಯುಟಿಸಿ ಫೈನಲ್ ಪಂದ್ಯಕ್ಕೆ ರಾಹುಲ್, ಉನದ್ಕತ್ ಅನುಮಾನ



ರಾಹುಲ್

ಲಖನೌ (ಪಿಟಿಐ): ಬ್ಯಾಟರ್ ಕೆ.ಎಲ್.ರಾಹುಲ್ ಮತ್ತು ವೇಗದ ಬೌಲರ್ ಜೈದೇವ್ ಉನದ್ಕತ್ ಅವರು ಗಾಯಗೊಂಡಿರುವುದರಿಂದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಆಡುವುದು ಅನುಮಾನ ಎನಿಸಿದೆ.

ಲಖನೌ ತಂಡದ ನಾಯಕ ರಾಹುಲ್ ಅವರು ಆರ್‌ಸಿಬಿ ವಿರುದ್ಧ ಸೋಮವಾರ ನಡೆದ ಐಪಿಎಲ್ ಪಂದ್ಯದ ವೇಳೆ ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿದ್ದರು. ಉನದ್ಕತ್ ಅವರು ಭಾನುವಾರ ಅಭ್ಯಾಸದ ವೇಳೆ ಆಯತಪ್ಪಿ ಬಿದ್ದು ಭುಜಕ್ಕೆ ಗಾಯವಾಗಿತ್ತು.

ಡಬ್ಲ್ಯುಟಿಸಿ ಫೈನಲ್ ಪಂದ್ಯ ಓವಲ್‌ನಲ್ಲಿ ಜೂನ್ 7 ರಿಂದ 11ರ ನಡೆಯಲಿದ್ದು, ಭಾರತ– ಆಸ್ಟ್ರೇಲಿಯಾ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ವಿಶ್ವ ಬಾಕ್ಸಿಂಗ್: ವರಿಂದರ್ ಸಿಂಗ್‌ಗೆ ಸೋಲು

ಹುಸಾಮುದ್ದೀನ್ ಶುಭಾರಂಭ

ಹುಸಾಮುದ್ದೀನ್– ಟ್ವಿಟರ್ ಚಿತ್ರ

ತಾಷ್ಕೆಂಟ್, ಉಜ್ಬೇಕಿಸ್ತಾನ (ಪಿಟಿಐ): ಭಾರತದ ಮೊಹಮ್ಮದ್ ಹುಸಾಮುದ್ದೀನ್ ಅವರು ಇಲ್ಲಿ ನಡೆಯುತ್ತಿರುವ ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಜಯದ ಆರಂಭ ಮಾಡಿದ್ದಾರೆ.

57 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ಹುಸಾಮುದ್ದೀನ್ ಮೊದಲ ಸುತ್ತಿನ ಬೌಟ್‌ನಲ್ಲಿ 5–0ಯಿಂದ ಮೆಸಿಡೋನಿಯಾದ ಅಲೆನ್ ರುಸ್ತೆಮೊವ್‌ಸ್ಕಿ ಅವರನ್ನು ಪರಾಭವಗೊಳಿಸಿದರು. ನಿಖರ ಪಂಚ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದ ಭಾರತದ ಬಾಕ್ಸರ್ ಬೌಟ್‌ನಲ್ಲಿ ಸಂಪೂರ್ಣ ಪಾರಮ್ಯ ಮೆರೆದರು.

ಹುಸಾಮುದ್ದೀನ್ ಅವರಿಗೆ ಮುಂದಿನ ಸುತ್ತಿನಲ್ಲಿ ಚೀನಾದ ಪಿಂಗ್ ಲ್ಯು ಸವಾಲು ಎದುರಾಗಿದೆ.

60 ಕೆಜಿ ವಿಭಾಗದ ಬೌಟ್‌ನಲ್ಲಿ ವರಿಂದರ್ ಸಿಂಗ್ 0–5ರಿಂದ ಆತಿಥೇಯ ಬಾಕ್ಸರ್ ಮುಜಿಬಿಲ್ಲೊ ತುರ್ಸುನೊವ್ ಎದುರು ನಿರಾಸೆ ಅನುಭವಿಸಿದರು. ಆರಂಭದ ಮೂರು ನಿಮಿಷಗಳಲ್ಲಿ ಉತ್ತಮ ಸಾಮರ್ಥ್ಯ ಪ್ರದರ್ಶಿಸಿದ ವರಿಂದರ್ ಬಳಿಕ ವೈಫಲ್ಯ ಕಂಡರು. ಎದುರಾಳಿ ನೀಡಿದ ಒಂದು ಪಂಚ್‌ನಿಂದ ಅವರ ಬಲಗಣ್ಣಿನ ಮೇಲ್ಭಾಗದಲ್ಲಿ ಗಾಯವಾಯಿತು.

ಮಂಗಳವಾರ ನಡೆಯುವ ಮೊದಲ ಸುತ್ತಿನ ಬೌಟ್‌ಗಳಲ್ಲಿ, ಟೋಕಿಯೊ ಒಲಿಂಪಿಯನ್ ಆಶಿಶ್ ಚೌಧರಿ (80 ಕೆಜಿ) ಅವರು ಇರಾನ್‌ನ ಮೇಯಸಮ್ ಗೆಶ್‌ಲಾಘಿ ಎದುರು, ಹರ್ಷ (86 ಕೆಜಿ) ಅವರು ಆಸ್ಟ್ರೇಲಿಯಾದ ಮೆಕ್‌ಲಿಸ್ಟರ್ ವಿರುದ್ಧ ಸೆಣಸಲಿದ್ದಾರೆ.

71 ಕೆಜಿ ವಿಭಾಗದ ಸ್ಪರ್ಧಿ ನಿಶಾಂತ್ ದೇವ್ ಅವರು ಅಜರ್‌ಬೈಜಾನ್‌ನ ಸಾರ್‌ಖಾನ್ ಅಲಿಯೆವ್ ಅವರನ್ನು ಎದುರಿಸುವರು. ಅಲಿಯೆವ್ ಅವರು 2021ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು.

ಲಾಂಗ್‌ಜಂಪ್: ಶ್ರೀಶಂಕರ್‌ಗೆ ಚಿನ್ನ

ಮುರಳಿ ಶ್ರೀಶಂಕರ್

ನವದೆಹಲಿ (ಪಿಟಿಐ): ಭಾರತದ ಲಾಂಗ್‌ಜಂಪ್ ಅಥ್ಲೀಟ್ ಮುರಳಿ ಶ್ರೀಶಂಕರ್ ಅವರು ಅಮೆರಿಕದ ಚುಲುವಿಸ್ತಾದಲ್ಲಿ ನಡೆದ ಎಂವಿಎ ಹೈ ಪರ್ಫಾರ್ಮನ್ಸ್ ಅಥ್ಲೆಟಿಕ್ಸ್ ಕೂಟ 1ರಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಈ ಋತುವಿನ ಎರಡನೇ ಕೂಟದಲ್ಲಿ ಸ್ಪರ್ಧಿಸಿದ 24 ವರ್ಷದ ಶ್ರೀಶಂಕರ್, 8.29 ಮೀಟರ್ಸ್ ಸಾಧನೆ ಮಾಡಿದರು.

2022ರ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕೂಟದ ಬೆಳ್ಳಿ ಪದಕ ವಿಜೇತ ಶ್ರೀಶಂಕರ್ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ 8.36 ಮೀ. ಆಗಿದೆ.

ಈ ಕೂಟದಲ್ಲಿ ಚೀನಾದ ಮಾ ವೆಡಾಂಗ್ ಬೆಳ್ಳಿ (7.99 ಮೀ.) ಮತ್ತು ಅದೇ ದೇಶದ ಹುಫೆಂಗ್ ಹುವಾಂಗ್ (7.61 ಮೀ.) ಕಂಚು ಗಳಿಸಿದರು.

ವಿಶ್ವ ಚಾಂಪಿಯನ್‌ಷಿಪ್ ಅರ್ಹತೆಗೆ 8.25 ಮೀ. ಮಾನದಂಡವಿದೆ. ಆದರೆ ಈ ಕೂಟದಲ್ಲಿ ಗಾಳಿಯ ವೇಗವು (ಟೇಲ್‌ವಿಂಡ್ಸ್) ಅನುಮತಿಯ ಮಿತಿಗಿಂತ ಹೆಚ್ಚಿದ್ದರಿಂದ ಶ್ರೀಶಂಕರ್ ಅವರ ಫಲಿತಾಂಶವನ್ನು ಅರ್ಹತೆಗೆ ಪರಿಗಣಿಸಲಿಲ್ಲ.

ಶ್ರೀಶಂಕರ್ 8.36 ಮೀಟರ್ಸ್ ಸಾಧನೆಯೊಂದಿಗೆ ರಾಷ್ಟ್ರೀಯ ದಾಖಲೆ ಹೊಂದಿದ್ದರು. ಆದರೆ ಮಾರ್ಚ್‌ನಲ್ಲಿ ನಡೆದ ಇಂಡಿಯಾ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ಜೆಸ್ವಿನ್ ಅಲ್‌ಡ್ರಿನ್ (8.42 ಮೀ.) ಈ ದಾಖಲೆ ಮೀರಿದ್ದರು.

ಏಷ್ಯನ್ ಗೇಮ್ಸ್ ಟ್ರಯಲ್ಸ್‌ಗೆ ಸೈನಾ ಇಲ್ಲ

ನವದೆಹಲಿ (ಪಿಟಿಐ): ಎರಡು ಬಾರಿಯ ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಸೈನಾ ನೆಹ್ವಾಲ್ ಅವರು ಏಷ್ಯನ್ ಗೇಮ್ಸ್‌ಗಾಗಿ ನಡೆಯಲಿರುವ ರಾಷ್ಟ್ರೀಯ ಬ್ಯಾಡ್ಮಿಂಟನ್ ಟ್ರಯಲ್ಸ್‌ನಲ್ಲಿ ಭಾಗವಹಿಸುತ್ತಿಲ್ಲ. ಫಿಟ್‌ನೆಸ್ ಸಂಬಂಧಿತ ಸಮಸ್ಯೆಯಿಂದಾಗಿ ಅವರು ಹಿಂದೆ ಸರಿದಿದ್ದಾರೆ.

ತೆಲಂಗಾಣದ ಜ್ವಾಲಾ ಗುಟ್ಟಾ ಅಕಾಡೆಮಿ ಆಫ್ ಎಕ್ಸಲೆನ್ಸ್‌ನಲ್ಲಿ ಮೇ 4 ರಿಂದ 7ರವರೆಗೆ ಆಯ್ಕೆ ಟ್ರಯಲ್ಸ್ ನಡೆಯಲಿದೆ. ಏಷ್ಯನ್ ಕ್ರೀಡಾಕೂಟ ಸೆಪ್ಟೆಂಬರ್ 23 ರಿಂದ ಅಕ್ಟೋಬರ್ 8ರವರೆಗೆ ಚೀನಾ ಹಾಂಗ್‌ಝೌನಲ್ಲಿ ನಡೆಯಲಿದೆ.

'ಸೈನಾ ಫಿಟ್‌ನೆಸ್ ಸಮಸ್ಯೆಯಿಂದಾಗಿ ಟ್ರಯಲ್ಸ್‌ನಲ್ಲಿ ಭಾಗವಹಿಸುತ್ತಿಲ್ಲ. ಕುಶಾಲ್ ರಾಜ್– ಪ್ರಕಾಶ್ ರಾಜ್ ಕೂಡ ಹಿಂದೆ ಸರಿದಿದ್ದಾರೆ. ಉಳಿದವರು ಭಾಗವಹಿಸುವರು' ಎಂದು ಬಿಎಐ ಕಾರ್ಯದರ್ಶಿ ಸಂಜಯ್ ಮಿಶ್ರಾ ತಿಳಿಸಿದ್ದಾರೆ.

ಬ್ಯಾಸ್ಕೆಟ್‌ಬಾಲ್: ಗಗನ್ ಮಿಂಚು

ಬೆಂಗಳೂರು: ಗಗನ್ ಗಳಿಸಿದ 40 ಪಾಯಿಂಟ್ಸ್ ಬಲದಿಂದ ಮೈಸೂರಿನ ಆಲ್ ಸ್ಟಾರ್ ಅಕಾಡೆಮಿ ಬ್ಯಾಸ್ಕೆಟ್‌ಬಾಲ್ ಕ್ಲಬ್ ಮೈಸೂರು ತಂಡವು ರಾಜ್ಯ ಯೂತ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಜಯ ಗಳಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಸೋಮವಾರ ಆಲ್ ಸ್ಟಾರ್ ಅಕಾಡೆಮಿ 92– 56ರಿಂದ ಪಟ್ಟಾಭಿರಾಮ್ ಎಸ್‌ಸಿ ವಿರುದ್ಧ ಗೆದ್ದಿತು. ವಿಜೇತ ತಂಡದ ಪರ ರಯಾನ್ (26 ಪಾಯಿಂಟ್ಸ್) ಕೂಡ ಮಿಂಚಿದರು. ಪಟ್ಟಾಭಿರಾಮ್ ಪರ ನೀರವ್ ಗಳಿಸಿದ 32 ಪಾಯಿಂಟ್ಸ್ ವ್ಯರ್ಥವಾದವು.

ಇನ್ನುಳಿದ ಪಂದ್ಯಗಳಲ್ಲಿ ಬಿಸಿವೈಎ 73–21ರಿಂದ ಮೈಸೂರಿನ ಕೆಂಪೇಗೌಡ ಬಿ.ಸಿ. ಎದುರು, ಸಿನ್ಸಿನಾಟಿಕ್ಸ್ ಬಿ.ಸಿ. 39–30ರಿಂದ ದಾವಣಗೆರೆಯ ದಾವಣ್ಸ್ ಎಸ್‌ಇ ವಿರುದ್ಧ, ಎಚ್‌ಬಿಆರ್ 57–11ರಿಂದ ಕೋಲಾರ ಕನಕ ಬಿ.ಸಿ. ಎದುರು, ಹಾಸನದ ಹೊಯ್ಸಳ 44–43ರಿಂದ ವಿಮಾನಪುರ ಎಸ್‌ಸಿ ವಿರುದ್ಧ, ಹಲಸೂರು ಎಸ್‌ಯು 47–27ರಿಂದ ಮೌಂಟ್ಸ್ ಕ್ಲಬ್ ಎದುರು, ಐಬಿಬಿಸಿ 67–50ರಿಂದ ಮಂಡ್ಯದ ವಿಬಿಸಿ ಮೇಲೆ, ಎಸ್‌ಎಐ ಧಾರವಾಡ 60– 54ರಿಂದ ಆರಿಯನ್ಸ್ ಎಸ್‌ಸಿ ವಿರುದ್ಧ, ಎಂಎನ್‌ಕೆ ರಾವ್ ಪಾರ್ಕ್ 54–14ರಿಂದ ನೆಟ್ಟಕಲ್ಲಪ್ಪ ಬಿ.ಸಿ. ಎದುರು ಗೆಲುವು ಸಾಧಿಸಿದವು.

ಡಿಆರ್‌ಡಿಒ 63–17ರಿಂದ ಬೆಂಗಳೂರು ಸ್ಪೋರ್ಟಿಂಗ್ ಎದುರು ಗೆದ್ದಿತು.

ಸಂಕ್ಷಿಪ್ತ ಸುದ್ದಿಗಳು

ಫಾರ್ಮುಲಾ 2: ಮಿಂಚಿದ ಕುಶ್

ಕುಶ್ ಮೈನಿ

ಬಾಕು (ಪಿಟಿಐ): ಭಾರತದ ಕುಶ್ ಮೈನಿ ಇಲ್ಲಿ ನಡೆದ ಫಾರ್ಮುಲಾ2 ರೇಸ್‌ನಲ್ಲಿ ಗಮನ ಸೆಳೆದರಲ್ಲದೆ, ಸ್ಪ್ರಿಂಟ್ ಮತ್ತು ಫೀಚರ್ ರೇಸ್‌ನಲ್ಲಿ ಪಾಯಿಂಟ್ಸ್ ಗಿಟ್ಟಿಸುವಲ್ಲಿ ಯಶಸ್ವಿಯಾದರು.

ಸ್ಪ್ರಿಂಟ್ ರೇಸ್‌ನಲ್ಲಿ ನಾಲ್ಕನೇ ಹಾಗೂ ಫೀಚರ್ ರೇಸ್‌ನಲ್ಲಿ ಐದನೇ ಸ್ಥಾನ ಪಡೆದರು. ಫೀಚರ್ ರೇಸ್‌ನಲ್ಲಿ 14ನೆಯವರಾಗಿ ಸ್ಪರ್ಧೆ ಆರಂಭಿಸಿದ್ದ ಕುಶ್, ಅದ್ಭುತ ಚಾಲನಾ ಕೌಶಲ ಮೆರೆದು ಒಂಬತ್ತು ಸ್ಪರ್ಧಿಗಳನ್ನು ಹಿಂದಿಕ್ಕುವಲ್ಲಿ ಯಶ ಕಂಡರು.

ಕುಶ್ ಅವರು ಈ ಋತುವಿನ ಮೊದಲ ಎಂಟು ರೇಸ್‌ಗಳಲ್ಲಿ ಏಳರಲ್ಲೂ ಪಾಯಿಂಟ್ಸ್ ಕಲೆಹಾಕುವಲ್ಲಿ ಯಶಸ್ವಿಯಾಗಿದ್ದಾರೆ. ಅವರು ಇದೀಗ 41 ಪಾಯಿಂಟ್ಸ್‌ಗಳೊಂದಿಗೆ ಚಾಲಕರ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದ್ದಾರೆ.

ಕಣದಲ್ಲಿದ್ದ ಭಾರತದ ಇನ್ನೊಬ್ಬ ಚಾಲಕ ಜೆಹಾನ್ ದಾರೂವಾಲಾ ನಿರಾಸೆ ಅನುಭವಿಸಿದರು. ಫೀಚರ್ ರೇಸ್‌ನಲ್ಲಿ 10 ಸೆಕೆಂಡು ಪೆನಾಲ್ಟಿ ಪಡೆದ ಕಾರಣ ಅವರು 14ನೇ ಸ್ಥಾನ ಗಳಿಸಿದರು. ಸ್ಪ್ರಿಂಟ್ ರೇಸ್‌ನಲ್ಲಿ ಅವರ ಕಾರು ಅಪಘಾತಕ್ಕೆ ಒಳಗಾದ್ದರಿಂದ ಸ್ಪರ್ಧೆ ಪೂರ್ಣಗೊಳಿಸಲು ಆಗಲಿಲ್ಲ.

ರಾಜ್ಯ ರ್‍ಯಾಪಿಡ್ ಚೆಸ್: ಶರಣ್‌ಗೆ ಪ್ರಶಸ್ತಿ

ಬೆಂಗಳೂರು: ಎರಡನೇ ಶ್ರೇಯಾಂಕದ ಶರಣ್ ರಾವ್, ಬೆಂಗಳೂರಿನಲ್ಲಿ ಭಾನುವಾರ ಮುಕ್ತಾಯಗೊಂಡ ಕರ್ನಾಟಕ ರಾಜ್ಯ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಯಲಹಂಕದ ನಾಗಾರ್ಜುನ ಡಿಗ್ರಿ ಕಾಲೇಜಿನಲ್ಲಿ ನಡೆದ ಎರಡು ದಿನಗಳ ಈ ಟೂರ್ನಿಯುಲ್ಲಿ ಮಂಗಳೂರಿನ ಶರಣ್ (ರೇಟಿಂಗ್ 2170) ಎಂಟು ಅಂಕ ಗಳಿಸಿದರು. ಓಜಸ್ ಕುಲಕರ್ಣಿ ಮತ್ತು ಪಿ.ಪಿ.ಪ್ರಚುರ ಕೂಡ ಎಂಟು ಅಂಕ ಸಂಗ್ರಹಿಸಿದರೂ, ಉತ್ತಮ ಪ್ರೋಗ್ರೆಸಿವ್ ಅಂಕಗಳ ಆಧಾರದಲ್ಲಿ ಶರಣ್ ವಿಜಯಿ ಎನಿಸಿದರು.

ಒಟ್ಟು 9 ಸುತ್ತುಗಳ ಈ ಟೂರ್ನಿಯಲ್ಲಿ ಎಂಟು ಪಂದ್ಯಗಳನ್ನು ಗೆದ್ದ ಅವರು ಏಳನೇ ಸುತ್ತಿನಲ್ಲಿ ಲಿಖಿತ್ ಚಿಲುಕುರಿ ಎದುರು ಸೋತಿದ್ದರು. ಓಜಸ್ ಏಳು ಪಂದ್ಯಗಳನ್ನು ಗೆದ್ದು, ಎರಡನ್ನು ಡ್ರಾ ಮಾಡಿಕೊಂಡು ಎರಡನೇ ಸ್ಥಾನ ಪಡೆದರು. ಪ್ರಚುರ ಮೂರನೇ ಸ್ಥಾನ ಪಡೆದರು.

17 ಜಿಲ್ಲೆಗಳ 288 ಆಟಗಾರರು ಕಣದಲ್ಲಿದ್ದರು. ಇವರಲ್ಲಿ 148 ಮಂದಿ ರೇಟೆಡ್ ಆಟಗಾರರು ಒಳಗೊಂಡಿದ್ದರು. ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಆಶ್ರಯದಲ್ಲಿ ಈ ಟೂರ್ನಿಯನ್ನು ಎಸ್‌ಎಎಸ್ ವೆಂಚರ್ಸ್, ಎನ್‌ಜಿಐ ಸಹಯೋಗದಲ್ಲಿ ಸಂಘಟಿಸಿತ್ತು.

ಟೈಗರ್ ಕಪ್: ಸಿಕ್ಸ್ ಅಕಾಡೆಮಿಗೆ ಭರ್ಜರಿ ಜಯ

ಬೆಂಗಳೂರು: ಪ್ರಯಾಗ್ (21 ರನ್, 18ಕ್ಕೆ 4 ವಿಕೆಟ್) ಅವರ ಆಲ್‌ರೌಂಡ್ ಆಟದ ಬಲದಿಂದ ಸಿಕ್ಸ್ ಕ್ರಿಕೆಟ್ ಅಕಾಡೆಮಿ ತಂಡವು ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ 60 ರನ್‌ಗಳಿಂದ ಕಪಿಲ್ ಸಿಸಿ ತಂಡವನ್ನು ಸೋಲಿಸಿತು.

ಸಿಕ್ಸ್ ಅಕಾಡೆಮಿ ಮೈದಾನದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಆರ್‌ಎಕ್ಸ್‌ಸಿಎ 24 ರನ್‌ಗಳಿಂದ ಜಸ್ಟ್ ಕ್ರಿಕೆಟ್ ಅಕಾಡೆಮಿ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಸಿಕ್ಸ್ ಅಕಾಡೆಮಿ: 29.3 ಓವರ್‌ಗಳಲ್ಲಿ 145 (ರಫಾ ಪೂಣಚ್ಚ 38, ಕ್ರಿಷ್ ಧಾರಿಮಿ 21, ಪ್ರಯಾಗ್ 21; ರಜತ್ ಎಸ್. 30ಕ್ಕೆ 3). ಕಪಿಲ್ ಸಿಸಿ: 26.1 ಓವರ್‌ಗಳಲ್ಲಿ 85 (ನಿಶಾಂತ್ ವಿ. 35; ಪ್ರಯಾಗ್ 18ಕ್ಕೆ 4).

ಆರ್‌ಎಕ್ಸ್‌ಸಿಎ: 30 ಓವರ್‌ಗಳಲ್ಲಿ 7 ವಿಕೆಟ್‌ಗೆ 188 (ಸಿದ್ಧಾರ್ಥ್ ಸರ್ದಾ 47, ಸಹಸ್ರ 31). ಜಸ್ಟ್ ಕ್ರಿಕೆಟ್: 29.3 ಓವರ್‌ಗಳಲ್ಲಿ 164 (ವಿಕ್ರಂ 67, ಚಯಂಕ್ ಕುಮಾರ್ 26; ಅದ್ವಯ ದೇಶಕರ್ 27ಕ್ಕೆ 3, ಅಭಯ್ ಭಾಟಿಯಾ 29ಕ್ಕೆ 3).

ಎಲ್‌ಪಿಜಿಎ ಟೂರ್‌ನಲ್ಲಿ ಬೆಂಗಳೂರು ಆಟಗಾರ್ತಿಯ ಅತ್ಯುತ್ತಮ ಸಾಧನೆ

ಗಾಲ್ಫ್: ಅದಿತಿ ಅಶೋಕ್‌ಗೆ ಎರಡನೇ ಸ್ಥಾನ

ಅದಿತಿ ಅಶೋಕ್ –ಎಪಿ ಚಿತ್ರ

ಲಾಸ್ ಏಂಜಲೀಸ್ (ಪಿಟಿಐ/ ಎಎಫ್‌ಪಿ): ಭಾರತದ ಅದಿತಿ ಅಶೋಕ್ ಅವರು ಲೇಡಿಸ್ ಪ್ರೊಫೆಷನಲ್ ಗಾಲ್ಫ್ ಅಸೋಸಿಯೇಷನ್ (ಎಲ್‌ಪಿಜಿಎ) ಟೂರ್‌ನಲ್ಲಿ ಚೊಚ್ಚಲ ಪ್ರಶಸ್ತಿ ಗೆಲ್ಲುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡರು.

ಇಲ್ಲಿನ ವಿಲ್‌ಶೈರ್ ಕಂಟ್ರಿ ಕ್ಲಬ್‌ನಲ್ಲಿ ಭಾನುವಾರ ಕೊನೆಗೊಂಡ ಜೆಎಂ ಈಗಲ್ ಲಾಸ್ ಏಂಜಲೀಸ್ ಗಾಲ್ಫ್ ಚಾಂಪಿಯನ್‌ಷಿಪ್‌ನ 'ಪ್ಲೇ ಆಫ್'ನಲ್ಲಿ ಸೋತ ಅವರು ಜಂಟಿ ಎರಡನೇ ಸ್ಥಾನ ಪಡೆದರು. ಮಹಿಳಾ ಗಾಲ್ಫರ್‌ಗಳ ಅತಿದೊಡ್ಡ ಟೂರ್ ಆಗಿರುವ ಎಲ್‌ಪಿಜಿಎನಲ್ಲಿ ಅದಿತಿ ಅವರ ಅತ್ಯುತ್ತಮ ಪ್ರದರ್ಶನ ಇದಾಗಿದೆ.

ಬೆಂಗಳೂರಿನ 25 ವರ್ಷದ ಗಾಲ್ಫರ್ ಅಂತಿಮ ಸುತ್ತಿನ ಸ್ಪರ್ಧೆಯನ್ನು 67 ಸ್ಟ್ರೋಕ್‌ಗಳಲ್ಲಿ ಕೊನೆಗೊಳಿಸಿದರು. ಈ ಮೂಲಕ ನಾಲ್ಕು ಸುತ್ತುಗಳಲ್ಲಿ ಒಟ್ಟು 275 ಸ್ಕೋರ್ ಮಾಡಿ, ಆಸ್ಟ್ರೇಲಿಯಾದ ಹನಾ ಗ್ರೀನ್ ಮತ್ತು ಚೀನಾದ ಕ್ಸಿಯು ಲಿನ್ ಜತೆ ಸಮಬಲ ಸಾಧಿಸಿದರು.

ಇದರಿಂದ ವಿಜೇತರನ್ನು ನಿರ್ಣಯಿಸಲು 'ಪ್ಲೇ ಆಫ್' ಮೊರೆಹೋಗಲಾಯಿತು. ಒತ್ತಡವನ್ನು ನಿಭಾಯಿಸಿದ ಹನಾ ಅವರು ಕಿರೀಟ ಮುಡಿಗೇರಿಸಿಕೊಂಡರೆ, ಅದಿತಿ ಮತ್ತು ಲಿನ್ ಜಂಟಿ 'ರನ್ನರ್ಸ್ ಅಪ್' ಆದರು.

26 ವರ್ಷದ ಗ್ರೀನ್ ಅವರಿಗೆ ಎಲ್‌ಪಿಜಿಎ ಟೂರ್‌ನಲ್ಲಿ ದೊರೆತ ಮೂರನೇ ಹಾಗೂ, ನಾಲ್ಕು ವರ್ಷಗಳಲ್ಲಿ ಲಭಿಸಿದ ಮೊದಲ ಪ್ರಶಸ್ತಿ ಇದಾಗಿದೆ. 2019 ರಲ್ಲಿ ನಡೆದಿದ್ದ ಪೋರ್ಟ್‌ಲ್ಯಾಂಡ್ ಕ್ಲಾಸಿಕ್ ಟೂರ್ನಿಯಲ್ಲಿ ಅವರು ಚಾಂಪಿಯನ್ ಆಗಿದ್ದರು.

'ಎಲ್‌ಪಿಜಿಎ ಟೂರ್ನಿಯಲ್ಲಿ ಈ ಹಂತದವರೆಗೆ ಒಮ್ಮೆಯೂ ಏರಿರಲಿಲ್ಲ. ಪ್ರತಿ ಸುತ್ತು ಕೊನೆಗೊಂಡಂತೆ ಪೈಪೋಟಿ ಹೆಚ್ಚುತ್ತಿತ್ತು. 10 ಮಂದಿಗೆ ಇದು ಉತ್ತಮ ಟೂರ್ನಿಯಾಗಿದ್ದರೂ, ಒಬ್ಬರಿಗೆ ಮಾತ್ರ ಗೆಲ್ಲಲು ಸಾಧ್ಯ. ನಾನು ಆಡಿದ ರೀತಿ ತೃಪ್ತಿ ನೀಡಿದೆ' ಎಂದು ಅದಿತಿ ಪ್ರತಿಕ್ರಿಯಿಸಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದ ಅವರು ಇಲ್ಲಿ ಮೊದಲ ಸುತ್ತಿನಲ್ಲಿ 66 ಸ್ಟ್ರೋಕ್‌ಗಳೊಂದಿಗೆ ಸ್ಪರ್ಧೆ ಕೊನೆಗೊಳಿಸಿದ್ದರು. ಆದರೆ ಎರಡು (70) ಮತ್ತು ಮೂರನೇ (72) ಸುತ್ತುಗಳಲ್ಲಿ ಹೆಚ್ಚು ಸ್ಟ್ರೋಕ್‌ಗಳನ್ನು ಬಳಸಿದ್ದರು.

ಶನಿವಾರ ಮೂರನೇ ಸುತ್ತಿನ ಬಳಿಕ ಜಂಟಿ ಐದನೇ ಸ್ಥಾನದಲ್ಲಿದ್ದ ಅವರು, ಅಂತಿಮ ಸುತ್ತಿನಲ್ಲಿ ನಿಖರ ಪ್ರದರ್ಶನ ನೀಡಿದರು. ಅದಿತಿ ಕಳೆದ ಏಳು ವರ್ಷಗಳಿಂದ ಎಲ್‌ಪಿಜಿಎ ಟೂರ್‌ನಲ್ಲಿ ಸ್ಪರ್ಧಿಸುತ್ತಿದ್ದಾರೆ.